ಬುಧವಾರ, ನವೆಂಬರ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 330 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನುಭವ ಮಂಟಪ
ಇಡಬ್ಲ್ಯುಎಸ್ ತೀರ್ಪು ಭಿನ್ನ ನಿಲುವಿಗೆ ಸಮರ್ಥನೆಗಳೇನು?

'ರೌಡಿ ಸೈಲೆಂಟ್ ಸುನೀಲ್ ಬಿಜೆಪಿ ಸೇರ್ಪಡೆಗೆ ಅವಕಾಶವಿಲ್ಲ' 4B

ಗೆಹಲೋತ್–ಪೈಲಟ್ ಒಗ್ಗಟ್ಟು ಪ್ರದರ್ಶನ 9

ಇಂದು ತಂತ್ರಜ್ಞಾನ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,681 ▲	18,618 ▲	₹54,350 (ಬೆಂಗಳೂರು) ▼	₹63,500 (ಬೆಂಗಳೂರು) ▼	81.72 ▼

ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಾದ ಮಂಡನೆಗೆ ಕರ್ನಾಟಕ ಸರ್ಕಾರ ಸಜ್ಜು

ಗಡಿ ವಿವಾದ: ಇಂದು ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಪ್ರಕರಣವನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ನೇತೃತ್ವದ ತ್ರಿಸದಸ್ಯ ಪೀಠವು ಬುಧವಾರ ವಿಚಾರಣೆ ನಡೆಸಲಿದ್ದು, ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಲು ಕರ್ನಾಟಕ ಸರ್ಕಾರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ.

ಕರ್ನಾಟಕ ಸರ್ಕಾರವು ಹಿರಿಯ ವಕೀಲರಾದ ಮುಕುಲ್ ರೋಹಟಗಿ, ಶ್ಯಾಮ್ ದಿವಾನ್ ನೇತೃತ್ವದಲ್ಲಿ ವಕೀಲರ ತಂಡ ರಚಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುಕುಲ್ ರೋಹಟಗಿ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿ ಕಾನೂನು ಹೋರಾಟದ ಕುರಿತು ಸಮಾಲೋಚನೆ ನಡೆಸಿದರು. ರಾಜ್ಯ ಸರ್ಕಾರದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಜತೆಗಿದ್ದು, ಪೂರಕ ಮಾಹಿತಿ ನೀಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಬೊಮ್ಮಾಯಿ, 'ಮುಕುಲ್ ರೋಹಟಗಿ ಅವರು ಕರ್ನಾಟಕದ ಪರವಾಗಿ ಸಮರ್ಥವಾಗಿ ವಾದ ಮಾಡುವ ಭರವಸೆ ಇದೆ. ಗಡಿ ವಿವಾದದ ಎಲ್ಲ ಆಯಾಮಗಳನ್ನು ರೋಹಟಗಿ ಅವರಿಗೆ ನಮ್ಮ ಅಡ್ವೊಕೇಟ್ ಜನರಲ್ ವಿವರಿಸಿದ್ದಾರೆ. ನಾನು ಗಡಿ ವಿವಾದದ ಕಾನೂನಾತ್ಮಕ ಹಿನ್ನೆಲೆ ಕುರಿತು ರೋಹಟಗಿ ಅವರಿಗೆ ವಿವರಣೆ ನೀಡಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸಲು ಎಲ್ಲ ರೀತಿಯ ಸಿದ್ಧತೆ ನಡೆದಿದೆ' ಎಂದು ಅವರು ಹೇಳಿದರು.

ಮಹಾರಾಷ್ಟ್ರದ ಜತ್ ತಾಲ್ಲೂಕಿನ ಹಲವು ಗ್ರಾಮಗಳ ಗ್ರಾಮಸ್ಥರು ಕರ್ನಾಟಕಕ್ಕೆ ಸೇರುವ ಸಂಬಂಧ ಮುಖ್ಯಮಂತ್ರಿ ಭೇಟಿಗೆ ಅವಕಾಶ ಕೋರಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹಳ್ಳಿಗಳು ಸೇರ್ಪಡೆಯಾಗಲು ನಿಯಮಗಳಿವೆ. ಈ ಸಮಸ್ಯೆ ಇಂದು ನಿನ್ನೆಯದಲ್ಲ. ಸರಿಯಾದ ಸೌಲಭ್ಯ ದೊರಕದ ಕಾರಣ ಅವರು ಬಹಳಷ್ಟು ವರ್ಷಗಳಿಂದ ಈ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿದೆ. ಸರ್ವ ಪಕ್ಷ ಸಭೆ ಕರೆದು ಚರ್ಚೆ ಮಾಡಲಾಗುವುದು. ಕಾನೂನು ಸಲಹೆ ಪಡೆದು ಮುಂದುವರಿಯಲಾಗುವುದು' ಎಂದರು.

'ಗಡಿ ವಿವಾದದ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜಕೀಯ ಹೇಳಿಕೆ ನೀಡುತ್ತಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಇದ್ದಾಗಲೇ ಈ ಗ್ರಾಮಗಳಿಗೆ ಕುಡಿಯುವ ನೀರು ನೀಡುವ ನಿರ್ಣಯ ಮಾಡಿದ್ದರು. ಅವರು ಯಾಕೆ ಗ್ರಾಮಗಳನ್ನು ಸೇರಿಸಿಕೊಂಡಿಲ್ಲ' ಎಂದು ಅವರು ಪ್ರಶ್ನಿಸಿದರು.

ಮಹಾರಾಷ್ಟ್ರದಲ್ಲಿ ರಾಜ್ಯ ಸಾರಿಗೆ ಸಂಸ್ಥೆ ಬಸ್ ಮೇಲೆ ದಾಳಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿ, 'ಮಹಾರಾಷ್ಟ್ರ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳ ಜತೆಗೆ ನಮ್ಮ ರಾಜ್ಯದ ಅಧಿಕಾರಿಗಳು ಮಾತನಾಡಿದ್ದಾರೆ. ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದರು.

ಶಾಂತಿ ಭಂಗ ಮಾಡಿದರೆ ತಕ್ಕ ಪಾಠ: ಎಡಿಜಿಪಿ

ಬೆಳಗಾವಿ: 'ತಮ್ಮ ಖಾಸಗಿ ಕಾರ್ಯಕ್ರಮಕ್ಕೆ ಬೆಳಗಾವಿಗೆ ಯಾರು ಬಂದರೂ ತಕರಾರು ಇಲ್ಲ. ಏನಾದರೂ ತರಲೆ-ತಂಟೆ ಮಾಡಿದರೆ, ಶಾಂತಿ ಭಂಗ ಮಾಡಿದರೆ ತಕ್ಕ ಪಾಠ ಕಲಿಸುತ್ತೇವೆ' ಎಂದು ಎಡಿಜಿಪಿ ಅಲೋಕ್‌ಕುಮಾರ್ ಎಚ್ಚರಿಸಿದರು.

ಮಹಾರಾಷ್ಟ್ರದ ಸಚಿವರಾದ ಚಂದ್ರಕಾಂತ ಪಾಟೀಲ ಹಾಗೂ ಶಂಭುರಾಜ್ ದೇಸಾಯಿ ಅವರು, ಡಿಸೆಂಬರ್ 3ರಂದು ಬೆಳಗಾವಿಯಲ್ಲಿ ಗಡಿ ವಿವಾದದ ವಿಚಾರವಾಗಿ ಸಭೆ ನಡೆಸಲಿರುವ ಬಗ್ಗೆ ಮಂಗಳವಾರ ಪ್ರತಿಕ್ರಿಯೆ ನೀಡಿದ ಅವರು, 'ಯಾರು ಬೇಕಾದರೂ ತಮ್ಮವರ ಮನೆಗೆ, ಮದುವೆಗೆ, ಊಟಕ್ಕೆ ಬಂದರೆ ನಾವು ಏನೂ ಮಾಡಲಾಗುವುದಿಲ್ಲ. ಶಾಂತಿ ಕದಡಿದರೆ ಎಂಇಎಸ್ ಪುಂಡರಾದರೂ ಸರಿ, ಯಾರಾದರೂ ಸರಿ, ಕಾನೂನು ಕ್ರಮ ಕೈಗೊಳ್ಳುತ್ತೇವೆ' ಎಂದರು.

'ನ.30ರಂದು ಗಡಿ ವಿವಾದದ ವಿಚಾರ ಸುಪ್ರೀಂ-ಕೋರ್ಟ್‌ನಲ್ಲಿ ಚರ್ಚೆಗೆ ಬರಲಿದೆ. ಅಲ್ಲಿನ ತೀರ್ಪು ಏನು ಬರುತ್ತದೆ ಎಂಬುದನ್ನು ನೋಡಿಕೊಂಡು ಭದ್ರತೆಗೆ ಕ್ರಮ ವಹಿಸಲಾಗುವುದು' ಎಂದರು.

'21 ಕಡೆ ಜಂಟಿ ಚೆಕ್‌ಪೋಸ್ಟ್': 'ಗಡಿ ತಂಟೆ ಕಾರಣದಿಂದ ಸಾರ್ವಜನಿಕರಿಗೆ ತೊಂದರೆ ಆಗದಂತೆ ಮಹಾರಾಷ್ಟ್ರ ಹಾಗೂ ಕರ್ನಾಟಕ ಜಂಟಿ ಚೆಕ್‌ಪೋಸ್ಟ್ ತೆರೆದಿದ್ದೇವೆ. ಬೆಳಗಾವಿ ಗಡಿಯಲ್ಲಿ 21 ಚೆಕ್‌ಪೋಸ್ಟ್ ಈಗಾಗಲೇ ನಿರ್ಮಾಣ ಮಾಡಿದ್ದೇವೆ' ಎಂದು ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

ಜಿಲ್ಲೆಯ ನಿಪ್ಪಾಣಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '400ಕ್ಕೂ ಅಧಿಕ ಕರ್ನಾಟಕ ಬಸ್‌ಗಳು, 176ಕ್ಕೂ ಹೆಚ್ಚು ಮಹಾರಾಷ್ಟ್ರದ ಬಸ್‌ಗಳು ಗಡಿಯಾಚೆಗೆ ಸಂಚರಿಸುತ್ತವೆ. ಅಲ್ಲಿ ನಮ್ಮ ವಾಹನಗಳಿಗೆ, ನಮ್ಮ ಜನರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲು ಮಹಾರಾಷ್ಟ್ರದ ಪೊಲೀಸರೊಂದಿಗೆ ಚರ್ಚೆ ಮಾಡಲಾಗುವುದು' ಎಂದರು.

> **ಮಹಾರಾಷ್ಟ್ರದ ಸಚಿವರು ಬೆಳಗಾವಿಯಲ್ಲಿ ಸಭೆ ನಡೆಸುವ ಕುರಿತು ಅಧಿಕೃತವಾಗಿ ಹೇಳಿಲ್ಲ. ಆದರೂ ಕಾನೂನು ಸುವ್ಯವಸ್ಥೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತೇವೆ**
>
> **ನಿತೇಶ್ ಪಾಟೀಲ,** ಜಿಲ್ಲಾಧಿಕಾರಿ, ಬೆಳಗಾವಿ

ಚಂಪಾಷಷ್ಠಿ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಚಂಪಾಷಷ್ಠಿ ದಿನವಾದ ಮಂಗಳವಾರ ನಡೆದ ಮಹಾರಥೋತ್ಸವಕ್ಕೆ ಸಹಸ್ರಾರು ಭಕ್ತರು ಸಾಕ್ಷಿಯಾದರು –ಪ್ರಜಾವಾಣಿ ಚಿತ್ರ: ಲೋಕೇಶ್ ಬಿ.ಎನ್.

ಮೊಬೈಲ್ ಪರಿಶೀಲನೆಗೆ ಮುಂದಾದ ಶಾಲಾ ಸಿಬ್ಬಂದಿಗೆ ಆಘಾತ

ವಿದ್ಯಾರ್ಥಿಗಳ ಬ್ಯಾಗ್‌ನಲ್ಲಿ ಕಾಂಡೋಮ್!

• ರಶ್ಮಿ ಬೇಲೂರು

ಬೆಂಗಳೂರು: ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಕೆ ಮಾಡುತ್ತಿದ್ದಾರೆಯೇ ಎಂದು ಪರಿಶೀಲಿಸಲು ಮುಂದಾದ ನಗರದ ಕೆಲವು ಶಾಲಾ ಸಿಬ್ಬಂದಿಗೆ ವಿದ್ಯಾರ್ಥಿಗಳ ಬ್ಯಾಗ್‌ಗಳಲ್ಲಿ ಕಂಡ ವಸ್ತುಗಳು ಆಘಾತ ತಂದಿತ್ತು.

ಮೊಬೈಲ್ ಫೋನ್ ಅಷ್ಟೇ ಅಲ್ಲದೆ ನಗದು, ಕಾಂಡೋಮ್‌ಗಳು, ಗರ್ಭ ನಿರೋಧಕ ಮಾತ್ರೆಗಳು, ಲೈಟರ್, ಸಿಗರೇಟ್‌ಗಳು, ವೈಟ್‌ನರ್‌ಗಳು 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಬ್ಯಾಗ್‌ಗಳಲ್ಲಿ ಇರುವುದನ್ನು ಕಂಡು ಸಿಬ್ಬಂದಿ ಅಚ್ಚರಿಗೊಂಡಿದ್ದಾರೆ.

ತರಗತಿಗೆ ವಿದ್ಯಾರ್ಥಿಗಳು ಮೊಬೈಲ್ ಫೋನ್ ತರುತ್ತಾರೆ ಎಂದು ಕೆಲವು ಶಿಕ್ಷಕರು ನೀಡಿದ ದೂರಿನ ಮೇರೆಗೆ ವಿದ್ಯಾರ್ಥಿಗಳ ಬ್ಯಾಗ್‌ಗಳನ್ನು ಪರಿಶೀಲಿಸಲು ಕೆಲವು ಶಾಲೆಗಳು ಆರಂಭಿಸಿವೆ. ವಿದ್ಯಾರ್ಥಿಗಳ ಬ್ಯಾಗ್‌ಗಳನ್ನು ಪರಿಶೀಲಿಸುವಂತೆ ಕರ್ನಾಟಕ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕಾಮ್ಸ್) ಕೂಡ ತನ್ನ ಸದಸ್ಯ ಶಾಲೆಗಳಿಗೆ ಸೂಚಿಸಿತ್ತು. ಕೆಲವು ಶಾಲೆಗಳು ಪೋಷಕ- ಶಿಕ್ಷಕರ ವಿಶೇಷ ಸಭೆಗಳನ್ನು ನಡೆಸುತ್ತಿವೆ.

ಪ್ರಾತಿನಿಧಿಕ ಚಿತ್ರ

'ನಾವು ಈ ವಿಷಯದ ಬಗ್ಗೆ ಪೋಷಕರ ಜೊತೆ ಚರ್ಚೆ ನಡೆಸಿದ್ದೇವೆ. ಇದನ್ನು ಕೇಳಿಯೇ ಅವರು ಆಘಾತಕ್ಕೆ ಒಳಗಾದರು. ತಮ್ಮ ಮಕ್ಕಳ ವರ್ತನೆಯಲ್ಲಿ ಇದ್ದಕ್ಕಿದ್ದಂತೆ ಆಗಿರುವ ಬದಲಾವಣೆಗಳ ಬಗ್ಗೆಯೂ ಕೆಲವು ಪೋಷಕರು ಹೇಳಿಕೊಂಡಿದ್ದಾರೆ' ಎಂದು ನಾಗರಬಾವಿಯಲ್ಲಿರುವ ಶಾಲೆಯೊಂದರ ಪ್ರಾಂಶುಪಾಲರು ಹೇಳಿದರು.

ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ನಿಭಾಯಿಸಲು ಮುಂದಾಗಿರುವ ಕೆಲವು ಶಾಲೆಗಳು, ವಿದ್ಯಾರ್ಥಿಗಳನ್ನು ಅಮಾನತುಗೊಳಿಸುವ ಬದಲು ಅವರಿಗೆ ಕೌನ್ಸೆಲಿಂಗ್ ಕೊಡಿಸುವಂತೆ ಪೋಷಕರಿಗೆ ಸಲಹೆ ನೀಡಿವೆ.

'ನಮ್ಮ ಶಾಲೆಗಳಲ್ಲಿ ನಿಯಮಿತ ಕೌನ್ಸೆಲಿಂಗ್ ಅವಧಿ ಇದ್ದರೂ, ಮಕ್ಕಳಿಗೆ ಹೊರಗಿನಿಂದ ಆಪ್ತ ಸಮಾಲೋಚನೆಗೆ ವ್ಯವಸ್ಥೆ ಮಾಡಿಕೊಳ್ಳುವಂತೆ ಪೋಷಕರಿಗೆ ತಿಳಿಸಿದ್ದೇವೆ. ಅದಕ್ಕಾಗಿ ಒಂದು ವಾರದಿಂದ 10 ದಿನಗಳವರೆಗೆ ರಜೆಯನ್ನೂ ನೀಡಿದ್ದೇವೆ' ಎಂದೂ ಪ್ರಾಂಶುಪಾಲರು ಹೇಳಿದರು.

'10ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳ ಬ್ಯಾಗ್‌ನಲ್ಲಿ ಕಾಂಡೋಮ್ ಸಿಕ್ಕಿದೆ' ಎಂದು ಮತ್ತೊಬ್ಬ ಪ್ರಾಂಶುಪಾಲರು ತಿಳಿಸಿದ್ದಾರೆ.

5Bನೇ ಪುಟ ನೋಡಿ

'ಉತ್ತಮ ಜಡ್ಜ್‌ಗಳ ಅಗತ್ಯವಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪ್ರಸ್ತುತ ಉತ್ತಮ ನ್ಯಾಯಮೂರ್ತಿಗಳ ಅಗತ್ಯವಿದೆ. ನ್ಯಾಯಮೂರ್ತಿಗಳು ಹೆಚ್ಚಿದ್ದರೆ ಹೆಚ್ಚು ಪ್ರಕರಣಗಳು ಇತ್ಯರ್ಥವಾಗಲಿವೆ ಎಂದರ್ಥವಲ್ಲ. ಪ್ರಕರಣಗಳು ಬಾಕಿ ಉಳಿದಿರುವುದಕ್ಕೆ ನ್ಯಾಯಮೂರ್ತಿಗಳ ಸಂಖ್ಯೆಯನ್ನು ದುಪ್ಪಟ್ಟುಗೊಳಿಸುವುದೇ ಪರಿಹಾರವಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಖಾಲಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡುವುದೂ ಈಗ ಕಷ್ಟವಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಖಾಲಿ ಇರುವ ಸ್ಥಾನಗಳಿಗೆ ನ್ಯಾಯಮೂರ್ತಿಗಳ ಭರ್ತಿಗೆ ಪ್ರಯತ್ನಿಸಿ. ಅದು, ಎಷ್ಟು ಕಷ್ಟದ ಕೆಲಸ ಎಂದು ನಿಮಗೇ ಅರಿವಾಗುತ್ತದೆ. ಅಲಹಾಬಾದ್ ಹೈಕೋರ್ಟ್‌ನಲ್ಲಿ 160 ಸ್ಥಾನಗಳನ್ನು ಭರ್ತಿ ಮಾಡುವುದೇ ಕಷ್ಟವಾಗಿದೆ. 320 ಮಂದಿ ನೇಮಕ ಮಾಡಬೇಕು ಎಂದು ಅರ್ಜಿದಾರರು ಕೋರುತ್ತಿದ್ದಾರೆ' ಎಂದು ಪೀಠ ಹೇಳಿತು.

ನ್ಯಾಯಮೂರ್ತಿಗಳ ಸಂಖ್ಯೆ ದ್ವಿಗುಣಗೊಳಿಸಲು ಕೋರಿ ಅರ್ಜಿ ಸಲ್ಲಿಸಿದ್ದ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು, 'ವಿವಿಧ ಕೋರ್ಟ್‌ಗಳಲ್ಲಿ 5 ಕೋಟಿ ಪ್ರಕರಣಗಳು ಬಾಕಿ ಇವೆ. ಸುಮಾರು 20 ಕೋಟಿ ಜನರು ಬಾಧಿತರಾಗಿದ್ದಾರೆ. ಇದು, ಅಮೆರಿಕದ ಜನಸಂಖ್ಯೆಗೆ ಸಮಾನವಾದುದು' ಎಂದು ಪ್ರತಿಪಾದಿಸಿದ್ದರು.

'ಈಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು, 'ಆರು ತಿಂಗಳಲ್ಲಿ ಎಲ್ಲ ಪ್ರಕರಣಗಳನ್ನು ವಿಲೇವಾರಿ ಮಾಡಿ ಎಂದು ಸಂಸತ್ತು ಕಾಯ್ದೆಯನ್ನು ರೂಪಿಸಿದಂತಿದೆ' ಎಂದು ಅಭಿಪ್ರಾಯಪಟ್ಟಿತು.

'ನೀವು ಬಾಂಬೆ ಹೈಕೋರ್ಟ್ ಗಮನಿಸಿದ್ದೀರಾ? ಮೂಲಸೌಲಭ್ಯ ಕೊರತೆಯಿಂದ ಅಲ್ಲಿ ಒಬ್ಬ ನ್ಯಾಯಮೂರ್ತಿ ಹೆಚ್ಚುವರಿಯಾಗಿ ಸೇರ್ಪಡೆ ಆಗಿಲ್ಲ'. ಎಂದು ಪೀಠ ಅರ್ಜಿದಾರರಿಗೆ ಹೇಳಿತು.

ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ನಿರಾಕರಿಸಿದ ಪೀಠವು, ಇಂಥ ಪಿಐಎಲ್ ಸಲ್ಲಿಸಿದ ಸಂದರ್ಭದಲ್ಲಿ ನ್ಯಾಯಾಲಯದ ಸಮಯ ಪೋಲು ಮಾಡಿದ್ದಕ್ಕಾಗಿ ದಂಡ ವಿಧಿಸಬಹುದಾಗಿದೆ ಎಂದು ಹೇಳಿತು. 'ಪ್ರತಿ ಸಮಸ್ಯೆಗೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಸಲ್ಲಿಸಬೇಕೆಂದೇನೂ ಇಲ್ಲ' ಎಂದೂ ಅಭಿಪ್ರಾಯಪಟ್ಟಿತು.

500ಕ್ಕೂ ಅಧಿಕ ಉತ್ಪನ್ನಗಳ ಪೂರೈಕೆ: ಭಾರತಕ್ಕೆ ರಷ್ಯಾ ಬೇಡಿಕೆ

ನವದೆಹಲಿ (ರಾಯಿಟರ್ಸ್): 'ಕಾರು, ವಿಮಾನ ಹಾಗೂ ರೈಲುಗಳ ಬಿಡಿಭಾಗ ಸೇರಿದಂತೆ 500ಕ್ಕೂ ಅಧಿಕ ಉತ್ಪನ್ನಗಳನ್ನು ಪೂರೈಸುವಂತೆ ರಷ್ಯಾವು ಭಾರತದ ಎದುರು ಬೇಡಿಕೆ ಇಟ್ಟಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ. 9

ಡಿಜಿಟಲ್ ರೂಪಾಯಿ ಡಿಸೆಂಬರ್ 1ರಿಂದ ಪ್ರಾಯೋಗಿಕ ಬಳಕೆ

ಮುಂಬೈ (ಪಿಟಿಐ): ಚಿಲ್ಲರೆ ವಹಿವಾಟುಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಗೆ ಡಿಸೆಂಬರ್ 1ರಂದು ಚಾಲನೆ ನೀಡಲಾಗುವುದು ಎಂದು ಆರ್‌ಬಿಐ ಮಂಗಳವಾರ ಹೇಳಿದೆ. ನಾಲ್ಕು ನಗರಗಳಲ್ಲಿ ಇದು ಆರಂಭವಾಗಲಿದ್ದು, ಬೆಂಗಳೂರು ಕೂಡ ಈ ಪೈಕಿ ಒಂದು. 5B

ಅತ್ಯಾಚಾರ: 'ರ್‍ಯಾಪಿಡೊ' ಸವಾರ ಬಂಧನ

ಬೆಂಗಳೂರು: ಮೊಬೈಲ್ ಆ್ಯಪ್ ಆಧಾರಿತ 'ರ್‍ಯಾಪಿಡೊ' ಬೈಕ್ ಸೇವೆ ಬಳಸಿದ್ದ ಯುವತಿಯನ್ನು ಅಪಹರಿಸಿ, ಕ್ರೂರವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಲಾಗಿದ್ದು, ಈ ಸಂಬಂಧ 'ರ್‍ಯಾಪಿಡೊ' ಬೈಕ್ ಸವಾರ ಸೇರಿ ಮೂವರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'22 ವರ್ಷದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವ ಬಗ್ಗೆ ಪ್ರಕರಣ ದಾಖಲಾಗಿತ್ತು. 5A

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಲ್ಲಾ ಕಿರಾಣಿ ಅಂಗಡಿ,ಮೆಡಿಕಲ್ ಸ್ಟೋರ್ಸ್,ಸೂಪರ್ ಮಾರ್ಕೆಟ್ ಹಾಗು ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರೆಯುತ್ತದೆ.
For Online shopping-www.sadguruayurveda.com.com For Queries:8970703070

All chicken products contain added monosodium glutamate not recommended for infants below 12 months and pregnant women. #Limited period offer. T&Cs apply. For details refer to online.kfc.co.in/promotions. Delivery available in select restaurants. Price exclusive of taxes. All images are for illustration purposes only, Actual product may vary. *vis-à-vis same a la carte order on delivery.

DH DECCAN HERALD

WE ARE HIRING

TRAVEL PLANNER

Job Description:
- Candidate must have at least 5 years experience working in a travel agency/ travel planning company.
- Must have strong travel management experience.
- Must have ability to organise end-to-end travel bookings within India and Abroad.
- This position will also have some amount of administrative and secretarial responsibilities.

Preferred candidate:
- Female candidate in the age group of early 30's
- Having graduate degree
- Language fluency in English and Kannada.
- Experience in VISA Documentation.

Please send your updated Resume/CV with photograph within 7 days to following E-mail: careers@deccanherald.co.in

ಪರಿಶ್ರಮ ಅಕಾಡೆಮಿ 503 ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು

ಬೆಂಗಳೂರು: ನಗರದ ಪರಿಶ್ರಮ ನೀಟ್ ಅಕಾಡೆಮಿಯಲ್ಲಿ ತರಬೇತಿ ಪಡೆದ 503 ವಿದ್ಯಾರ್ಥಿಗಳು ಸರ್ಕಾರಿ ಕೋಟಾದ ಅಡಿಯಲ್ಲಿ ವೈದ್ಯಕೀಯ ಸೀಟು ಪಡೆದಿದ್ದಾರೆ. ಕೆಇಎ ನಡೆಸಿದ ವೈದ್ಯಕೀಯ ಪ್ರವೇಶ ಪರೀಕ್ಷೆಯ ಮೊದಲ ಮತ್ತು ಎರಡನೇ ಸುತ್ತಿನ ಫಲಿತಾಂಶದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಗಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಿ. 3ರಿಂದ ತಿಂಗಳ ಕಾಲ ಗೀತಾದಾನ ಯಜ್ಞ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಕಾನ್ ವತಿಯಿಂದ ಗೀತಾ ಜಯಂತಿ ಅಂಗವಾಗಿ ಡಿ. 3ರಂದು 'ಗೀತಾದಾನ ಯಜ್ಞ'ವನ್ನು ನಗರದ ವಸಂತಪುರದಲ್ಲಿರುವ ಇಸ್ಕಾನ್‌ನ ರಾಜಾಧಿರಾಜ ಗೋವಿಂದ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಒಂದು ತಿಂಗಳ ಕಾಲ ನಡೆಯುವ ಈ ಯಜ್ಞದ ಸಮಯದಲ್ಲಿ ಭಗವದ್ಗೀತೆಯ ಒಂದು ಲಕ್ಷ ಪ್ರತಿಗಳನ್ನು ವಿತರಿಸುವ ಉದ್ದೇಶವಿದೆ. ಭಗವದ್ಗೀತೆ ಆಧಾರಿತ ವಿಚಾರಸಂಕಿರಣ ಮತ್ತು ತಾತ್ವಿಕ ಮಂಥನಗಳನ್ನು ಆಯೋಜಿಸಲಾಗಿದೆ.

ಈ ಯಜ್ಞವನ್ನು ಕೇಂದ್ರ ರಕ್ಷಣಾ ಸಚಿವರಾದ ರಾಜನಾಥ ಸಿಂಗ್ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕಂದಾಯ ಸಚಿವ ಆರ್. ಅಶೋಕ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಕಂಡ ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಹಾಗೂ ಇಲ್ಲಿ ಇನ್ನುಮುಂದೆ "**ಷೆಡ್ಯೂಲ್ ಪ್ರಾಪರ್ಟಿ**" ಎನ್ನಲಾಗುವ 1) ಸರ್ವೆ ನಂ. 81/5 ವಿಸ್ತೀರ್ಣ ಸುಮಾರು 10 ಗುಂಟಾ (1 ಗುಂಟಾ ಖರಾಬ್ ಹೊರತುಪಡಿಸಿ) 2) 91/5(ಪಿ) ವಿಸ್ತೀರ್ಣ ಸುಮಾರು 9 ಗುಂಟಾ 3) ಸರ್ವೆ ನಂ. 91/7(ಪಿ) ವಿಸ್ತೀರ್ಣ ಸುಮಾರು 1 ಎಕರೆ 25 ಗುಂಟಾ 4) ಸರ್ವೆ ನಂ. 91/1(ಪಿ) ವಿಸ್ತೀರ್ಣ ಸುಮಾರು 11 ಗುಂಟಾ 5) ಸರ್ವೆ ನಂ. 91/1(ಪಿ) ವಿಸ್ತೀರ್ಣ ಸುಮಾರು 21 ಗುಂಟಾ 6) ಸರ್ವೆ ನಂ. 77/1 ವಿಸ್ತೀರ್ಣ ಸುಮಾರು 6.5 ಗುಂಟಾ ಕ್ಷೇತ್ರಫಲವುಳ್ಳ ಎಲ್ಲಾ ಕೃಷಿ ಜಮೀನು ಸ್ವತ್ತುಗಳನ್ನು, ಸಂಬಂಧಿತ ಸ್ವತ್ತಿನ ಎದುರು ನಮೂದಿಸಲಾಗಿರುವ ಅವುಗಳ ಮಾಲೀಕರಿಂದ ("**ಮಾಲೀಕರು**") ಖರೀದಿಸಲು ಉತ್ಸುಕರಾಗಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಅಥವಾ ಸ್ವರೂಪದ ಯಾವುದೇ ಹಕ್ಕು, ಬಾದ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ವಿರುದ್ಧ ಅಥವಾ ಮಾಲಿಕರ ವಿರುದ್ಧ ಯಾವುದೇ ಕ್ಲೇಮ್ ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ವ್ಯವಹಾರಕ್ಕೆ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು) ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿತ ತಮ್ಮ ಹಕ್ಕುಗಳನ್ನು ಸಾಬೀತುಪಡಿಸುವ ಎಲ್ಲಾ ದಾಖಲಾತಿ ಆಧಾರ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಿ ತಮ್ಮ ವಹಿವಾಟನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, 1 ಗುಂಟೆ ಖರಾಬ್ ಸೇರಿದಂತೆ ಒಟ್ಟಾರೆ ಸುಮಾರು 03 ಎಕರೆ 2.05 ಗುಂಟೆ ವಿಸ್ತೀರ್ಣವುಳ್ಳ, ಐಟಂ ನಂ.1 ರಿಂದ 6 ರವರೆಗಿನ ಎಲ್ಲಾ ಕೃಷಿ ಜಮೀನುಗಳ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ಹಾಗೂ ಚಕ್ಕುಬಂದಿ ವಿವರ ಕೆಳಗಿನಂತಿರುತ್ತದೆ:–

ಐಟಂ ನಂ.	ಸರ್ವೆ ನಂ.	ಮಾಲಿಕರ ಹೆಸರು	ವಾಸ್ತವ ಕ್ಷೇತ್ರಫಲ		ಖರಾಬ್ ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
1.	81/5	ಚಿಕ್ಕನಾರಾಯಣಪ್ಪ	0	10	00	01	ನಾಲಾ	ಸರ್ವೆ ನಂ. 81/4 & 81/7	ನಾಲಾ & ನಂತರ ಸರ್ವೆ ನಂ. 79/2 & 80/3ಎ	ಕಾಲುವೆ & ನಂತರ ಸರ್ವೆ ನಂ. 82
2.	91/5(ಪಿ)	ಬಿ.ಮಂಜುನಾಥ	0	09	00	00	ಸರ್ವೆ ನಂ. 91/6	ಸರ್ವೆ ನಂ. 91/5ರ ಉಳಿಕೆ ಭಾಗ	ಸರ್ವೆ ನಂ. 91/1	ಸರ್ವೆ ನಂ. 90
3.	91/7 (ಪಿ)	ಆನಂದ್ ಬಿ ಎಂ	1	25	00	00	ಸರ್ವೆ ನಂ. 87/1, 87/2 & 87/12	ಸರ್ವೆ ನಂ. 91/7ರ ಉಳಿಕೆ ಭಾಗ	ಸರ್ವೆ ನಂ. 92/5	ಸರ್ವೆ ನಂ. 91/1
4.	91/1 (ಪಿ)	ಮುನಿಲಕ್ಷ್ಮಮ್ಮ	0	11	00	00	ಅದೇ ಸರ್ವೆ ನಂಬರ್‌ನ ಉಳಿಕೆ ಭಾಗ	ಅದೇ ಸರ್ವೆ ನಂಬರ್‌ನ ಉಳಿಕೆ ಭಾಗ	ಸರ್ವೆ ನಂ. 91/7	ಸರ್ವೆ ನಂ. 91/5
5.	91/1 (ಪಿ)	ಮುನಿಲಕ್ಷ್ಮಮ್ಮ	0	21	00	00	ಸರ್ವೆ ನಂ. 87/13 & 87/3	ಅದೇ ಸರ್ವೆ ನಂಬರ್‌ನ ಉಳಿಕೆ ಭಾಗ	ಸರ್ವೆ ನಂ. 91/7	ಸರ್ವೆ ನಂ. 91/6
6.	77/1	ಮುನಿರಾಜ	0	6.5	00	00	ಭೀಮಕನಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 77/10	ಸರ್ವೆ ನಂ. 76	ಸರ್ವೆ ನಂ. 77/9
		ಒಟ್ಟು	3	2.5	00	01				

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ

ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್ 75, ಹುತ್ತೂರು ಅಂಚೆ, ಕೋಲಾರ563102
[PHONE NO. 08152- 282300, 7760964517 FAX NO. 282303 E-mail: komulpurchase@yahoo.com]
ಕ್ರ.ಸಂ/ಕೋಹಾಒ/ಖರೀದಿ–ಉಗ್ರಾಣ/ಇ–ಪ್ರೊಕ್ಯೂರ್‌ಮೆಂಟ್/ 7168 /2022-23 ದಿನಾಂಕ:28.11.2022

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅನುಪಯುಕ್ತ ವಸ್ತುಗಳ ಟೆಂಡರ್ ಕಂ ಹರಾಜು ಪ್ರಕಟಣೆ

ಕೋಲಾರ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮೆಗಾ ಡೇರಿಯ ಆವರಣದಲ್ಲಿ ಅನುಪಯುಕ್ತ ವಸ್ತುಗಳ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಈ ಕೆಳಗೆ ವಿವರಿಸಿರುವ ಅನುಪಯುಕ್ತ ಸಾಮಗ್ರಿಗಳನ್ನು ವಾರ್ಷಿಕ ಗುತ್ತಿಗೆ ದರದಲ್ಲಿ ಹಾಗೂ ಒಮ್ಮೆ ವಿಲೇವಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ವಿಲೇವಾರಿ ಮಾಡಲು ಇ–ಟೆಂಡರ್/ಹರಾಜು ಆಹ್ವಾನಿಸಿದೆ.ಆಸಕ್ತಿಯುಳ್ಳವರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿವರಗಳನ್ನು www.eproc.karnataka.gov.inನಲ್ಲಿ ಪಡೆಯಬಹುದು ಹಾಗೂ ಸಹಾಯಕವಾಣಿ 080-25501227/25501216 ಹಾಗೂ email: hphelpdesk.blr@intarvo.com ಸಂಪರ್ಕಿಸಬಹುದು.

#	ಅನುಪಯುಕ್ತ ವಸ್ತು/ಸರಕುಗಳ ವಿವರಣೆ	ಅಂದಾಜು ಪರಿಮಾಣ	ಇ.ಎಂ.ಡಿ ಮೊತ್ತ
	ವಾರ್ಷಿಕ ಗುತ್ತಿಗೆ ದರದಲ್ಲಿ [ಮೆಗಾ ಡೇರಿ,ಚಿಕ್ಕಬಳ್ಳಾಪುರ, ಆವರಣ]		
1	ಉಪಯೋಗಿಸಿದ ಕಾರುಗೇಟೆಡ್ ಬಾಕ್ಸ್, ಕಾರ್ಟನ್ಸ್/ಪೇಪರ್ ಇತ್ಯಾದಿ	ಕೆ.ಜಿಗಳಲ್ಲಿ	20,000
2	ಉಪಯೋಗಿಸಿದ ಪೇಪರ್ ಕೋರ್ಸ್	ಕೆ.ಜಿಗಳಲ್ಲಿ	10,000
3	ಉಪಯೋಗಿಸಿದ ಯು.ಹೆಚ್.ಟಿ ಪೌಚ್ ಫಿಲಂ	ಕೆ.ಜಿಗಳಲ್ಲಿ	10,000
4	ಉಪಯೋಗಿಸಿದ ಪ್ಲಾಸ್ಟಿಕ್ ಕೋರ್ಸ್	ಕೆ.ಜಿಗಳಲ್ಲಿ	5,000
5	ಉಪಯೋಗಿಸಿದ ಫ್ಲೇಕ್ಸಿ ಪೌಚ್ ಫಿಲಂ	ಕೆ.ಜಿಗಳಲ್ಲಿ	10,000
6	ಉಪಯೋಗಿಸಿದ ಪ್ಲಾಸ್ಟಿಕ್ ಲೈನರ್ಸ್	ಕೆ.ಜಿಗಳಲ್ಲಿ	10,000
7	ಉಪಯೋಗಿಸಿದ ಪ್ಲಾಸ್ಟಿಕ್ ದಾರಗಳು	ಕೆ.ಜಿಗಳಲ್ಲಿ	5,000
8	ಉಪಯೋಗಿಸಿದ ಖಾಲಿ ಪ್ಲಾಸ್ಟಿಕ್ ಕ್ಯಾನ್‌ಗಳು	ಕೆ.ಜಿಗಳಲ್ಲಿ	5,000
9	ಉಪಯೋಗಿಸಿದ ಹಾಲಿನ ಪುಡಿ ಕ್ರಾಫ್ಟ್ ಚೀಲಗಳು	ಕೆ.ಜಿಗಳಲ್ಲಿ	5,000
10	ಉಪಯೋಗಿಸಿದ ಎಸ್.ಎಂ.ಪಿ ಲೈನರ್ಸ್	ಕೆ.ಜಿಗಳಲ್ಲಿ	5,000
11	ಉಪಯೋಗಿಸಿದ ಬ್ರಿಕೆಟ್ಸ್‌ನ ಖಾಲಿ ಚೀಲಗಳು	ಕೆ.ಜಿಗಳಲ್ಲಿ	5,000
	ಒಮ್ಮೆ ವಿಲೇವಾರಿ ವಸ್ತುಗಳು [ಮೆಗಾ ಡೇರಿ,ಚಿಕ್ಕಬಳ್ಳಾಪುರ, ಆವರಣ]		
12	ಉಪಯೋಗಿಸಿದ ರಬ್ಬರ್ ವಸ್ತುಗಳು	01 ಲಾಟ್ (ಕೆ.ಜಿಗಳಲ್ಲಿ)	1,000
13	ಉಪಯೋಗಿಸಿದ 15 ಕೆ.ಜಿ ಸಾಮರ್ಥ್ಯ ತುಪ್ಪದ ಟಿನ್‌ಗಳು	01 ಲಾಟ್(ಸಂಖ್ಯೆ ಲೆಕ್ಕದಲ್ಲಿ)	2,000
14	ಎಸ್.ಎಸ್ ಅನುಪಯುಕ್ತ ವಸ್ತುಗಳು	01 ಲಾಟ್ (ಕೆ.ಜಿಗಳಲ್ಲಿ)	5,000
15	ಎಂ.ಎಸ್ ಅನುಪಯುಕ್ತ ವಸ್ತುಗಳು	01 ಲಾಟ್ (ಕೆ.ಜಿಗಳಲ್ಲಿ)	10,000
16	ಉಪಯೋಗಿಸಿದ ಆರ್.ಓ ಮೆಂಬರೇನ್‌ಗಳು	01 ಲಾಟ್ (ಕೆ.ಜಿಗಳಲ್ಲಿ)	5,000
17	ಉಪಯೋಗಿಸಿದ ಪಿ.ವಿ.ಸಿ ಫಿಲ್ಸ್	01 ಲಾಟ್ (ಕೆ.ಜಿಗಳಲ್ಲಿ)	1,000
18	ಉಪಯೋಗಿಸಿದ ಹಳೆಯ ಎಂ.ಎಸ್ ಬ್ಯಾರೆಲ್‌ಗಳು	01 ಲಾಟ್(ಸಂಖ್ಯೆ ಲೆಕ್ಕದಲ್ಲಿ)	1,000
19	ಉಪಯೋಗಿಸಿದ ಲೈಟ್ ಫಿಟ್ಟಿಂಗ್ಸ್ ಮತ್ತು ಫ್ರೇಮ್ಸ್	01 ಲಾಟ್ (ಲಾಟ್‌ಲೆಕ್ಕದಲ್ಲಿ)	1,000
20	ಅನುಪಯುಕ್ತ ಕಾಟ್ರೇಜ್ ಫಿಲ್ಟರ್‌ಗಳು	01 ಲಾಟ್(ಸಂಖ್ಯೆ ಲೆಕ್ಕದಲಿ	1,000
21	ಉಪಯೋಗಿಸಿದ ವೇಸ್ಟ್ ಆಯಿಲ್	01 ಲಾಟ್(ಕೆ.ಜಿಗಳಲ್ಲಿ)	5,000
22	ಉಪಯೋಗಿಸಿದ ಆಯಿಲ್ ಏರ್ ಫಿಲ್ಟರ್ಸ್	01 ಲಾಟ್(ಸಂಖ್ಯೆ ಲೆಕ್ಕದಲ್ಲಿ)	1,000

1. ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಲಾಗಿರುವ ಮುಂಗಡ ಠೇವಣಿ ಹಣ (Earnest Money Deposit) eProcrement Government of Karnataka ಇವರ ಪರವಾಗಿ ಪಡೆದು ಸಲ್ಲಿಸಬೇಕು. ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಯಾವುದಾದರೊಂದು ನಿರ್ದಿಷ್ಟ ರೀತಿಯಲ್ಲಿ ಮುಂಗಡ ಠೇವಣಿ ಇ.ಎಂ.ಡಿ ಪಾವತಿಸಬಹುದಾಗಿದ್ದು, ಇದರ ಸಿಂಧುತ್ವವು ಟೆಂಡರ್ ಸಿಂಧುತ್ವದ ನಂತರ ಅವಧಿಯ ಕನಿಷ್ಠ 135 ದಿನಗಳಾಗಿರಬೇಕಾಗುತ್ತದೆ.
ಟೆಂಡರ್ ಸಲ್ಲಿಸುವ ದಿನಾಂಕ : **29.11.2022 ರಿಂದ 14.12.2022 5.30 ಗಂಟೆಯವರೆಗೆ,** ಟೆಂಡರ್ ವಸ್ತುಗಳ ಖುದ್ದು ಪರಿಶೀಲನೆ ದಿ: **29.11.2022 ರಿಂದ 14.12.2022 10.30 ರಿಂದ 5.30 ಗಂಟೆಯವರೆಗೆ,** ಟೆಂಡರ್ ಸಲ್ಲಿಕೆಗೆ ಕಡೆಯ ದಿನಾಂಕ: **14.12.2022 ರ 5.30 ಗಂಟೆಯವರೆಗೆ,** ಟೆಂಡರ್ ಆನ್ ಲೈನ್ ಮೌಲ್ಯಮಾಪನ ದಿನಾಂಕ : **17.12.2022,** ಟೆಂಡರ್ ವಸ್ತುಗಳ ಇ–ಹರಾಜು ದಿನಾಂಕ: **19.12.2022 ರ ಬೆಳಗ್ಗೆ 10.30 ರಿಂದ 04.30 ಗಂಟೆಯವರೆಗೆ,** ಟೆಂಡರ್ ತೆರೆಯುವ ದಿನಾಂಕ : **21.12.2022 ರಂದು ಬೆಳಗ್ಗೆ 11.00 ಗಂಟೆಗೆ.**
ಸಹಿ/–ವ್ಯನಿ. ಕೋಮುಲ್

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರಗಳು ಕಳೆದಿವೆ ಎಂದು ಷೇರುದಾರರು ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಮತ್ತು ನಕಲಿ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಷೇರುದಾರರು ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
A000777	50	30176	2523732-2523781	ಶ್ರೀಮತಿ ಅಂಜಲಿ ಶ್ರೀರಾಮ್ ತಟ್ಟೆ
	20	30177	2523782-2523801	
	5	30178	2523802-2523806	

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/ P/CIR/ 2022/8ರಂತೆ ಷೇರುದಾರರಿಂದ ಮುಖ ಬೆಲೆ ರೂ 10ರ ಹಳೆಯ ಷೇರು ಪ್ರಮಾಣ ಪತ್ರಗಳನ್ನು ಹಿಂದಿರುಗಿಸಲು ಅಗತ್ಯವಿರುವ ಶಾಸನಬದ್ಧ ಪ್ರಕ್ರಿಯೆಯ ಹೊರತಾಗಿಯು ದೃಢೀಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 29.11.2022
ಮಾನಸ ಆರ್
ಕಂಪನಿ ಸೆಕ್ರಟರಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

ACCOUNTANT NEEDED with minimum 2 years of experience for Chitrakoota School, Bangalore (Kengeri). Good in Tally. Salary 10k to 20k. Age: Less than 35. CALL: 7829646333

WANTED LADY ACCOUNTANT for Private Limited Company atMachohalli, Magadi Road. WhatsApp your resume to:9845057606

WANTED SALES Girls & Account Assistant with Billing Knowledge, Chickpet, Contact: 9880045004

REPUTED INDUSTRY in Peenya, Require Accountant with knowledge of GST, Excise, Import etc. 9886789567/ 9008461094

RAJYA VOKKALIGARA SANGHA (R)
No.48, K.R.Road, V.V.Puram, Bangalore- 04
WALK IN INTERVIEW
Applications are invited for RVS Ayurvedic Medical College Hospital & Research Centre, Srigandhadakavalu, Bangalore-91
From eligible candidates as per NCISM [National commission for Indian System of Medicine] norms for the posts listed below

SN	POST	DEPARTMENT	NUMBER
01	Consultant	Kayachikitsa	01
		Panchakarma	01
		Shalyatantra	01
		Shalakyatantra	01
		Prasutitantra&streeroga	01
		Kaumarabhritya	01
		Swasthavritta	01
02	RMO/RSO	BAMS	05
03	Panchakarma therapist	02 Male & 02 Female	04

Interview Date: **07-12-2022 at 11.00 AM, Wednesday**
Place: Sangha meeting hall, 2nd floor, RajyaVokkaligara Sangha Bangalore – 560004
Contact: Chairman- 9379035096 Principal- 7892914197
President RVS | Gen. Secretary RVS | Treasurer RVS | Vice President RVS | Chairman Sreegandhada kavalu Institution

INTRA LABS — **WANTED** — Since 42 years
WHO-GMP certified company
INTRA LABS
Accounts Assistant & Sales Executive with Good Communication Skills: Hindi, English, Kannada
Contact No.: 9901333611 / 9019112223
No. 39, 1st Floor, New Timberyard Layout, Byatarayanpura, Mysore Road, Bangalore-560 026.
Ph : 080-26754892 / 93, E-Mail : feedbackintralabs@gmail.com, marketingintralabsmys@gmail.com,

General

COMMERCIAL EXECUTIVE: Female Candidate Graduate with knowledge of Typing, MS-Office with good communication skills for office in Banashankari 2nd Stage, Bangalore. Email: jobs@econceptonline.com

JTB EXPRESS Services Pvt Ltd now hiring sales Executive for Logistics & Freight Qualification:Graduate min 2yrs experience in air cargo send cv to career@jtbexpress.com

Hospital & Medical Jobs

FPA INDIA requires MEDICAL OFFICER/ LAB TECHNICIAN, Bengaluru candidates apply. Recruitment reflects our commitment to safety protection of children/ young people. Email: bengaluru@fpaindia.org

'GERONICS' MEDICAL Hospital, Wanted RETIRED PHYSICIANS, SALES BOYS/ EXECUTIVES, B.Com/ PHARMACY ASSISTANTS. Dr.Swamy- 9342247637, Opposite Purva Skywood, Haralur Road.

WANTED D PHARMA PHARMACIST, NURSING STAFF Contact: Chaitanya Hospital No-80, P&T Colony, R.T.Nagar, Bangalore, 9900520357

Marketing & Sales

TECHNICAL SALES OFFICER 40 to 45 years needed by 45 year old Bangalore Engineering Sales Company, Fraser Town area dealing with multiple imported products like Fuel, Oil Transfer and Adblue Pumps, Dispensers and Meters. Propellor Shafts, Railway Brake Cables, Slewing Rings and Spare. To be technically and commercially experienced with ability to meet Senior OEM officials and Dealers, make presentations, close business, generate new business, prepare targets. Should know Word, Excel, Power Point. Report to Sales Manager. Job involves travelling. Salary Rs.21,000 to 24,000 plus 2-wheeler allowance. Apply with details to- officestaffblr@gmail.com

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Engg/ Production Technical

SALES ENGINEER: BE/ Diploma/ B.Sc. with Electronics/ Electrical background with Good Communication Skills, also own two wheeler to market MNC brand Electronics Test and Measuring Instruments, preferably with 2- 3 years experience. Fresher who have flair for Marketing may apply for a trainee post. Email: jobs@econceptonline.com

WANTED DESIGN engineer Civil for structural Consultant office in Mahalakshimi layout with minimum experience of two years email: vasulu86@gmail.com 9845171084

WELLREPUTED CONSTRUCTION Company in Bangalore Having Various Construction worksthroughout Karnataka, Requires Site Engineers- Diploma/ BE Graduates withMinimum of 3 to 15 Years of Experience in Multi storied building. Send theresume to balaji.recurit2022@gmail.com

Multiple Vacancy

JOBS
Accounts: PUC/ B.Com (25 No.s)
Article Assistant: (5 No.s)
Female Telecaller: (5 No's)
Salary: 8k to 25k,
Location: Girinagar, B'lore.
Email: parabolahr@gmail.com
Only WhatsApp, no Phone Call: 90190 43325

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Teachers/ Professors

WANTED Full Time Lecturers in Commerce, English Computer Science Political Science & Economics Candidates with P.G, NET/UGC, Preferably youngsters, can apply to the Secretary Vidyavahini First Grade College, Anandanagar Bangalore-24

ACHIEVE SCHOOL OF EDUCATION Basavanagudi Bangalore- 560004 Requires immediately Pre School TEACHERS with great English communication. Phone: 9164222288 Email to: info@asoe.in

WANTED QUALIFIED TEACHERS Wanted For High School (English Kannada and Hindi) near Manyata Tech Park. Whatsapp 9481722333 Email: dominicgroup89@gmail.com

EDUCATIONAL

Admission

PASS IN ONE YEAR: LLB (Can Practice, Regular). All Under Graduate and Post Graduate Courses from Govt. Recognised Universities. Also offering BTech/BAMS/ BNYS/BUMS/Pharmacy Courses. Admissions shortly close. Asha Academy: 9448460103/ 7093438248

REAL ESTATE BUYING

Agricultural Land Converted

General

WANTED
AGRICULTURAL LAND (50 - 100 ACRES)
within 5 - 10 K.M. from
1. Tondebhavi
2. Gauribidanur
3. Channapatna
4. Maddur
Genuine Owners or Agents may contact **Secretary**:
THE IDEAL HOMES CO-OPERATIVE BUILDING SOCIETY LIMITED, Ideal Homes Co Operative Building Society Ltd, Rajarajeswari Nagar, Mysore Rd, B'lore- 98
Ph: 080-28600892
Mob: 9901500872

General

General

WE DO Agriculture Land Conversions, Change of Land Use,Phodi, Property Documentation Services and Marketable Title.Call Verna Developers, Barton Centre, MG-Road, Bengaluru. 9916310226/ 9620253180. www.vernadevelopers.com

REAL ESTATE SELLING

Agricultural Land

Kunigal

NEWLY CONSTRUCTED 24 Square Farm House Badminton Court Garden in 3 Acres 9 Guntas Drip-Irrigated having Arecanut Coconut Guava Orange Mango Banana & Miscellaneous Plantation Borewell Gated-Compounded Fenced opposite to Sankigatta Panchayath Office Near Government Hospital.Thippasandra Hobli Magadi Taluk.65km from Majestic 35kms from Nelamangala.Rs.3.80 Crores.Contact Owner:9686934717

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. For Details call 9070990709

PUBLIC NOTICE

PUBLIC NOTICE
LOST ORIGINAL DOCUMENTS
The General Public are hereby notified that the undersigned has lost original documents for twin site numbers 65 & 66 with joint PID No. 73-124-48 situated on 4th Main Road, K.R. Garden, Murgheshpalya, Varthur Hobli in Bangalore- 560017. They are found missing since June 2016 from our house No. 89/90 Anjanadri Enclave, Horamavu Agara, Off ly Babusapalya, Bangalore 560043.
In case someone finds the documents with the site numbers quoted above, kindly inform the same to the following whats' app no. **974 198 8674.** Many thanks

OTHERS

Yoga & Meditation

KNOW YOUR self The art of breathing Life changing workshop in Bangalore By shiv swaroday shastra AdIGURU Shiva's philosophy. Life time free consultation. Pls contact 7972962130. Class is available in English, Hindi (Kannada).

ADMISSION CORNER

The Mysore Education Society
MES COLLEGE OF ARTS, COMMERCE AND SCIENCE
Affiliated to Bengaluru City University
NAAC Accredited 'A' Grade (Fourth Cycle)
15th Cross, Malleshwaram, Bangalore – 560 003.
www.mesacs.in Ph:080 23347045, 080 23341225

POST GRADUATION ADMISSIONS
For the academic year 2022-23 are open for
M.Sc. (Mathematics) & M.A. (Kannada)
(Under Management Seats)
at the Postgraduate Departments of Mathematics and Kannada both with Research Centres.
Eligibility: 40% in aggregate and 50% in Mathematics / Kannada Subjects at the Bachelor's Degree
Issue of Applications: 10.30 A.M. to 4:00 P.M. at the College Office

PERSONAL

Change of Name

CHANGE OF NAME
I, **Pyarusab,** S/o. Baba Sab, Aged: 64 years, Residing at: No. 185, Kaiwara Village, Kaiwara Hobli, Chintamani Taluk, Chickballapur District, Karnataka have changed my name to **ABDUL RAHIM,** S/o. Shekh Mohaddin vide affidavit dated: 28.11.2022, before Notary Manjunatha Reddy, Chintamani.

I, SUHASINI GUBBEWAD, D/o. Sangamesh Gubbewad, W/o. Annadanesh S Sankadal, R/at #213, 3rd D Cross, 2nd Block, 3rd Stage, Basaveshwaranagar, Bangalore- 560079, hereby declare that I have changed my name from SUHASINI GUBBEWAD to SUHASINI SANKADAL. Vide affidavit dated 28-11-2022 sworn before Shreeshail B.Gobbani, Advocate & Notary Public, Govt. of India, Bengaluru.

I, PRAVEEN, R/at T1/39, 1stStage Sharavathi Road Kamalanagar Basaveshwaranagar, Bengaluru- 560079, have changed my name to PRAVEEN SRINIVAS vide affidavit dated: 21/11/2022 before Notary C.Srinivas Bangalore.

CHANGE OF NAME
I, **Mohammed Waghith M.** residing at #50, 2nd Floor, 5th Cross, Near Shams Medicals, Chamundi Nagar, R.T. Nagar Post, Bangalore - 560 032 have changed my name to **Mohammed Wajid** vide affidavit dated: 22.11.2022 before Notary B.V. Nagabhushana, Bangalore North.

JC665863M, SUB, R Jayarengan 2ATC, Father name record's RADHA KRISHNA to P.A. RADHAKRISHNARAJA notary B.M Chandrashekar.

JC665863M, SUB, R Jayarengan 2ATC, daughter name record's SHRI SWATHIKA to J SHRI SWATHIKA notary B.M Chandrashekar.

JC665863M, SUB, R Jayarengan 2ATC, mother name record's KALYANI M to P.R. KALYANIAMMAL notary B.M Chandrashekar.

Lost

LOST
I, Shubha Raju have lost the sale deed of plot Sq No:126, Ward 40, Nagarabhavi (Village), Yeshwanthapura (Hobli), Bangalore North. Document No: 1208/2000-01 04-05-2000 Lost Report No:0398299/2022 If anybody found above documents please **contact: 9902377988/ 9901277988** or nearby Police station

LOST
I, Shubha Raju have lost the sale deed of plot Sq No:126, Ward 40, Nagarabhavi (Village), Yeshwanthapura (Hobli),Bangalore North. Document No: 2061 2003-2004Lost Report No:0398293/2022 If anybody found above documents please **contact: 9902377988/ 9901277988** or nearby Police station

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT

ಸ್ಟೇನ್ಸ್ ಉತ್ಪನ್ನದ ಹೊಸ ಅವಿಷ್ಕಾರವನ್ನು ಪರಿಚಯಿಸುತ್ತಿದ್ದೇವೆ
ನ್ಯೂಟ್ರಿಫಾಸ್ಟ್
N:05% P:15% K:20%
(Zn-2.0%, Fe-1.0%, Mn-1%
Cu-1%, Mo-0.10%, B-0.6%)
(100% ನೀರಿನಲ್ಲಿ ಕರಗುವ ರಸಗೊಬ್ಬರಗಳ ಮಿಶ್ರಣ)
(NPK ರಸಗೊಬ್ಬರ ಮತ್ತು ಸೂಕ್ಷ್ಮ ಪೋಷಕಾಂಶಗಳ ಸಂಯೋಜನೆ)
ಎಲ್ಲಾ ಬೆಳೆಗಳಿಗೆ
ಹೆಚ್ಚಿನ ವಿವರಗಳಿಗಾಗಿ
ಟಿ. ಸ್ಟೇನ್ಸ್ ಅಂಡ್ ಕಂಪನಿ ಲಿಮಿಟೆಡ್
(ಅಮಾಲ್ಗಮೇಶನ್ ಸಮೂಹದ ಸದಸ್ಯ ಕಂಪನಿ)
8/23–24, ರೇಸ್ ಕೋರ್ಸ್ ರಸ್ತೆ, ಕೊಯಂಬತ್ತೂರು– 641 018
ಸಂಪರ್ಕಿಸಿ : 0422 2221514 / 2223515-18

DH DECCAN HERALD | ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com
conditions apply*

ವಿಸ್ತಾರಾ, ಏರ್ ಇಂಡಿಯಾ ವಿಲೀನ

ನವದೆಹಲಿ (ಪಿಟಿಐ): ವಿಸ್ತಾರಾ ವಿಮಾನಯಾನ ಕಂಪನಿಯನ್ನು ಏರ್ ಇಂಡಿಯಾದಲ್ಲಿ ವಿಲೀನಗೊಳಿಸಲಾಗುವುದು ಎಂದು ಟಾಟಾ ಸಮೂಹವು ಮಂಗಳವಾರ ಹೇಳಿದೆ. ಇದು ದೇಶದ ವಿಮಾನಯಾನ ಕ್ಷೇತ್ರದ ಮಹತ್ವದ ವಿಲೀನ ಪ್ರಕ್ರಿಯೆ.

ವಿಸ್ತಾರಾ ಕಂಪನಿಯು ಏರ್ ಇಂಡಿಯಾದಲ್ಲಿ ವಿಲೀನವಾದ ನಂತರದಲ್ಲಿ, ಸಿಂಗಪುರ ಏರ್‌ಲೈನ್ಸ್ ಕಂಪನಿಯು ಏರ್ ಇಂಡಿಯಾದಲ್ಲಿ ಶೇಕಡ 25.1ರಷ್ಟು ಪಾಲು ಹೊಂದಲಿದೆ. ವಿಲೀನವು 2024ರ ಮಾರ್ಚ್‌ಗೆ ಮೊದಲು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ವಿಸ್ತಾರಾ ಕಂಪನಿಯಲ್ಲಿ ಟಾಟಾ ಸಮೂಹವು ಶೇ 51ರಷ್ಟು, ಸಿಂಗಪುರ ಏರ್‌ಲೈನ್ಸ್ ಶೇ 49ರಷ್ಟು ಷೇರುಪಾಲು ಹೊಂದಿದೆ. 'ವಹಿವಾಟಿನ ಭಾಗವಾಗಿ ಏರ್ ಇಂಡಿಯಾ ಕಂಪನಿಯಲ್ಲಿ ನಾವು ₹ 2,058 ಕೋಟಿ ಹೂಡಿಕೆ ಮಾಡಲಿದ್ದೇವೆ' ಎಂದು ಸಿಂಗಪುರ ಏರ್‌ಲೈನ್ಸ್ ತಿಳಿಸಿದೆ.

ವಿಲೀನದ ನಂತರದಲ್ಲಿ ಏರ್ ಇಂಡಿಯಾ ಕಂಪನಿಯ ಬಳಿ ಒಟ್ಟು 218 ವಿಮಾನಗಳು ಇರಲಿವೆ. ಇದು ಅಂತರರಾಷ್ಟ್ರೀಯ ವಿಮಾನಯಾನ ಸೇವೆ ಒದಗಿಸುವ ಭಾರತದ ಅತಿದೊಡ್ಡ ಕಂಪನಿಯಾಗಲಿದೆ. ದೇಶಿ ಮಾರುಕಟ್ಟೆಯಲ್ಲಿ ವಿಮಾನಯಾನ ಸೇವೆ ಒದಗಿಸುವ ಎರಡನೆಯ ಅತಿದೊಡ್ಡ ಕಂಪನಿಯಾಗಲಿದೆ ಎಂದು ಟಾಟಾ ಸಮೂಹ ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದೆ.

ಅಗತ್ಯ ಕಂಡುಬಂದರೆ ಟಾಟಾ ಸನ್ಸ್ ಮತ್ತು ಸಿಂಗಪುರ ಏರ್‌ಲೈನ್ಸ್ ಕಂಪನಿಗಳು ಏರ್ ಇಂಡಿಯಾ ಕಂಪನಿಗೆ ಇನ್ನಷ್ಟು ಬಂಡವಾಳ ಒದಗಿಸಲಿವೆ.

ಏರ್ ಇಂಡಿಯಾ ಕಂಪನಿಯನ್ನು ನಿಜವಾಗಿಯೂ ವಿಶ್ವದರ್ಜೆಯ ವಿಮಾನಯಾನ ಕಂಪನಿಯನ್ನಾಗಿಸುವ ಪಯಣದಲ್ಲಿ ಈ ವಿಲೀನವು ಮಹತ್ವದ ಮೈಲಿಗಲ್ಲು ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಏರ್‌ಏಷ್ಯಾ ಇಂಡಿಯಾ ಮತ್ತು ವಿಸ್ತಾರಾ ಕಂಪನಿಗಳು ಟಾಟಾ ಸಮೂಹಕ್ಕೆ ಸೇರಿವೆ. ಅಕ್ಟೋಬರ್‌ನ ಮಾಹಿತಿ ಅನ್ವಯ ವಿಸ್ತಾರಾ ಕಂಪನಿಯು ದೇಶಿ ಮಾರುಕಟ್ಟೆಯಲ್ಲಿ ಶೇ 9.2ರಷ್ಟು ಪಾಲು ಹೊಂದಿದ್ದು, ದೇಶದ ವಿಮಾನಯಾನ ಕಂಪನಿಗಳ ಪೈಕಿ ಎರಡನೆಯ ಸ್ಥಾನದಲ್ಲಿ ಇದೆ.

'ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯೇ ಒಂದು ಶಿಕ್ಷೆ'

ನವದೆಹಲಿ (ಪಿಟಿಐ): ನಮ್ಮ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯೇ ಒಂದು ಶಿಕ್ಷೆಯಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದ್ದು, ಆತ್ಮಹತ್ಯೆಗೆ ಕುಮ್ಮಕ್ಕು ಸಂಬಂಧ 2008ರಲ್ಲಿ ಪಂಜಾಬ್‌ನಲ್ಲಿ ದಾಖಲಾಗಿದ್ದ ಪ್ರಕರಣದಿಂದ ಮೂವರನ್ನು ಖುಲಾಸೆಗೊಳಿಸಿತು.

ಪ್ರಕರಣದಲ್ಲಿ ಕೆಳಹಂತದ ಕೋರ್ಟ್ ಆದೇಶ ಪ್ರಶ್ನಿಸಿ ಮೂವರು ಪಂಜಾಬ್-ಹರಿಯಾಣ ಹೈಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿ 13 ವರ್ಷದಿಂದ ಬಾಕಿ ಉಳಿದಿತ್ತು. ಇದರ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಎ.ಎಸ್. ಒಕಾ ಅವರಿದ್ದ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಅರ್ಜೆಂಟೈನಾ ಮತ್ತು ಪೋರ್ಚುಗಲ್‌ಗೆ ಮೆಸ್ಸಿ ಮತ್ತು ರೊನಾಲ್ಡೊ ಇಬ್ಬರೂ ಶ್ರೇಷ್ಠರು

ವಕೀಲ ಜಗದೀಶ್‌ಗೆ ₹ 2 ಲಕ್ಷ ದಂಡ

ಬೆಂಗಳೂರು: ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಗದ್ದಲ ಉಂಟು ಮಾಡಿದ ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಬಗ್ಗೆ ಸಲ್ಲದ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬೇಷರತ್ ಕ್ಷಮೆ ಯಾಚಿಸಿದ ಹಿನ್ನೆಲೆಯಲ್ಲಿ ವಕೀಲ ಕೆ.ಎನ್. ಜಗದೀಶ್ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಹೈಕೋರ್ಟ್ ಕೈಬಿಟ್ಟಿದೆಯಾದರೂ ₹ 2 ಲಕ್ಷ ದಂಡ ವಿಧಿಸಿದೆ.

ಈ ಕುರಿತ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ದಂಡದ ಮೊತ್ತ ₹ 2 ಲಕ್ಷದ ಪೈಕಿ ₹ 1 ಲಕ್ಷ ಮೊತ್ತವನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ನೀಡಬೇಕು. ಬೆಂಗಳೂರು ವಕೀಲರ ಸಂಘದ ಗ್ರಂಥಾಲಯ ಅಭಿವೃದ್ಧಿಗೆ ಮತ್ತು ಹೈಕೋರ್ಟ್ ಗುಮಾಸ್ತರ ಕ್ಷೇಮಾಭಿವೃದ್ಧಿ ಸಂಘಕ್ಕೆ ತಲಾ ₹ 50 ಸಾವಿರ ಪಾವತಿಸಬೇಕು. ಈ ಆದೇಶದ ಅನುಪಾಲನಾ ವರದಿಯನ್ನು ಎರಡು ವಾರಗಳಲ್ಲಿ ಸಲ್ಲಿಸಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: 'ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಕೆ.ಎನ್. ಜಗದೀಶ್ 2022ರ ಫೆಬ್ರುವರಿ 11ರಂದು ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ಗೆ ಹಾಜರಾಗಿದ್ದರು. ಈ ವೇಳೆ ಅವರು ಕೆಲ ವಕೀಲರೊಂದಿಗೆ ಮಾತಿನ ಚಕಮಕಿ ನಡೆಸಿದ್ದರು. ಇದರಿಂದ ಕೋರ್ಟ್ ಆವರಣದಲ್ಲಿ ಗದ್ದಲ ಉಂಟಾಗಿತ್ತು' ಎಂದು ಆರೋಪಿಸಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ರಿಜಿಸ್ಟ್ರಾರ್ ಮತ್ತು ಪ್ರಧಾನ ನ್ಯಾಯಧೀಶರು ಫೆಬ್ರುವರಿ 11ರಂದು ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದರು. ಈ ಘಟನೆ ನಂತರ 2022ರ ಫೆಬ್ರುವರಿ 12ರಂದು ಫೇಸ್‌ಬುಕ್ ಮತ್ತು ಯೂಟ್ಯೂಬ್ ಲೈವ್‌ಗೆ ಬಂದಿದ್ದ ಜಗದೀಶ್, 'ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ವಿರುದ್ಧ ಹೇಳಿಕೆ ನೀಡಿದ್ದರು. ಸುಪ್ರೀಂ ಕೋರ್ಟ್ ಸಿಜೆಐ ಮತ್ತು ರಾಷ್ಟ್ರಪತಿಗೆ ದೂರು ಬರೆಯುತ್ತೇನೆ' ಎಂದಿದ್ದರು. ಇದನ್ನು ಆಧರಿಸಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರು ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದರು.

ಸೋಮವಾರ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಆರೋಪಿ ಜಗದೀಶ್, 'ನಾನು ತೋರಿದ ಅನುಚಿತ ವರ್ತನೆಗೆ ಬೇಷರತ್ ಕ್ಷಮೆ ಯಾಚಿಸುತ್ತೇನೆ. ಮುಂದೆ ನ್ಯಾಯಾಲಯದಲ್ಲಿ ಸಭ್ಯ ರೀತಿಯಲ್ಲಿ ವರ್ತಿಸುತ್ತೇನೆ. ಆದ್ದರಿಂದ, ನನ್ನ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಕೈಬಿಡಬೇಕು' ಎಂದು ಕೋರಿದ್ದರು. ರಿಜಿಸ್ಟ್ರಾರ್ ಜನರಲ್ ಪರ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಕಿರಣ್ ಎಸ್. ಜವಳಿ ವಾದ ಮಂಡಿಸಿದ್ದರು.

'ಜ್ಞಾನ ವಾಹಿನಿಗಳನ್ನು ಕನ್ನಡದಲ್ಲಿ ಪ್ರಸಾರ ಮಾಡಿ'

ಬೆಂಗಳೂರು: 'ಜಗತ್ತಿನ ಜ್ಞಾನ ವಾಹಿನಿಗಳಾದ ಅನಿಮಲ್ ಪ್ಲಾನೆಟ್, ನೆಟ್ ಜಿಯೋ ವೈಲ್ಡ್ ಹಾಗೂ ಬಿಬಿಸಿ ಅರ್ಥ್ ವಾಹಿನಿಗಳ ಕಾರ್ಯಕ್ರಮಗಳನ್ನು ಕನ್ನಡದಲ್ಲಿ ಪ್ರಸಾರ ಮಾಡಬೇಕು' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

'ಅನಿಮಲ್ ಪ್ಲಾನೆಟ್ ಸೇರಿ ವಿವಿಧ ಜ್ಞಾನ ವಾಹಿನಿಗಳು ತಮಿಳು, ತೆಲುಗು ಹಾಗೂ ಹಿಂದಿಯಲ್ಲಿ ಪ್ರಸಾರವಾಗುತ್ತಿವೆ. ಭೂ ಜೀವ ಜಗತ್ತಿನ ಅಚ್ಚರಿಯ ವಿಷಯಗಳು ಪ್ರಾದೇಶಿಕ ಭಾಷೆಗಳಲ್ಲಿ ದೊರಕುತ್ತಿವೆ. ಜೀವಜಗತ್ತಿನ ಅದ್ಭುತ, ವೈಚಿತ್ರ್ಯಗಳನ್ನು ಜನರು ಮಾತೃಭಾಷೆಗಳಲ್ಲಿ ಅರಿತುಕೊಳ್ಳುವ ಅನಿವಾರ್ಯ ಇದೆ. ಆದರೆ, ಅನಿಮಲ್ ಪ್ಲಾನೆಟ್, ನೆಟ್ ಜಿಯೋ ವೈಲ್ಡ್ ಹಾಗೂ ಬಿಬಿಸಿ ಅರ್ಥ್ ವಾಹಿನಿ ಕನ್ನಡ ಭಾಷೆಯಲ್ಲಿ ಪ್ರಸಾರವಾಗದೇ ಇರುವುದರಿಂದ ಜೀವ ವೈವಿಧ್ಯದ ಜ್ಞಾನ ಕನ್ನಡಿಗರನ್ನು ತಲುಪುತ್ತಿಲ್ಲ' ಎಂದು ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

'ಆಧುನಿಕ ಕಾಲಘಟ್ಟದಲ್ಲಿ ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಜಗತ್ತಿನಲ್ಲಿ ಅವರವರ ಮಾತೃಭಾಷೆಯಲ್ಲಿಯೇ ಸೇವೆಗಳು ಮತ್ತು ಮಾಹಿತಿಗಳು ಲಭಿಸುತ್ತಿವೆ. ಆದ್ದರಿಂದ ಜ್ಞಾನ ವಾಹಿನಿಗಳು ಕನ್ನಡದಲ್ಲಿಯೇ ಸೇವೆ ಒದಗಿಸಬಹುದಾಗಿದೆ. 2 ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಶಾಸ್ತ್ರೀಯ ಸ್ಥಾನಮಾನ ಹೊಂದಿದ್ದು, 6 ಕೋಟಿಗೂ ಅಧಿಕ ಜನ ಮಾತನಾಡುತ್ತಾರೆ. ಆದ್ದರಿಂದ ಕನ್ನಡದಲ್ಲಿಯೂ ಜ್ಞಾನ ವಾಹಿನಿಗಳು ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು. ಭೂ ಜಗತ್ತಿನ ವಿಸ್ಮಯಗಳನ್ನು ತಮ್ಮ ಭಾಷೆಯಲ್ಲಿ ತಿಳಿದುಕೊಳ್ಳುವ ಅವಕಾಶವನ್ನು ಕನ್ನಡಿಗರಿಗೂ ಒದಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಮತಪಟ್ಟಿಗೆ ಹೆಸರು ಸೇರ್ಪಡೆಗೆ ಆ್ಯಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಯಾವುದೇ ಮೂಲೆಯಲ್ಲಿದ್ದರೂ 'ಮತದಾರರ ಸಹಾಯವಾಣಿ' ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಮತದಾರರ ಪಟ್ಟಿಗೆ ಸೇರಬಹುದು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಮಂಗಳವಾರ ಹಮ್ಮಿಕೊಂಡಿದ್ದ ಮತದಾರರ ನೋಂದಣಿ ಜಾಗೃತಿ ಅಭಿಯಾನ ಮತ್ತು ಸಂವಿಧಾನ ದಿನ ಕಾರ್ಯಕ್ರಮ ಉದ್ಘಾಟಿಸಿ, ಈಗಾಗಲೇ ಶೇ 99ರಷ್ಟು ಮತದಾರರ ನೋಂದಣಿ ಆನ್‌ಲೈನ್ ಮೂಲಕವೇ ನಡೆದಿದೆ. 18 ವರ್ಷ ತುಂಬಿದ ಯುವ ಜನರು ನೋಂದಣಿ ಮಾಡಿಕೊಳ್ಳಬೇಕು. ಸದೃಢ ದೇಶ ಕಟ್ಟಲು, ಭವಿಷ್ಯದ ಭಾರತ ನಿರ್ಮಾಣಕ್ಕಾಗಿ ಮತದಾರರ ಪಟ್ಟಿಗೆ ಸೇರಬೇಕು ಎಂದು ಸಲಹೆ ನೀಡಿದರು.

ರಾಜ್ಯ, ಕೇಂದ್ರ ಚುನಾವಣಾ ಆಯೋಗಗಳ ಜವಾಬ್ದಾರಿಗಳು ಭಿನ್ನ. ಸ್ಥಳೀಯ ಸಂಸ್ಥೆಗಳ ಚುನಾವಣಾ ಹೊಣೆಗಾರಿಕೆ ರಾಜ್ಯ ಚುನಾವಣಾ ಆಯೋಗದ ಮೇಲಿರುತ್ತದೆ. ಲೋಕಸಭೆ, ರಾಜ್ಯಸಭೆ, ವಿಧಾನಸಭೆಗಳ ಚುನಾವಣೆಗಳನ್ನು ಕೇಂದ್ರ ಚುನಾವಣಾ ಆಯೋಗ ನಡೆಸುತ್ತದೆ. ಈಚಿನ ದಿನಗಳಲ್ಲಿ ಚುನಾವಣಾ ನಿಯಮಗಳಲ್ಲಿ ಬದಲಾವಣೆಗಳಾಗಿವೆ ಎಂದರು.

ಮತದಾರರ ಪಟ್ಟಿ ಪರಿಶೀಲನೆ: ವಿಶೇಷ ಅಧಿಕಾರಿಗಳ ನೇಮಕ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮೂರು ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯನ್ನು ಶೇ 100ರಷ್ಟು ಪರಿಶೀಲನೆ ಮಾಡಲು ಕೇಂದ್ರ ಚುನಾವಣೆ ಆಯೋಗದ ನಿರ್ದೇಶನದಂತೆ ವಿಶೇಷ ಅಧಿಕಾರಿಗಳನ್ನು ನೇಮಿಸಲಾಗಿದೆ.

162- ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಪ್ರಿಯಾಂಕ ಮೇರಿ ಫ್ರಾನ್ಸಿಸ್, 169- ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಡಾ. ಆರ್. ವಿಶಾಲ್ ಹಾಗೂ 174- ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಅಜಯ್ ನಾಗಭೂಷಣ್ ಅವರನ್ನು ವಿಶೇಷ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ.

ಶಿವಾಜಿನಗರ, ಚಿಕ್ಕಪೇಟೆ, ಮಹದೇವಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 2022ರ ಜ.1ರಿಂದ ಮತದಾರರ ಪಟ್ಟಿಗೆ ಸೇರ್ಪಡೆ ಮತ್ತು ತೆಗೆದುಹಾಕಿರುವ ಎಲ್ಲಾ ವಿವರಗಳನ್ನು ವಿಶೇಷ ಅಧಿಕಾರಿಗಳು ಪರಿಶೀಲಿಸುತ್ತಾರೆ.

ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಡಿ.9ರಿಂದ ಡಿ.24ರವರೆಗೆ ವಿಸ್ತರಿಸಲಾಗಿದೆ. ಈ ಮೂರು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸೇರ್ಪಡೆ ಮತ್ತು ತೆಗೆದುಹಾಕಿರುವ ವಿವರಗಳನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಒದಗಿಸಲು ನಿರ್ದೇಶನ ನೀಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಎಇಆರ್‌ಒ ನೇಮಕ: 27 ಕ್ಷೇತ್ರಗಳಿಗೆ ಸಹಾಯಕ ಮತದಾರರ ನೋಂದಣಾಧಿಕಾರಿಗಳನ್ನು ನೇಮಕ ಮಾಡಿ ಕೇಂದ್ರ ಚುನಾವಣೆ ಆಯೋಗ ಮಂಗಳವಾರ ಆದೇಶ ಹೊರಡಿಸಿದೆ.

ಕೋವಿಡ್: ಸಾಮೂಹಿಕ ಪರೀಕ್ಷೆ ಹೆಚ್ಚಳವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವಾಮಾನ ವೈಪರೀತ್ಯದಿಂದ ಕೆಲವರು ಜ್ವರ ಪೀಡಿತರಾಗುತ್ತಿದ್ದಾರೆ. ಕೋವಿಡ್ ಬಗೆಗೆ ಆತಂಕ ಪಡಬೇಕಾದ ಅಗತ್ಯವಿಲ್ಲ' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಡಿ. ರಂದೀಪ್

'ಚೀನಾದಲ್ಲಿ ಸಾಮೂಹಿಕವಾಗಿ ಪರೀಕ್ಷೆ ಮಾಡಲಾಗುತ್ತಿದೆ. ಆದ್ದರಿಂದ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿವೆ. ಒಬ್ಬರು ಸೋಂಕಿತರಾದರೆ ಕಟ್ಟಡದ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ದೇಶದಲ್ಲಿ ಈ ಪರೀಕ್ಷಾ ಪದ್ಧತಿಯನ್ನು ಕೈಬಿಡಲಾಗಿದೆ. ಈಗ ಕೆಲ ಪ್ರಕರಣ ಪತ್ತೆಯಾದರೂ ಸೋಂಕಿತರು ಲಕ್ಷಣರಹಿತರಾಗಿರುತ್ತಿದ್ದಾರೆ. ಆದ್ದರಿಂದ ಸೋಂಕಿತರ ಸಂಪರ್ಕಿತರಿಗೆ ಪರೀಕ್ಷೆ ಮಾಡುತ್ತಿಲ್ಲ. ಪರೀಕ್ಷೆಗಳ ಸಂಖ್ಯೆಯನ್ನೂ ಇಳಿಕೆ ಮಾಡಲಾಗಿದೆ' ಎಂದು ಹೇಳಿದರು.

'ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ), ತೀವ್ರ ಉಸಿರಾಟದ ಸಮಸ್ಯೆ(ಸಾರಿ) ಪ್ರಕರಣಗಳ ಮೇಲೆ ನಿಗಾ ಇಡಲಾಗುತ್ತಿದೆ. ಈ ಪ್ರಕರಣಗಳು ಹೆಚ್ಚಳವಾಗಿಲ್ಲ. ಕೋವಿಡ್ ಸಂಬಂಧಿತ ಆಸ್ಪತ್ರೆ ದಾಖಲಾತಿ ಬೆರಳಣಿಕೆಯಷ್ಟಿದೆ. ಕೋವಿಡ್ ಚಿಕಿತ್ಸಾ ವಿಧಾನವೂ ಬದಲಾಗಿದೆ. ಇದರಿಂದಾಗಿ ಮರಣವೂ ನಿಯಂತ್ರಣಕ್ಕೆ ಬಂದಿದೆ. ಹಾಗಾಗಿ, ಇಲ್ಲಿ ಯಾವುದೇ ನಿರ್ಬಂಧ ವಿಧಿಸುವುದಿಲ್ಲ. ಪರೀಕ್ಷೆಯಲ್ಲಿಯೂ ಬದಲಾವಣೆಯಿಲ್ಲ' ಎಂದರು.

'ಸಮರ್ಥ, ಶ್ರೇಷ್ಠ ಭಾರತ ನಿರ್ಮಾಣ ಅಗತ್ಯ'

ಕನ್ನಡ ರಾಜ್ಯೋತ್ಸವದಲ್ಲಿ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ • ವಿವೇಕದ ದಾರಿಯಲ್ಲಿರುವಂತೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮರ್ಥ, ಶ್ರೇಷ್ಠ ಹಾಗೂ ಹೊಸ ಭಾರತ ಕಟ್ಟಲು ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಲೋಹಿಯಾ ಕುರಿತ ಬರಹಗಳನ್ನು ಯುವಪೀಳಿಗೆ ಹಾಗೂ ಅಧಿಕಾರ ವರ್ಗ ಓದಿಕೊಳ್ಳುವುದು ಅಗತ್ಯ' ಎಂದು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಪ್ರತಿಪಾದಿಸಿದರು.

'ಅಕ್ಕ' ಐಎಎಸ್ ಅಕಾಡೆಮಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪಂಚಭೂತಗಳಲ್ಲಿ ಮೋಸ ಎಂಬುದಿಲ್ಲ. ಸೂರ್ಯ, ಚಂದ್ರರಲ್ಲಿ ಭೇದಭಾವವೂ ಇಲ್ಲ. ಆದರೆ, ಜನರ ಮನಸ್ಸುಗಳಲ್ಲಿ ವಂಚನೆ ಇದೆ ಎಂದ ಅವರು, ರಾಷ್ಟ್ರಕವಿ ಕುವೆಂಪು ಹೇಳಿದಂತೆ ಕೆಟ್ಟದ್ದನ್ನು ತ್ಯಜಿಸಬೇಕು. ಒಳಿತು ಅಳವಡಿಸಿಕೊಳ್ಳಬೇಕು. ಮಾತೃಭಾಷೆಯನ್ನು ಪ್ರೀತಿಸಿ, ಅನ್ಯಭಾಷೆಗಳ ಬಗ್ಗೆಯೂ ಗೌರವ ಬೆಳೆಸಿಕೊಳ್ಳಬೇಕು' ಎಂದು ಕರೆ ನೀಡಿದರು.



ನಗರದಲ್ಲಿ ಮಂಗಳವಾರ 'ಅಕ್ಕ ಐಎಎಸ್ ಅಕಾಡೆಮಿ' ಆಯೋಜಿಸಿದ್ದ 'ಕನ್ನಡ ರಾಜ್ಯೋತ್ಸವ ಹಾಗೂ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ (ಮಧ್ಯದಲ್ಲಿರುವವರು) ಹಾಗೂ ಕೋಲಾರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಯು. ಸೋನಿಯಾ ವರ್ಣೇಕರ್ ಚರ್ಚೆಯಲ್ಲಿ ತೊಡಗಿದ್ದರು. ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ ಹಾಜರಿದ್ದರು. ಪ್ರಜಾವಾಣಿ ಚಿತ್ರ

'ಪ್ರಾಮಾಣಿಕರ ಬಗ್ಗೆ ಕೊನೆವರೆಗೆ ಅಭಿಮಾನ ಇರಲಿದ್ದು, ನೈತಿಕತೆ ಉಳಿಸಿಕೊಳ್ಳುವುದು ಅಗತ್ಯ. ಭ್ರಷ್ಟರು ಹಾಗೆಯೇ ಕಣ್ಮರೆ ಆಗಲಿದ್ದಾರೆ' ಎಂದು ನುಡಿದರು.

ಮುಖ್ಯಾಂಶಗಳು

- ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪ್ರದಾನ
- ಪ್ರಾಮಾಣಿಕರ ಮೇಲೆ ಅಭಿಮಾನ ಹೆಚ್ಚು
- ಸಂಪತ್ತಿನ ಹಿಂದೆ ಓಡಿದರೆ ಆಪತ್ತು

'ಸಂಪತ್ತು ಆಪತ್ತು ತರುವ ಸಾಧ್ಯತೆಯೇ ಹೆಚ್ಚು. ಸಂಪತ್ತಿನ ಹಿಂದೆ ಓಡಬಾರದು. ಆರೋಗ್ಯಕರ ಚಿಂತನೆ ಅಗತ್ಯ. ಉತ್ತಮ ಅಧಿಕಾರಿಗಳಾಗಿ ರೂಪುಗೊಳ್ಳಬೇಕು' ಎಂದು ಐಎಎಸ್ ಆಕಾಂಕ್ಷಿಗಳಿಗೆ ಕರೆ ನೀಡಿದರು.

ಯುದ್ಧ ಬೇಕಿರಲಿಲ್ಲ: 'ರಷ್ಯಾ-ಉಕ್ರೇನ್ ನಡುವೆ ಯುದ್ಧವೇ ಬೇಕಿರಲಿಲ್ಲ. ಕೊಲ್ಲುವ ವ್ಯಕ್ತಿ ಎಂದಿಗೂ ದೊಡ್ಡವನಾಗಲು ಸಾಧ್ಯವಿಲ್ಲ. ಈ ಯುದ್ಧದಲ್ಲಿ ಮಕ್ಕಳು ಕಣ್ಣೆದುರಿಗೇ ಮೃತಪಟ್ಟಿದ್ದು ಕಣ್ಣೀರು ತರಿಸಿತು. ಮನುಷ್ಯರು ಎಷ್ಟು ದೊಡ್ಡವರಾದರೂ ವಿವೇಕದ ದಾರಿಯಲ್ಲಿ ಸಾಗಬೇಕಿದೆ' ಎಂದು ಕರೆ ನೀಡಿದರು.

'ಭಾರತದಲ್ಲಿ ಸಾಕಷ್ಟು ಬದಲಾವಣೆ ಆಗಿದ್ದರೂ ಮತ್ತಷ್ಟು ಆರೋಗ್ಯಕರ ಬದಲಾವಣೆಗಳು ನಡೆಯಬೇಕಿದೆ. ಉತ್ತಮ ಸಮಾಜ ನಿರ್ಮಾಣ ಆಗಬೇಕಿದ್ದರೆ ಸಾಮೂಹಿಕ ಹೊಣೆಗಾರಿಕೆ ಮುಖ್ಯ. ಇಂದು ಅವಕಾಶಗಳು ಸಾಕಷ್ಟಿವೆ. ಅನ್ಯಾಯ ಒಪ್ಪಿಕೊಳ್ಳದೇ ಪ್ರತಿಭಟಿಸಬೇಕು' ಎಂದು ಕರೆ ನೀಡಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಉದ್ಘಾಟನಾ ಭಾಷಣ ಮಾಡಿದರು.

ಕೋಲಾರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಯು. ಸೋನಿಯಾ ವರ್ಣೇಕರ್, ಅಕಾಡೆಮಿ ಮಾರ್ಗದರ್ಶಕ ಬಸವರಾಜ ವಾಲೀಕಾರ್, ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ ಹಾಜರಿದ್ದರು.

ಪೀಣ್ಯ ಕೈಗಾರಿಕಾ ಪ್ರದೇಶದ ಸಿಗ್ನಲ್ ಬಳಿ ಮಂಗಳವಾರ ರಾತ್ರಿ ಕಂಟೈನರ್ ಉರುಳಿ ಬಿದ್ದ ಪರಿಣಾಮ ಸಂಚಾರ ದಟ್ಟಣೆ ಉಂಟಾಗಿತ್ತು.

ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ಸಾಥ್

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತದಲ್ಲಿ ಕನ್ನಡ ಭಾಷಾ ಬಳಕೆಗೆ ರಾಜ್ಯದ ನೌಕರರು ಸಂಪೂರ್ಣ ಆದ್ಯತೆ ನೀಡಿದ್ದಾರೆ. ಇನ್ನಷ್ಟು ಪರಿಣಾಮಕಾರಿ ಅನುಷ್ಠಾನಕ್ಕೆ ಸಂಘ ಶ್ರಮಿಸುತ್ತಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮಂಗಳವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ಜನಪದ ಜಾತ್ರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಸರ್ಕಾರಿ ನೌಕರರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಉತ್ತಮ ಕಥೆ, ಕಾದಂಬರಿ, ಕವನ ಸಂಕಲನಗಳು ಮತ್ತು ಇತರೆ ಬರಹಗಳ ಮೂಲಕ ಗಮನ ಸೆಳೆದಿದ್ದಾರೆ. ಸಾಕಷ್ಟು ಮಹನೀಯರು ಕನ್ನಡ ಸೇವೆ ಮಾಡಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ಸಂಘ ಪ್ರೋತ್ಸಾಹ ನೀಡುತ್ತಾ ಬಂದಿದೆ. ಅದಕ್ಕಾಗಿ ಪ್ರತಿ ವರ್ಷ ಸ್ಪರ್ಧೆಗಳನ್ನು ಆಯೋಜಿಸುತ್ತಿದೆ. ಪ್ರತಿಭಾವಂತರನ್ನು ಗುರುತಿಸಿ, ಅವಕಾಶಗಳನ್ನು ನೀಡುತ್ತಿದೆ ಎಂದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮಂಗಳವಾರ ಹಮ್ಮಿಕೊಂಡಿದ್ದ ಕನ್ನಡ ಜನಪದ ಜಾತ್ರೆ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡಕ್ಕೆ ಹೆಚ್ಚಿನ ಆದ್ಯತೆ ದೊರಕಬೇಕು. ಮಾತೃಭಾಷೆಯ ಶಿಕ್ಷಣಕ್ಕೆ ಒತ್ತು ನೀಡಬೇಕು. ಜಾಗತೀಕರಣದ ಈ ಕಾಲಘಟ್ಟದಲ್ಲಿ ಇಂಗ್ಲಿಷ್ ಒಂದು ಭಾಷೆಯಾಗಿ ಸರ್ಕಾರಿ ಶಾಲೆಯ ಮಕ್ಕಳಿಗೂ ಕಲಿಸಬೇಕು ಎಂದು ಸಲಹೆ ನೀಡಿದರು.

ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಜನಪದ ಕಲಾವಿದರಾದ ಡಾ.ವೇಮಗಲ್ ನಾರಾಯಣಸ್ವಾಮಿ ಮತ್ತು ತಂಡದವರು ಜನಪದ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಜಾನಪದ ನೃತ್ಯ ಸ್ಪರ್ಧೆಗಳಲ್ಲಿ ವಿಜಯಿಯಾದ ಸರ್ಕಾರಿ ನೌಕರ ತಂಡಗಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು.

ಸಂಘದ ಪದಾಧಿಕಾರಿಗಳಾದ ಶ್ರೀನಿವಾಸ್, ವೆಂಕಟೇಶಯ್ಯ, ಮೋಹನ್‌ಕುಮಾರ್, ಮಲ್ಲಿಕಾರ್ಜುನ್ ಬಳ್ಳಾರಿ, ರುದ್ರಪ್ಪ, ಸದಾನಂದ್, ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

1ರಿಂದ ಅಂಗನವಾಡಿ ನೌಕರರ ಪ್ರತಿಭಟನೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿಯರನ್ನಾಗಿ ಪರಿಗಣಿಸಬೇಕು. ಇಲ್ಲದಿದ್ದರೆ ಡಿ. 1ರಿಂದ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಎಚ್ಚರಿಸಿದೆ.

'2022ರ ಏಪ್ರಿಲ್ 25ರಂದು ಸುಪ್ರೀಂಕೋರ್ಟ್ ಆದೇಶದಂತೆ 1972ರ ಗ್ರಾಚ್ಯುಟಿ ಕಾಯ್ದೆಯ ಪ್ರಕಾರ ಅಂಗನವಾಡಿ ನೌಕರರು ಗ್ರಾಚ್ಯುಟಿ ಪಡೆಯಲು ಅರ್ಹರು ಎಂದು ತೀರ್ಪು ನೀಡಿದ್ದು, ಇದುವರೆಗೂ ಅದು ಜಾರಿಯಾಗಿಲ್ಲ. ರಾಜ್ಯದಾದ್ಯಂತ ಸಾವಿರಾರು ನಿವೃತ್ತಿ ನೌಕರರು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ರಾಜ್ಯ ಸರ್ಕಾರ ಕೂಡಲೇ ಗ್ರಾಚ್ಯುಟಿಯನ್ನು ಪಾವತಿಸಬೇಕು' ಎಂದು ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಅನ್ನದೊಟ್ಟಿಗೆ ಅಕ್ಷರ ಕೇಂದ್ರವಾಗಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಬಲಿಷ್ಠಗೊಳಿಸಬೇಕು. ಐಸಿಡಿಎಸ್ ಮಾರ್ಗಸೂಚಿ ಪ್ರಕಾರ 6 ಸೇವೆಗಳಿಗೆ ಮಾತ್ರ ಅಂಗನವಾಡಿ ನೌಕರರನ್ನು ಬಳಸಿಕೊಳ್ಳಬೇಕು. ಆದರೆ ಸ್ತ್ರೀ ಶಕ್ತಿ, ಭಾಗ್ಯಲಕ್ಷ್ಮಿ, ಮಾತೃವಂದನ ಕೆಲಸಗಳಲ್ಲಿ ಬಳಸಿಕೊಳ್ಳಲಾಗುತ್ತಿದ್ದು, ಐಸಿಡಿಎಸ್ ಉದ್ದೇಶಕ್ಕೆ ಧಕ್ಕೆ ತರಲಾಗುತ್ತಿದೆ' ಎಂದು ಆರೋಪಿಸಿದರು.

'ಅಂಗನವಾಡಿ ಕೇಂದ್ರದ ವೇಳಾಪಟ್ಟಿಯನ್ನು ಬೆಳಿಗ್ಗೆ 10ರಿಂದ 1 ಗಂಟೆಯವರೆಗೂ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ಸಮಯ ನಿಗದಿಗೊಳಿಸಬೇಕು. ಆ ಸಮಯದಲ್ಲಿ ಸಾರ್ವಜನಿಕರಿಗೆ ಅಂಗನವಾಡಿ ಕೇಂದ್ರದ ಭೇಟಿಗೆ ಅವಕಾಶ ಕಲ್ಪಿಸಬಾರದು' ಎಂದು ಒತ್ತಾಯಿಸಿದರು. ಸಂಘದ ಉಪಾಧ್ಯಕ್ಷೆ ಲೀಲಾವತಿ ಇದ್ದರು.

ಲಕ್ಷ್ಮಿವೆಂಕಟೇಶ್ ಇಂಟಕ್ ಅಧ್ಯಕ್ಷ

ಬೆಂಗಳೂರು: ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ (ಇಂಟಕ್) ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಡಿ. ಲಕ್ಷ್ಮಿವೆಂಕಟೇಶ್ ಅವರನ್ನು ನೇಮಿಸಲಾಗಿದೆ. ಅಧ್ಯಕ್ಷರಾಗಿದ್ದ ಎಸ್.ಎಸ್. ಪ್ರಕಾಶಂ ಅವರ ನಿಧನದ ಬಳಿಕ ಈ ಹುದ್ದೆ ಖಾಲಿ ಇತ್ತು. ಇಂಟಕ್ ರಾಷ್ಟ್ರೀಯ ಅಧ್ಯಕ್ಷ ಜಿ. ಸಂಜೀವ ರೆಡ್ಡಿ ಅವರು ಲಕ್ಷ್ಮಿವೆಂಕಟೇಶ್ ಅವರನ್ನು ನೇಮಿಸಿದ್ದಾರೆ. ಅಲ್ಲದೆ, ಪದಾಧಿಕಾರಿಗಳ ಆಯ್ಕೆಗೆ ಸೂಕ್ತ ಹೆಸರುಗಳನ್ನು ಡಿ. 31ರ ಒಳಗೆ ಸೂಚಿಸುವಂತೆ ಸಲಹೆ ನೀಡಿದ್ದಾರೆ.

ಲಕ್ಷ್ಮಿವೆಂಕಟೇಶ್

ವಾಹನಗಳಿಗೆ ಹೆಸರು: ಸಾರ್ವಜನಿಕರಿಂದ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ನೂತನವಾಗಿ ಆರಂಭಿಸಲಿರುವ ಮಲ್ಟಿ ಆ್ಯಕ್ಸೆಲ್ ಸ್ಲೀಪರ್ ಹಾಗೂ ವಿದ್ಯುತ್ ಚಾಲಿತ ವಾಹನಗಳಿಗೆ ಸಾರ್ವಜನಿಕರು ಹಾಗೂ ಪ್ರಯಾಣಿಕರಿಂದ ಬ್ರಾಂಡ್ ಹೆಸರು ಟ್ಯಾಗ್‌ಲೈನ್ ಹಾಗೂ ಗ್ರಾಫಿಕ್ಸ್ ಆಹ್ವಾನಿಸಲಾಗಿದೆ.

ಪ್ರತಿ ಮಾದರಿಯ ವಾಹನಗಳಿಗೆ ಉತ್ತಮ ಬ್ರಾಂಡ್ ಹೆಸರನ್ನು ಸೂಚಿಸುವ ವಿಜೇತರಿಗೆ ₹10,000 ನಗದು ಬಹುಮಾನವನ್ನು ಹಾಗೂ ಉತ್ತಮ ಗ್ರಾಫಿಕ್ಸ್ ನೀಡಿದವರಿಗೆ ತಲಾ ₹ 25,000 ಬಹುಮಾನವನ್ನು ನೀಡಲಾಗುವುದು. ಹೆಸರನ್ನು ಸೂಚಿಸಲು ಕಡೆಯ ದಿನಾಂಕ ಡಿಸೆಂಬರ್ 5 ಎಂದು ಪ್ರಕಟಣೆ ತಿಳಿಸಿದೆ.

ನಿಮ್ಮ ಬ್ರ್ಯಾಂಡ್ ಐಡಿಯಾಗಳನ್ನು cpro @ksrtc.org ಇ-ಮೇಲ್ ಗೆ ಅಥವಾ ನಿಗಮದ ಫೇಸ್‌ಬುಕ್/ಟ್ವಿಟರ್ ಖಾತೆಗೆ ಸಲ್ಲಿಸಬಹುದು.

ಜ್ಞಾನಗಂಗ ಸಾಹಿತ್ಯ, ಸಾಂಸ್ಕೃತಿಕ ರಂಗ ವೇದಿಕೆ ಮತ್ತು ನೆಲಮಂಗಲ ಕಸಾಪ ಸಹಯೋಗದಲ್ಲಿ ತಮಿಳುನಾಡಿನ ರಾಮೇಶ್ವರಂನಲ್ಲಿರುವ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ ಮನೆಯಲ್ಲಿ ಮಣ್ಣೆ ಮೋಹನ ಬರೆದ 'ಬೆಂದಕಾಳೂರಿನಂಗಳದಿಂದ ನೇಪಾಳದವರೆಗೆ' ಪ್ರವಾಸ ಕಥನ ಮತ್ತು ಬೈರನಹಳ್ಳಿ ಪ್ರಕಾಶಮೂರ್ತಿ ಅವರ 'ನಿರಪರಾಧಿ' ನಾಟಕವನ್ನು ಬಿಡುಗಡೆಗೊಳಿಸಲಾಯಿತು. ನೆಲಮಂಗಲ ತಾಲ್ಲೂಕು ಕಸಾಪ ಅಧ್ಯಕ್ಷ ಪ್ರದೀಪ್ ಕುಮಾರ್, ವಕೀಲರಾದ ಮಲ್ಲಿಕಾರ್ಜುನ್, ವೇಣುಗೋಪಾಲ್, ಆದರ್ಶ ಮಹಿಳಾ ವೇದಿಕೆಯ ಪುಷ್ಪಾ, ರಾಜೇಶ್ವರಿ ಹೆಗಡೆ, ಸರಸ್ವತಿ ಹೆಗಡೆ ಇದ್ದರು.

ಸಮುದಾಯದ ಸಂಪ್ರದಾಯ ಅರಿವು ಮೂಡಿಸುವ ರಾಜ್ಯಮಟ್ಟದ ಕಾರ್ಯಕ್ರಮ

ಬಂಜಾರ ಸಾಂಸ್ಕೃತಿಕ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಮುದಾಯದ ಸಾಂಪ್ರದಾಯಿಕ ಕಲೆ, ಸಂಸ್ಕೃತಿ, ಆಚಾರ-ವಿಚಾರ, ಭಾಷೆ ಮತ್ತು ಮೌಖಿಕ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ದೀಪಾವಳಿ ಅಂಗವಾಗಿ ರಾಜ್ಯಮಟ್ಟದ 'ಬಂಜಾರ ಸಾಂಸ್ಕೃತಿಕ ಉತ್ಸವ'ವನ್ನು ಏರ್ಪಡಿಸಲಾಗಿತ್ತು.

ರಾಜ್ಯ ಬಂಜಾರ ನೌಕರರ ಸಾಂಸ್ಕೃತಿಕ ಸಂಘ ಮತ್ತು ತಾಂಡಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಉತ್ಸವ ನಡೆಯಿತು.

ಬಂಜಾರ ಸಾಂಸ್ಕೃತಿಕ ಉತ್ಸವದಲ್ಲಿ ಬಂಜಾರ ಭಾಷೆ, ಕಲೆ ಸಂಸ್ಕೃತಿ ಹಾಗೂ ತಾಂಡಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಕುರಿತು ಅರಿವು-ಜಾಗೃತಿ ಮೂಡಿಸಲಾಯಿತು. ಬಂಜಾರ ಸಮುದಾಯದ ಸಿದ್ಧಲಿಂಗ ದೇವರು ಹಾಗೂ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ವಿಧಾನ ಪರಿಷತ್‌ನ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, ಕಲಬುರಗಿ ಸಂಸದ ಡಾ.ಉಮೇಶ್ ಜಾಧವ್, ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಎಂ.ಬಸವರಾಜನಾಯ್ಕ, ತಾಂಡಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷೆ ಜಲಜಾನಾಯ್ಕ, ಬಾಲರಾಜ್ ನಾಯ್ಕ, ಮಹಾಪೋಷಕ ಬಿ.ಹೀರಾನಾಯ್ಕ, ತಾಂಡಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಚಂದ್ರಾನಾಯಕ್, ಸಂಘದ ಅಧ್ಯಕ್ಷ ಜಿ. ಕುಮಾರನಾಯ್ಕ ಉಪಸ್ಥಿತರಿದ್ದರು.

'ಬಂಜಾರ ಸಾಂಸ್ಕೃತಿಕ ಉತ್ಸವ' ಉದ್ಘಾಟನಾ ಸಮಾರಂಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ವಿಧಾನಪರಿಷತ್ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, ಕಲ್ಬುರ್ಗಿ ಸಂಸದ ಡಾ.ಉಮೇಶ್ ಜಾಧವ್, ಬಂಜಾರ ಸಮುದಾಯದ ಸಿದ್ಧಲಿಂಗ ದೇವರು ಹಾಗೂ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಸಂಘದ ಅಧ್ಯಕ್ಷ ಜಿ.ಕುಮಾರನಾಯ್ಕ, ಧಾನ ಕಾರ್ಯದರ್ಶಿ ಡಾ. ಬಿ.ಆರ್ ಹರೀಶ್ ನಾಯ್ಕ್ ಪದಾಧಿಕಾರಿಗಳು ಹಾಜರಿದ್ದರು.

ಬಿಡಿಎ ಉಪ ಕಾರ್ಯದರ್ಶಿ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಬಿ.ಆರ್. ಹರೀಶ್ ನಾಯ್ಕ, ಖಜಾಂಚಿ ಕೆ.ಆರ್.ಕುಮಾರನಾಯ್ಕ, ಸಂಘದ ಪದಾಧಿಕಾರಿಗಳಾದ ಭೋಜ್ಯಾನಾಯ್ಕ, ಗುರುನಾಥ್, ಜಯರಾಜ್, ವೆಂಕಟೇಶ್ವರ ನಾಯ್ಕ, ಬಂಜಾರ ಬಂಧು ರಮೇಶ್, ಸುರೇಶ್ ನಾಯ್ಕ, ಜಗದೀಶ್ ಬಾಬು, ರವಿಕುಮಾರ್, ಡಾ.ರಮೇಶ್ ನಾಯ್ಕ, ಬಿಟಿವಿ ನಾಗರಾಜ್, ಡಾ.ಪರಮೇಶ್ ನಾಯ್ಕ, ಸುನಿತಾ ಆನಂದ್ ಕುಮಾರ್, ಕುಸುಮಾಬಾಯಿ ಕಾರ್ಯಕ್ರಮ ನಿರ್ವಹಿಸಿದರು. ಐಎಎಸ್‌ಗೆ ಪದೋನ್ನತಿ ಹೊಂದಿದ ಶ್ರೀರೂಪ ಸೇರಿ ವಿವಿಧ ಕ್ಷೇತ್ರಗಳಲ್ಲಿರುವ ಬಂಜಾರ ಸಮುದಾಯದವರು ಭಾಗವಹಿಸಿದ್ದರು. ಡಾ.ಭಿಕ್ಷುನಾಯ್ಕ ಅವರ ಕಲಾತಂಡ ಸಭಿಕರನ್ನು ರಂಜಿಸಿತು.

PUBLIC NOTICE

The general public is hereby informed that, we are investigating the title of all those pieces and parcels of converted lands set out as Item No. 1 to Item No.14 of the Schedule hereto (collectively **"Schedule Property"**) in connection with our client's proposal for Joint Development of the Schedule Property from its present owners whose details are set out in the Schedule (**"Owners"**).

If any person has any right, title, interest, claim or demand in relation to the Schedule Property or any part thereof or, has executed any transactions or documents (whether registered of unregistered) with the owners or predecessors in title of the Schedule Property, having the effect of creating an encumbrance thereon, are called upon to submit their statements, objections or claims in writing, along with documentary evidence in support thereof, with the undersigned, within **7 (Seven) days** from the date of publication of this notice. If no objections are received, we would conclusively presume that no person has any right, title, interest, claim, demand, charge or encumbrance whatsoever existing on the Schedule Property or any part thereof and we will issue our opinion confirming that the owners have title in respect of the Schedule Property.

Schedule Property

All that pieces and parcels of converted lands all situated at Ramapura and Huvinaane village, Bidarahalli Hobli, Bangalore East Taluk, comprising of the following:-

Item No.	Sy. No.	Village	Extent in Guntas	Boundaries				Owners
				East by:	West by:	North by:	South by:	
1.	92/4	Ramapura	30	Sy. No. 92/5	Sy. No. 92/3	Nala	Sy.No. 45/1	Ramanjinappa
2.	55	Huvinaane	1 Acre 2 Gunta	Sy. No. 48/1 of Adur	Sy. No. 56 & 58/2	Sy. No. 56 & Nala	Nala	Chikkasubbaiah
3.	58/2	Huvinaane	13	Sy. No. 55	Sy. No. 58/3	Sy. No. 56	Nala	Srilalitha
4.	51/1	Huvinaane	34	Sy. No. 48/1	Sy. No. 51/9	Sy. No. 45/1 & 45/2	Sy. No. 51/4 & 51/8	Sarojamma & others
5.	51/2	Huvinaane	4.5	Sy. No. 51/11	Sy. No. 52	Sy. No. 51/3	Sy. No. 51/10	B. Prakash Reddy
6.	51/3	Huvinaane	5	Sy. No. 51/13	Sy. No. 52	Sy. No. 51/4	Sy. No. 51/2	B. Prakash Reddy
7.	51/10	Huvinaane	4.5	Sy. No. 51/15	Sy. No. 52	Sy. No. 51/2	Sy. No. 51/5	B. Prakash Reddy
8.	51/11	Huvinaane	4.25	Sy. No. 51/12	Sy. No. 51/2	Sy. No. 51/13	Sy. No. 51/15	B. Manjunatha Reddy
9.	51/12	Huvinaane	4.25	Sy. No. 51/7	Sy. No. 51/11	Sy. No. 51/14	Sy. No. 51/16	B. Nagaraja Reddy
10.	51/13	Huvinaane	4.5	Sy. No. 51/14	Sy. No. 51/3	Sy. No. 51/4	Sy. No. 51/11	B. Manjunatha Reddy
11.	51/14	Huvinaane	4.5	Sy. No. 51/7	Sy. No. 51/13	Sy. No. 51/4	Sy. No. 51/11	B. Nagaraj Reddy
12.	51/15	Huvinaane	4.25	Sy. No. 51/16	Sy. No. 51/10	Sy. No. 51/11	Sy. No. 51/5	B. Manjunatha Reddy
13.	51/16	Huvinaane	4.25	Sy. No. 51/6A	Sy. No. 51/15	Sy. No. 51/12	Sy. No. 51/5	B. Nagaraja Reddy
14.	48/1	Huvinaane	6	Sy. No. 48/4	Sy. No. 51/1 & 51/8	Sy. No. 46	Remaining portion of 48/1	G. Lakshman

Date: 30.11.2022
Place: Bangalore

Gerald Manoharan, Partner, J.S.A.,
Level 3, Prestige Obelisk, 3, Kasturba Road,
Bengaluru – 560 001. Ph. 080-43503600/080-43503610
Email – gerald@jsalaw.com

ತಂತ್ರಜ್ಞಾನ





ಸೊಳ್ಳೆಗಳ ಓಡಿಸುವ ಉಂಗುರ!

ನೇಸರ ಕಾಡನಕುಪ್ಪೆ

ಮನುಷ್ಯ ಏನೆಲ್ಲಾ ಸಾಧನೆ ಮಾಡಿದ್ದರೂ ಪ್ರಕೃತಿಯನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ; ಅದು ಸುಲಭವೂ ಅಲ್ಲ. ಕೊರೊನಾ ಸೋಂಕು ಅದಕ್ಕೊಂದು ಉದಾಹರಣೆ. ಪ್ರಕೃತಿಯು ಮನುಷ್ಯನನ್ನು ನಿಯಂತ್ರಣಕ್ಕೆ ತೆಗೆದುಕೊಂಡು 'ಮಾನವ ಪ್ರಕೃತಿಯ ಎದುರು ಕ್ಷುಲ್ಲಕ' ಎಂದು ಖುಜುವಾತು ಮಾಡಿದ ವಿಧಾನವದು. ಅಷ್ಟೆಲ್ಲಾ ದೊಡ್ಡ ಉದಾಹರಣೆಗಳೇಕೆ? ಕ್ರಿಮಿ-ಕೀಟಗಳಾದ ಸೊಳ್ಳೆ, ತಿಗಣೆ, ಜಿರಳೆಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮನುಷ್ಯನಿಗೆ ಇದುವರೆಗೂ ಸಾಧ್ಯವಾಗಿಲ್ಲ. ಪ್ರಯತ್ನಗಳೇನೋ ಸಾಕಷ್ಟಾಗಿವೆ; ಇದೀಗ ಈ ಪ್ರಯತ್ನಗಳ ಸಾಲಿಗೆ ಮತ್ತೊಂದು ಸಂಶೋಧನೆ ಸೇರಿದೆ. ಉಂಗುರವೊಂದನ್ನು ಬೆರಳಲ್ಲಿ ಧರಿಸಿ ಸೊಳ್ಳೆಗಳನ್ನು ಓಡಿಸುವ ಪ್ರಯತ್ನವಿದು!

ಈವರೆಗೆ ಸೊಳ್ಳೆಗಳ ನಿಯಂತ್ರಣಕ್ಕೆ ಲೆಕ್ಕವಿಲ್ಲದಷ್ಟು ವಿಧಾನಗಳ ಆವಿಷ್ಕಾರವಾಗಿದೆ. ಸೊಳ್ಳೆ ಓಡಿಸುವ ಬತ್ತಿ, ದ್ರಾವಣ, ಬಿಲ್ಲೆ ಇತ್ಯಾದಿ ಸಾಕಷ್ಟು ಸಾಧನಗಳ ಬಳಕೆ ಈಗಲೂ ಆಗುತ್ತಿದೆ. ಈಗಿನ ಹೊಸ ಸಂಶೋಧನೆಯಲ್ಲಿ ವಿಶೇಷವೊಂದಿದೆ. ಬೆರಳಿಗೆ ಧರಿಸುವ ಈ ಉಂಗುರವು ಈ ಮೇಲೆ ಉದಾಹರಿಸಿರುವ ಇತರ ಸಾಧನಗಳಂತೆ ಯಾವುದೇ ರೀತಿಯ ಹೊಗೆ, ವಾಸನೆಯನ್ನು ಹೊರಸೂಸುವುದಿಲ್ಲ. ಬದಲಿಗೆ ಈ ಉಂಗುರದಲ್ಲಿ ಇರಿಸಿರುವ ವಾಸನೆರಹಿತ ರಾಸಾಯನಿಕವೊಂದು ಆಚೆ ಬರುತ್ತಾ, ಸೊಳ್ಳೆಗಳು ಹತ್ತಿರ ಸುಳಿಯದಂತೆ ಕೆಲಸ ಮಾಡುತ್ತಿರುತ್ತದೆ. ಜರ್ಮನಿಯ ಮಾರ್ಟಿನ್ ಲೂಥರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಈ ಸಂಶೋಧನೆ ನಡೆಸಿದ್ದಾರೆ. ಈ ಸಾಧನದ ವಿಶೇಷವೆಂದರೆ, ಒಮ್ಮೆ ಈ ಉಂಗುರವನ್ನು ಧರಿಸಿದರೆ ಅದರಲ್ಲಿರುವ ರಾಸಾಯನಿಕವು ಖಾಲಿಯಾಗುವುದಿಲ್ಲ. ಸಂಪೂರ್ಣ ಉಂಗುರವೇ ಈ ರಾಸಾಯನಿಕದಿಂದ ರಚಿತವಾಗಿದೆ. ಹಾಗಾಗಿ, ಈಗಿನ ಸೊಳ್ಳೆ ಓಡಿಸುವ ಸಾಧನಗಳಂತೆ ದ್ರಾವಣದ ರೀಫಿಲ್, ಬಿಲ್ಲೆ, ಬತ್ತಿಗಳನ್ನು ಮತ್ತೆ ಕೊಂಡು ಬಳಸಬೇಕಾದ ಪ್ರಮೇಯವೇ ಬರುವುದಿಲ್ಲ. ಒಮ್ಮೆ ಉಂಗುರವನ್ನು ಖರೀದಿಸಿ ಬೆರಳಲ್ಲಿ ಧರಿಸಿಕೊಂಡರೆ ಸಾಕಷ್ಟೆ.

ಚರ್ಮದ ಕ್ಯಾನ್ಸರ್ ಇತ್ಯಾದಿ ಸಮಸ್ಯೆಗಳು ಬರುವ ಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು, ವೈದ್ಯಕೀಯ ಪ್ರಕರಣಗಳನ್ನು ಅಧ್ಯಯನ ಮಾಡಿ ಈ ಉಂಗುರವನ್ನು ಮಾರ್ಟಿನ್ ಲೂಥರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ನೋಡಲು ಮುತ್ತಿನ ಉಂಗುರದಂತೆ ಇದು ಕಾಣುತ್ತದೆ. 'ಐಆರ್3535' ಎಂಬ ರಾಸಾಯನಿಕವು ಇದರಲ್ಲಿ ಬಳಕೆಯಾಗುತ್ತಿದೆ. ಈ ರಾಸಾಯನಿಕವು ಈಗಾಗಲೇ ಸೊಳ್ಳೆಯನ್ನು ಓಡಿಸುವ ಸಿಂಪಡಣಾ ದ್ರಾವಣವಾಗಿ ಬಳಕೆಯಾಗಿದೆ. ಅಲ್ಲದೇ, ಈ ರಾಸಾಯನಿಕವು ಮಾನವನ ಆರೋಗ್ಯಕ್ಕೆ ಅಪಾಯಕಾರಿಯೂ ಅಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಉಂಗುರದಲ್ಲಿ ಇದನ್ನು ಬಳಸಲಾಗಿದೆ.

ಈ ಉಂಗುರವನ್ನು ಬೆರಳಲ್ಲಿ ಧರಿಸುವ ಕಾರಣ, ಮೈಶಾಖಕ್ಕೆ ಉಂಗುರದಲ್ಲಿನ ರಾಸಾಯನಿಕವು ನಿಧಾನವಾಗಿ ಆವಿಯಾಗುತ್ತಿರುತ್ತದೆ. ಈ ರಾಸಾಯನಿಕವನ್ನು ತಾಳಲಾರದ ಸೊಳ್ಳೆಗಳು ದೂರ ಓಡಿಹೋಗುತ್ತವೆ. ಇಷ್ಟೇ ಸರಳ ಈ ತಂತ್ರಜ್ಞಾನ. '3ಡಿ' ಪ್ರಿಂಟರ್ ಬಳಸಿಕೊಂಡು ಈ ಉಂಗುರವನ್ನು ರಚಿಸಲಾಗಿದೆ. ಬೃಹತ್ ಪ್ರಮಾಣದಲ್ಲಿ ತಯಾರಿಸಬೇಕಾದಾಗ ಕೈಗಾರಿಕಾ ತಯಾರಿಕಾ ವಿಧಾನಗಳನ್ನು ಬಿಡುಗಡೆಗೊಳಿಸುವುದಾಗಿ ಮಾರ್ಟಿನ್ ಲೂಥರ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಪ್ರೊ. ರಿನೇ ಆಂಡ್ರಾಷ್ ಹಾಗೂ ಫ್ಯಾನ್ಫಾಫ್ ಡು ತಿಳಿಸಿದ್ದಾರೆ. 'ಇದು ಧರಿಸಬಲ್ಲ ಸಾಧನವಾದ ಕಾರಣ, ಎಲ್ಲೇ ಹೋದರೂ ಉಂಗುರ ನಿಮ್ಮ ಜೊತೆಗೇ ಬರುತ್ತದೆ. ಹಾಗಾಗಿ, ಮನೆ-ಕಚೇರಿಗಳಿಂದ ಆಚೆ ಹೋದಲ್ಲಿ ಸೊಳ್ಳೆಯಿಂದ ಕಚ್ಚಿಸಿಕೊಳ್ಳಬೇಕಾದ ಭಯ ಇರುವುದಿಲ್ಲ. ಹೊಸತಾಗಿ ಸೊಳ್ಳೆ ಓಡಿಸುವ ಸಾಧನಗಳನ್ನು ಖರೀದಿಸಬೇಕಾದ ಅಥವಾ ಕೊಂಡೊಯ್ಯಬೇಕಾದ ಪ್ರಮೇಯವೂ ಇರುವುದಿಲ್ಲ. ನೋಡಲೂ ಅಂದವಾಗಿರುವ, ಆಭರಣ ಸ್ವರೂಪದ ಈ ಉಂಗುರವು ನಿಮ್ಮ ಜೊತೆಯೇ ಇದ್ದು ನಿಮ್ಮನ್ನು ಕಾಪಾಡುವ ಸಂಗಾತಿಯಾಗಲಿದೆ' ಎಂದು ವಿಜ್ಞಾನಿಗಳು ಅಭಯ ನೀಡಿದ್ದಾರೆ. ❖

ಸೊಳ್ಳೆ ಓಡಿಸುವ ಉಂಗುರ
ಚಿತ್ರಕೃಪೆ – ಮಾರ್ಟಿನ್ ಲೂಥರ್ ವಿಶ್ವವಿದ್ಯಾನಿಲಯ

> ಸೊಳ್ಳೆಗಳ ನಿಯಂತ್ರಣಕ್ಕೆ ಲೆಕ್ಕವಿಲ್ಲದಷ್ಟು ವಿಧಾನಗಳು ಆವಿಷ್ಕಾರಗೊಂಡಿವೆ. ಆದರೆ, ಈ ಉಂಗುರ ವಿಶೇಷವಾಗಿದ್ದು, ಇದರಲ್ಲಿ ಇರಿಸಿರುವ ವಾಸನೆರಹಿತ ರಾಸಾಯನಿಕವೊಂದು ಸೊಳ್ಳೆಗಳು ಹತ್ತಿರ ಸುಳಿಯದಂತೆ ಕೆಲಸ ಮಾಡುತ್ತದೆ.

ಕೃಷಿಯ ಬಳಕೆಗೂ ಅಭಿವೃದ್ಧಿ

ಕೃಷಿ ಉತ್ಪನ್ನಗಳನ್ನು ಬಾಧಿಸುವ ಕ್ರಿಮಿ–ಕೀಟಗಳ ನಿಯಂತ್ರಣಕ್ಕೂ ಇದೇ ಮಾದರಿಯ ಸಂಶೋಧನೆ ನಡೆಸಲಾಗುತ್ತಿದೆ ಎಂದು ವಿಜ್ಞಾನಿಗಳು ಮುನ್ಸೂಚನೆ ನೀಡಿದ್ದಾರೆ. 'ಕ್ರಿಮಿನಾಶಕಗಳ ಬಳಕೆ ಕಡಿಮೆ ಮಾಡುವ ಮೂಲಕ ಆರೋಗ್ಯಕಾರಿ ಆಹಾರ ಉತ್ಪಾದನೆಯನ್ನು ಉತ್ತೇಜಿಸುವುದು ಹಾಗೂ ರೈತರ ಮೇಲಿನ ಆರ್ಥಿಕ ಹೊರೆಯನ್ನು ತಗ್ಗಿಸುವುದು ನಮ್ಮ ಉದ್ದೇಶವಾಗಿದೆ' ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಜಿರಲೆ ತಿಗಣೆಗಳೂ ದೂರ

ಈ ಉಂಗುರದ ಮತ್ತೊಂದು ವಿಶೇಷವೆಂದರೆ, ಇದು ಕೇವಲ ಸೊಳ್ಳೆಗಳನ್ನು ಓಡಿಸಲು ಮಾತ್ರ ಬಳಕೆಯಾಗುವುದಿಲ್ಲ. ಬದಲಿಗೆ, ಜಿರಳೆ, ತಿಗಣೆ ಮಾದರಿಯ ಕೀಟಗಳನ್ನೂ ದೂರ ಇಡಬಹುದು. ಅಲ್ಲದೇ, ವಿಜ್ಞಾನಿಗಳು ಕೇವಲ ಧರಿಸುವ ಸಾಧನೆಗಳನ್ನು ಮಾತ್ರ ಅಭಿವೃದ್ಧಿ ಪಡಿಸದೇ ಕಪಾಟಿನಲ್ಲಿ ಇಡಬಹುದಾದ, ಗೋಡೆಗೆ ತಗುಲಿಹಾಕಬಹುದಾದ ಸಾಧನಗಳಾಗಿಯೂ ತಯಾರಿಸುತ್ತಿದ್ದಾರೆ. ಒಟ್ಟಿನಲ್ಲಿ ಈ ರಾಸಾಯನಿಕವನ್ನು ಒಳಗೊಂಡ ಯಾವುದೇ ಆಕೃತಿಯ ಸಾಧನವನ್ನು ಬೇಕಾದರೂ ತಯಾರಿಸುವ ಸಾಧ್ಯತೆ ಇಲ್ಲದೆ. ಒಂದು ನಿಗದಿತ ತಾಪಮಾನದಲ್ಲಿ ಮಾತ್ರ ಈ ರಾಸಾಯನಿಕ ಆವಿಯಾಗುವ ಕಾರಣ, ಧರಿಸಲಾಗದ ಸಾಧನಗಳಿಗೆ ಕೃತಕವಾಗಿ ಶಾಖ ನೀಡಬೇಕಾಗುತ್ತದೆ. ಅಥವಾ, ಅಂತಹ ಶಾಖವಿರುವ ಜಾಗಗಳಲ್ಲಿ ಇಡಬಹುದಾದ ಸಾಧನಗಳನ್ನು ತಯಾರಿಸಬೇಕಾಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಒಳ್ಳೆಯ ಬ್ಯಾಕ್ಟೀರಿಯಾಗಳು!



ಅಮೃತೇಶ್ವರಿ ಬಿ.

ಬ್ಯಾಕ್ಟೀರಿಯಾಗಳು ಎಂದ ಕೂಡಲೇ ಸಾಮಾನ್ಯವಾಗಿ ಎಲ್ಲರೂ ರೋಗಕಾರಕಗಳೆಂದೇ ಅರ್ಥಮಾಡುಕೊಳ್ಳುತ್ತೇವಷ್ಟೆ. ಆದರೆ ಹಾಲು ಮೊಸರಾಗುವುದು, ದೋಸೆ-ಇಡ್ಲಿ ಹಿಟ್ಟು ಹುದುಗುವುದು, ನಾವು ತಿಂದ ಆಹಾರ ಜೀರ್ಣವಾಗುವುದು, ಅದರಿಂದ ರೋಗನಿರೋಧಕ ಶಕ್ತಿ ಹೆಚ್ಚುವುದು – ಇವೆಲ್ಲವೂ ಬ್ಯಾಕ್ಟೀರಿಯಾಗಳಿಂದಲೇ ಆಗುವುದು. ಅಲ್ಲದೇ ಯಾವುದೋ ಬ್ಯಾಕ್ಟೀರಿಯಾದಿಂದ ತಗುಲುವ ಸೋಂಕನ್ನು ಗುಣಪಡಿಸುವ ಆ್ಯಂಟಿಬಯೋಟಿಕ್ ಔಷಧಗಳನ್ನು ತಯಾರಿಸುವುದೂ ಮತ್ತೊಂದು ಬ್ಯಾಕ್ಟೀರಿಯಾದಿಂದಲೇ!

ಅರ್ಥಾತ್, ಇವುಗಳಲ್ಲಿ ಒಂದಿಷ್ಟು ಬ್ಯಾಕ್ಟೀರಿಯಾಗಳು ನಮಗೆ ಒಳ್ಳೆಯದನ್ನೂ ಮಾಡುತ್ತವೆ. ಇವನ್ನೇ ಪ್ರೋಬಯೋಟಿಕ್ಸ್ ಎನ್ನುವುದು. ಇವು ನಮ್ಮ ಸುತ್ತಲೂ ಇವೆ. ನಮ್ಮ ಕರುಳಿನಲ್ಲಿಯೂ ಇರುತ್ತವೆ. ಜೀರ್ಣಕ್ರಿಯಾವ್ಯವಸ್ಥೆಯನ್ನು ಸ್ವಾಸ್ಥ್ಯವಾಗಿರಿಸುತ್ತವೆ; ತನ್ಮೂಲಕ ಇಡೀ ದೇಹವನ್ನು ಆರೋಗ್ಯವಾಗಿರಿಸುತ್ತವೆ. ಕರುಳಿನಲ್ಲಿರುವ ಈ ಬ್ಯಾಕ್ಟೀರಿಯಾಗಳು ಮತ್ತೊಂದು ಮಹತ್ಕಾರ್ಯವನ್ನು ಮಾಡುತ್ತಿವೆ ಎಂದು ಈಗ ವರದಿಯಾಗಿದೆ. ಅದುವೇ ಕ್ಯಾನ್ಸರ್ ಕಿಮೋಥೆರಪಿ ತೆಗೆದುಕೊಂಡಿರುವ ರೋಗಿಗಳ ದೇಹದಲ್ಲಿ ಬಿಳಿರಕ್ತಕಣಗಳನ್ನು ಉತ್ಪಾದಿಸಲೂ ಸಹಕಾರಿಯಾಗಿವೆ ಎನ್ನುತ್ತಿದೆ, ಜಪಾನಿನ ಹೊಕ್ಕೈಡೋ ವಿಶ್ವವಿದ್ಯಾನಿಲಯದ ಡೈಗೋ ಹಶಿಮೋಟೋ ಮತ್ತು ಟಕೋನರಿ ತೇಷಿಮಾ ಅವರ ಸಂಶೋಧನೆ.

ಕ್ಯಾನ್ಸರ್ ಎನ್ನುವ ಹೆಸರು ಕೇಳಿದಾಗ ಭಯಬೀಳುವುದು ಸಹಜ. ಕಾಯಿಲೆಯ ಭಯ ಅಥವಾ ಗುಣಪಡಿಸಲು ತೆಗೆದುಕೊಳ್ಳುವ ಔಷಧ ಕಿಮೋಥೆರಪಿಗಳ ಪರಿಣಾಮದಿಂದಲೇ ಒಂದಿಷ್ಟು ಜನ ಮರಣಿಸಬಹುದು. ದೀರ್ಘಕಾಲದ ಕ್ಯಾನ್ಸರ್ ಕಿಮೋಥೆರಪಿಯು ಅಷ್ಟೊಂದು ತ್ರಾಸದಾಯಕವಾಗಿರುತ್ತದೆ. ವಿಕಿರಣಗಳು ಕ್ಯಾನ್ಸರ್ ಕೋಶಗಳನ್ನು ಕೊಲ್ಲುವ ಜೊತೆಗೆ ಆರೋಗ್ಯಕರ ರಕ್ತಕಣಗಳನ್ನೂ ನಾಶಮಾಡಿಬಿಡುತ್ತವೆ. ದೇಹದಲ್ಲಿ ರೋಗನಿರೋಧಕ ಶಕ್ತಿಯೇ ಇರುವುದಿಲ್ಲ. ಆಗ ಹೊಸ ರಕ್ತಕಣಗಳ ಉತ್ಪಾದನೆಯೂ ಸುಲಭವಲ್ಲ. ಆದರೆ ದೀರ್ಘಕಾಲದ ಕಿಮೋಥೆರಪಿಯ ನಂತರ ನಮ್ಮ ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳು ಇರುವಂತೆ ನೋಡಿಕೊಂಡರೆ ಅವು ಬಿಳಿರಕ್ತಕಣಗಳನ್ನು ಉತ್ಪಾದಿಸಬಲ್ಲವು ಎನ್ನುತ್ತಾರೆ, ಹಶಿಮೋಟೋ ಮತ್ತು ತೇಷಿಮಾ.

ಕ್ಯಾನ್ಸರ್ ಕಿಮೋಥೆರಪಿಯ ನಂತರ ದೇಹವು ಯಾವುದೇ ಸೋಂಕಿಗೆ ತುತ್ತಾಗುವ ಸಾಧ್ಯತೆಗಳು ಹೆಚ್ಚು. ಬಿಳಿರಕ್ತಕಣಗಳು ಸರಿಯಾದ ಪ್ರಮಾಣದಲ್ಲಿ ಇದೆಯೆಂದರೆ ಮತ್ತಾವುದೇ ಸೋಂಕುಗಳನ್ನು ಸುಲಭವಾಗಿ ಹತ್ತಿಕ್ಕಲು ಸಾಧ್ಯವಂತೆ. ಇದನ್ನು ಪರೀಕ್ಷಿಸಲು ಹಶಿಮೋಟೋ ಮತ್ತು ತೇಷಿಮಾ, ಇಲಿಗಳ ಮೇಲೆ ಪ್ರಯೋಗ ನಡೆಸಿದ್ದಾರೆ.

ಮೊದಲು ಇಲಿಗಳ ದೇಹಕ್ಕೆ ಕ್ಯಾನ್ಸರ್ ಕಾಯಿಲೆಯನ್ನು ತರಿಸಿದ್ದಾರೆ. ನಂತರ '5-ಫ್ಲೋರೋಯುರಾಸಿಲ್' ಎನ್ನುವ ಚುಚ್ಚುಮದ್ದು, ಅಂದರೆ ಕ್ಯಾನ್ಸರ್ ಅನ್ನು ಗುಣಪಡಿಸುವ ಔಷಧವನ್ನು ನೀಡಿ, ಜೊತೆಗೆ ರಕ್ತಕಣಗಳನ್ನು ಉತ್ಪಾದಿಸುವ ಆರೋಗ್ಯಕರ ಅಸ್ಥಿಮಜ್ಜೆಯನ್ನು ಕಸಿಮಾಡಿದ್ದಾರೆ. ಅಸ್ಥಿಮಜ್ಜೆಯಲ್ಲಿರುವ 'ಟಿ-ಲಿಂಫೋಸೈಟ್' ಎನ್ನುವ ಕೋಶಗಳಲ್ಲಿ ಉತ್ಪಾದನೆಯಾಗುವ 'ಇಂಟರ್‌ಲ್ಯುಕಿನ್ಸ್ -17' (IL-17) ಎನ್ನುವ ಪ್ರೋಟಿನ್‌ಗಳಿಂದ ಬಿಳಿರಕ್ತಕಣಗಳು ಉತ್ಪಾದನೆಯಾಗುತ್ತವೆ. ಆದರೆ ಕಿಮೋಥೆರಪಿಯ ನಂತರ ಈ ಟಿ-ಲಿಂಫೋಸೈಟುಗಳು IL-17 ಪ್ರೋಟಿನ್‌ನನ್ನು ರೂಪಿಸುವುದರಲ್ಲಿ ವ್ಯತ್ಯಾಸವಾಗಿಬಿಡುತ್ತದೆ. ಬಿಳಿರಕ್ತಕಣಗಳ ಉತ್ಪಾದನೆಯೂ ಆಗುವುದಿಲ್ಲ. ಈ ಕ್ಯಾನ್ಸರ್ ಚಿಕಿತ್ಸೆಯನ್ನು ಪಡೆದ ಇಲಿಗಳಲ್ಲಿ ಆಗಿದ್ದೂ ಇದೆ. ಆ್ಯಂಟಿಬಯೋಟಿಕ್ ಮಾತ್ರೆಗಳನ್ನು ನೀಡಿದಾಗ ಕರುಳಿನಲ್ಲಿರುವ ಒಳ್ಳೆಯ ಬ್ಯಾಕ್ಟೀರಿಯಾಗಳೂ ನಾಶವಾಗಿ ಟಿ-ಜೀವಕೊಶಗಳಿಂದಾಗಬೇಕಿದ್ದ IL-17 ಪ್ರೋಟಿನ್ ಉತ್ಪಾದನೆಯಾಗದೆ ಬಿಳಿರಕ್ತಕಣಗಳೂ ಹುಟ್ಟದಂತಾಗುತ್ತವೆ.

ಬಿಳಿರಕ್ತಕಣಗಳು ನಮ್ಮ ಪ್ರತಿರೋಧ ವ್ಯವಸ್ಥೆಯ ಒಂದು ಭಾಗ. ಅವುಗಳಲ್ಲೂ ಗ್ರ್ಯಾನ್ಯುಲೋಸೈಟು, ಮಾನೋಸೈಟು ಮತ್ತು ಲಿಂಫೋಸೈಟುಗಳೆಂಬ ಬಗೆಗಳಿವೆ. ಗ್ರ್ಯಾನುಲೋಸೈಟುಗಳ ಸಾಮಾನ್ಯ ಬಗೆಯೆಂದರೆ ನ್ಯೂಟ್ರೋಫಿಲ್. ಇವು ನಮ್ಮ ದೇಹವನ್ನು ಅತಿಕ್ರಮಿಸುವ ಸೂಕ್ಷ್ಮಾಣುಜೀವಿಗಳನ್ನು ಕೊಂದು ನಮ್ಮನ್ನು ಸೋಂಕಿನಿಂದ ಪಾರುಮಾಡುತ್ತವೆ. ದೇಹ ಸೋಂಕಿಗೆ ತುತ್ತಾದಾಗ ತುರ್ತಾಗಿ ಇರುವುದಕ್ಕಿಂತಲೂ ಹೆಚ್ಚಿನ ನ್ಯೂಟ್ರೋಫಿಲ್‌ಗಳನ್ನು ಉತ್ಪಾದಿಸುತ್ತದೆ. ಇದನ್ನು 'ಎಮರ್ಜೆನ್ಸಿ ಗ್ರ್ಯಾನ್ಯುಲೋಪಯೋಸಿಸ್' ಎನ್ನುತ್ತೇವೆ. ಸಾಮಾನ್ಯವಾಗಿ ಕ್ಯಾನ್ಸರ್ ರೋಗಿಗಳಲ್ಲಿ ಹಾಗೂ ಕಿಮೋಥೆರಪಿಯ ನಂತರ ರಕ್ತದಲ್ಲಿ ಈ ನ್ಯೂಟ್ರೋಫಿಲ್‌ಗಳ ಸಂಖ್ಯೆ ಕಡಿಮೆಯಾಗಿರುತ್ತದೆ. ಆಗಲೂ ನಮ್ಮ ದೇಹ ಬಿಳಿರಕ್ತಕಣಗಳನ್ನು ಉತ್ಪಾದನೆ ಮಾಡುತ್ತದೆ. ಕಿಮೋಥೆರಪಿಯ ನಂತರ ಯಾವುದೇ ಸೋಂಕು ಇಲ್ಲದಾಗಲೂ ಬಿಳಿರಕ್ತಕಣಗಳು ಹೆಚ್ಚಾಗಿ ಉತ್ಪಾದನೆಯಾಗುವುದನ್ನು ಇವರು ಗಮನಿಸಿದರು. ಅದನ್ನು ಪ್ರತಿಕ್ರಿಯಾತ್ಮಕ, ಎಂದರೆ 'ರಿಯಾಕ್ಟಿವ್ ಗ್ರ್ಯಾನ್ಯುಲೋಪಯೋಸಿಸ್' ಎನ್ನುತ್ತಾರೆ. ಆದರೆ ಹೀಗೇಕೆ ನ್ಯೂಟ್ರೋಫಿಲ್ ಬಿಳಿರಕ್ತಕಣಗಳು ಉತ್ಪಾದನೆಯಾಗುತ್ತವೆ ಎನ್ನುವುದು ಹಶಿಮೋಟೋ ಮತ್ತು ತೇಷಿಮಾ ಅವರಿಗೆ ಖಚಿತವಾಗಲಿಲ್ಲವಂತೆ. ಇವರು ಇದಕ್ಕೆ ಮತ್ತೊಂದು ಪರೀಕ್ಷೆಯನ್ನು ಮಾಡಿದರು. ಅದುವೇ 'ಫೀಕಲ್ ಮೈಕ್ರೋಬಯೋಟಾ ಟ್ರಾನ್ಸ್ ಪ್ಲಾಂಟೇಷನ್'. ಎಂದರೆ ಆರೋಗ್ಯವಂತ ಇಲಿಗಳ ಚರಟ(ಮಲ)ದಿಂದ ಬ್ಯಾಕ್ಟೀರಿಯಾಗಳನ್ನು ಪ್ರತ್ಯೇಕಿಸಿ ಈ ಕ್ಯಾನ್ಸರ್ ಇಲಿಗಳಿಗೆ ಕಸಿ ಮಾಡುವುದು. ಆಗ ಬಿಳಿರಕ್ತಕಣಗಳ ಉತ್ಪಾದನೆಯ ವೇಗ ಹೆಚ್ಚಾಯಿತು. ಸಹಜಸ್ಥಿತಿಯಲ್ಲಿರುವಾಗ ನ್ಯೂಟ್ರೋಫಿಲ್‌ಗಳು ಕರುಳಿನ ಒಳ್ಳೆಯ ಬ್ಯಾಕ್ಟೀರಿಯಾಗಳನ್ನು ನಿಯಂತ್ರಿಸುತ್ತವೆ. ಈ ನ್ಯೂಟ್ರೋಫಿಲ್‌ಗಳ ಸಂಖ್ಯೆ ಕ್ಷೀಣಿಸಿದಾಗ ಬ್ಯಾಕ್ಟೀರಿಯಾಗಳ ಸಂಖ್ಯೆಯಲ್ಲಿಯೂ ವ್ಯತ್ಯಾಸವಾಗುತ್ತದೆ ಹಾಗೂ ಟಿ-ಲಿಂಫೋಸೈಟುಗಳಿಗೆ IL-17 ಪ್ರೋಟೀನು ಉತ್ಪಾದಿಸುವಂತೆ ಪ್ರಚೋದಿಸುತ್ತದೆ. ತಕ್ಷಣವೇ ಅಸ್ಥಿಮಜ್ಜೆಯಲ್ಲಿ ನ್ಯೂಟ್ರೋಫಿಲ್‌ಗಳ ಉತ್ಪಾದನೆಯಾಗುತ್ತವೆ. ಕ್ಯಾನ್ಸರ್ ಪೀಡಿತ ಇಲಿಗಳ ಕರುಳಲ್ಲಿ ಈಗ ಒಳ್ಳೆಯ ಬ್ಯಾಕ್ಟೀರಿಯಾಗಳ ಸಂಖ್ಯೆ ವೃದ್ಧಿಸಿತು ಮತ್ತು ನ್ಯೂಟ್ರೋಫಿಲ್‌ಗಳ ಸಂಖ್ಯೆಯೂ ಹೆಚ್ಚಿತು. ಹಾಗಾಗಿ ನ್ಯೂಟ್ರೋಫಿಲ್‌ಗಳು ಹಾಗೂ ಕರುಳಿನ ಬ್ಯಾಕ್ಟೀರಿಯಾಗಳ ಸಂಖ್ಯೆಯು ಒಂದಕ್ಕೊಂದು ಪೂರಕವೆನ್ನುವುದು ಖಚಿತವಾಯಿತು. ಅರ್ಥಾತ್, ಕ್ಯಾನ್ಸರ್ ಕಿಮೋಥೆರಪಿಯ ನಂತರ ಕಾಡುವ ಬಿಳಿರಕ್ತಕಣಗಳ ಕೊರತೆಯನ್ನು ನೀಗಿಸಲು ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳನ್ನು ಹೆಚ್ಚೆಚ್ಚು ವೃದ್ಧಿಸಿಕೊಳ್ಳಬೇಕು. ಇದು ಕಿಮೋಥೆರಪಿಯಲ್ಲಿ ನೀಡುವ ಆ್ಯಂಟಿಬಯೋಟಿಕ್‌ಗಳು ಕರುಳಿನಲ್ಲಿರುವ ಇತರೆ ಬ್ಯಾಕ್ಟೀರಿಯಾಗಳನ್ನು ನಾಶಮಾಡದಂತೆ ಮಾಡುವುದು ಹೇಗೆ ಎನ್ನುವದರ ಬಗ್ಗೆ ಇನ್ನಷ್ಟು ಸಂಶೋಧನೆಗಳು ನಡೆಯಲು ಹಾದಿಮಾಡಿಕೊಟ್ಟಿದೆ ಎನ್ನುತ್ತಾರೆ, ಹಶಿಮೋಟೋ ಮತ್ತು ತೇಷಿಮಾ.

ಸ್ವಾಭಾವಿಕವಾಗಿ ನಮ್ಮ ಶರೀರವ್ಯವಸ್ಥೆ ಎಷ್ಟು ಅದ್ಭುತವೆಂದರೆ, ಯಾವ ರೋಗಕಾರಕಗಳು ಪ್ರವೇಶವಾಗಿವೆ, ಅವನ್ನು ಹೇಗೆ ಹತ್ತಿಕ್ಕಬೇಕು, ಯಾವ ಜೀವಕೋಶಗಳು ಕಡಿಮೆಯಾಗಿವೆ, ಎಷ್ಟು ಉತ್ಪಾದಿಸಬೇಕು ಎಲ್ಲವೂ ನಮ್ಮ ಅರಿವಿಗೆ ಬಾರದೆಯೇ ನಡೆಯುತ್ತಿರುತ್ತವೆ. ಒಟ್ಟಾರೆ ಇವೆಲ್ಲವನ್ನೂ ನಿರ್ವಹಿಸುವ, ನಮ್ಮ ರೋಗನಿರೋಧಕ ವ್ಯವಸ್ಥೆಯಲ್ಲಿ ಸೈನಿಕರಂತಿರುವ ಬಿಳಿರಕ್ತಕಣಗಳನ್ನು ಸರಿಯಾದ ಪ್ರಮಾಣದಲ್ಲಿರಿಸಿಕೊಳ್ಳಬೇಕು ಹಾಗೂ ಕರುಳಿನ ಬ್ಯಾಕ್ಟೀರಿಯಾಗಳನ್ನು ಸುಸ್ಥಿಯಲ್ಲಿಡಬೇಕು. ಆಗ ಕ್ಯಾನ್ಸರ್‌ನಂತಹ ಭಯಾನಕ ರೋಗವನ್ನೂ ಗೆದ್ದು ಎಲ್ಲರಂತೆ ಆರೋಗ್ಯದಿಂದ ಬದುಕಬಹುದು ಎನ್ನುತ್ತದೆ ಈ ಸಂಶೋಧನೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ವಿಜ್ಞಾನ

ಎಸ್ಸೆಸ್ಸೆಲ್ಸಿ

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

೧) ವಿದ್ಯುತ್ ಕಾಂತೀಯ ಪ್ರೇರಣೆಯ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಧನ..........................

ಎ) ವಿದ್ಯುತ್ ಜನಕ ಬಿ) ವಿದ್ಯುತ್ ಮೀಟರ್
ಸಿ) ವಿದ್ಯುತ್ ಮೋಟಾರು ಡಿ) ವಿದ್ಯುತ್ ಫ್ಯಾನ್
ಉತ್ತರ:- (ಎ) ವಿದ್ಯುತ್ ಜನಕ

೨) ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ..............................

ಎ) ಸತು ತವರಕ್ಕಿಂತ ದುಬಾರಿ.
ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.
ಉತ್ತರ:- (ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.

೩) ವಿದಳನ ಕ್ರಿಯೆಯಿಂದ ಮಾತ್ರ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಗುಂಪು ....

ಎ) ಅಮೀಬಾ, ಹೈಡ್ರಾ, ಸಪ್ರೋಗೈರಾ
ಬಿ) ಲಿಶ್ಮೇನಿಯಾ, ಅಮೀಬಾ, ಯಿಸ್ಟ್
ಸಿ) ಅಮೀಬಾ, ಪ್ಲಾಸ್ಮೋಡಿಯಂ, ಪ್ಲನೇರಿಯಾ
ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,
ಉತ್ತರ:- (ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,

೪) ಸೂರ್ಯನ ಅಗಾಧವಾದ ಶಕ್ತಿ ಕಳೆದ...................... ವರ್ಷಗಳಿಂದ ಪ್ರಸ್ತುತ ಯಾವ ದರದಲ್ಲಿ ಹೊರಹೊಮ್ಮುತ್ತಿದೆಯೋ ಅದೇ ದರದಲ್ಲಿ ಹೊರಹೊಮ್ಮುತ್ತಿದೆ.

ಎ) ೫ಬಿಲಿಯನ್ ಬಿ) ೧೦ ಬಿಲಿಯನ್
ಸಿ) ೫೦ ಬಿಲಿಯನ್ ಡಿ) ೧ ಬಿಲಿಯನ್
ಉತ್ತರ:- (ಎ) ೫ಬಿಲಿಯನ್

೫) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು................................. ಈ ಮೂರೂ ಒಂದೇ ಸಮತಲದಲ್ಲಿರುತ್ತದೆ.

ಎ) ಪ್ರತಿಫಲಿತ ಧ್ವನಿ ಬಿ) ಪತನ ಕೋನ
ಸಿ) ಪ್ರತಿಧ್ವನಿತ ಶಬ್ದ ಡಿ) ಪ್ರತಿಫಲಿತ ಕಿರಣ
ಉತ್ತರ:- (ಡಿ) ಪ್ರತಿಫಲಿತ ಕಿರಣ

೬) ಭಾರತ ಸರ್ಕಾರವು ವನ್ಯ ಜೀವಿ ಸಂರಕ್ಷಣೆಗಾಗಿ ಅಮೃತಾದೇವಿ ಬಿಷ್ಣೋಯ್ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ಥಾಪಿಸಿದೆ. ಇದಕ್ಕೆ ಕಾರಣ ಅಮೃತಾದೇವಿ ಬಿಷ್ಣೋಯ್ ಅವರು..............

ಎ) ರಾಜಸ್ತಾನದ ಜೋಧಪುರ್ ಸಮೀಪದ ಖೇಜ್ರಾಲಿ ಹಳ್ಳಿಯಲ್ಲಿ ಖೇಜ್ರಿ ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಬಿ) ಹರಿಯಾಣದ ರಾಖಿಗಢಿ ಸಮೀಪದ ಹಳ್ಳಿಯಲ್ಲಿ ವನ್ಯಜೀವಿಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಸಿ) ಮಹಾರಾಷ್ಟ್ರದ ಸಮೀಪದ ಹಳ್ಳಿಯಲ್ಲಿ ಪ್ರಾಣಿ ಮತ್ತು ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಡಿ) ಮೇಲಿನ ಯಾವ ಕಾರಣಕ್ಕಾಗಿಯೂ ಅಲ್ಲ
ಉತ್ತರ:- (ಎ) ರಾಜಸ್ತಾನದ ಜೋಧಪುರ್ ಸಮೀಪದ ಖೇಜ್ರಾಲಿ ಹಳ್ಳಿಯಲ್ಲಿ ಖೇಜ್ರಿ ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು

೭) ಶ್ವಾಸನಾಳದ ಮೇಲ್ಭಾಗವು ... .ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್
ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- ಎ) ಸಿಲಿಯಾ(Cilia)

೮) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ-ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ................

ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ
ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲೀಯಸ್
ಉತ್ತರ:- ಬಿ) ಮೈಟೋ ಕಾಂಡ್ರಿಯಾ

೯) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?

ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್ಡಿ
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್
ಉತ್ತರ:- (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

೧೦) ಮಾನವನ ಜಠರವು .... ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ
ಡಿ) ಪೊಟಾಷಿಯಂ ಸಲ್ಫೇಟ್
ಉತ್ತರ:- (ಸಿ) ಹೈಡ್ರೋಕ್ಲೋರಿಕ್ ಆಮ್ಲ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

೧) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ
ಉತ್ತರ:- ಬ್ರೋಮಿನ್

೨) ಒಂದು ದ್ರವರೂಪದ ಲೋಹವನ್ನು ಹೆಸರಿಸಿ
ಉತ್ತರ:- ಪಾದರಸ

೩) ಕಾಯಜ ಸಂತಾನೋತ್ಪತ್ತಿ ಎಲ್ಲಿ ಬಳಸಲಾಗುತ್ತದೆ?
ಉತ್ತರ:- ಕಾಯಜ ಸಂತಾನೋತ್ಪತ್ತಿಯ ಈ ಲಕ್ಷಣವನ್ನು ಲೇಯರಿಂಗ್ ಅಥವಾ ಕಸಿಮಾಡುವಿಕೆಯಂತಹ ವಿಧಾನಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಕಬ್ಬು, ಗುಲಾಬಿ ಅಥವಾ ದ್ರಾಕ್ಷಿಗಳಂಥ ಅನೇಕ ಸಸ್ಯಗಳನ್ನು ಬೆಳೆಸಲು ಬಳಸಲಾಗುತ್ತದೆ.

೪) ಕೆಳಗಿನ ಕೊಟ್ಟಿರುವ ಮೂರು ಬೇರೆ ಬೇರೆ ಪ್ರಾಣಿಗಳ ಹೃದಯವನ್ನು ಪ್ರತಿನಿಧಿಸುತ್ತವೆ. ಅವುಗಳನ್ನು ಗಮನಿಸಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿ.



1 2 3

ಇವುಗಳಲ್ಲಿ ಯಾವ ಹೃದಯವು ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ ಉಪಯುಕ್ತ? ಮತ್ತು ಏಕೆ?
ಉತ್ತರ:- ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ ೨ನೇ ಹೃದಯವು ಉಪಯುಕ್ತವಾಗಿದೆ. ಯಾಕೆಂದರೆ ಇವುಗಳಲ್ಲಿ ಆಮ್ಲಜನಕಯುಕ್ತ ರಕ್ತ ಹಾಗೂ ಆಮ್ಲಜನಕ ರಹಿತ ರಕ್ತವು ಮಿಶ್ರಿತವಾಗುವುದಿಲ್ಲ ಹೀಗಾಗಿ ಈ ತರಹದ ಹೃದಯವೇ ಬೇಕು. ಇಂತಹ ಹೃದಯವು ಸಮರ್ಥ ಆಮ್ಲಜನಕದ ಪೂರೈಕೆಗೆ ಹಾಗೂ ದೇಹದಲ್ಲಿ ಉಷ್ಣತೆ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ

೫) ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಏನನ್ನು ಸಂಯೋಜಿಸುತ್ತದೆ?
ಉತ್ತರ:- ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತವಿಜ್ಞಾನ ವಿಷಯ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಮಾದರಿ ಪ್ರಶ್ನೋತ್ತರ

ಗಣಿತ ಶಾಸ್ತ್ರ

ಪಿಯುಸಿ

1) $A=\begin{bmatrix}-2\\4\\5\end{bmatrix}, B=\begin{bmatrix}1 & 3 & -6\end{bmatrix}$ ಆದರೆ $(AB)' = B'A'$ ಅನ್ನು ಪರಿಶೀಲಿಸಿ

ಪರಿಹಾರ:– $A=\begin{bmatrix}-2\\4\\5\end{bmatrix}, B=\begin{bmatrix}1 & 3 & -6\end{bmatrix}$ ದತ್ತ ಮಾತೃಕೆಗಳಾಗಿವೆ

ಆದ್ದರಿಂದ, $AB=\begin{bmatrix}-2\\4\\5\end{bmatrix}\begin{bmatrix}1 & 3 & -6\end{bmatrix}=\begin{bmatrix}-2 & -6 & 12\\4 & 12 & -24\\5 & 15 & -30\end{bmatrix}$

ಈಗ $A'=\begin{bmatrix}-2 & 4 & 5\end{bmatrix}, B'=\begin{bmatrix}1\\3\\-6\end{bmatrix}$

$\therefore B'A'=\begin{bmatrix}1\\3\\-6\end{bmatrix}\begin{bmatrix}-2 & 4 & 5\end{bmatrix}=\begin{bmatrix}-2 & 4 & 5\\-6 & 12 & 15\\12 & -24 & -30\end{bmatrix}=(AB)'$

ಸ್ಪಷ್ಟವಾಗಿ $(AB)' = B'A'$

2) A ಮತ್ತು B ಒಂದೇ ದರ್ಜೆಯ ಸಮಾಂಗ ಮಾತೃಕೆಗಳಾದರೆ, ಆಗ AB ಯು ಸಮಾಂಗ ಮಾತೃಕೆ ಆದರೆ ಮತ್ತು ಆಗಬೇಕಿದ್ದರೆ $AB = BA$ ಎಂದು ತೋರಿಸಿ.

ಪರಿಹಾರ:–A ಮತ್ತು B ಎರಡೂ ಸಮಾಂಗ ಮಾತೃಕೆಗಳಾಗಿವುದರಿಂದ, $A' = A$ ಮತ್ತು $B' = B$

AB ಯು ಸಮಾಂಗ ಆಗಿರಲಿ, ಆಗ $(AB)' = AB$

ಆದರೆ $(AB)' = B'A' = BA$

ಆದ್ದರಿಂದ $BA = AB$

ವಿಲೋಮವಾಗಿ, $AB = BA$ ಆದರೆ

AB ಯು ಸಮಾಂಗ ಎಂದು ಸಾಧಿಸುವುದು

ಈಗ $(AB)' = B'A'$

$= B A$ [A ಮತ್ತು B ಗಳು ಸಮಾಂಗ ಆದಕಾರಣ]

$= AB$

ಆದ್ದರಿಂದ AB ಯು ಸಮಾಂಗ ಆಗಿರುತ್ತದೆ

3) $f(x)=\sin 3x,\ x\in\left[0,\frac{\pi}{2}\right]$ ಉತ್ಪನ್ನವು ಯಾವ ಯಾವ ಅಂತರಾಳಗಳಲ್ಲಿ (a) ವೃದ್ಧಿಸುವುದು (b) ಕ್ಷೀಣಿಸುವುದು ಎನ್ನುವುದನ್ನು ಕಂಡುಹಿಡಿಯಿರಿ.

ಪರಿಹಾರ: $f(x) = \sin 3x$ ಅಥವಾ $f'(x) = -3\cos 3x$

$\therefore f'(x) = 0$ ಆದರೆ

$3x=\frac{\pi}{2}, \frac{3\pi}{2}$

ಆದ್ದರಿಂದ $x=\frac{\pi}{6}$ ಮತ್ತು $\frac{\pi}{2}$

ಈಗ $x=\frac{\pi}{6}$ ಬಿಂದುವು $\left[0,\frac{\pi}{2}\right]$ ಅಂತರಾಳವನ್ನು ಎರಡು ಬೇರ್ಪಟ್ಟ ಅಂತರಾಳಗಳನ್ನಾಗಿ ವಿಭಜಿಸುತ್ತದೆ. ಅವುಗಳು $\left[0,\frac{\pi}{2}\right]$ ಮತ್ತು $\left[\frac{\pi}{6},\frac{\pi}{2}\right]$ ಆಗಿರುತ್ತದೆ.

$\forall x\in\left[0,\frac{\pi}{6}\right]\ 0\le x<\frac{\pi}{6}\Rightarrow 0\le 3x<\frac{\pi}{2}$

ಆದ್ದರಿಂದ $f'(x)<0$

$\forall x\in\left(\frac{\pi}{6},\frac{\pi}{2}\right), \frac{\pi}{6}<x<\frac{\pi}{2}\Rightarrow\frac{\pi}{2}<3x<\frac{3\pi}{2}$

ಆದ್ದರಿಂದ $f'(x)<0$



$\therefore\left[0,\frac{\pi}{6}\right]$ ಅಂತರಾಳದಲ್ಲಿ, f ಕಟ್ಟುನಿಟ್ಟಾಗಿ ವೃದ್ಧಿಸುತ್ತದೆ ಮತ್ತು

$\therefore\left[\frac{\pi}{6},\frac{\pi}{2}\right]$ ಅಂತರಾಳದಲ್ಲಿ, f ಕಟ್ಟುನಿಟ್ಟಾಗಿ ಕ್ಷೀಣಿಸುತ್ತದೆ.

$x = 0$ ಮತ್ತು $6/\pi$ ಬಿಂದುಗಳಲ್ಲಿ f ಅವಿಚ್ಛಿನ್ನವಾಗಿದೆ. ಆದರಿಂದ ಪ್ರಮೇಯ 1ರಿಂದ

$\left[0,\frac{\pi}{6}\right]$ ಅಂತರಾಳದಲ್ಲಿ f ವೃದ್ಧಿಸುತ್ತದೆ ಮತ್ತು $\left[\frac{\pi}{6},\frac{\pi}{2}\right]$ ಅಂತರಾಳದಲ್ಲಿ f ಕ್ಷೀಣಿಸುತ್ತದೆ

4) $y=\frac{x-7}{(x-2)(x-3)}$ ವಕ್ರರೇಖೆಗೆ, ಅದು x–ಅಕ್ಷವನ್ನು ಬೇಧಿಸುವ ಬಿಂದುವಿನಲ್ಲಿ, ಸ್ಪರ್ಶಕದ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ: x–ಅಕ್ಷದ ಮೇಲೆ, $y = 0$. ವಕ್ರರೇಖೆಯ ಸಮೀಕರಣದಿಂದ $y = 0$ ಆದಾಗ $x = 7$. ಆದ್ದರಿಂದ ವಕ್ರರೇಖೆಯು, x–ಅಕ್ಷವನ್ನು (7, 0) ಬಿಂದುವಿನಲ್ಲಿ ಛೇದಿಸುತ್ತದೆ. ವಕ್ರ ರೇಖೆಯ ಸಮೀಕರಣವನ್ನು xಗೆ ಅನುಗುಣವಾಗಿ ನಿಷ್ಪನ್ನ ಮಾಡಿದರೆ

$\frac{dy}{dx}=\frac{(1-y)(2x-5)}{(x-2)(x-3)}$ ಅಥವಾ $\left.\frac{dy}{dx}\right]=\frac{1-0}{5(4)}=\frac{1}{20}$

$\therefore$ ಸ್ಪರ್ಶಕದ ಓಟವು 1/20 ಆಗಿರುತ್ತದೆ. ಆದ್ದರಿಂದ (7, 0) ಬಿಂದುವಿನಲ್ಲಿ ಸ್ಪರ್ಶಕದ ಸಮೀಕರಣವು

$y-0=\frac{1}{20}(x-7)$ ಅಥವಾ $20y-x+7=0$

ಪ್ರತಿ ಪುಟಕ್ಕೆ 30 ಪೈಸೆ ಹೆಚ್ಚಳದ ಆದೇಶ ಹೊರಡಿಸಲು ಆಗ್ರಹ

ಅಧಿಕಾರಿ ಬಳಿ ಕಡತ: ಕಷ್ಟದಲ್ಲಿ ಪ್ರಕಾಶಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯಕ್ಕೆ ಪೂರೈಕೆ ಮಾಡುವ ಪುಸ್ತಕಗಳ ಪುಟವಾರು ದರ ಏರಿಕೆಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಆದರೆ, ಮುಖ್ಯಮಂತ್ರಿ ಸಚಿವಾಲಯ ಪ್ರಭಾವಿ ಅಧಿಕಾರಿಯೊಬ್ಬರು ಇದಕ್ಕೆ ಸಂಬಂಧಿಸಿದ ಕಡತವನ್ನು ತಮ್ಮ ಬಳಿಯೇ ಇಟ್ಟುಕೊಂಡ ಪರಿಣಾಮ ಅಂತಿಮ ಆದೇಶ ಹೊರಬೀಳದೇ ಕನ್ನಡ ಪುಸ್ತಕೋದ್ಯಮ ಇಕ್ಕಟ್ಟಿಗೆ ಸಿಲುಕಿದೆ.

ಈ ಹಿಂದೆ ಒಂದು ಪುಟಕ್ಕೆ 70 ಪೈಸೆ ಇತ್ತು. ಮುದ್ರಣ ಕಾಗದದ ಬೆಲೆ ಏರಿಕೆ, ಮುದ್ರಣದ ವೆಚ್ಚ ಹೆಚ್ಚಳವನ್ನು ಪರಿಗಣಿಸಿ ರಾಜ್ಯ ಸರ್ಕಾರ ಅಂತಿಮವಾಗಿ 30 ಪೈಸೆ ಹೆಚ್ಚಿಸಲು ಒಪ್ಪಿಗೆ ನೀಡಿದೆ. ಇದರಿಂದ ಒಂದು ಪುಟದ ಬೆಲೆ ₹1 ಆಗಲಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಹಳ್ಳಿ, 'ದರ ಏರಿಕೆಗಾಗಿ ಹಲವು ವರ್ಷಗಳಿಂದ ಪ್ರಯತ್ನ ನಡೆಸಿದ್ದೆವು. ಕಳೆದ ವರ್ಷ ಸರ್ಕಾರ ನಮ್ಮ ಮನವಿಯನ್ನು ಪರಿಗಣಿಸಿತು. ಇದಕ್ಕೆ ಹಣಕಾಸು ಇಲಾಖೆಯೂ ಒಪ್ಪಿಗೆ ನೀಡಿತ್ತು. ಅಂತಿಮವಾಗಿ ಮುಖ್ಯಮಂತ್ರಿಯವರೂ ಸಮ್ಮತಿಸಿದರು. ಆದರೆ, ಹಿರಿಯ ಅಧಿಕಾರಿ ಕಡತವನ್ನು ತಮ್ಮ ಬಳಿಯೇ ಉಳಿಸಿಕೊಂಡಿರುವುದರಿಂದ, ಅಂತಿಮ ಆದೇಶ ಹೊರಬೀಳದೇ ದರ ಏರಿಕೆ ಜಾರಿ ತಡವಾಗುತ್ತಿದೆ. ಇದರಿಂದ ನಷ್ಟಕ್ಕೀಡಾಗುತ್ತಿದ್ದೇವೆ' ಎಂದು ಹೇಳಿದರು.

> **'ಪುಸ್ತಕೋದ್ಯಮದ ಪರವಾಗಿ ಸಚಿವ ವಿ.ಸೋಮಣ್ಣ, ಶಾಸಕ ಎಸ್.ಸುರೇಶ್‌ಕುಮಾರ್ ಅವರು ಬೊಮ್ಮಾಯಿ ಅವರಿಗೆ ಮನವಿಯನ್ನೂ ಮಾಡಿದ್ದರು. ಹಾಗಿದ್ದರು ಕಡತ ಮುಂದಕ್ಕೆ ಹೋಗಿಲ್ಲ.**
> **ಪ್ರಕಾಶ್ ಕಂಬತ್ತಹಳ್ಳಿ,** ಅಧ್ಯಕ್ಷ, ಕರ್ನಾಟಕ ಪ್ರಕಾಶಕರ ಸಂಘ

> **10 ವರ್ಷಗಳಷ್ಟು ಹಿಂದೆ ಪುಟಕ್ಕೆ 70 ಪೈಸೆ ನಿಗದಿ ಮಾಡಲಾಗಿತ್ತು. ಈಗ ಅದೇ ಬೆಲೆಯಲ್ಲಿ ಗ್ರಂಥಾಲಯಗಳಿಗೆ ಪುಸ್ತಕ ಪೂರೈಸಲು ನಷ್ಟವಾಗುತ್ತದೆ. ಕನಿಷ್ಠ 1 ರೂಪಾಯಿ 20 ಪೈಸೆ ನಿಗದಿ ಮಾಡಬೇಕಿತ್ತು.**
> **ರಮೇಶ್ ಉಡುಪ,** ಕಾರ್ಯನಿರ್ವಾಹಕ ನಿರ್ದೇಶಕ, ನವಕರ್ನಾಟಕ ಪ್ರಕಾಶನ

'ಸರ್ಕಾರ ಆದಷ್ಟು ಬೇಗ ದರ ಏರಿಕೆಯನ್ನು ಜಾರಿಗೊಳಿಸಬೇಕು. ಉದ್ಯಮ ಈಗಾಗಲೇ ನಷ್ಟದಲ್ಲಿ ನಡೆಯುತ್ತಿದೆ. ಅದರಲ್ಲೂ ಪುಸ್ತಕೋದ್ಯಮಕ್ಕೆ ಜಿಎಸ್‌ಟಿ ಹೊರೆ ಅಧಿಕವಾಗಿದೆ. ಕೇಂದ್ರ ಸರ್ಕಾರ ರಾಯಧನದ (ರಾಯಲ್ಟಿ) ಮೇಲೆ ಜಿಎಸ್‌ಟಿ ಶೇ 12 ರಿಂದ ಶೇ 18ಕ್ಕೆ ಏರಿಕೆ ಮಾಡಿದೆ. ಮುದ್ರಣ ಕಾಗದದ ಮೇಲಿನ ಜಿಎಸ್‌ಟಿ ಶೇ 5 ರಿಂದ ಶೇ 18ಕ್ಕೆ ಏರಿಕೆ ಆಗಿದೆ. ಜಾಬ್ ವರ್ಕ್ ಜಿಎಸ್‌ಟಿಯೂ ಶೇ 18ಕ್ಕೆ ನಿಗದಿ ಮಾಡಲಾಗಿದೆ. ರಷ್ಯಾ- ಉಕ್ರೇನ್ ಯುದ್ಧದ ಕಾರಣ ಮುದ್ರಣ ಕಾಗದದ ಬೆಲೆಯೂ ದುಪ್ಪಟ್ಟಾಗಿದೆ' ಎಂದು ಹೇಳಿದರು.

ಪ್ರಕಾಶಕರ ಸಂಘದ ಪದಾಧಿಕಾರಿ ಸೃಷ್ಟಿ ನಾಗೇಶ್, ಮುಖ್ಯಕಾರ್ಯದರ್ಶಿ, ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿ ದರ ಏರಿಕೆಗೆ ಒಪ್ಪಿಗೆ ನೀಡಿ ಸಹಿ ಹಾಕಿದ್ದಾರೆ. ಕಷ್ಟಪಟ್ಟು ಒಪ್ಪಿಸಿ 30 ಪೈಸೆ ಹೆಚ್ಚಿಸಿಕೊಳ್ಳಲಾಗಿದೆ. ಆದರೆ, ಕಡತವನ್ನು ತಮ್ಮ ಬಳಿ ಇಟ್ಟುಕೊಂಡಿರುವ ಅಧಿಕಾರಿಯನ್ನು ಹಲವು ಬಾರಿ ಭೇಟಿ ಮಾಡಿ, ಮಾತನಾಡಿದ್ದೇವೆ. ಆದರೆ ಯಾವುದೇ ಪ್ರಯೋಜನ ಆಗುತ್ತಿಲ್ಲ. ಮುಖ್ಯಮಂತ್ರಿಯವರೇ ಮಧ್ಯ ಪ್ರವೇಶಿಸಬೇಕು ಎಂದು ತಿಳಿಸಿದರು.

ಯಳಂದೂರು ಪೊಲೀಸ್ ಠಾಣೆ ಮುಂದೆ ಗ್ರಾಮಸ್ಥರ ಪ್ರತಿಭಟನೆ

ಪೊಲೀಸ್ ಜೀಪಿನಿಂದ ಜಿಗಿದ ಯುವಕ ಸಾವು

ಪ್ರಜಾವಾಣಿ ವಾರ್ತೆ

ನಿಂಗರಾಜು

ಯುವಕನ ಕುಟುಂಬದವರು ಹಾಗೂ ಗ್ರಾಮಸ್ಥರು ಯಳಂದೂರು ಠಾಣೆಯ ಮುಂದೆ ಪ್ರತಿಭಟಿಸಿದರು

ಯಳಂದೂರು: ಬಾಲಕಿಯೊಬ್ಬಳ ಅಪಹರಣಕ್ಕೆ ಸಂಬಂಧಿಸಿ ಪೊಲೀಸರು ಮಂಗಳವಾರ ಕರೆದೊಯ್ಯುತ್ತಿದ್ದ, ಕೊಳ್ಳೇಗಾಲ ತಾಲ್ಲೂಕು ಕುಂತೂರು ಮೋಳೆ ನಿವಾಸಿ ನಿಂಗರಾಜು (21), ತಾಲ್ಲೂಕಿನ ಮದ್ದೂರು-ಯರಿಯೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಜೀಪಿನಿಂದ ಹಾರಿ ಮೃತಪಟ್ಟರು.

ಅಪಹರಣ ಕುರಿತು ಮಾಂಬಳ್ಳಿ ಠಾಣೆಯಲ್ಲಿ ಎಂಟು ದಿನಗಳ ಹಿಂದೆ ದೂರು ದಾಖಲಾಗಿತ್ತು.

'ಚಾಮರಾಜನಗರದಲ್ಲಿ ಮಂಗಳವಾರ ಪತ್ತೆಯಾಗಿದ್ದ ಯುವಕ ಹಾಗೂ ಬಾಲಕಿಯನ್ನು ಠಾಣೆಗೆ ಕರೆದೊಯ್ಯುತ್ತಿರುವಾಗ ಯುವಕ ಏಕಾಏಕಿ ಜೀಪಿನಿಂದ ಹೊರಗೆ ಜಿಗಿದ. ತಲೆಗೆ ತೀವ್ರವಾಗಿ ಗಾಯಗೊಂಡಿದ್ದ ಆತನನ್ನು ತಕ್ಷಣವೇ ಯಳಂದೂರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದರೂ ಉಳಿಯಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಪೋಷಕರು ಹಾಗೂ ಕುಂತೂರು ಮೋಳೆ ಗ್ರಾಮಸ್ಥರು ಯಳಂದೂರು ಠಾಣೆ ಮುಂದೆ ಜಮಾಯಿಸಿ ಪೊಲೀಸರ ವಿರುದ್ಧ ಆಕ್ರೋಶವ್ಯಕ್ತಪಡಿಸಿದರು. 'ಮಗನ ಸಾವಿಗೆ ಪೊಲೀಸರ ನಿರ್ಲಕ್ಷ್ಯವೇ ಕಾರಣವಾಗಿದ್ದು ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಸಾವಿಗೆ ಕಾರಣರಾದವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು.

'ಯುವಕನನ್ನು ಆರೋಪಿಯಂತೆ ನಡೆಸಿಕೊಂಡಿಲ್ಲ. ಬೇಡಿಯನ್ನೂ ಹಾಕಿರಲಿಲ್ಲ. ಅಧಿಕಾರಿಗಳು ಹಾಗೂ ಸಿಬ್ಬಂದಿ ಸೌಜನ್ಯದಿಂದ ವರ್ತಿಸಿದ್ದಾರೆ. ಆದರೂ ಆತ ಒತ್ತಡದಿಂದ ಜಿಗಿದಿದ್ದಾನೆ' ಎಂಬ ಡಿವೈಎಸ್ಪಿ ನಾಗರಾಜ್ ಅವರ ಮಾತನ್ನು ಪೋಷಕರು ಒಪ್ಪಲಿಲ್ಲ.

ಅಮಾನತು ಮಾಡಿ ತನಿಖೆ: ನಂತರ ಸ್ಥಳಕ್ಕೆ ಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, 'ಜೀಪಿನಲ್ಲಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಕೂಡಲೇ ಅಮಾನತ್ತು ಮಾಡಲಾಗುವುದು. ದೂರು ಕೊಟ್ಟರೆ ತನಿಖೆ ನಡೆಸಲಾಗುವುದು' ಎಂದು ಭರವಸೆ ನೀಡಿದರು.

'ದಂಡ ಪಡೆದು ಕೃಷಿ ಜಮೀನು ಪರಿವರ್ತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಜಮೀನು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗಿದ್ದರೆ, ನಿಗದಿತ ಶುಲ್ಕ ಪಡೆದು ಆ ಜಮೀನನ್ನು ವಸತಿ ಉದ್ದೇಶಕ್ಕೆ ಬಳಸುವುದಕ್ಕಾಗಿ ಭೂ ಪರಿವರ್ತನೆಗೆ ಅನುಮತಿ ನೀಡಬೇಕಾಗುತ್ತದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಜುನ್ನೆದ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ 95ರ ಅನುಸಾರ ಕೃಷಿ ಜಮೀನು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದರೆ, ಅಂತಹ ಜಮೀನನ್ನು ಯಾವ ಉದ್ದೇಶಕ್ಕೆ ಗೊತ್ತುಪಡಿಸಲಾಗಿದೆಯೋ, ಅದಕ್ಕಾಗಿ ಪರಿವರ್ತಿಸಲು ಕೋರಿದರೆ ದಂಡ ಪಾವತಿಯ ಷರತ್ತಿಗೆ ಒಳಪಟ್ಟು ಅನುಮತಿ ನೀಡ ಬೇಕಾಗುತ್ತದೆ' ಎಂದು ಹೈಕೋರ್ಟ್ ತಿಳಿಸಿದೆ.

ಇದೇ ವೇಳೆ ಪ್ರಕರಣದಲ್ಲಿ ಭೂ ಪರಿವರ್ತನೆ ಕೋರಿ ಅರ್ಜಿದಾರ ಸಲ್ಲಿಸಿದ ಮನವಿಯನ್ನು ತಿರಸ್ಕರಿಸಿ ಧಾರವಾಡ ಜಿಲ್ಲಾಧಿಕಾರಿಯು 2022ರ ಸೆಪ್ಟೆಂಬರ್ 3ರಂದು ನೀಡಿದ್ದ ಹಿಂಬರಹವನ್ನು ಕೋರ್ಟ್ ರದ್ದುಪಡಿಸಿದೆ.

ಧಾರವಾಡ ಜಿಲ್ಲೆಯ ಛಬ್ಬಿ ಹೋಬಳಿಯ ರಾಯನಾಳ ಗ್ರಾಮದ ಸರ್ವೆ ನಂಬರ್ 82/18ರಲ್ಲಿನ ಸುಮಾರು ಎರಡೂವರೆ ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ ಬಳಸಲು ಅನುಮತಿ ನೀಡುವಂತೆ ಕೋರಿ ಅರ್ಜಿದಾರ ಜುನ್ನೆದ್ ಅವರು, ಧಾರವಾಡ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು.

ಈ ಮನವಿಯನ್ನು ತಿರಸ್ಕರಿಸಿದ್ದ ಜಿಲ್ಲಾಧಿಕಾರಿ ಅವರು, 'ಜಾಗದ ಪಕ್ಕದ ಜಮೀನು ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ವಿಸ್ತರಣೆಗೆ ಅಧಿಸೂಚಿತವಾಗಿದೆ' ಎಂಬ ಹಿಂಬರಹ ನೀಡಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ನಿವೃತ್ತರ ತನಿಖೆಗೆ ಅವಕಾಶವಿಲ್ಲ: ಹೈಕೋರ್ಟ್

ಬೆಂಗಳೂರು: 'ಕರ್ನಾಟಕ ನಾಗರಿಕ ಸೇವೆಗಳ ಅಧಿನಿಯಮದ (ಕೆಸಿಎಸ್ ಆರ್) ನಿಯಮ 214ರ (2)(ಬಿ)(ಜಿಜಿ) ಅನುಸಾರ ನಾಲ್ಕು ವರ್ಷಗಳಿಗೂ ಹಿಂದಿನ ಘಟನೆಗೆ ಸಂಬಂಧಿಸಿದಂತೆ ನಿವೃತ್ತ ನೌಕರರ ವಿರುದ್ಧ ತನಿಖೆ ನಡೆಸಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ಗೃಹ ಮಂಡಳಿಯ (ಕೆಎಚ್‌ಬಿ) ನಿವೃತ್ತ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಾದ ಅನಿಲ್ ಕುಮಾರ್, ಟಿ.ಮಲ್ಲಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಮಾನ್ಯ ಮಾಡಿದೆ. ಅರ್ಜಿದಾರರ ವಿರುದ್ಧದ ಚಾರ್ಜ್ ಮೆಮೊ ಹಾಗೂ ಹಾಗೂ ತನಿಖೆಗೆ ಅಧಿಕಾರಿ ನೇಮಕ ಮಾಡಿದ್ದ ಆದೇಶವನ್ನು ರದ್ದುಪಡಿಸಿದೆ.

ಪ್ರಕರಣವೇನು?: ಕೆಎಚ್‌ಬಿಯಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅನಿಲ್ ಕುಮಾರ್ ಹಾಗೂ ಮಲ್ಲಣ್ಣ ಕ್ರಮವಾಗಿ 2018ರ ಜೂನ್ 30 ಹಾಗೂ 2020ರ ಆಗಸ್ಟ್ 31ರಂದು ನಿವೃತ್ತರಾಗಿದ್ದರು. ಏತನ್ಮಧ್ಯೆ 2006ರಲ್ಲಿ ನಡೆದಿದ್ದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ 2022ರ ಜೂನ್ 21ರಂದು ಆರೋಪದ ಜ್ಞಾಪನಾ ಪತ್ರ (ಮೆಮೊ) ಜಾರಿಗೊಳಿಸಲಾಗಿತ್ತು. ತನಿಖೆ ನಡೆಸಲು ಆಗಸ್ಟ್ 8ರಂದು ಅಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಅರ್ಜಿದಾರರು ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮತ್ತಷ್ಟು ಅಧಿಕಾರಿಗಳಿಗೆ ನೋಟಿಸ್ ನೀಡುವ ಸಾಧ್ಯತೆ

ಚಿಲುಮೆ: ಪರಪ್ಪನ ಅಗ್ರಹಾರ ಜೈಲು ಸೇರಿದ ಬಿಬಿಎಂಪಿ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲುಮೆ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಬಂಧಿಸಲಾಗಿರುವ ಬಿಬಿಎಂಪಿಯ ನಾಲ್ವರು ಅಧಿಕಾರಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಸದ್ಯ ಅವರೆಲ್ಲ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದಾರೆ.

ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಪ್ರಕರಣದಲ್ಲಿ ಚಿಲುಮೆ ಸಂಸ್ಥೆಗೆ ಸಹಾಯ ಮಾಡಿದ್ದ ಆರೋಪದಡಿ ನಾಲ್ವರನ್ನೂ ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೂರು ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿ, ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ನಾಲ್ವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

'ಬಿಬಿಎಂಪಿ ಕಂದಾಯ ಅಧಿಕಾರಿಗಳಾದ ಸುಹೇಲ್ ಅಹಮದ್, ಕೆ.ಚಂದ್ರಶೇಖರ್, ಮಹೇಶ್ ಹಾಗೂ ಉಪ ಕಂದಾಯ ಅಧಿಕಾರಿ ವಿ.ಬಿ. ಭೀಮಾಶಂಕರ್ ಅವರನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಅದರನ್ವಯ ತನಿಖೆ ಮುಂದುವರಿದಿದ್ದು, ಮತ್ತಷ್ಟು ಅಧಿಕಾರಿಗಳಿಗೆ ನೋಟಿಸ್ ನೀಡುವ ಸಾಧ್ಯತೆ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಉದ್ಯೋಗಿ ಮಾರುತಿ ಗೌಡ ವಿಚಾರಣೆ: 'ಚಿಲುಮೆ ಸಂಸ್ಥೆಯ ಉದ್ಯೋಗಿ ಮಾರುತಿ ಗೌಡ ಎಂಬುವರನ್ನು ವಿಚಾರಣೆ ನಡೆಸಲಾಗುತ್ತಿದೆ. ಇತ್ತೀಚೆಗೆ ಅವರ ಬೆಂಗಳೂರಿನ ಮನೆ ಮೇಲೆ ದಾಳಿ ಮಾಡಲಾಗಿತ್ತು. ರವಿಕುಮಾರ್ ಅವರಿಗೆ ಸೇರಿದ್ದ ದಾಖಲೆಗಳು, ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿತ್ತು. ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪುರಾವೆ ಸಿಕ್ಕರೆ ವಿಚಾರಣೆ: 'ಮತದಾರರ ಮಾಹಿತಿ ಕಳವು ಪ್ರಕರಣ ಗಂಭೀರವಾಗಿದ್ದು, ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ. ವಿಚಾರಣೆ ನೆಪದಲ್ಲಿ ಯಾರಿಗೂ ಕಿರುಕುಳ ನೀಡುತ್ತಿಲ್ಲ. ಪುರಾವೆ ಸಿಕ್ಕರಷ್ಟೇ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ವಿಚಾರಣೆ ನೆಪದಲ್ಲಿ ಪೊಲೀಸರು ಕಿರುಕುಳ ನೀಡುತ್ತಿದ್ದಾರೆ' ಎಂಬ ಬಿಬಿಎಂಪಿ ಅಧಿಕಾರಿಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ತಪ್ಪು ಮಾಡಿದವರು ಭಯ ಪಡಬೇಕು. ತಪ್ಪು ಮಾಡದವರು ಏಕೆ ಭಯಪಡಬೇಕು. ಕಾನೂನು ಪ್ರಕಾರವೇ ಕ್ರಮ ಜರುಗಿಸಲಾಗುತ್ತಿದೆ' ಎಂದು ಹೇಳಿದರು.

'75 ವರ್ಷ ಆದವರು ನಿವೃತ್ತಿ ಪಡೆಯಬೇಕು'

ಬೆಂಗಳೂರು: 'ಸಿದ್ದರಾಮಯ್ಯ ಅವರಿಗೆ 75 ವರ್ಷ ವಯಸ್ಸಾಗಿದೆ. ನಿವೃತ್ತಿ ಪಡೆದು ಬೇರೆಯವರಿಗೆ ಅವಕಾಶ ಮಾಡಿಕೊಡುವುದನ್ನುಬಿಟ್ಟು ನಾನೇ ಎನ್ನುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೂ ವಯಸ್ಸಾಗಿದೆ. 75 ವರ್ಷ ಆದ ಎಲ್ಲರೂ ರಾಜಕೀಯ ನಿವೃತ್ತಿ ಪಡೆಯಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಒತ್ತಾಯಿಸಿದರು.

ಮುಖ್ಯಮಂತ್ರಿಯಿಂದ ಕೇಂದ್ರದ ವಿವಿಧ ಸಚಿವರ ಭೇಟಿ

ಮೂರು ಜವಳಿ ಪಾರ್ಕ್: ಅನುದಾನಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ವಿವಿಧ ಸಚಿವರನ್ನು ಮಂಗಳವಾರ ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚಿಸಿದರು.

ಕೇಂದ್ರ ಜವಳಿ ಸಚಿವ ಪೀಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿದ ಅವರು, 'ಕಲಬುರಗಿ, ತುಮಕೂರು, ವಿಜಯಪುರ ಜಿಲ್ಲೆಗಳಲ್ಲಿ ಮಿತ್ರಾ ಯೋಜನೆಯಡಿ ಸಹಾಯಾನುದಾನ ಪಡೆದು ವಿಶ್ವಮಟ್ಟದ ಮೆಗಾ ಜವಳಿ ಪಾರ್ಕ್ ಸ್ಥಾಪನೆಗೆ ಕರ್ನಾಟಕ ಸರ್ಕಾರ ಮುಂದಾಗಿದೆ' ಎಂದು ಗಮನಕ್ಕೆ ತಂದರು.

'ಈ ಮೂರು ಜಿಲ್ಲೆಗಳು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಮೀಪದಲ್ಲಿದ್ದು, ಎಲ್ಲ ಪ್ರಮುಖ ನಗರಗಳಿಗೆ ಹಾಗೂ ಬಂದರುಗಳಿಗೆ ಕೂಡ ಸಂಪರ್ಕವಿದೆ. ಈ ಜಿಲ್ಲೆಗಳಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪನೆಯಿಂದಾಗಿ ಜವಳಿ ಕೇಂದ್ರವಾಗಿ ಜಿಲ್ಲೆಗಳನ್ನು ಪರಿವರ್ತಿಸಲು ಸಾಧ್ಯವಾಗಲಿದೆ. ಪ್ರಧಾನಮಂತ್ರಿಗಳ ಕನಸಿನಂತೆ ಜವಳಿ ಕ್ಷೇತ್ರದಲ್ಲಿ ದೇಶ ಆತ್ಮನಿರ್ಭರ್ ಆಗಲು ಕೂಡ ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರದ ಮಿತ್ರಾ ಯೋಜನೆಯಡಿ ಈ ಮೂರು ಜಿಲ್ಲೆಗಳನ್ನು ಸೇರ್ಪಡೆಗೊಳಿಸಬೇಕು' ಎಂದು ಅವರು ಮನವಿ ಮಾಡಿದರು.

2 ಲಕ್ಷ ಟನ್ ಅಕ್ಕಿ ಬಿಡುಗಡೆಗೆ ಮನವಿ: ರಾಜ್ಯಕ್ಕೆ ಹತ್ತು ಸಾವಿರ ಟನ್‌ಗಳ ಅಕ್ಕಿ ಸರಬರಾಜನ್ನು ಸೀಮಿತಗೊಳಿಸಿರುವ ನೀತಿಯನ್ನು ಮರು ಪರಿಶೀಲಿಸುವಂತೆ ಬೊಮ್ಮಾಯಿ ಮನವಿ ಸಲ್ಲಿಸಿದರು.

ಭಾರತೀಯ ಆಹಾರ ನಿಗಮದ ವತಿಯಿಂದ 2023ರ ಮಾರ್ಚ್ ವರೆಗೆ ತೆರೆದ ಮಾರುಕಟ್ಟೆ ಮಾರಾಟ ಯೋಜನೆಯಡಿ 2 ಲಕ್ಷ ಟನ್ ಅಕ್ಕಿಯನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ಬಿಡುಗಡೆ ಮಾಡುವಂತೆ ಹಾಗೂ ತಕ್ಷಣವೇ 50 ಸಾವಿರ ಟನ್ ಅಕ್ಕಿಯನ್ನು ಬಿಡುಗಡೆ ಮಾಡುವಂತೆಯೂ ಕೋರಿದರು.

732 ಎಕರೆ ಹಸ್ತಾಂತರಕ್ಕೆ ಮನವಿ

ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು , 'ರಾಜ್ಯ ಸರ್ಕಾರಕ್ಕೆ ಸೇರಿದ ಬೆಳಗಾವಿ ಜಿಲ್ಲೆ ತುಕಮಟ್ಟಿ ಗ್ರಾಮದ 732.24 ಎಕರೆ ಪ್ರದೇಶವು ರಕ್ಷಣಾ ಪ್ರಾಧಿಕಾರದ ವಶದಲ್ಲಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ಈ ಭೂ ಪ್ರದೇಶವನ್ನು ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಹಸ್ತಾಂತರಿಸಲು ರಕ್ಷಣಾ ಪ್ರಾಧಿಕಾರಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಒತ್ತಾಯಿಸಿದರು.

ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿದ ಅವರು, 'ಗುಡೆಕೋಟೆ ಕರಡಿಧಾಮ ಹಾಗೂ ಭೀಮಗಡ್ ಅಭಯಾರಣ್ಯಗಳ ಸುತ್ತಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಬೇಕು' ಎಂದು ಮನವಿ ಮಾಡಿದರು.

'ಈಗಾಗಲೇ ಕರಡು ಅಧಿಸೂಚನೆಯನ್ನು ರಾಜ್ಯ ಸಚಿವ ಸಂಪುಟ ಸಭೆ ಅನುಮೋದಿಸಿದ್ದು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಶಿಫಾರಸು ಮಾಡಿ ಸಲ್ಲಿಸಲಾಗಿದೆ' ಎಂದು ಬೊಮ್ಮಾಯಿ ತಿಳಿಸಿದರು.

ರೌಡಿ ಸೈಲೆಂಟ್ ಸುನೀಲ್ ಬಿಜೆಪಿ ಸೇರ್ಪಡೆಗೆ ಅವಕಾಶವಿಲ್ಲ: ನಳಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಲೆಂಟ್ ಸುನೀಲ್‌ಗೆ ಬಿಜೆಪಿ ಸೇರ್ಪಡೆಗೆ ಅವಕಾಶವಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ರೌಡಿ ಶೀಟರ್ ಸೈಲೆಂಟ್ ಸುನೀಲ್ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಬಿಜೆಪಿಯ ಕೆಲವು ನಾಯಕರು ಭಾಗವಹಿಸಿದ್ದು ವಿವಾದಕ್ಕೆ ಕಾರಣವಾಗಿದ್ದು, ಈ ಸಂಬಂಧ ನಳಿನ್‌ಕುಮಾರ್ ಮಂಗಳವಾರ ಹೇಳಿಕೆ ನೀಡಿದ್ದಾರೆ.

'ಸುನೀಲ್‌ನನ್ನು ಯಾವುದೇ ಕಾರಣಕ್ಕೂ ಪಕ್ಷಕ್ಕೆ ಸೇರಿಸುವುದಿಲ್ಲ. ನಗರದಲ್ಲಿ ಆತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಕ್ಷದ ಕೆಲವು ಪ್ರಮುಖರು ಭಾಗವಹಿಸಿದ್ದ ಬಗ್ಗೆ ಮಾಹಿತಿ ಪಡೆಯುತ್ತಿದ್ದೇನೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಖಂಡರಿಂದ ವಿವರಣೆ ಕೇಳಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಪಕ್ಷದ ಪ್ರಮುಖರು ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು. ಎಲ್ಲ ವಿಚಾರಗಳನ್ನು ಪಕ್ಷದ ಗಮನಕ್ಕೆ ತರಬೇಕು. ವ್ಯಕ್ತಿಗಳ ನಿರ್ಮಾಣದ ಮೂಲಕ ದೇಶ ನಿರ್ಮಾಣದ ಕಾರ್ಯವನ್ನು ಬಿಜೆಪಿ ಮಾಡುತ್ತಿದೆ. ಉಗ್ರಗಾಮಿ, ಭಯೋತ್ಪಾದನಾ ಚಟುವಟಿಕೆಗಳಿಗೆ ಬೆಂಬಲ ಕೊಡುವವರು ಮತ್ತು ಅಪರಾಧದ ಹಿನ್ನೆಲೆ ಉಳ್ಳವರನ್ನು ಪಕ್ಷ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ' ಎಂದಿದ್ದಾರೆ.

'ಕಾಂಗ್ರೆಸ್ ರೌಡಿ ಶೀಟರ್‌ಗಳ ಲೆಕ್ಕ ಹಾಕಲಿ'

ನವದೆಹಲಿ: 'ಕಾಂಗ್ರೆಸ್‌ನಲ್ಲಿ ಎಷ್ಟು ಜನ ರೌಡಿಶೀಟರ್ ಇದ್ದಾರೆ ಎಂದು ಲೆಕ್ಕ ಹಾಕಲಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಸೈಲೆಂಟ್ ಸುನೀಲ್ ಜೊತೆಗೆ ಬಿಜೆಪಿ ನಾಯಕರು ವೇದಿಕೆ ಹಂಚಿಕೊಂಡ ವಿಚಾರದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಮಂಗಳವಾರ ಅವರು ಪ್ರತಿಕ್ರಿಯಿಸಿದರು.

ಈ ಸಂಬಂಧ ಸಂಜೆ ಟ್ವೀಟ್ ಮಾಡಿದ ಅವರು, 'ರೌಡಿ ಶೀಟರ್‌ಗಳ ಕುರಿತ ಪತ್ರಕರ್ತರ ಪ್ರಶ್ನೆಗಳಿಗೆ ನಾನು ಉತ್ತರ ನೀಡಿದ್ದೇನೆ. ಇದನ್ನು ಇಷ್ಟಕ್ಕೆ ಸೀಮಿತವಾಗಿ ನೋಡಬೇಕು. ನಮ್ಮ ಪಕ್ಷ ಯಾವುದೇ ರೌಡಿ ಶೀಟರ್‌ಗಳಿಗೆ ಮನ್ನಣೆ ನೀಡುವುದಿಲ್ಲ. ಜತೆಗೆ ಸಹಿಸುವುದೂ ಇಲ್ಲ. ರೌಡಿ ಶೀಟರ್ ಸೈಲೆಂಟ್ ಸುನೀಲ್‌ನನ್ನು ಯಾವುದೇ ಕಾರಣಕ್ಕೆ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸಿಸಿಬಿಯವರಿಗೆ ಧೈರ್ಯ ಬರುತ್ತಾ?: ಸಿದ್ದರಾಮಯ್ಯ

ಶಿವಮೊಗ್ಗ: 'ರೌಡಿಶೀಟರ್ ಸೈಲೆಂಟ್ ಸುನೀಲ್, ಬಿಜೆಪಿ ಮುಖಂಡರ ಜೊತೆ ಇದ್ದರೆ ಅವನನ್ನು ಬಂಧಿಸುವ ಧೈರ್ಯ ಸಿಸಿಬಿ ಪೊಲೀಸರಿಗೆ ಹೇಗೆ ಬರುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

'ಡಕಾಯಿತಿ, ಕೊಲೆ ಪ್ರಕರಣದಲ್ಲಿರುವ ಸೈಲೆಂಟ್ ಸುನೀಲ್‌ನ ಜೊತೆ ಬಿಜೆಪಿ ಮುಖಂಡರಾದ ತೇಜಸ್ವಿ ಸೂರ್ಯ, ಮೋಹನ್ ಹೋಗಿದ್ದಾರೆ. ಇವರು ನೀತಿ ಹೇಳೋದು ಬದನೆಕಾಯಿ ತಿನ್ನೋಕಾ' ಎಂದು ತರಾಟೆಗೆ ತೆಗೆದುಕೊಂಡರು.

'ಸಿಸಿಬಿಯವರು ಸೈಲೆಂಟ್ ಸುನೀಲ್‌ನ ಹುಡುಕುತ್ತಾ ಇದ್ದಾರೆ. ಆಡಳಿತ ಪಕ್ಷದ ಶಾಸಕರು, ಸಂಸದರು ಅವನ ಜೊತೆಗಿದ್ರೆ ಕಾನೂನು ಕ್ರಮ ಕೈಗೊಳ್ಳೋಕೆ, ಶಿಕ್ಷೆ ಕೊಡಿಸೋಕೆ ಹೇಗೆ ಧೈರ್ಯ ಬರುತ್ತದೆ' ಎಂದು ಪ್ರಶ್ನಿಸಿದರು.

'ಬಿಜೆಪಿ ನಾಯಕರ ವಿರುದ್ಧ ಎಷ್ಟು ಕ್ರಿಮಿನಲ್ ಪ್ರಕರಣಗಳಿಲ್ಲ. ಅಮಿತ್ ಶಾ ಅವರೇ ಕೊಲೆ ಪ್ರಕರಣದಲ್ಲಿ ಇದ್ದರು. ಅವರ ವಿರುದ್ಧ ಗಡಿಪಾರು ಆದೇಶವಿತ್ತು. ಹೀಗಿರುವಾಗ ಮೊಹಮ್ಮದ್ ನಲಪಾಡ್ ಬಗ್ಗೆ ಮಾತನಾಡಲು ಬಿಜೆಪಿಯವರಿಗೆ ಯಾವ ನೈತಿಕತೆ ಇದೆ' ಎಂದು ಹೇಳಿದರು.



ಬಿಜೆಪಿ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ: ಡಿಕೆಶಿ ವ್ಯಂಗ್ಯ

ಚಿಕ್ಕಮಗಳೂರು: 'ನೀವು (ಬಿಜೆಪಿಯವರು) ಮತದಾನದ ಹಕ್ಕನ್ನೇ ಮಾರಾಟ ಮಾಡಲು ಹೊರಟವರು. ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ, ಅದನ್ನು ಮೊದಲು ತೆಗೆದು ಹಾಕಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಮೂಡಿಗೆರೆಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, 'ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅದನ್ನು ಮೊದಲು ನಿಭಾಯಿಸಿಕೊಳ್ಳಿ' ಎಂದು ಕುಟುಕಿದರು.

'ಮತದಾರರ ಪಟ್ಟಿ ವಿಚಾರಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದೇವೆ. ಚುನಾವಣಾ ಆಯೋಗ, ಪೊಲೀಸರು ತನಿಖೆಯಲ್ಲಿ ತೊಡಗಿದ್ದಾರೆ. ಪ್ರಕರಣದಲ್ಲಿ ಇಬ್ಬರು ಅಧಿಕಾರಿಗಳು ಅಮಾನತಾಗಿದ್ದಾರೆ. ಇನ್ನೂ ಕೆಲವು ವಿಚಾರಗಳು ಇವೆ, ಬೆಂಗಳೂರಿನಲ್ಲಿ ಅವುಗಳನ್ನು ತಿಳಿಸುತ್ತೇನೆ' ಎಂದು ಪ್ರತಿಕ್ರಿಯಿಸಿದರು.

'ನನ್ನ ಮೇಲೆ ರೌಡಿಶೀಟ್ ಇಲ್ಲ. ಜೈಲಿಗೆ ಹೋಗಿಬಂದವರಲ್ಲಿ ಬಿ.ಎಸ್. ಯಡಿಯೂರಪ್ಪ, ಅಮಿತ್ ಶಾ, ಸಚಿವರ ಪೈಕಿ ಹಲವರು ಹಾಗೂ ನಾನೂ ಇದ್ದೇನೆ. ನನ್ನ ವಿರುದ್ಧ ಭ್ರಷ್ಟಾಚಾರ ಪ್ರಕರಣ, ವಿಚಾರಣೆ ಇರಲಿಲ್ಲ. ರಾಜಕೀಯ ಪ್ರೇರಿತವಾಗಿ ಜೈಲಿಗೆ ಹಾಕಿದ್ದರು' ಎಂದು ಉತ್ತರಿಸಿದರು.

ಇಬ್ಬರು ಸಚಿವರನ್ನು ಕಳುಹಿಸಿ: ಸಿಎಂಗೆ ಪತ್ರ

ಬೆಳಗಾವಿ: 'ಮಹಾರಾಷ್ಟ್ರದ ಇಬ್ಬರು ಗಡಿ ಉಸ್ತುವಾರಿ ಸಚಿವರು ಡಿ.3ರಂದು ಬೆಳಗಾವಿಗೆ ಭೇಟಿ ನೀಡುತ್ತಿದ್ದಾರೆ. ಹಾಗಾಗಿ, ಕರ್ನಾಟಕದ ಇಬ್ಬರು ಹಿರಿಯ ಸಚಿವರನ್ನು ಮಹಾರಾಷ್ಟ್ರದ ಜತ್ತ, ಅಕ್ಕಲಕೋಟೆ ಹಾಗೂ ದಕ್ಷಿಣ ಸೊಲ್ಲಾಪುರಕ್ಕೆ ಕಳುಹಿಸಿ ಅಲ್ಲಿನ ಕನ್ನಡಿಗರಿಗೆ ಧೈರ್ಯ ತುಂಬಬೇಕು' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

'ಹೊರನಾಡ ಕನ್ನಡಿಗರು ಅಲ್ಲಿನ ಸರ್ಕಾರದ ವಿರುದ್ಧ ಧ್ವನಿ ಎತ್ತಿದ್ದು, ಕರ್ನಾಟಕಕ್ಕೆ ಸೇರಲು ಒಲವು ತೋರುತ್ತಿದ್ದಾರೆ. ಕರ್ನಾಟಕ ಸರ್ಕಾರ ಅವರಿಗೆ ಎಲ್ಲ ರೀತಿಯ ಬೆಂಬಲ ನೀಡಬೇಕು' ಎಂದೂ ಒತ್ತಾಯಿಸಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ

ಸಿ.ಟಿ.ರವಿ ಕೋಮುವಾದಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸಿ.ಟಿ.ರವಿ ಕಮ್ಯುನಲ್ ಫೆಲೊ (ಕೋಮುವಾದಿ). ಅವನಿಗೆ ಜಾತ್ಯತೀತತೆ ಅರ್ಥವಾಗುವುದಿಲ್ಲ; ಸಂವಿಧಾನವೂ ಗೊತ್ತಿಲ್ಲ. ಹೀಗಾಗಿ ಅವನ ಹೇಳಿಕೆಗೆಲ್ಲ ನಾನು ಉತ್ತರ ಕೊಡಲ್ಲ' ಎಂದು ಸಿದ್ದರಾಮಯ್ಯ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಬಂದರೆ ಕೊಲೆ ಸುಲಿಗೆ ಜಾಸ್ತಿಯಾಗುತ್ತೆ' ಎಂಬ ಸಿ.ಟಿ.ರವಿ ಹೇಳಿಕೆಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

'ಶರಾವತಿ ಸಂತ್ರಸ್ತರ ವಿಚಾರದಲ್ಲಿ ಇಷ್ಟು ವರ್ಷಗಳಿಂದ ಕಾಂಗ್ರೆಸ್‌ನವರು ಏನು ಮಾಡುತ್ತಿದ್ದರು ಎಂದು ಸಚಿವ ಆರಗ ಜ್ಞಾನೇಂದ್ರ ಕೇಳಿದ್ದಾರೆ. 2008ರಿಂದ 2013ರವರೆಗೆ ಬಿಜೆಪಿ ಸರ್ಕಾರವೇ ಇತ್ತು. ಅವರು ಏನು ಮಾಡಿದ್ರು' ಎಂದು ಪ್ರಶ್ನಿಸಿದರು.

'ಮೂರು ವರ್ಷಗಳಿಂದ ಇವರೇ ಅಧಿಕಾರದಲ್ಲಿದ್ದಾರೆ. ಜಿಲ್ಲೆಯ ಯಡಿಯೂರಪ್ಪ ಮುಖ್ಯಮಂತ್ರಿಯೂ ಆಗಿದ್ದರಲ್ಲ. ಯಡಿಯೂರಪ್ಪ, ಈಶ್ವರಪ್ಪ ಇದೇ ಜಿಲ್ಲೆಯವರಲ್ವಾ, ಅವರು ಏನು ಮಾಡಿದ್ರು' ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, 'ಕೇಂದ್ರದ ಅನುಮತಿ ಬೇಡ ಎಂದು ತಿಳಿದು ನಾವು ಭೂಮಿ ಮಂಜೂರಾತಿ ಮಾಡಿದ್ದೆವು. ಅರಣ್ಯ ಸಂರಕ್ಷಣಾ ಕಾಯ್ದೆಗೆ ಮೊದಲೇ ಭೂಮಿ ಕೊಡಲಾಗಿದೆ. ನರೇಂದ್ರ ಮೋದಿ ಪ್ರಧಾನಿ ಆಗಿ ಎಂಟು ವರ್ಷ ಆಯ್ತು. ಭೂಮಿ ಮಂಜೂರಾತಿಗೆ ಅನುಮತಿ ಪಡೆಯಲು ಎಂಟು ವರ್ಷ ಬೇಕಾ' ಎಂದು ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು.

ತುಷ್ಟೀಕರಣವೇ ಸಿದ್ದರಾಮಯ್ಯ ಸೆಕ್ಯುಲರಿಸಂ: ಸಿ.ಟಿ.ರವಿ ತಿರುಗೇಟು

ಬೆಂಗಳೂರು: 'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಪ್ರಕಾರ ಮುಸ್ಲಿಮರ ತುಷ್ಟೀಕರಣವೇ ಸೆಕ್ಯುಲರಿಸಂ, ಹಿಂದೂಗಳನ್ನು ಹೀಗಳೆಯುವುದು ಮತ್ತು ಅವರ ಭಾವನೆಗೆ ಧಕ್ಕೆ ತರುವುದೇ ಸೆಕ್ಯುಲರಿಸಂ ಆಗಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ತಮ್ಮನ್ನು ಕೋಮುವಾದಿ ಎಂದು ಸಿದ್ದರಾಮಯ್ಯ ಟೀಕಿಸಿದ್ದಕ್ಕೆ ತಿರುಗೇಟು ನೀಡಿರುವ ರವಿ, 'ತಾವೊಬ್ಬ ಭಾರಿ ಸೆಕ್ಯುಲರ್‌ವಾದಿ ಎಂದು ಅವರು ಪೋಸ್ ಕೊಡುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

ಬೆಳ್ಳಿ ತೇರು...

ವಿಜಯಪುರ ಜಿಲ್ಲೆ ಸಿಂದಗಿ ಪಟ್ಟಣದ ಗಚ್ಚಿನಮಠದ ಆವರಣದಲ್ಲಿನ ವೀರಭದ್ರೇಶ್ವರ ಹಾಗೂ ಭದ್ರಕಾಳಿ ಅಮ್ಮನವರ ಜಾತ್ರಾ ಮಹೋತ್ಸವದ ನಿಮಿತ್ತ ಮಂಗಳವಾರ ಮಹಿಳೆಯರು ಬೆಳ್ಳಿ ತೇರು ಎಳೆದರು. ಸಾರಂಗಮಠದ ಪೀಠಾಧ್ಯಕ್ಷ ಡಾ.ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ಅವರ ಸಂಕಲ್ಪದಂತೆ ಕಳೆದ ಐದು ವರ್ಷಗಳಿಂದ ಈ ಜಾತ್ರಾ ಮಹೋತ್ಸವದಲ್ಲಿ ಮಹಿಳೆಯರೇ ಬೆಳ್ಳಿ ತೇರು ಎಳೆಯುತ್ತ ಬಂದಿದ್ದಾರೆ.

ಪಾತ್ರಕ್ಕೆ ತಮಿಳು ನಟ ವಿಜಯ್ ಸೇತುಪತಿ ?

ತೆರೆ ಮೇಲೆ ಸಿದ್ದರಾಮಯ್ಯ ಜೀವನಗಾಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಆಟಗಾರರು, ಸಿನಿಮಾ ತಾರೆಯರು, ರಾಜಕೀಯ ವ್ಯಕ್ತಿಗಳು, ಸಾಧಕರ ಬಯೋಪಿಕ್ (ಜೀವನಗಾಥೆ) ತೆರೆ ಮೇಲೆ ಬಂದು ಕಮಾಲ್ ಮಾಡಿವೆ. ಇದೀಗ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಜೀವನಗಾಥೆಯನ್ನು ತೆರೆಗೆ ತರಲು ಇಬ್ಬರು ಸದ್ದಿಲದೆ ಯತ್ನಿಸುತ್ತಿದ್ದಾರೆ. ಈ ಪೈಕಿ, ಒಬ್ಬರು ಸಿದ್ದರಾಮಯ್ಯ ಪಾತ್ರವನ್ನು ತಮಿಳಿನ ಸೂಪರ್ ಸ್ಟಾರ್ ವಿಜಯ್ ಸೇತುಪತಿ ಮೂಲಕ ತೆರೆಗೆ ತರಲು ಮುಂದಾಗಿದ್ದಾರೆ.

ಕನಕಗಿರಿ ಮಾಜಿ ಶಾಸಕ ಶಿವರಾಜ ತಂಗಡಗಿ ಮತ್ತು ಹಲವು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಮೈಸೂರಿನ ನಾಗರಾಜು ಎಂಬುವರು ಸಿದ್ದರಾಮಯ್ಯ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಬಯೋಪಿಕ್ ಮಾಡಲು ಅನುಮತಿ ನೀಡಬೇಕೆಂದು ಚರ್ಚೆ ನಡೆಸಿದ್ದಾರೆ ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ



ಸೇತುಪತಿ

ಗಂಗಾವತಿಯ ಸತ್ಯರತ್ನ ಎಂಬ ಹೊಸ ನಿರ್ದೇಶಕನ ಜೊತೆ ಸಿದ್ದರಾಮಯ್ಯ ಅವರನ್ನು ತಂಗಡಗಿ ಭೇಟಿ ಮಾಡಿದ್ದರು. ವಿಜಯ್ ಸೇತುಪತಿ ಮೂಲಕ ಸಿದ್ದರಾಮಯ್ಯ ಅವರ ಪಾತ್ರ ಮಾಡಿಸಲು ಬಯಸಿರುವ ಬಗ್ಗೆಯೂ ಅವರು ಮಾತುಕತೆ ನಡೆಸಿದ್ದಾರೆ. ಅಲ್ಲದೆ, ನಾಗರಾಜು ಕೂಡಾ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ತಮ್ಮ ಬಯಕೆ ವ್ಯಕ್ತಪಡಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ ಎಲ್ಲವನ್ನೂ ಗಮನಿಸಿದ ಬಳಿಕ ಬಯೋಪಿಕ್ ಬಗ್ಗೆ ತಿಳಿಸುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದೂ ಮೂಲಗಳು ಹೇಳಿವೆ.

ಈ ಬಗ್ಗೆ ಶಿವಮೊಗ್ಗದಲ್ಲಿ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ನನ್ನ ಬಯೋಪಿಕ್‌ನ ಸಿನಿಮಾ ಮಾಡುತ್ತೇನೆ ಎಂದು ಕನಕಗಿರಿ ಕ್ಷೇತ್ರದವರು ಬಂದಿದ್ದರು. ನಾನು ಚಿತ್ರದಲ್ಲಿ ನಟಿಸಲ್ಲ, ನನಗೆ ನಟನೆ ಬರಲ್ಲ' ಎಂದಿದ್ದಾರೆ.

ಚಿತ್ರದ ಬಗ್ಗೆ ಪ್ರತಿಕ್ರಿಯಿಸಿದ ತಂಗಡಗಿ, 'ಸಿದ್ದರಾಮಯ್ಯ ಅವರ ಬಯೋಪಿಕ್ ಅನ್ನು ತೆರೆ ಮೇಲೆ ತರಬೇಕೆಂಬ ಆಸೆಯಿಂದ ನನ್ನ ಕ್ಷೇತ್ರದ ಕೆಲವು ಯುವಕರು ನನ್ನನ್ನು ಸಂಪರ್ಕಿಸಿದ್ದರು. ಈ ಉದ್ದೇಶದಿಂದ ಅವರು 'ಎಂ.ಎಸ್ ಕ್ರಿಯೇಷನ್ಸ್' ಎಂಬ ನಿರ್ಮಾಣ ಸಂಸ್ಥೆಯನ್ನೂ ನೋಂದಾಯಿಸಿಕೊಂಡಿದ್ದಾರೆ. ನಿರ್ದೇಶಕ ಸತ್ಯರತ್ನ ಎಂಬ ಹೊಸಬ. ನಾವು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೇವೆ. ಅವರು (ಸಿದ್ದರಾಮಯ್ಯ) ಚುನಾವಣೆಯನ್ನು ಪ್ರಸ್ತಾಪಿಸಿ ಸಮಯ ಕೇಳಿದ್ದಾರೆ. ಆದರೆ, ಅವರ ಅನುಮತಿ ಪಡೆಯಲು ಡಿ. 6, 7 ಅಥವಾ 8ರಂದು ಮತ್ತೊಮ್ಮೆ ಭೇಟಿ ಮಾಡುತ್ತೇವೆ' ಎಂದರು.

1. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿ ಸುಬ್ರಹ್ಮಣ್ಯ ಸ್ವಾಮಿ ಷಷ್ಠಿ ಮಹಾ ರಥೋತ್ಸವ ಅಪಾರ ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು. 2. ಬೆಂಗಳೂರಿನ ವಿ.ವಿ.ಪುರದ ಸಜ್ಜನ್ ರಾವ್ ವೃತ್ತದಲ್ಲಿ ಶ್ರೀವಲ್ಲಿ ದೇವಸೇನಾ ಸಮೇತ ಶ್ರೀ ಸುಬ್ರಮಣ್ಯಸ್ವಾಮಿ ಬ್ರಹ್ಮ ರಜತ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಕಣ್ಣು ಹಾಯಿಸಿದಷ್ಟೂ ಭಕ್ತರು ಕಂಡರು. 3. ಮಂಗಳೂರು ಸಮೀಪದ ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಷಷ್ಠಿ ಅಂಗವಾಗಿ ಬ್ರಹ್ಮರಥೋತ್ಸವ ನಡೆಯಿತು – ಪ್ರಜಾವಾಣಿ ಚಿತ್ರಗಳು

ವಿಚಾರಣೆ: ಮತ್ತೊಂದು ದಿನಾಂಕ ನಿಗದಿಗೆ ಮನವಿ

ಅನಾರೋಗ್ಯ: ಆನ್‌ಲೈನ್ ಹೇಳಿಕೆಗೆ ಸಿದ್ಧ– 'ಒಡನಾಡಿ' ಪರಶುರಾಮ್

ಪ್ರಜಾವಾಣಿ ವಾರ್ತೆ

ಮೈಸೂರು: 'ಮುರುಘಾ ಶರಣರ ಪ್ರಕರಣದಿಂದ ಹಿಂದೆ ಸರಿಯಲು ₹ 3 ಕೋಟಿ ಆಮಿಷ ಕುರಿತ ನನ್ನ ಹೇಳಿಕೆಗೆ ಸಾಕ್ಷ್ಯಧಾರ ನೀಡಲು ಇದೇ 29ರಂದು ಚಿತ್ರದುರ್ಗಕ್ಕೆ ಬರುವಂತೆ ತಿಳಿಸಲಾಗಿದ್ದು, ಬೆನ್ನುನೋವಿನ ಕಾರಣ ದೂರ ಪ್ರಯಾಣ ಮಾಡಲು ಆಗಿಲ್ಲ. ಹೀಗಾಗಿ, ಗೂಗಲ್ ಮೀಟ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಹೇಳಿಕೆ ಪರಿಗಣಿಸಬೇಕು' ಎಂದು ಒಡನಾಡಿ ಸಂಸ್ಥೆ ನಿರ್ದೇಶಕ ಎಂ.ಎಲ್. ಪರಶುರಾಮ್ ಅವರು ಚಿತ್ರದುರ್ಗ ಪೊಲೀಸರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

ಎಂ.ಎಲ್. ಪರಶುರಾಮ್

'ಚಿತ್ರದುರ್ಗದ ಸಂತ್ರಸ್ತ ಬಾಲಕಿಯರ ಕುರಿತು ವಿಚಾರಣೆಗೆ ಹಾಜರಾಗುವಂತೆ ನ.30ರಂದು ಮಕ್ಕಳ ಕಲ್ಯಾಣ ಸಮಿತಿ ಪತ್ರ ಬರೆದಿದೆ. ಎರಡೂ ವಿಚಾರಗಳೂ ಮುಖ್ಯವಾಗಿವೆ. ಈಗಾಗಲೇ ಫೋನ್ ಮೂಲಕ ನನ್ನ ಅನಾರೋಗ್ಯವನ್ನು ಗಮನಕ್ಕೆ ತಂದಿದ್ದೇನೆ. ಮತ್ತೊಂದು ದಿನಾಂಕ ನಿಗದಿಗೊಳಿಸಬೇಕು. ಇಲ್ಲವೇ, ಆನ್‌ಲೈನ್ ಮೂಲಕ ಹೇಳಿಕೆ ಪಡೆಯಬೇಕು' ಎಂದು ಕೋರಿದ್ದಾರೆ.

'ಚಿತ್ರದುರ್ಗ ಪೊಲೀಸರು ಮೈಸೂರಿಗೇ ಬಂದು ಹೇಳಿಕೆ ಪಡೆಯಬಹುದು. ಅಂತೆಯೇ ಈ ಪ್ರಕರಣಗಳಲ್ಲಿ ಜೀವ ಬೆದರಿಕೆ ಇರುವುದರಿಂದ ವಿಶೇಷ ಅವಕಾಶ ಕಲ್ಪಿಸಿದರೆ, ಸಿಆರ್‌ಪಿಸಿ ಕಲಂ 164 ಅಡಿ ನ್ಯಾಯಾಧೀಶರ ಮುಂದೆ ಹೇಳಿಕೆಗಳನ್ನು ನೀಡಲು ಸಿದ್ಧನಿದ್ದೇನೆ. ಸೂಕ್ತ ಸ್ಥಳ ನಿಗದಿಗೊಳಿಸಿ ಹಾಗೂ ರಕ್ಷಣೆ ಒದಗಿಸಬೇಕು' ಎಂದೂ ಅವರು ಪ್ರತಿಕ್ರಿಯಿಸಿದ್ದಾರೆ.

ಜೀವ ಬೆದರಿಕೆ: ಕಾರ್ಯಪ್ಪ ದೂರು

ಮೈಸೂರು: ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರಿಗೆ ಶಿವಮೊಗ್ಗದಿಂದ ನ.28ರಂದು ಬೆದರಿಕೆ ಪತ್ರ ಬಂದಿದ್ದು, ಇಲ್ಲಿನ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ಅವರು ಅಂದೇ ದೂರು ನೀಡಿದ್ದಾರೆ.

'ಸಾಯುವ, ಕೊಲೆ ಆಗುವ ಹಂತ ತಲುಪಿದ್ದೀರ. ನೀವು ನಂಬಿರುವ ದೇವರು ಸಹ ಉಳಿಸುವುದಿಲ್ಲವೆಂದು ಬೆದರಿಕೆ ಒಡ್ಡಿದ್ದಾರೆ. ಪತ್ರವು ಶ್ರೀರಾಂ, ಕೋಟ ರಸ್ತೆ, ಬ್ರಾಹ್ಮಣ ಬೀದಿ, ಶಿವಮೊಗ್ಗ ಜಿಲ್ಲೆ -ವಿಳಾಸದಿಂದ ಬಂದಿದೆ. ಅಲ್ಲಿಂದಲೇ ಇನ್ನೊಂದು ಅಂಚೆ ಕಾರ್ಡ್ ಕೂಡ ಬಂದಿದೆ. ಜೀವಹಾನಿಯಾಗುವ ಸಂಭವವಿರುವುದರಿಂದ ರಕ್ಷಣೆ ನೀಡಿ' ಎಂದು ದೂರಿನಲ್ಲಿ ಕೋರಿದ್ದಾರೆ.

'ಮಹೇಶಚಂದ್ರ ಗುರು ಅವರು ಅವಾಚ್ಯ ಶಬ್ದಗಳಿಂದ ನನ್ನನ್ನು ನಿಂದಿಸಿ, ಆ ವಿಡಿಯೊವನ್ನು ಪ್ರಸಾರ ಮಾಡುತ್ತಿದ್ದು, ಅದರಿಂದ ಪ್ರಚೋದನೆಗೊಂಡ ಕೆಲವರು ಕೂಡ ನಿಂದಿಸಲು ತೊಡಗಿದ್ದಾರೆ' ಎಂದಿದ್ದಾರೆ.

'ಜ.18ರಿಂದ ಅಖಿಲ ಭಾರತ ಸಿಐಟಿಯು ಸಮ್ಮೇಳನ'

ಕಲಬುರಗಿ: 'ಬಂಡವಾಳಶಾಹಿಗಳ ಓಲೈಕೆ ಬದಿಗಿರಿಸಿ ಜನಪರ ನೀತಿಗಳನ್ನು ಜಾರಿಗೆ ತರುವಂತೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನವನ್ನು ಬರುವ ಜನವರಿ 18 ರಿಂದ 22ರವರೆಗೆ ಬೆಂಗಳೂರಿನಲ್ಲಿ ನಡೆಸಲಾಗುವುದು' ಎಂದು ಸಿಐಟಿಯು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದರು.

ಅಕ್ಷರ ದಾಸೋಹ ನೌಕರರ 5ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಮಂಗಳವಾರ ಇಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿ, 'ಬೃಹತ್ ಸಮಾವೇಶ ನಡೆಸಿ ಬಡವರ, ಮಹಿಳೆಯರ, ಅಸಂಘಟಿತ ಕಾರ್ಮಿಕರ ಪರ ಧ್ವನಿ ಎತ್ತಲಾಗುವುದು' ಎಂದರು.

ಸಂಕ್ಷಿಪ್ತ ಸುದ್ದಿ

'ಅಧ್ಯಾತ್ಮವಿಲ್ಲದೇ ಧರ್ಮ ಇಲ್ಲ'

ಪ್ರಯಾಗ್‌ರಾಜ್ (ಪಿಟಿಐ): 'ಸಮಾಜ ಮುಖಿ ಕಾರ್ಯಗಳನ್ನು ಮಾಡಿದ ಎಲ್ಲ ಮಹಾಪುರುಷರು ಆಧ್ಯಾತ್ಮಿಕತೆಯನ್ನು ಆಧಾರವಾಗಿಟ್ಟುಕೊಂಡು ಕೆಲಸ ಮಾಡಿದ್ದು, ಆಧ್ಯಾತ್ಮಿಕತೆ ಇಲ್ಲದೇ ಧರ್ಮ ಇರುವುದಿಲ್ಲ' ಎಂದು ತೋರಿಸಿ-ಕೊಟ್ಟಿದ್ದಾರೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಮಂಗಳವಾರ ಹೇಳಿದರು.

ಅಲೋಪಿಬಾಗ್‌ನಲ್ಲಿ ಸ್ವಾಮಿ ವಾಸುದೇವಾನಂದ ಸರಸ್ವತಿ ಅವರ ಆಶ್ರಮದಲ್ಲಿ ಆಯೋಜಿಸಿದ್ದ 'ಆರಾಧನಾ ಮಹೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿ, 'ಸಂತರು, ಮಹಾತ್ಮರು, ಸನ್ಯಾಸಿಗಳು ಅಥವಾ ಮಹಾಪುರುಷರಾದ ರವೀಂದ್ರನಾಥ ಟ್ಯಾಗೋರ್, ಗಾಂಧೀಜಿ ಅಥವಾ ಅಂಬೇಡ್ಕರ್ ಅವರು ಧರ್ಮವಿಲ್ಲದೆ ಏನೂ ಆಗುವುದಿಲ್ಲ ಎಂದು ಹೇಳಿದ್ದಾರೆ. ಧರ್ಮ ಎಂದರೆ ಎಲ್ಲರನ್ನೂ ಒಟ್ಟಿಗೆ ಸೇರಿಸುವುದು, ಮೇಲೆತ್ತುವುದಾಗಿದೆ. ಧರ್ಮದ ಹುಟ್ಟು ಅಧ್ಯಾತ್ಮದಿಂದ ಆಗಿದೆ' ಎಂದರು.

ಆಫ್ತಾಬ್ ಮಂಪರು ಪರೀಕ್ಷೆಗೆ ಅನುಮತಿ

ನವದೆಹಲಿ: ಶ್ರದ್ಧಾ ವಾಲಕರ್ ಹತ್ಯೆ ಪ್ರಕರಣದ ಆರೋಪಿ ಆಫ್ತಾಬ್ ಅಮೀನ್ ಪೂನಾವಾಲಾನನ್ನು ಮಂಪರು ಪರೀಕ್ಷೆಗೆ ಒಳಪಡಿಸಲು ದೆಹಲಿ ಪೊಲೀಸರಿಗೆ ಇಲ್ಲಿನ ನ್ಯಾಯಾಲಯ ಅನುಮತಿ ನೀಡಿದೆ ಎಂದು ಪೂನಾವಾಲಾ ಪರ ವಕೀಲ ಅಭಿನಾಶ್ ಕುಮಾರ್ ಮಂಗಳವಾರ ತಿಳಿಸಿದ್ದಾರೆ.

ಮಂಪರು ಪರೀಕ್ಷೆಗಾಗಿ ಪೂನಾವಾಲಾನನ್ನು ಡಿಸೆಂಬರ್ 1 ಮತ್ತು 5ರಂದು ರೋಹಿಣಿಯಲ್ಲಿ-ರುವ ವಿಧಿವಿಜ್ಞಾನ ಪ್ರಯೋಗಾಲ-ಯಕ್ಕೆ ಕೊಂಡೊಯ್ಯಲು ಅನುಮತಿ ಕೋರಿ ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ನ್ಯಾಯಾಲಯವು ಒಪ್ಪಿಗೆ ನೀಡಿದೆ ಎಂದೂ ವಿವರಿಸಿದ್ದಾರೆ.

ಆಫ್ತಾಬ್ ಇದ್ದ ಪೊಲೀಸ್ ವಾಹನದ ಮೇಲೆ ರೋಹಿಣಿ ವಿಧಿವಿಜ್ಞಾನ ಪ್ರಯೋಗಾಲಯದ ಹೊರಗೆ ಸೋಮವಾರ ಸಂಜೆ ದುಷ್ಕರ್ಮಿಗಳು ಆಯುಧಗಳನ್ನು ಹಿಡಿದು ದಾಳಿ ನಡೆಸಿದ್ದರು. ಬಳಿಕ ಅಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಗಡಿ ಹಿಂಸಾಚಾರ: ಮಾಹಿತಿ ಪಡೆದ ಎನ್‌ಎಚ್‌ಆರ್‌ಸಿ

ಗುವಾಹಟಿ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ಗಡಿಯಲ್ಲಿನ ವಿವಾದಾತ್ಮಕ ಪ್ರದೇಶದಲ್ಲಿ ಈಚೆಗೆ ಹಿಂಸಾಚಾರ ಸಂಭವಿಸಿ ಆರು ಜನರು ಮೃತಪಟ್ಟ ಘಟನೆ ಕುರಿತು ಮಾಹಿತಿ ಪಡೆಯಲಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ತಿಳಿಸಿದೆ.

'ಹಿಂಸಾಚಾರದ ಕುರಿತು ಮೇಘಾಲಯ ಸಿ.ಎಂ ಕಾನ್ರಾಡ್ ಕೆ. ಸಂಗ್ಮಾ ಅವರಿಂದ ಹೇಳಿಕೆ ಪಡೆಯಲಾಗಿದೆ' ಎಂದು ಎನ್‌ಎಚ್‌ಆರ್‌ಸಿ ತಿಳಿಸಿದೆ.

ವಿವಾದಿತ ಪ್ರದೇಶಗಳಲ್ಲಿ ಹಿಂ-ಸಾಚಾರಗಳನ್ನು ತಡೆಯುವ ನಿಟ್ಟಿನಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಸಲಹೆ ನೀಡಲು ಕೇಂದ್ರ ಗೃಹ ಸಚಿವಾಲಯ ಮತ್ತು ಅಸ್ಸಾಂ ಮುಖ್ಯ ಕಾರ್ಯದರ್ಶಿಗೆ ಎನ್‌ಎಚ್‌ಆರ್‌ಸಿ ಸೂಚಿಸಿದೆ ಮತ್ತು ಪ್ರತಿಕ್ರಿಯೆ ನೀಡಲು 2 ವಾರಗಳ ಗಡುವನ್ನೂ ನೀಡಿದೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/39/2022–23 ದಿನಾಂಕ: 28–11–2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **06–12–2022ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/3282/ಅಡ್ವಟೋರ್/2022–23

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಒ.ಪಿ. ಸಂಖ್ಯೆ.06/2021/Vol-II/1865 ದಿನಾಂಕ: 28–11–2022

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮೆರಿಟ್ ಆರ್ಡರ್ ಡಿಸ್ಪೆಚ್ ಮತ್ತು ವಿದ್ಯುತ್ ಖರೀದಿ ವೆಚ್ಚದ ಆಪ್ಟಿಮೈಸೇಶನ್) ವಿನಿಯಮಗಳು, 2022 ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ.ಆ) ಹೊರಡಿಸಲು ಪ್ರಸ್ತಾವಿಸಿರುವ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮೆರಿಟ್ ಆರ್ಡರ್ ಡಿಸ್ಪೆಚ್ ಮತ್ತು ವಿದ್ಯುತ್ ಖರೀದಿ ವೆಚ್ಚದ ಆಪ್ಟಿಮೈಸೇಶನ್) ವಿನಿಯಮಗಳು, 2022, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 23–11–2022ರಂದು ಪ್ರಕಟವಾಗಿದೆ. ಕ.ವಿ.ನಿ.ಆ. ದ ವೆಬ್‌ಸೈಟ್: **https://kerc.karnataka.gov.in** ನಲ್ಲಿ ಕರಡು ವಿನಿಯಮಗಳು ಲಭ್ಯವಿದೆ. ಆಸಕ್ತರು ಕರಡು ವಿನಿಯಮಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, ಆಯೋಗದ ಕಾರ್ಯದರ್ಶಿಯವರಿಗೆ ಮೇಲೆ ತಿಳಿಸಿದಂತ ಕರಡು ವಿನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗೆ ಕಳುಹಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/3281/2022–23

MADHYA PRADESH HOUSING & INFRASTRUCTURE DEVELOPMENT BOARD

NOTICE INVITING BID

Tender No.2022_MPHID_234523 Dated : 25.11.2022

Request for Proposal for Selection of Developer for "Redevelopment of Government Land and Construction of Government Facilities Located at District Seoni (M.P.) – Phase-II under Re-Densification Scheme of GoMP".

Government of Madhya Pradesh through MP Housing & Infrastructure Development Board (MPHIDB) intends to carry out **"Redevelopment of Government Land parcels admeasuring to 9645.22 Sqmt.** (CLP1 – 1858.70 sqm near Bahubali Square, CLP2 – 428.90 sqm near main bus stand, CLP3-4500 sqm near private bus stand and CLP4 – 2857.62 sqm near old sabji mandi behind Nagar Palika Office) and **Construction of Government Facilities Located at Seoni District (M.P.) (Phase II) under Re-Densification Scheme of GoMP"** ("The Project/Government Facilities"). MPHIDB intends to appoint a Developer for Construction and Development of these Government Facilities.
The selected Developer will be provided "Land-Ownership Rights" on Compensatory Land Parcel (CLP) admeasuring to 9645.22 Sqm. The prospective bidders have to quote the Premium for "Land-Ownership Rights" on the CLP. The Bidder quoting Highest Premium will be selected as Developer for the Project. The selected Developer has to pay the quoted Premium partly in monetary terms and partly in kind in the form of cost of construction of the Government Facilities as per provisions of the RFP Document.
The MPHIDB invites bids from reputed & experienced entities for Selection of a Developer for the Project, through transparent online bidding process. RFP documents can be downloaded and purchased from GoMP online **e-tender portal https://mptenders.gov.in**.

RFP Document Cost	Rs. 0.50 Lacs + GST
Online sale of RFP Document	29.11.2022 to 29.12.2022
Bid Security	Rs 13.93 Lacs
Estimated Cost of Government Facilities	Rs. 2211 Lakhs (Excluding GST)
Reserve Price of CLP	Rs. 2786 Lacs
Pre-bid meeting	06.12.2022 at 14:00 Hrs.

1. Complete bids can be submitted **Online by 28.12.2022 up to 17.30 Hrs.** through the online e-tender portal **https://mptenders.gov.in.** 2. Amendments to NIT, if any, would be published on website only, and not in newspaper.

mphidb mphidb

Visit us : www.mphousing.in
M.P. Madhyam/107463/2022

Dy. Housing Commissioner
Circle-Jabalpur

ಕರ್ನಾಟಕ ಸರ್ಕಾರ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕಾರ್ಯಯೋಜನೆ ಮತ್ತು ಭೂಮಾಪನ, ಚಿಕ್ಕಮಗಳೂರು

ಪ್ರಕಟಣೆ ಸಂಖ್ಯೆ:ಬಜೆಟ್:ಸಿಆರ್–04/2022–23 ದಿನಾಂಕ : 24–11–2022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಚಿಕ್ಕಮಗಳೂರು ಕಾರ್ಯಯೋಜನೆ ಮತ್ತು ಭೂ ಮಾಪನ ವೃತ್ತ ವ್ಯಾಪ್ತಿಯಿಂದ ಹೊನ್ನಾವರ ವಿಭಾಗದ ಅರಣ್ಯ ಪ್ರದೇಶಗಳಲ್ಲಿ ಇನ್ವೆಂಟರಿ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ 24–11–2022 ರಂದು ಇ–ಟೆಂಡರ್ ಆಹ್ವಾನಿಸಲಾಗಿದ್ದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 09–12–2022 ರಂದು ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು: **http://eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದುಕೊಂಡು ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರನ್ನು ಸಲ್ಲಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಹಾಗೂ
ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು
ಕಾರ್ಯಯೋಜನೆ ಮತ್ತು ಭೂ ಮಾಪನ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರು ಕಛೇರಿ

ಸಾರಿಗೆ ಇಲಾಖೆ TRANSPORT DEPARTMENT

1ನೇ ಮಹಡಿ, ಟಿ.ಟಿ.ಎಂ.ಸಿ., ಕಟ್ಟಡ, ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು.

ಸಂ:ಸಾಆ/ಪೀಕ–3/ಪಿಆರ್–84/2022–23 ದಿನಾಂಕ : 28.11.2022

ಇ–ಟೆಂಡರ್ ಪ್ರಕಟಣೆ

ರಾಯಚೂರಿನಲ್ಲಿ ಸ್ಥಾಪಿಸಲಾಗಿರುವ ವಿದ್ಯುನ್ಮಾನ ಚಾಲನಾ ಪರೀಕ್ಷಾ ಪಥಕ್ಕೆ ಸೆನ್ಸಾರ್ ಅಳವಡಿಕೆ ಹಾಗೂ ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ್ ಮೂಲಕ ವೆಬ್‌ಸೈಟ್ ವಿಳಾಸ : **www.eproc.karnataka.gov.in**ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು / ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು **ದೂರವಾಣಿ ಸಂಖ್ಯೆ : 080–25501216 /25501227** ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ : 20.12.2022ರ ಮತ್ತು ಸಮಯ ಸಂಜೆ 5.00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ : 080–22235176 ಯನ್ನು ಸಂಪರ್ಕಿಸಬಹುದು.**

ಸಹಿ/–
ಸಾರಿಗೆ ಆಯುಕ್ತರು ಪರವಾಗಿ
ಬೆಂಗಳೂರು.

ವಾಸಾಸಂಇ/ವಾಪ್ರ/3284/ಎಸ್‌ಎಸ್‌ಸಿ/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ–582118, Phone : 08371 – 262174
e-mail : eeslidmdg@gmail.com

Ref No. KNNL/EE/SLIS/MDG/2022-23/ 1176 Date: 24-11-2022

SHORT TERM TENDER NOTIFICATION (ONLY THROUGH "*e-Procurement*" SYSTEM)

ಸಿಂಗಟಾಲೂರು ಏತ ನೀರಾವರಿ ಯೋಜನೆ ವಿಭಾಗದಡಿ ಬರುವ ಕೊಪ್ಪಳ ವಿಧಾನಸಭಾ ಕ್ಷೇತ್ರದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಉಲ್ಲೇಖ (1) ರನ್ವಯ ಕಾಮಗಾರಿ **Indent No- 34602** ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ಗಳನ್ನು "e-Procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಸದರಿ ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **28.11.2022** ರ ನಂತರ *"eproc.karnataka.gov.in"*, ಈ ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: **09.12.2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ–01, ಮುಂಡರಗಿ

ವಾಸಾಸಂಇ/ಗದಗ/ಎಂ.ಸಿ.ಎ/458/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಮುಖ್ಯ ಇಂಜನೀಯರವರ ಕಚೇರಿ,ಕೃಭಾಜನಿನಿ, ಆಣೆಕಟ್ಟು ವಲಯ, ಆಲಮಟ್ಟಿ– 586201, ಬ.ಬಾಗೇವಾಡಿ ತಾಲೂಕು, ವಿಜಾಪೂರ ಜಿಲ್ಲೆ
ದೂರವಾಣಿ:08426–281038 (ಕ) 281046 (ಸಿ), ಫ್ಯಾಕ್ಸ್:281600,
Email:cedam_almatti@yahoo.co.in

ಸಂ.ಕೃಭಾಜನಿನಿ/ಮುಇಂಆ/ಉಗ್ರಾಣ/2022–23/3807 ದಿನಾಂಕ:28.11.2022

ದರಗಳನ್ನು ಸಲ್ಲಿಸುವ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು/ಆಲಮಟ್ಟಿ ಇವರ ಪರವಾಗಿ ಉಪ ಮುಖ್ಯ ಅಭಿಯಂತರರು, ಮುಖ್ಯ ಇಂಜನೀಯರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ವಲಯ, ಆಲಮಟ್ಟಿ ಇವರು ಉತ್ಪಾದಕರು ಅಥವಾ ಉತ್ಪಾದಕ ಸಂಸ್ಥೆಯಿಂದ ನೊಂದಾಯಿತಿಯಾಗಿರುವ ಸಂಸ್ಥೆಗಳಿಂದ "Supply of Computer Stationary for the year 2022-23 for the Offices coming under Dam Zone, Almatti" ಅಂದರೆ ಈ ವಲಯದಡಿ ಬರುವ ಉಪ ವಿಭಾಗ / ವಿಭಾಗ / ವೃತ್ತ ಕಛೇರಿಗಳಿಗೆ ದಿನನಿತ್ಯದ ಕಾರ್ಯಗಳಿಗಾಗಿ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್, ಝರಾಕ್ಸ್ ಮಶಿನ್‌ಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಪೂರೈಸುವ ಕುರಿತಂತೆ ಕಡಿಮೆ ದರಗಳನ್ನು ಪಡೆಯುವುದು ಅವಶ್ಯವಿರುವುದರಿಂದ, ಇ–ಪೋರ್ಟಲ್‌ನಲ್ಲಿ ಇಂಡೆಂಟ್ ಸಂ.KBJNL/2022-2023/IND71 ಮೂಲಕ ಕರೆಯಲಾದ ಸಾಮಗ್ರಿಗಳಿಗೆ ಕಡಿಮೆ ದರಗಳನ್ನು ನಮೂದಿಸಿ ಸಲ್ಲಿಸುವುದು. ಸದರಿ ವಿಷಯದ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಇ–ಪೋರ್ಟಲ್ ಮೂಲಕ ಪಡೆಯುವುದು ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ: 08426 281038 ಗೆ ಸಂಪರ್ಕಿಸುವುದು ಹಾಗೂ ಭರ್ತಿಗೊಳಿಸಿದ ಕಡಿಮೆ ದರಗಳನ್ನು ದಿನಾಂಕ: 14.12.2022 ಸಾಯಂಕಾಲ 5:00 ಘಂಟೆ ಒಳಗೆ ಇ–ಪೋರ್ಟಲ್ ಮೂಲಕ ಸಲ್ಲಿಸುವುದು.

ಸಹಿ/– ಉಪ ಮುಖ್ಯ ಇಂಜನೀಯರರು,
ಕೃಭಾಜನಿನಿ, ಆಣೆಕಟ್ಟು ವಲಯ, ಆಲಮಟ್ಟಿ.

ವಾಸಾಸಂಇ/ವಿಜಯಪುರ/616/ಎಂಸಿಎ/2022–23

IN THE COURT OF II ADDITIONAL DISTRICT AND SESSION JUDGE AT MYSURU

Com. O. S. Number: 79/ 2022

PLAINTIFF:INDUSTRIAL DEVELOPMENT BANK OF INDIA LIMITED,
A company Incorporated and Registered under Companies Act Of 1956 (1 of 1956) and a Banking Company within the Section 5 (c) Under the Banking Regulation Act Of 1949 carrying the business of Banking and having its Registered Office at IDBI Tower, WTC Complex,Cuffee Parade, Mumbai 400 005 And a Branch Office at Kuvempunagara Branch Mysuru by its Assistant General Manager

V/s.

DEFENDANT/S :
1.Smt. Bhavani N.S. Wife of Sri. R. Ravindra Aged about 51years Prop. M/ s. Adithya Enterprises No.335/1, A & B Block,Navilu Road,Kuvempunagara Mysuru 570 023
2.Sri Ravindra.R. - Guarantor Son of Sri. Changi Ramachandra Rao S. Aged about 56 years At No.335, A & B Block,Navilu Road, Kuvempunagara Mysuru 570 023

PUBLIC NOTICE

That the plaintiff-bank has filed the above suit as against the Defendant no.1 and 2 for recovery of a sum of Rs.12,14,076/- and future interest and cost of the suit.
The summons issued by this court and also through R.P.A.D., to the Defendant no.1 and 2 was returned un-served. Now the above case is posted for taking of steps by substituted service. Hence you are hereby summoned to appear before the court in person or through a pleader duly Instructed and be able answer all material questions relating to the above said suit, On the **16th day of December 2022 at 11.00 A.M.** In default of your appearance before the court on the said date the suit will proceed further treating you ex-parte.
Given under my hand and seal on this the **4th day of November 2022**

Place: Mysuru **By Order of the Court**
Date: 03.11.2022

Sri.P.K.Ponnaiah,
Sri B.P.Vignesh
Sri Naveen Ponnaiah
Advocates,
No.1662/1A, 1st Floor,
Radhamadhav Connect
Narayana Shastry Road,
Beside Secure Hospital,
Mysuru - 570 004

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಚೇರಿ : ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ. ಬಸ್ ಡಿಪೋ ಹತ್ತಿರ, ಬೆಂಗಳೂರು-560 038. ದೂರವಾಣಿ: 080-25196124-129 ಫ್ಯಾಕ್ಸ್: 25196110
ಇ–ಮೇಲ್: **info@kuidfc.com**, ವೆಬ್‌ಸೈಟ್ : **www.kuidfc.com**

ನಂ. ಕನಮೂಸೌಅಹನಿನಿ/ಆಡಳಿತ/ಸ.ವ್ಯ.ಅ/ವಾಹನ/ಟೆಂಡರ್/ಸಿ.ಆರ್–254/2022–23/2ನೇ ಕರೆ ದಿನಾಂಕ: 29.11.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ–2ನೇ ಕರೆ

ಕನಮೂಸೌಅಹನಿನಿ ಸಂಸ್ಥೆಯಲ್ಲಿ ತಿಂಗಳ ಆಧಾರದಲ್ಲಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆಯಲು ಅಧಿಕೃತ ಸೇವಾದಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್‌ಸೈಟ್ ವಿಳಾಸ: **https://www.eproc.karnataka.gov.in** ರಲ್ಲಿ **ದಿನಾಂಕ 30.11.2022 ರಿಂದ 14.12.2022 ರ ಸಂಜೆ 5.30 ಗಂಟೆಯ ವರೆಗೆ** ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–75:2022–23 ದಿನಾಂಕ: 24.11.2022

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಅರ್ಹತೆ ಹೊಂದಿದ ಪ್ರತಿಷ್ಠಿತ ಏಜೆನ್ಸಿಯವರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಏಜೆನ್ಸಿಯವರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿ ಹೆಸರು: ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ: ಲೆಕ್ಕಶೀರ್ಷಿಕೆ – 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ: 1) ಲೋಕೋಪಯೋಗಿ ಇಲಾಖೆ, ಶಿವಮೊಗ್ಗ ವೃತ್ತದ ಅಡಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ಭೂ ಯೋಜನೆ ಸಮೀಕ್ಷೆಯನ್ನು (ಲ್ಯಾಂಡ್ ಪ್ಲಾನ್ ಸರ್ವೆ) ಸಿದ್ಧಪಡಿಸುವುದು–3ನೇ ಹಂತ. (ವ.ಇಂ. 156833). ಅಂದಾಜು ಮೊತ್ತ: ರೂ. 120.00 ಲಕ್ಷಗಳು.

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ: 12.12.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 13.12.2022 ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 14.12.2022 ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 16.12.2022 ಸಮಯ 11:00.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 721: DIPR/CTA/MCA/2022-23 ಸಹಿ/– ಕಾರ್ಯಪಾಲಕ ಅಭಿಯಂತರರು

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017,
ದೂರವಾಣಿ: 9448994705 ಇ–ಮೇಲ್: gmpurc@cescmysore.org ವೆಬ್‌ಸೈಟ್:www.cescmysore.org

ಸಂಖ್ಯೆ:ಚಾವಿಸನಿನಿ/ಪ್ರ.ವ್ಯ(ಖ)/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–2/2022–23/17091 ದಿನಾಂಕ: 28.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಯು ಈ ಕೆಳಕಂಡ ಅಲ್ಪಾವಧಿ ಟೆಂಡರ್‌ಗಳಿಗೆ ಅರ್ಹ ಬಿಡ್ಡುದಾರರಿಂದ ಸ್ವರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರಸಂ	ಸೇವೆಯ ವಿವರ	ವಿಚಾರಣಾ ಸಂಖ್ಯೆಗಳು
1	DBFOOT ಆಧಾರದ ಮೇಲೆ ಸೆಸ್ಕ್‌ನ ತಾತ್ಕಾಲಿಕ ಸ್ಥಾವರಗಳಿಗೆ ಸ್ಮಾರ್ಟ್ ಪೂರ್ವ ಪಾವತಿಸಿದ ಮೀಟರ್‌ಗಳನ್ನು ಸ್ಥಾಪಿಸಲು ಟೆಂಡರ್ ಆಹ್ವಾನಿಸಿದೆ.	ಸಿ2–5395/Call–2/09–11–2022
2	ಚಾವಿಸನಿನಿಗೆ ಪರಿವರ್ತಕ ತೈಲ ಪೂರೈಸಲು	ಸಿ2–5399/Call–2/15–11–2022
3	ಚಾವಿಸನಿನಿಗೆ ಲೈಟ್‌ನಿಂಗ್ ಅರೆಸ್ಟರ್ ಪೂರೈಸಲು	ಸಿ2–5446/28–11–2022
4	ಚಾವಿಸನಿನಿಗೆ ರಾಬಿಟ್ ಎ.ಸಿ.ಎಸ್.ಆರ್ ವಾಹಕ ಸರಬರಾಜು ಮಾಡುವ ಕುರಿತು	ಸಿ2–5447/28–11–2022

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://www.eproc.karnataka.gov.in** ನಲ್ಲಿ **ದಿನಾಂಕ:30–11–2022**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ **080–46010000/22631200/68948777**ಗೆ ಅಥವಾ ಇ–ಮೇಲ್:**support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ)
ಚಾವಿಸನಿನಿ, ಮೈಸೂರು

DIPR/MYS/KAVITA/715/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು

ಸಂ.: ಕರಾನಿ/ಕಾನಿಅ/ಬೆಂ/ಕಿಅ/552/2022–23 ದಿನಾಂಕ: 29.11.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂ: 08, 26, 27 & 28/2022–23

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತಿಗೆದಾರರುಗಳು ಇ–ಆಡಳಿತರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಪ್ರಕಟಣೆಯ ಸಂ.	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ	ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ)
1	ಗೌರಿಬಿದನೂರು ಬಸ್–ಘಟಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಯಂತ್ರೋಪಕರಣಗಳೊಂದಿಗೆ ನಿರ್ಮಿಸುವುದು. (4ನೇ ಕರೆ)	08/2022–23	17.86	44,650.00	1&1/2 (45 ದಿನಗಳು)
2	ಮಾಲೂರು ಬಸ್ ಘಟಕಕ್ಕೆ (ಹಾಳಾದ ಭಾಗ) ಸುತ್ತುಗೋಡೆ ನಿರ್ಮಿಸುವುದು.	26/2022–23	43.50	85,000.00	03
3	ಕೋಲಾರ ಪ್ರಾದೇಶಿಕ ಸಾರಿಗೆ ಕಛೇರಿಯ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥವನ್ನು ನಿರ್ಮಿಸುವುದು.	27/2022–23	754.50	11,32,000.00	12
4	ದೇವನಹಳ್ಳಿ ಪ್ರಾದೇಶಿಕ ಸಾರಿಗೆ ಕಛೇರಿಯ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥವನ್ನು ನಿರ್ಮಿಸುವುದು.	28/2022–23	669.10	10,04,000.00	12
5	ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿ ರೋಡ್ ಹಂಪ್‌ಗಳನ್ನು ಅಳವಡಿಸುವುದು. (ಶೇಕಡಾವಾರು ದರ ಟೆಂಡರ್)	29/2022–23	4.60	11,500.00	01

ಹೆಚ್ಚಿನ ವಿವರಗಳನ್ನು **https://eproc.karnataka.gov.in** ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ದಿ.: **05.12.2022**ರ ನಂತರ ಪಡೆದುಕೊಳ್ಳಬಹುದು.

ಸಹಿ/–, ಕಾರ್ಯನಿರ್ವಾಹಕ ಅಭಿಯಂತರರು
ಕಾಮಗಾರಿ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/ಎಲ್‌ಸಿ/3286/2022–23

ಆಸ್ಪತ್ರೆಯಿಂದಲೇ ಪೊಲೀಸರಿಗೆ ಮಾಹಿತಿ: ಒಂದು ಗಂಟೆಯಲ್ಲಿ ಆರೋಪಿಗಳ ಸೆರೆ

ಅತ್ಯಾಚಾರ: 'ರ್‍ಯಾಪಿಡೊ' ಸವಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಆ್ಯಪ್ ಆಧಾರಿತ 'ರ್‍ಯಾಪಿಡೊ' ಬೈಕ್ ಸೇವೆ ಬಳಸಿದ್ದ ಯುವತಿಯನ್ನು ಅಪಹರಿಸಿ, ಕ್ರೂರವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಲಾಗಿದ್ದು, ಈ ಸಂಬಂಧ 'ರ್‍ಯಾಪಿಡೊ' ಬೈಕ್ ಸವಾರ ಸೇರಿ ಮೂವರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'22 ವರ್ಷದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು, ಸ್ಥಳೀಯ ನಿವಾಸಿ ಶಹಾಬುದ್ದೀನ್ (23), ಈತನ ಸ್ನೇಹಿತ ಅರಾಫತ್ ಷರೀಫ್ (22) ಹಾಗೂ ಇವರಿಬ್ಬರ 22 ವರ್ಷದ ಸ್ನೇಹಿತೆಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೋಣನಕುಂಟೆ ನಿವಾಸಿ ಶಹಾಬುದ್ದೀನ್, ರ್‍ಯಾಪಿಡೊ ಬೈಕ್ ಸವಾರ. ಹುಳಿಮಾವು ನಿವಾಸಿ ಅರಾಫತ್, ಮೊಬೈಲ್ ದುರಸ್ತಿ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಇವರಿಬ್ಬರೂ ಅಪರಾಧ ಹಿನ್ನೆಲೆಯುಳ್ಳವರು. ಈ ಹಿಂದೆಯೂ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಇವರ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು' ಎಂದು ತಿಳಿಸಿವೆ.

ಅರಾಫತ್ ಷರೀಫ್

ಶಹಾಬುದ್ದೀನ್

'ಆರೋಪಿಗಳ ಸ್ನೇಹಿತೆಯಾಗಿದ್ದ 22 ವರ್ಷದ ಯುವತಿ, ಸಂತ್ರಸ್ತೆ ಮೇಲೆ ನಡೆದಿದ್ದ ಅತ್ಯಾಚಾರ ಕೃತ್ಯವನ್ನು ಮುಚ್ಚಿಟ್ಟು ಸುಳ್ಳು ಹೇಳಿದ್ದರು. ಪೊಲೀಸರ ದಿಕ್ಕು ತಪ್ಪಿಸಲು ಯತ್ನಿಸಿದ್ದರು. ಹೀಗಾಗಿ, ಸ್ನೇಹಿತೆಯನ್ನೂ ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಕರಣದ ವಿವರ: 'ಕೇರಳದ 22 ವರ್ಷದ ಯುವತಿ ಕೆಲ ವರ್ಷಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು. ಬಿಟಿಎಂ ಲೇಔಟ್‌ನ ಕಂಪನಿಯೊಂದರಲ್ಲಿ ಅರೆಕಾಲಿಕ ಕೆಲಸ ಮಾಡುತ್ತಿದ್ದರು. ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ. 25ರಂದು ರಾತ್ರಿ ಬಿಟಿಎಂ ಲೇಔಟ್‌ನಲ್ಲಿರುವ ಸ್ನೇಹಿತರ ಮನೆಗೆ ಹೋಗಿದ್ದ ಸಂತ್ರಸ್ತೆ ಔತಣಕೂಟದಲ್ಲಿ ಪಾಲ್ಗೊಂಡಿದ್ದರು. ಅದೇ ಸಂದರ್ಭದಲ್ಲೇ ಅವರು ಮದ್ಯ ಕುಡಿದಿದ್ದರೆಂದು ಗೊತ್ತಾಗಿದೆ. ಪಾನಮತ್ತ ಸ್ಥಿತಿಯಲ್ಲಿದ್ದ ಸಂತ್ರಸ್ತೆ, ನೀಲಾದ್ರಿನಗರದಲ್ಲಿರುವ ಮನೆಗೆ ಹೊರಟಲು ಸಜ್ಜಾಗಿದ್ದರು. ತಾವಿದ್ದ ಸ್ಥಳದಿಂದಲೇ ಮೊಬೈಲ್ ಆ್ಯಪ್ ಮೂಲಕ 'ರ್‍ಯಾಪಿಡೊ' ಬೈಕ್ ಕಾಯ್ದಿರಿಸಿದ್ದರು.'

'ಬೈಕ್ ಸವಾರ ಶಹಾಬುದ್ದೀನ್, ಸ್ಥಳಕ್ಕೆ ಬಂದು ಸಂತ್ರಸ್ತೆಯನ್ನು ಹತ್ತಿಸಿಕೊಂಡು ಹೊರಟಿದ್ದ. ನೀಲಾದ್ರಿ ನಗರದಲ್ಲಿ ನಿಗದಿತ ಸ್ಥಳ ಸಮೀಪದಲ್ಲಿರುವಾಗ ಬೈಕ್ ನಿಲ್ಲಿಸಿದ್ದ ಆರೋಪಿ, ಸಂತ್ರಸ್ತೆಗೆ ತಿಳಿಯದಂತೆ ಅರಾಫತ್‌ಗೆ ಕರೆ ಮಾಡಿ ಕರೆಸಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇಬ್ಬರೂ ಆರೋಪಿಗಳು ಸಂತ್ರಸ್ತೆಯನ್ನು ಬೈಕ್‌ನಲ್ಲೇ ಅಪಹರಿಸಿದ್ದರು. ಸ್ನೇಹಿತೆ ಒಂಟಿಯಾಗಿ ವಾಸವಿದ್ದ ಮನೆಗೆ ಕರೆದೊಯ್ದಿದ್ದರು. ಮನೆಯ ಕೊಠಡಿಯಲ್ಲಿ ಸಂತ್ರಸ್ತೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಕ್ರೂರವಾಗಿ ವರ್ತಿಸಿ ಅಂಗಾಂಗಗಳಿಗೂ ಗಾಯ ಮಾಡಿದ್ದರು. ವಿಷಯ ಗೊತ್ತಿದ್ದರೂ ಆರೋಪಿತ ಯುವತಿ ಮೌನವಾಗಿದ್ದರು' ಎಂದು ಹೇಳಿವೆ.

ಆಸ್ಪತ್ರೆಯಿಂದ ಮಾಹಿತಿ: 'ಕೃತ್ಯದಿಂದ ಅಸ್ವಸ್ಥಗೊಂಡಿದ್ದ ಸಂತ್ರಸ್ತೆ, ಅದೇ ಸ್ಥಿತಿಯಲ್ಲಿ ಮನೆಗೆ ಹೋಗಿದ್ದರು. ಮರುದಿನ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋಗಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಅತ್ಯಾಚಾರ ನಡೆದಿರುವುದಾಗಿ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆಸ್ಪತ್ರೆಯಿಂದಲೇ ಪೊಲೀಸರಿಗೆ ಮಾಹಿತಿ ಲಭ್ಯವಾಗಿತ್ತು. ತ್ವರಿತವಾಗಿ ಸಂತ್ರಸ್ತೆಯಿಂದ ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಒಂದು ಗಂಟೆಯಲ್ಲೇ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಂತ್ರಸ್ತೆ ಆರೋಗ್ಯದಲ್ಲೂ ಚೇತರಿಕೆ ಕಂಡುಬಂದಿದೆ' ಎಂದು ಮೂಲಗಳು ಹೇಳಿವೆ.

'ರ್‍ಯಾಪಿಡೊ'ಗೆ ನೋಟಿಸ್

'ಗ್ರಾಹಕರ ಸುರಕ್ಷತೆಗಾಗಿ ಯಾವುದೇ ಪರಿಶೀಲನೆ ನಡೆಸದೇ ಆರೋಪಿ ಶಹಾಬುದ್ದೀನ್‌ನನ್ನು ರ್‍ಯಾಪಿಡೊ ಬೈಕ್ ಸವಾರ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಈ ಸಂಬಂಧ ಕಂಪನಿ ಪ್ರತಿನಿಧಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಮುಂಬರುವ ದಿನಗಳಲ್ಲಿ ಈ ರೀತಿಯಾಗದಂತೆ ಎಚ್ಚರಿಕೆ ಸಹ ನೀಡಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆ್ಯಪ್ ಮೂಲಕ ಆರೋಪಿ, ಅರ್ಜಿ ಸಲ್ಲಿಸಿದ್ದ. ಅದನ್ನು ಸ್ವೀಕರಿಸಿದ್ದ ಕಂಪನಿ, ಪೊಲೀಸ್ ಪರಿಶೀಲನೆ ಪತ್ರವಿಲ್ಲದೇ ನೇಮಕಾತಿ ಮಾಡಿತ್ತು. ಇದೇ ಆರೋಪಿ, ಹಲವು ಕಡೆ ಮತ್ತಷ್ಟು ಅಪರಾಧ ಕೃತ್ಯ ಎಸಗಿರುವ ಮಾಹಿತಿಯೂ ಇದೆ' ಎಂದು ಮಾಹಿತಿ ನೀಡಿವೆ.

> **ಇದೊಂದು ಗಂಭೀರ ಪ್ರಕರಣ. ಆದಷ್ಟು ಬೇಗ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿ, ಆರೋಪಿಗಳಿಗೆ ಶಿಕ್ಷೆ ಕೊಡಿಸಲು ಪ್ರಯತ್ನಿಸಲಾಗುವುದು**
>
> **ಸಿ.ಕೆ. ಬಾಬಾ,** ಆಗ್ನೇಯ ವಿಭಾಗ ಡಿಸಿಪಿ

ಸುದ್ದಿ 2 ನಿಮಿಷ

ಬಿಎಂಟಿಸಿ: 'ಸಹಾಯಹಸ್ತ' ಪಾಸ್ ಬದಲಿಗೆ ಸ್ಮಾರ್ಟ್‌ಕಾರ್ಡ್

ಬೆಂಗಳೂರು: ಬಿಎಂಟಿಸಿಯು (ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ) ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸಹಯೋಗದೊಂದಿಗೆ ನೋಂದಾಯಿತ ಕಾರ್ಮಿಕರಿಗೆ 'ಸಹಾಯಹಸ್ತ' ಬಸ್ ಪಾಸ್‌ಗಳ ಬದಲಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಿದೆ.

ಸಂಸ್ಥೆಯ ಬಸ್ ನಿಲ್ದಾಣಗಳು ಹಾಗೂ ಘಟಕಗಳಲ್ಲಿ ಡಿಸೆಂಬರ್ 1ರಿಂದ ಪಾಸ್ ವಿತರಣೆಯನ್ನು ಸ್ಥಗಿತಗೊಳಿಸಿ, ಸೇವಾಸಿಂಧು ಪೋರ್ಟಲ್ ಮೂಲಕ ಬೆಂಗಳೂರು ಒನ್ ಕೇಂದ್ರಗಳಲ್ಲಿ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ನೋಂದಣಿಯಾಗಿರುವ ಗುರುತಿನ ಚೀಟಿಯೊಂದಿಗೆ ಆಧಾರ್ ಕಾರ್ಡ್ ಪ್ರತಿಯನ್ನು ಸ್ಮಾರ್ಟ್‌ಕಾರ್ಡ್ ಪಡೆಯುವವರು ತೋರಿಸಬೇಕು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬಸವಲಿಂಗಪ್ಪ ಸಮುದಾಯ ಭವನ: ಕಾಮಗಾರಿ ಪರಿಶೀಲನೆ

ಯಲಹಂಕ: ಬ್ಯಾಟರಾಯನಪುರದಲ್ಲಿ ₹ 4 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮಾಜಿ ಸಚಿವ ದಿವಂಗತ ಬಿ.ಬಸವಲಿಂಗಪ್ಪ ಸಮುದಾಯ ಭವನದ ಕಾಮಗಾರಿಯನ್ನು ಶಾಸಕ ಕೃಷ್ಣಬೈರೇಗೌಡ ಪರಿಶೀಲಿಸಿದರು.

'ನಿಗದಿತ ರಾಜಕಾರಣಕ್ಕೆ ಪ್ರತಿರೋಧದಂತಿದ್ದ ಬಸವಲಿಂಗಪ್ಪ ಅವರು, ಈ ಭಾಗದ ಶಾಸಕರಾಗಿ, ಸಚಿವರಾಗಿ ಮಾಡಿರುವ ಸಾಧನೆ ಅಪಾರವಾದುದು. ಅವರ ನೆನಪಿಗೆ ತಕ್ಕಂತೆ ಜನರು ಸದಾ ಸ್ಮರಿಸಬೇಕೆಂಬ ಉದ್ದೇಶದಿಂದ ಅವರ ಹೆಸರಿನಲ್ಲಿ ಸುಮಾರು 16 ಸಾವಿರ ಚದರಡಿ ವಿಸ್ತೀರ್ಣದಲ್ಲಿ 3 ಅಂತಸ್ತಿನ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುತ್ತಿದೆ' ಎಂದು ತಿಳಿಸಿದರು.

'ಒಂದು ಅಂತಸ್ತಿನ ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಎರಡು ಅಂತಸ್ತಿನ ಕಾಮಗಾರಿ ಪ್ರಗತಿಯಲ್ಲಿದೆ. ಸ್ಥಳೀಯ ಕೆಲವು ಸಂಘಗಳನ್ನು ತೆಗೆದುಕೊಂಡು ಕಾಮಗಾರಿ ಪೂರ್ಣಗೊಳಿಸುವ ಹಿನ್ನೆಲೆಯಲ್ಲಿ ಸ್ಥಳೀಯರು ಮತ್ತು ಅಧಿಕಾರಿಗಳೊಂದಿಗೆ ಪರಿಶೀಲಿಸಲಾಗಿದೆ. ಬೇಗ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ. ಮೊದಲ ಮಹಡಿಯಲ್ಲಿ ಸಭೆ-ಸಮಾರಂಭ ಹಾಗೂ ಎರಡನೇ ಮಹಡಿಯಲ್ಲಿ ಸ್ಥಳೀಯರಿಗೆ ಕಡಿಮೆ ಖರ್ಚಿನಲ್ಲಿ ಶುಭ ಸಮಾರಂಭ ನಡೆಸಲು ಅನುಕೂಲವಾಗಲಿದೆ' ಎಂದರು.

ಬಿಬಿಎಂಪಿ ಮಾಜಿ ಸದಸ್ಯ ಪಿ.ವಿ.ಮಂಜುನಾಥ್ ಬಾಬು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೋಮಶೇಖರ್, ಸಹಾಯಕ ಎಂಜಿನಿಯರ್ ಸಂತೋಷ್, ಕಾಂಗ್ರೆಸ್ ಮುಖಂಡರಾದ ಎನ್.ಶ್ರೀನಿವಾಸಯ್ಯ, ಎ.ಮುನಿರಾಜು, ಕೆ.ಗೌರೀಶ್, ಕೃಷ್ಣ, ದಿವ್ಯಾ ರಾಜಣ್ಣ, ಸುಮಿತ್ರಮ್ಮ ಉಪಸ್ಥಿತರಿದ್ದರು.

ದೇವದಾಸಿ ಪದ್ಧತಿಗೆ ಸಾಮಾಜಿಕ ಸ್ಥಿತಿ ಕಾರಣ: ಗೊಲ್ಲಹಳ್ಳಿ ಶಿವಪ್ರಸಾದ್

ಬೆಂಗಳೂರು: 'ದೇವದಾಸಿಯಂಥ ಅನಿಷ್ಟ ಪದ್ಧತಿಗೆ ನಮ್ಮ ಸಾಮಾಜಿಕ ಸ್ಥಿತಿ ಮತ್ತು ಸಮಾಜವೇ ಕಾರಣ. ಈ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರಜಾಪ್ರಭುತ್ವದ ಪರಿಮಿತಿಯೊಳಗೆ ಹೋರಾಟದ ಮೂಲಕ ಹಕ್ಕುಗಳನ್ನು ಪಡೆಯಬೇಕು' ಎಂದು ಸಾಹಿತಿ, ಗಾಯಕ ಗೊಲ್ಲಹಳ್ಳಿ ಶಿವಪ್ರಸಾದ್ ಕರೆ ನೀಡಿದರು.

ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್ ಮಂಗಳವಾರ ಆಯೋಜಿಸಿದ್ದ 'ದೇವದಾಸಿ ಪದ್ಧತಿಯನ್ನು ತಡೆಯುವಲ್ಲಿ ನಾಗರಿಕ ಸಂಸ್ಥೆಗಳ ಪಾತ್ರ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವದಾಸಿ ತಾಯಂದಿರ ಮಕ್ಕಳಿಗೆ ತಮ್ಮ ತಂದೆಯ ಹೆಸರನ್ನು ಹೇಳಿಕೊಳ್ಳಲು ಸಾಧ್ಯವಾಗದಿರುವುದು ನೋವಿನ ಸಂಗತಿ. ಈ ಅನಿಷ್ಟ ಪದ್ಧತಿಗೆ ಸಿಲುಕಿರುವವರನ್ನು ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಸರ್ಕಾರದ್ದೇ ಆಗಿರುತ್ತದೆ. ದೇವದಾಸಿಯರ ಪುನರ್ ಸಮೀಕ್ಷೆ ನಡೆಸಿ, ಅವರಿಗೆ ಪುನರ್ವಸತಿ ಕಲ್ಪಿಸಬೇಕು' ಎಂದರು.

ಅಕ್ಕಮಹಾದೇವಿ ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ವಿಭಾಗದ ನಿಕಟಪೂರ್ವ ಮುಖ್ಯಸ್ಥೆ ಆರ್. ಸುನಂದಮ್ಮ, ಕಾನೂನಿನ ಪ್ರಕಾರ ದೇವದಾಸಿ ಪದ್ಧತಿಗೆ ತಮ್ಮ ಮಕ್ಕಳನ್ನು ತಳ್ಳಿದ ಹೆತ್ತವರೇ ಆರೋಪಿಗಳಾಗುತ್ತಿದ್ದಾರೆಯೇ ಹೊರತು ಈ ವ್ಯವಸ್ಥೆಗೆ ಮೂಲ ಕಾರಣಕರ್ತರಾಗಿರುವವರು ಸುಲಭವಾಗಿ ಬಚಾವಾಗುತ್ತಿದ್ದಾರೆ. ತಂದೆಯ ಹೆಸರು ಬರೆಸಲು ಹೋದವರು ಜೀವಭಯದಿಂದ ನಲುಗುವ ಪರಿಸ್ಥಿತಿ ಇದೆ' ಎಂದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ, ದೇವದಾಸಿ ತಾಯಂದಿರ ಮಕ್ಕಳ ಭವಿಷ್ಯ ಹಾಗೂ ತಂದೆಯ ಹೆಸರು ಬರೆಸುವ ಸಮಸ್ಯೆ ಪರಿಹಾರಕ್ಕಾಗಿ ಶೀಘ್ರದಲ್ಲೇ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವರ ಜತೆ ಚರ್ಚೆ ನಡೆಸುವುದಾಗಿ ಭರವಸೆ ನೀಡಿದರು.

ಭಾರತ ಟೆರ್ ಡ್ರೆಸ್ ಹೋಮ್ಸ್‌ನ ರಾಷ್ಟ್ರೀಯ ನಿರ್ವಾಹಕ ತಂಗ ಪೆರುಮಾಳ್ ಪೋನ್ ಪಾಂಡಿ, ಸ್ನೇಹ ಸಂಸ್ಥೆಯ ನಿರ್ದೇಶಕ ರಾಮಾಂಜನೇಯ, ಫೆವಾರ್ಡ್ ಕೆ ಅಧ್ಯಕ್ಷ ಮಹೇಶ್ಚಂದ್ರ ಗುರು, ವೆಂಕಟೇಶ್ ಟಿ., ಡಾ.ವಾಸುದೇವ ಶರ್ಮಾ ಎನ್.ವಿ., ಜೆನ್ನಿಫರ್, ಏಜೆಕಿಲ್ ಕನವಳ್ಳಿ ಹಾಜರಿದ್ದರು.

ಯೂನಿಯನ್ ಬ್ಯಾಂಕ್ ಎಟಿಎಂ ಘಟಕದ ಭದ್ರತಾ ಸಿಬ್ಬಂದಿ ಬಂಧನ

ಐಷಾರಾಮಿ ಜೀವನಕ್ಕೆ ₹19.96 ಲಕ್ಷ ಕದ್ದ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಟಿಎಂ ಘಟಕದಲ್ಲಿದ್ದ ₹19.96 ಲಕ್ಷ ಕದ್ದಿದ್ದ ಆರೋಪದಡಿ ದೀಪಂಕರ್ ನಮಸುಂದರ್ (23) ಎಂಬುವವರನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೀಪಂಕರ್

'ಅಸ್ಸಾಂನ ದೀಪಂಕರ್, ಕೃತ್ಯ ನಡೆದಿದ್ದ ಯೂನಿಯನ್ ಬ್ಯಾಂಕ್‌ನ ಎಟಿಎಂ ಘಟಕದಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ. ಹಣ ಕದ್ದು ತಲೆಮರೆಸಿಕೊಂಡಿದ್ದ ಈತನನ್ನು ಅಸ್ಸಾಂನ ಸ್ವಂತ ಗ್ರಾಮದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಟಿಎಂ ಘಟಕದಿಂದ ಕದ್ದಿದ್ದ ₹19.96 ಲಕ್ಷ ಪೈಕಿ ₹ 14.20 ಲಕ್ಷವನ್ನು ಮಾತ್ರ ಜಪ್ತಿ ಮಾಡಲಾಗಿದೆ. ಉಳಿದ ಹಣವನ್ನು ಆರೋಪಿ, ಐಷಾರಾಮಿ ಜೀವನಕ್ಕಾಗಿ ಹಲವೆಡೆ ಖರ್ಚು ಮಾಡಿದ್ದಾನೆ. ಅದರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಮದುವೆ, ಐಷಾರಾಮಿ ಜೀವನಕ್ಕಾಗಿ ಕೃತ್ಯ: 'ಆರೋಪಿ ದೀಪಂಕರ್ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಏಜೆನ್ಸಿಯೊಂದರ ಮೂಲಕ ಭದ್ರತಾ ಸಿಬ್ಬಂದಿ ಕೆಲಸಕ್ಕೆ ಸೇರಿದ್ದ. ಯೂನಿಯನ್ ಬ್ಯಾಂಕ್‌ನ ವಿಲ್ಸನ್ ಗಾರ್ಡನ್ ಶಾಖೆಯ 13ನೇ ಅಡ್ಡರಸ್ತೆಯಲ್ಲಿರುವ ಎಟಿಎಂ ಘಟಕಕ್ಕೆ ನಿಯೋಜಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ವರ್ಷದ ಹಿಂದೆಯಷ್ಟೇ ಆರೋಪಿಗೆ ಯುವತಿಯೊಬ್ಬರ ಪರಿಚಯವಾಗಿತ್ತು. ನಂತರ, ಇಬ್ಬರೂ ಪ್ರೀತಿಸಲಾರಂಭಿಸಿದ್ದರು. ಮದುವೆಯಾಗಲೂ ತೀರ್ಮಾನಿಸಿದ್ದರು. ಆದರೆ, ಮದುವೆಗೆ ಹಣ ಹೊಂದಿಸುವುದು ಹೇಗೆ ಎಂಬ ಚಿಂತೆ ಆರೋಪಿಗೆ ಕಾಡಲಾರಂಭಿಸಿತ್ತು. ಎಟಿಎಂ ಘಟಕಕ್ಕೆ ಹಣ ತುಂಬಲು ಬರುತ್ತಿದ್ದ ಸಿಬ್ಬಂದಿ ಜೊತೆ ಆತ್ಮೀಯತೆ ಹೊಂದಿದ್ದ ಆರೋಪಿ, ಘಟಕದ ಪಾಸ್‌ವರ್ಡ್ ತಿಳಿದುಕೊಂಡಿದ್ದ. ಅದೇ ಪಾಸ್‌ವರ್ಡ್ ಬಳಸಿಕೊಂಡು ಘಟಕದಲ್ಲಿರುವ ಹಣ ಕದ್ದೊಯ್ದು, ಮದುವೆಯಾಗಿ ಐಷಾರಾಮಿ ಜೀವನ ನಡೆಸಲು ಸಂಚು ರೂಪಿಸಿದ್ದ' ಎಂದು ತಿಳಿಸಿದರು.

'ಘಟಕದಲ್ಲಿ ಯಾರೂ ಇಲ್ಲದ ಸಮಯದಲ್ಲಿ ಎಟಿಎಂ ಘಟಕದ ಬಾಗಿಲು ತೆರೆದು, ಹಣವನ್ನೆಲ್ಲ ಬ್ಯಾಗ್‌ನಲ್ಲಿ ತುಂಬಿಕೊಂಡು ಅಸ್ಸಾಂನಲ್ಲಿರುವ ತನ್ನೂರಿಗೆ ಹೋಗಿದ್ದ' ಎಂದು ಪೊಲೀಸರು ತಿಳಿಸಿದರು.

ನೆಟ್‌ವರ್ಕ್ ಸಿಗದ ಕಾಡಿನಲ್ಲಿ ವಾಸ: 'ಹಣದ ಸಮೇತ ಸ್ವಂತ ಊರಿಗೆ ಹೋಗಿದ್ದ ಆರೋಪಿ, ತನ್ನನ್ನು ಪೊಲೀಸರು ಬಂಧಿಸಲು ಬರಬಹುದೆಂದು ಅಂದುಕೊಂಡಿದ್ದ. ಹೀಗಾಗಿ, ಸ್ವಂತ ಊರಿನಿಂದ ಸುಮಾರು 160 ಕಿ.ಮೀ. ದೂರದಲ್ಲಿ ಕಾಡಿನಲ್ಲಿದ್ದ ಸಣ್ಣ ಗ್ರಾಮವೊಂದರಲ್ಲಿ ವಾಸವಿದ್ದ. ಆ ಗ್ರಾಮದಲ್ಲಿ ಮೊಬೈಲ್ ನೆಟ್‌ವರ್ಕ್ ಸಹ ಬರುತ್ತಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಸ್ನೇಹಿತರ ಜೊತೆ ಸೇರಿ ನಿತ್ಯವೂ ಮದ್ಯದ ಪಾರ್ಟಿ ಮಾಡಿ, ಸ್ವಲ್ಪ ಹಣ ಖರ್ಚು ಮಾಡಿದ್ದ. ಅಸ್ಸಾಂನ ಪ್ರೇಕ್ಷಣೀಯ ಸ್ಥಳವೊಂದರಲ್ಲಿ ಹೋಟೆಲ್ ತೆರೆಯಲು ಆರೋಪಿ ಸಿದ್ಧತೆ ಸಹ ನಡೆಸುತ್ತಿದ್ದ. ಆರೋಪಿಯನ್ನು ಬಂಧಿಸಲು ವಿಶೇಷ ತಂಡ, ಅಸ್ಸಾಂಗೆ ಹೋಗಿತ್ತು. ಆರೋಪಿ ಅಡಗಿದ್ದ ಕಾಡಿನಲ್ಲಿದ್ದ ಗ್ರಾಮಕ್ಕೆ ಹೋಗಿ ವಿಶೇಷ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿತು' ಎಂದು ತಿಳಿಸಿದರು.

ಪ್ರಕರಣ ದಾಖಲು, ಶವಪರೀಕ್ಷೆ ವರದಿ ಆಧರಿಸಿ ತನಿಖೆ

ಕ್ರೆಡೆಲ್ ಅಧಿಕಾರಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ವಿಜಯನಗರ ನಿವಾಸಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕೆಆರ್‌ಇಡಿಎಲ್) ಯೋಜನಾ ನಿರ್ದೇಶಕ ಡಿ.ಕೆ.ದಿನೇಶ್ ಕುಮಾರ್ (51) ಅನುಮಾನಾಸ್ಪದವಾಗಿ ಮೃತಪಟ್ಟಿರುವುದಾಗಿ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ದೊಡ್ಡಪಾಳ್ಯ ಗ್ರಾಮದ ದಿನೇಶ್ ಅವರು ಬೆಂಗಳೂರಿನ ನಾಗರಬಾವಿಯಲ್ಲಿರುವ ಕೆಆರ್‌ಇಡಿಎಲ್ ಅಧಿಕಾರಿಯಾಗಿದ್ದರು.

'ದಿನೇಶ್ ಭಾನುವಾರ ರಾತ್ರಿ ಊಟ ಮಾಡಿ ಮಲಗಿದ್ದು, ಸೋಮವಾರ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ನೋಡಿ ಮೂರ್ಛೆ ಹೋದೆವು ಎಂದು ಪತ್ನಿ ಹೇಳಿಕೆ ನೀಡಿದ್ದಾರೆ. ಅಸ್ವಸ್ಥಗೊಂಡಿರುವ ಪತ್ನಿ ಹಾಗೂ ಪುತ್ರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಡಿ.ಕೆ.ದಿನೇಶ್ ಕುಮಾರ್

'ದಿನೇಶ್ ಅವರ ಮೃತದೇಹ ಊದಿಕೊಂಡಿದ್ದು, ದೇಹದ ಹಲವು ಭಾಗಗಳಿಗೆ ಗಾಯಗಳಾಗಿದ್ದವು. ಮೃತಪಟ್ಟು 14 ಗಂಟೆಗಿಂತಲೂ ಹೆಚ್ಚಿನ ಸಮಯವಾಗಿರುವುದಾಗಿ ವೈದ್ಯರು ತಿಳಿಸಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಮೃತರ ಪತ್ನಿ ನೀಡಿದ ಹೇಳಿಕೆಗೂ, ವೈದ್ಯರ ನೀಡಿರುವ ಹೇಳಿಕೆಗೂ ಹೊಂದಾಣಿಕೆಯಾಗುತ್ತಿಲ್ಲ. ಮೃತಪಟ್ಟಿರುವ ಕಾರಣ ಹಾಗೂ ಸಮಯವನ್ನು ಪತ್ನಿ ಹೇಳುತ್ತಿಲ್ಲ. ಕೌನ್ಸಲಿಂಗ್ ಮಾಡುವಂತೆ ಖಾಸಗಿ ಆಸ್ಪತ್ರೆ ವೈದ್ಯರಿಗೆ ಸೂಚಿಸಲಾಗಿದೆ. ಶವಪರೀಕ್ಷೆ ವರದಿ ಆಧರಿಸಿ ತನಿಖೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದಿನೇಶ್ ಅವರದು ಸಹಜ ಸಾವಲ್ಲ, ಕೊಲೆ' ಎಂದು ಆರೋಪಿಸಿ ಮೃತರ ಸೋದರ ಮಾವ ಎಚ್.ಎಂ.ನಾರಾಯಣ ಅವರು ಠಾಣೆಗೆ ದೂರು ನೀಡಿದ್ದಾರೆ. ಸಿಆರ್‌ಪಿಸಿ 174 (ಸಿ) ಅಡಿ ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದಲ್ಲಿ ಮೃತರ ಶವಪರೀಕ್ಷೆ ಮಂಗಳವಾರ ನಡೆಯಿತು. ಅಂತ್ಯಕ್ರಿಯೆ ಸ್ವಗ್ರಾಮ ದೊಡ್ಡಪಾಳ್ಯದಲ್ಲಿ ನಡೆಯಿತು.

ನಾಲ್ಕೈದು ಜನರಿಂದ ಕೃತ್ಯ: ಆರೋಪ

'ಶನಿವಾರ ಬೆಂಗಳೂರಿನಿಂದ ಬಂದ ದಿನೇಶ್ ಹೆಬ್ಬಾಳದಲ್ಲಿ ನಿರ್ಮಾಣವಾಗುತ್ತಿದ್ದ ಸ್ವಂತ ಕಟ್ಟಡವನ್ನು ಪರಿಶೀಲಿಸಿ, ಮನೆಗೆ ತೆರಳಿದ್ದು, ಅಲ್ಲಿಂದ ಯಾರಿಗೂ ಲಭ್ಯವಾಗಿಲ್ಲ. ಅವರ ಫೋನ್ ಕೂಡ ಶನಿವಾರ ರಾತ್ರಿಯಿಂದಲೇ ಬಂದ್ ಆಗಿದೆ. ಅವರು ಮೃತಪಟ್ಟಿರುವ ವಿಷಯ ಸೋಮವಾರ ಮಧ್ಯಾಹ್ನ 2 ಗಂಟೆಗೆ ನನಗೆ ಗೊತ್ತಾಗಿದೆ. ಮೃತದೇಹದಲ್ಲಿ ಗಾಯಗಳಾಗಿದ್ದವು. ತಲೆ ಹಾಗೂ ಮುಖಕ್ಕೆ ಪೆಟ್ಟು ಬಿದ್ದು, ರಕ್ತಸ್ರಾವವಾಗಿದೆ. ಅದು ಸಹಜ ಸಾವಲ್ಲ' ಎಂದು ದೂರುದಾರ ಎಚ್.ಎಂ.ನಾರಾಯಣ ಹೇಳಿದರು.

'ಪೊಲೀಸರ ಗಮನಕ್ಕೆ ತಾರದೇ ಮೃತದೇಹ ಆಸ್ಪತ್ರೆಗೆ ಸಾಗಿಸಲಾಗಿದೆ. ಆಸ್ಪತ್ರೆ ಆಂಬುಲೆನ್ಸ್ ಬಳಸದೇ ಖಾಸಗಿ ಆಂಬುಲೆನ್ಸ್ ಬಳಸಲಾಗಿದೆ. ಸಹಜ ಸಾವಾಗಿದ್ದರೆ, ಸಂಬಂಧಿಕರಿಗೆ ವಿಷಯ ತಿಳಿಸಬೇಕಿತ್ತು. ಅದನ್ನೂ ಪತ್ನಿ ಹಾಗೂ ಮಗ ಮಾಡಿಲ್ಲ. ಅಲ್ಲದೆ, ಮನೆ ಕೆಲಸದವರಿಗೆ ಮಲಗುವ ಕೋಣೆಯನ್ನು ಸ್ವಚ್ಛಗೊಳಿಸಲು ಬಿಟ್ಟಿಲ್ಲ. ನಾಲ್ಕೈದು ಮಂದಿ ಸೇರಿ ಕೃತ್ಯ ಎಸಗಿದ್ದಾರೆ' ಎಂದು ಆರೋಪಿಸಿದರು.

ಎರಡು ದಿನಗಳ ಜಾಗತಿಕ ಸುಸ್ಥಿರ ಅಭಿವೃದ್ಧಿಯಲ್ಲಿ ಪರಿಸರ ವ್ಯವಸ್ಥೆಯ ಕುರಿತು ದಕ್ಷಿಣ ದೇಶಗಳ ಜಾಗತಿಕ ಸಮಾವೇಶವನ್ನು ಸೋಮವಾರ ಉದ್ಘಾಟನೆ ಮಾಡಲಾಯಿತು.

'ಸೌರ ವಿದ್ಯುತ್ ಹೆಚ್ಚು ಬಳಸಿ'

ಬೆಂಗಳೂರು: 'ಪಳೆಯುಳಿಕೆ ಇಂಧನಕ್ಕಿಂತ ಅಗ್ಗದಲ್ಲಿ ದೊರೆಯುವ ಸೌರ ವಿದ್ಯುತ್ ಶಕ್ತಿಯನ್ನು ಹೆಚ್ಚು ಬಳಸಬೇಕು. ಇಲ್ಲದಿದ್ದರೆ ಜನಸಾಮಾನ್ಯರ ಜೀವನ ದುಬಾರಿಯಾಗಲಿದೆ' ಎಂದು ಅಂತರರಾಷ್ಟ್ರೀಯ ಸೌರ ವಿದ್ಯುತ್ ಒಕ್ಕೂಟದ (ಐಎಸ್‌ಎ) ಮಹಾನಿರ್ದೇಶಕ ಅಜಯ್ ಮಾಥೂರ್ ಹೇಳಿದರು.

ಸೆಲ್ಕೊ ಫೌಂಡೇಷನ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂಬಿ) ಸಹಯೋಗದಲ್ಲಿ ನಡೆಯುತ್ತಿರುವ 'ಎರಡು ದಿನಗಳ ಜಾಗತಿಕ ಸುಸ್ಥಿರ ಅಭಿವೃದ್ಧಿಯಲ್ಲಿ ಪರಿಸರ ವ್ಯವಸ್ಥೆಯ ಕುರಿತು ದಕ್ಷಿಣ ದೇಶಗಳ ಜಾಗತಿಕ ಸಮಾವೇಶ–2022'ರಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ವಿಕೇಂದ್ರೀಕೃತ ನವೀಕರಿಸಬಹುದಾದ ಸುಸ್ಥಿರ ಇಂಧನವನ್ನು ಬಳಸಿಕೊಂಡು ಆರೋಗ್ಯ ಮತ್ತು ಜೀವನೋಪಾಯ ಕ್ಷೇತ್ರದಲ್ಲಿ ಸಮಗ್ರ, ಸಮನ್ವಯ ರೀತಿಯ ಅಭಿವೃದ್ಧಿಯನ್ನು ಸಾಧಿಸಬೇಕು' ಎಂದು ಮಾಹಿತಿ ನೀಡಿದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ಸೆಲ್ಕೊ ಫೌಂಡೇಷನ್ ಸಹಭಾಗಿತ್ವದಲ್ಲಿ ರಾಜ್ಯ ಸರ್ಕಾರ ರಾಯಚೂರು ಜಿಲ್ಲೆಯ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೌರಶಕ್ತಿ ಆಧಾರಿತ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜ್ಯದ ಎಲ್ಲ ಆರೋಗ್ಯ ಕೇಂದ್ರಗಳು ಮತ್ತು ಶಾಲೆಗಳಲ್ಲಿ ಸ್ಮಾರ್ಟ್‌ಕ್ಲಾಸ್ ಮಾಡಲು ಸೌರಶಕ್ತಿಯನ್ನು ಬಳಸಿಕೊಳ್ಳುವ ಅಗತ್ಯವಿದೆ' ಎಂದರು.

ಸೆಲ್ಕೊ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರೀಶ್ ಹಂದೆ ಮಾತನಾಡಿ, 'ಏಷ್ಯಾ ಉಪಖಂಡ ಮತ್ತು ಆಫ್ರಿಕಾ ದೇಶಗಳ ಜನರ ಆರೋಗ್ಯ, ಜೀವನೋಪಾಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಹಿಂದೆ ಇದ್ದಾರೆ. ಈ ದೇಶಗಳ ಜನರ ಜೀವನ ಮಟ್ಟವನ್ನು ಸುಧಾರಿಸುವ ಕೆಲಸವಾಗಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ಮಾತನಾಡದಿದ್ದಕ್ಕೆ ಹಲ್ಲೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮಾತನಾಡಲಿಲ್ಲವೆಂಬ ಕಾರಣಕ್ಕೆ ಮಹಿಳೆಯರ ಗುಂಪು ನನ್ನ ಮೇಲೆ ಹಲ್ಲೆ ಮಾಡಿದೆ' ಎಂದು ಆರೋಪಿಸಿ ನೀಲಾಂಜಿತ್ ಕೌರ್ ಎಂಬುವವರು ವಿದ್ಯಾರಣ್ಯಪುರ ಠಾಣೆಗೆ ದೂರು ನೀಡಿದ್ದಾರೆ.

'ದೊಡ್ಡಬೊಮ್ಮಸಂದ್ರದಲ್ಲಿ ನೆಲೆಸಿರುವ 46 ವರ್ಷದ ನೀಲಾಂಜಿತ್, ನ. 25ರಂದು ರಾತ್ರಿ 10 ಗಂಟೆ ಸುಮಾರಿಗೆ ನಡೆದಿರುವ ಘಟನೆ ಸಂಬಂಧ ದೂರು ನೀಡಿದ್ದಾರೆ. ಐವರು ಅಪರಿಚಿತ ಮಹಿಳೆಯರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀಲಾಂಜಿತ್ ಅವರು ದೊಡ್ಡಬೊಮ್ಮಸಂದ್ರದ ಸರ್ಕಾರಿ ಶಾಲೆ ಬಳಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ವೇಳೆ, 6 ವರ್ಷದ ಮಗುವೊಂದು ವಾಹನಕ್ಕೆ ಅಡ್ಡ ಬಂದಿತ್ತು. ವಾಹನ ನಿಲ್ಲಿಸಿದ್ದ ನೀಲಾಂಜಿತ್, 'ಮಗುವನ್ನು ನೋಡಿಕೊಳ್ಳಲು ಆಗುವುದಿಲ್ಲವೇ?' ಎಂದು ಸ್ಥಳದಲ್ಲಿದ್ದ ಪೋಷಕರಿಗೆ ಹಿಂದಿಯಲ್ಲಿ ಹೇಳಿದ್ದರು. ಅವರ ಜೊತೆಗೆ ಜಗಳ ತೆಗೆದಿದ್ದ ಆರೋಪಿತ ಸ್ಥಳೀಯ ಮಹಿಳೆಯರು, 'ಕನ್ನಡ ಬರುವುದಿಲ್ಲವೇ? ಇದು ಕರ್ನಾಟಕ. ಕನ್ನಡ ಮಾತಾಡು' ಎಂದಿದ್ದರು. ಅಷ್ಟಕ್ಕೆ ಮಾತಿಗೆ ಮಾತು ಬೆಳೆದು ಗಲಾಟೆ ಶುರುವಾಗಿತ್ತು. ಇದೇ ಸಂದರ್ಭದಲ್ಲೇ ತಮ್ಮ ಮೇಲೆ ಹಲ್ಲೆ ನಡೆದಿರುವುದಾಗಿ ದೂರುದಾರರು ಆರೋಪಿಸಿದ್ದಾರೆ. ಆರೋಪಿಗಳನ್ನು ವಿಚಾರಣೆ ಮಾಡಬೇಕಿದೆ' ಎಂದು ತಿಳಿಸಿವೆ.

ಸಹೋದರನ ಕುಟುಂಬ ಜಗಳ: ಸಂಧಾನಕ್ಕೆ ಕರೆದು ಕೊಲೆ

ಬೆಂಗಳೂರು: ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ಇಮಾಯೂನ್ ಎಂಬುವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸಂಬಂಧಿ ಸೈಯದ್ ಫೈಸಲ್ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಇಮಾಯೂನ್ ಅವರನ್ನು ಸಂಧಾನಕ್ಕೆ ಕರೆದು ಕೊಲೆ ಮಾಡಿರುವ ಬಗ್ಗೆ ಪತ್ನಿ ಸಾಹಿರಾ ಬಾನು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಸಾಹಿರಾ ಹಾಗೂ ಇಮಾಯೂನ್ ದಂಪತಿಗೆ ಇಬ್ಬರುಹೆಣ್ಣುಮಕ್ಕಳಿದ್ದಾರೆ. ಇಮಾಯೂನ್ ಸಹೋದರ ಜಾವೀದ್ ಕುಟುಂಬವೂ ಸಮೀಪದಲ್ಲೇ ವಾಸವಿತ್ತು. ಜಾವೀದ್ ಹಾಗೂ ಅವರ ಪತ್ನಿ ಮುಸ್ಕಾನ್ ನಡುವೆ ಜಗಳ ಶುರುವಾಗಿತ್ತು. ಮುಸ್ಕಾನ್, ತವರು ಮನೆಗೆ ಹೋಗಿದ್ದರು.'

'ಸಹೋದರನ ಕುಟುಂಬದ ಜಗಳ ಸರಿಪಡಿಸಲು ಹಿರಿಯರ ಸಮ್ಮುಖದಲ್ಲಿ ಸಂಧಾನ ಏರ್ಪಡಿಸಲಾಗಿತ್ತು. ಸಂಧಾನಕ್ಕೆ ಹೋಗಿದ್ದ ಇಮಾಯೂನ್ ಮೇಲೆ ಹಲ್ಲೆ ಮಾಡಿದ್ದ ಆರೋಪಿ ಫೈಸಲ್, ಎದೆಗೆ ಗುದ್ದಿದ್ದ. ಸ್ಥಳದಲ್ಲೇ ಕುಸಿದು ಬಿದ್ದಿದ್ದ ಇಮಾಯೂನ್, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಸಂಧಾನದ ವೇಳೆ ಜಾವೀದ್ ಮೇಲೆಯೂ ಹಲ್ಲೆ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ವಿದ್ಯುತ್ ಸಂಪರ್ಕ ಕಲ್ಪಿಸದೇ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಗೂರು ಹೋಬಳಿ ಬೆಟ್ಟದಾಸನಪುರ ಮೈಲಸಂದ್ರ ಸಾಯಿಶಕ್ತಿ ಬಡಾವಣೆಯ ನಿವಾಸಿಗಳಿಗೆ ಬೆಸ್ಕಾಂ ನಿವಾಸಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಅನ್ಯಾಯ ಎಸಗುತ್ತಿದ್ದಾರೆ ಎಂದು ಆರೋಪಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು.

'ಈ ಬಡಾವಣೆ 2010ರಲ್ಲಿ ನಿರ್ಮಾಣವಾಗಿತ್ತು. 3 ಸಾವಿರ ನಿವೇಶನಗಳ ಪೈಕಿ 1,500ಕ್ಕೂ ಹೆಚ್ಚು ಮನೆಗಳು ನಿರ್ಮಾಣವಾಗಿವೆ. ಇಲ್ಲಿ ದಿನಗೂಲಿ ಕೆಲಸದವರು, ಕೂಲಿ ಕಾರ್ಮಿಕರು, ಗಾರ್ಮೆಂಟ್ ಕೆಲಸದವರು ವಾಸಿಸುತ್ತಿದ್ದಾರೆ. 12 ವರ್ಷಗಳಿಂದ ಬೆಸ್ಕಾಂನವರು ವಿದ್ಯುತ್ ಸಂಪರ್ಕ ಕಲ್ಪಿಸದೇ ನೋವು ಅನುಭವಿಸುತ್ತಿದ್ದೇವೆ' ಎಂದು ನೋವು ತೋಡಿಕೊಂಡರು.

ಹಲವು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನ ಆಗಿಲ್ಲ. ಹೋರಾಟದ ಬಳಿಕ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು. ಆದರೆ, ಬಡಾವಣೆ ನಿವಾಸಿಗಳಿಗೆ ವಿದ್ಯುತ್ ಕಳವು ಆರೋಪದಲ್ಲಿ ಜಾಗೃತ ದಳದ ಅಧಿಕಾರಿಗಳು ಮನಬಂದಂತೆ ದಂಡ ವಿಧಿಸುತ್ತಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ದಂಡ ಕಟ್ಟುವಂತೆ ಆಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು.

ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂದು ಆಪಾದಿಸಿ ಬೇಗೂರು ಹೋಬಳಿ ಬೆಟ್ಟದಾಸನಪುರ ಮೈಲಸಂದ್ರ ಸಾಯಿಶಕ್ತಿ ಬಡಾವಣೆಯ ನಿವಾಸಿಗಳು ಪ್ರತಿಭಟನೆ ನಡೆಸಿದರು

ಗುರುರಾಜ್ ಹೊಸಕೋಟೆ ಅವರ 75ನೇ ಜನ್ಮದಿನದ ಸಂಭ್ರಮ

ಜಾನಪದ ಗಾಯಕನಿಗೆ ಗೌರವ ಸಮರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದ ಹಾಡುಗಳ ರಚನೆ ಮತ್ತು ಗಾಯನದ ಮೂಲಕ ನಾಡಿನಾದ್ಯಂತ ಮನೆಮಾತಾಗಿರುವ ಗುರುರಾಜ್ ಹೊಸಕೋಟೆ ಅವರಿಗೆ ಅಭಿಮಾನಿಗಳು, ಒಡನಾಡಿಗಳು, ಆಪ್ತರು ಅಭಿಮಾನದ ಗೌರವವನ್ನು ಸಮರ್ಪಿಸಿದರು. ಈ ಮೂಲಕ ಅವರ 75ನೇ ಜನ್ಮದಿನದ ಸಂಭ್ರಮ ಹೆಚ್ಚಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ನಗರದಲ್ಲಿ ಮಂಗಳವಾರ ಆಯೋಜಿಸಿದ 'ಪದ ಜನಪದ ಮಾಡಿ ನಾಡಿಗೆ ನೀಡಿದವರಿಗೆ 75 ವರುಷ' ಕಾರ್ಯಕ್ರಮದಲ್ಲಿ ಗುರುರಾಜ್ ಹೊಸಕೋಟೆ ಅವರ ಜಾನಪದ ಕ್ಷೇತ್ರದ ಸಾಧನೆಗಳನ್ನು ಗುಣಗಾನ ಮಾಡಲಾಯಿತು.

ಜಾನಪದ ಗಾಯಕ ಶಬ್ಬೀರ್ ಡಾಂಗೆ, 'ಗಾಯನದ ಮೂಲಕ ಜನರನ್ನು ಮೋಡಿ ಮಾಡುವ ತಾಕತ್ತು ಗುರುರಾಜ್ ಹೊಸಕೋಟೆ ಅವರಿಗಿದೆ. ಅವರ ಪರಂಪರೆಯನ್ನು ಉಳಿಸಿ, ಬೆಳಸಬೇಕಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೊಸ ಹೊಸ ಕಲಾವಿದರು ಬಂದಿದ್ದಾರೆ. ಆದರೆ, ಜಾನಪದ ಕಲೆಯ ಗಂಭೀರತೆ ಅವರಲ್ಲಿ ಅಷ್ಟಾಗಿ ಕಾಣಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಜಗಳೂರು ಲಕ್ಷ್ಮಣ ರಾವ್, 'ಕುಟುಂಬದ ಬಳುವಳಿಯಾಗಿ ಬಂದಿದ್ದ ಹಾಡುಗಾರಿಯನ್ನು ಮೈಗೂಡಿಸಿಕೊಂಡಿದ್ದ ಗುರುರಾಜ್ ಹೊಸಕೋಟೆ ಅವರು, 600ಕ್ಕೂ ಅಧಿಕ ಧ್ವನಿ ಸುರುಳಿಗೆ ಸಾಹಿತ್ಯ, ಸಂಗೀತ ಹಾಗೂ ಕಂಠವನ್ನು ಒದಗಿಸಿದ್ದಾರೆ. ಅವರನ್ನು ತಡವಾಗಿ ಗುರುತಿಸಿ, ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು. ಕನ್ನಡ ಭವನ ಸುತ್ತುತ್ತಿರುವವರಿಗೆ ಪ್ರಶಸ್ತಿಗಳು ದೊರೆಯುತ್ತಿವೆ' ಎಂದು ಹೇಳಿದರು.

'ಗಡಿ ವಿಚಾರವಾಗಿ ಮಹಾರಾಷ್ಟ್ರದವರು ಅನಗತ್ಯವಾಗಿ ಕೆಣಕುತ್ತಿದ್ದಾರೆ. ನಾವು ಯಾವುದೇ ಹೋರಾಟಕ್ಕೂ ಸಿದ್ಧವಿದ್ದೇವೆ' ಎಂದು ತಿಳಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರು ಗುರುರಾಜ ಹೊಸಕೋಟೆ ಅವರನ್ನು ಸನ್ಮಾನಿಸಿದರು. ಹಾಸ್ಯನಟ ವೈಜನಾಥ್ ಬಿರಾದಾರ್ ಹಾಗೂ ಜಾನಪದ ಕಲಾವಿದರು ಇದ್ದಾರೆ.

600 ಆಹಾರ ಪದಾರ್ಥಗಳ ಪ್ರದರ್ಶನ

ಆಹಾರ ಸೇವನೆಯ ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಜನರಲ್ ಮೆಡಿಸಿನ್ ವಿಭಾಗದ ವತಿಯಿಂದ ಮಂಗಳವಾರ ವಿಶ್ವ ಮಧುಮೇಹ ದಿನದ ಅಂಗವಾಗಿ ಮಧುಮೇಹ ನಿಯಂತ್ರಣ ಹಾಗೂ ಜೀವನಶೈಲಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಧುಮೇಹಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡಲಾಯಿತು. ಮಧುಮೇಹಿಗಳು ಸೇವಿಸಬಹುದಾದ ಮತ್ತು ಸೇವಿಸಲೇಬಾರದ ಆಹಾರ ಪದಾರ್ಥಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಒಟ್ಟು 600 ಆಹಾರ ಪದಾರ್ಥಗಳನ್ನು ಪ್ರದರ್ಶಿಸಲಾಗಿತ್ತು.

ಯಾವ ರೀತಿಯ ಆಹಾರಗಳು ಮಧುಮೇಹಿಗಳಿಗೆ ಸೂಕ್ತ ಮತ್ತು ಅಲ್ಪಪ್ರಮಾಣದಲ್ಲಿ ಸೇವಿಸಬಹುದಾದ ಆಹಾರ ಪದಾರ್ಥಗಳು ಯಾವುವು? ಯಾವ ಆಹಾರಗಳನ್ನು ಸೇವಿಸಲೇಬಾರದು ಎನ್ನುವ ಪ್ರಶ್ನೆಗಳಿಗೆ ಆಹಾರ ಪದಾರ್ಥಗಳ ಸಹಿತ ಮಾಹಿತಿ ನೀಡಲಾಯಿತು. ತಜ್ಞ ವೈದ್ಯರು ರೋಗಿಗಳ ಸಮಸ್ಯೆಗಳನ್ನು ಆಲಿಸಿದರು.

'ಹೆಚ್ಚುತ್ತಿರುವ ಮಧುಮೇಹಿಗಳ ಸಂಖ್ಯೆಯು ಆರೋಗ್ಯ ವ್ಯವಸ್ಥೆಯ ಮೇಲಿನ ಒತ್ತಡವನ್ನು ಹೆಚ್ಚಿಸುತ್ತಿದೆ. ಸರಿಯಾದ ಆಹಾರ ಸೇವನೆ ಮತ್ತು ದೈಹಿಕ ವ್ಯಾಯಾಮಗಳೊಂದಿಗೆ ಆರೋಗ್ಯಯುತ ಜೀವನ ಶೈಲಿ ರೂಢಿಸಿಕೊಳ್ಳುವ ಮೂಲಕ ಕಾಯಿಲೆಗಳನ್ನು ನಿಯಂತ್ರಿಸಬಹುದು. ಪ್ರತಿ ಎರಡು ನಿಮಿಷಕ್ಕೆ ಒಬ್ಬರಲ್ಲಿ ಮಧುಮೇಹ ಪತ್ತೆಯಾಗುತ್ತಿದೆ. ರೋಗದ ನಿಯಂತ್ರಣವು ಗುಣಪಡಿಸುವುದಕ್ಕಿಂತಲೂ ಉತ್ತಮವಾಗಿದೆ' ಎಂದು ಜನರಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಜಿ. ಬಾಲಚಂದ್ರ ವಿವರಿಸಿದರು.

ಡಾ. ಪ್ರಕಾಶ್‌ನಾಥ್ ಸ್ವಾಮೀಜಿ, ಪ್ರಾಂಶುಪಾಲ ಮತ್ತು ಡೀನ್ ಡಾ. ಎಂ.ಇ. ಮೋಹನ್, ವೈದ್ಯಕೀಯ ಅಧೀಕ್ಷಕ ಶ್ರೀಕಾಂತ್ ಕುಲಕರ್ಣಿ ಇದ್ದರು.

ಕಾರ್ಯಕ್ರಮದಲ್ಲಿ ಡಾ. ಪ್ರಕಾಶ್‌ನಾಥ್ ಸ್ವಾಮೀಜಿ ಮಾತನಾಡಿದರು. ಡಾ. ಮೋಹನ್, ಶ್ರೀಕಾಂತ್ ಕುಲಕರ್ಣಿ, ಡಾ. ಜಿ. ಬಾಲಚಂದ್ರ ಇದ್ದರು.

ರಾಜಸ್ಥಾನದಿಂದ ಡ್ರಗ್ಸ್ ತಂದು ಮಾರಾಟ

ಬೆಂಗಳೂರು: ರಾಜಸ್ಥಾನದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಸಂಪಂಗಿರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಸ್ಥಾನದ ಕಿಶನ್ ದಾಸ್ (45) ಹಾಗೂ ಜಗದೀಶ್ ಸಿಂಗ್ ಚರಣ್ (52) ಬಂಧಿತರು. ಇವರಿಂದ ₹ 3 ಲಕ್ಷ ಮೌಲ್ಯದ 2 ಕೆ.ಜಿ. 50 ಗ್ರಾಂ ತೂಕದ ಅಫೀಮು, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಿಶನ್ ದಾಸ್ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ವಿಜಯ ನಗರ ಪಟ್ಟೇಗಾರ ಪಾಳ್ಯದಲ್ಲಿ ವಾಸವಿದ್ದ. ಜಗದೀಶ್ ಸಿಂಗ್ ಕಡೆಯಿಂದ ಅಫೀಮು ತರಿಸಿಕೊಳ್ಳುತ್ತಿದ್ದ ಕಿಶನ್, ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದ' ಎಂದರು.

ದಾಳಿ ನಡೆಸಿ ಬಂಧನ: ವುಡ್‌ಲ್ಯಾಂಡ್ ಹೋಟೆಲ್ ಬಳಿಯ ರಸ್ತೆಯಲ್ಲಿ ಸುತ್ತಾಡುತ್ತಿದ್ದ ಆರೋಪಿ ಕಿಶನ್, ಗ್ರಾಹಕರಿಗೆ ಅಫೀಮು ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಬಂಧಿಸಲಾಯಿತು. 'ವಿಚಾರಣೆ ವೇಳೆ ಇನ್ನೊಬ್ಬ ಆರೋಪಿ ಜಗದೀಶ್ ಹೆಸರನ್ನು ಬಾಯ್ಬಿಟ್ಟಿದ್ದ. ರಾಜಸ್ಥಾನಕ್ಕೆ ಹೋಗಿದ್ದ ವಿಶೇಷ ತಂಡ, ಜಗದೀಶ್‌ನನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದರು.

‘ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್’ ವಜ್ರ ಮಹೋತ್ಸವದಲ್ಲಿ ಅಜೀಂ ಪ್ರೇಮ್‌ಜಿ ಪ್ರತಿಪಾದನೆ

ಚಾಣಾಕ್ಷತೆಯಿಂದಲೇ ಉದ್ಯಮದ ಯಶಸ್ಸು

ಪ್ರಜಾವಾಣಿ ವಾರ್ತೆ

ಸಮಾರಂಭದಲ್ಲಿ ವಿಪ್ರೊ ಲಿಮಿಟೆಡ್ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಅವರನ್ನು ಸನ್ಮಾನಿಸಲಾಯಿತು. ಬಿ.ಸಿ. ಪ್ರಭಾಕರ್, ರಾಜ್ ಪಿಳ್ಳೈ, ಡಿ.ಆರ್.ನಾಗರಾಜ್, ಪೂಜಾ ಪ್ರಭಾಕರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ಆರ್ಥಿಕ ಬದ್ಧತೆ, ಬದಲಾದ ಪರಿಸ್ಥಿತಿಗೆ ತಕ್ಕಂತಹ ಸುಸೂತ್ರ ಕಾರ್ಯನಿರ್ವಹಣಾ ವ್ಯವಸ್ಥೆ, ಲಾಭದಾಯಕ ಸಹಭಾಗಿತ್ವ ಕೈಗಾರಿಕೆಗಳ ಯಶಸ್ಸಿನ ಮೂರು ಬಹುಮುಖ್ಯ ಸೂತ್ರಗಳು ಎಂದು ವಿಪ್ರೊ ಲಿಮಿಟೆಡ್ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್’ (ಕೆಇಎ) ವಜ್ರ ಮಹೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಒಂದು ಉದ್ಯಮ, ಒಂದು ಸಂಸ್ಥೆ ಆರಂಭಿಸಿದಾಗ ಇದ್ದ ಅನುಕೂಲಕರ ವಾತಾವರಣ ಕಾಲಕಳೆದಂತೆ ಇಲ್ಲ-ವಾಗಬಹುದು. ಇಂತಹ ಸಮಯದಲ್ಲಿ ಸಾಕಷ್ಟು ಉದ್ಯಮಗಳು ಸಂಕಷ್ಟಕ್ಕೆ ಸಿಲುಕುತ್ತವೆ. ನಮ್ಮ ಸುತ್ತಲ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಇತರೆ ಬದಲಾವಣೆಗಳಿಗೆ ತಕ್ಕಂತೆ ಕಾರ್ಯನಿ-ರ್ವಹಿಸುವ ಚಾಣಾಕ್ಷತೆ ಅಳವಡಿಸಿಕೊ-ಳ್ಳಬೇಕು. ಸ್ವಯಂರಕ್ಷಣಾ ಕ್ರಮಗಳಿಗೆ ಪ್ರಾಶಸ್ತ್ಯ ನೀಡಬೇಕು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ಅಸೋಸಿಯೇಶನ್ ಅಧ್ಯಕ್ಷ ಬಿ.ಸಿ. ಪ್ರಭಾಕರ್, ಕೈಗಾರಿಕೆಗಳಿಗೆ ರಕ್ಷಣಾ ಕವಚವಾಗಿ ಸಂಘ ಕಾರ್ಯ ನಿರ್ವಹಿ-ಸುತ್ತಿದೆ. ಉದ್ಯೋಗದಾತರು ಮತ್ತು ಸರ್ಕಾರದ ಮಧ್ಯೆ ಸೇತುವೆಯಾಗಿದೆ. ಕೈಗಾರಿಕೆಗಳಿಗೆ ಅಗತ್ಯವಿರುವ ಕಾನೂನು ಕ್ರಮಗಳು, ಮುನ್ನೆಚ್ಚರಿಕೆ, ಅಧಿಸೂಚನೆಗಳು, ಪರಿಹಾರಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆ ಎಂದರು.

ಕೆಇಎ ಗೌರವ ಸಿಇಒ ರಾಜ್ ಪಿಳ್ಳೈ, ‘ಸಿಂಗಾಪುರ ನ್ಯಾಷನಲ್ ಎಂಪ್ಲಾಯರ್ಸ್ ಫೆಡರೇಶನ್ (ಎನ್‌ಎನ್‌ಇಎಫ್) ವಾರ್ಷಿಕ 1.20 ಕೋಟಿ ಡಾಲರ್ ವಹಿವಾಟು ಹೊಂದಿದೆ. ತನ್ನ ಸದಸ್ಯರಿಗೆ ಸಾಕಷ್ಟು ಅನುಕೂಲ ಕಲ್ಪಿಸಿದೆ. ಮಾನವಶಕ್ತಿ ಸಚಿವಾಲಯ ಹಾಗೂ ಸಿಂಗಾಪುರ ರಾಷ್ಟ್ರೀಯ ಟ್ರೇಡ್ಸ್ ಯೂನಿಯನ್ ಕಾಂಗ್ರೆಸ್ ಜತೆ ಉತ್ತಮ ಸಂಬಂಧ ಹೊಂದಿದೆ. ಅದೇ ರೀತಿಯ ಹೆಜ್ಜೆಯಲ್ಲಿ ಕೆಇಎ ಸಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಕೆಇಎ ಉಪಾಧ್ಯಕ್ಷೆ ಪೂಜಾ ಪ್ರಭಾಕರ್, ಉದ್ಯಮದಲ್ಲಿ ಅಗ್ರಸ್ಥಾನದ-ಲ್ಲಿರುವ ಕೆಇಎ, ನೀತಿ ಬದಲಾವಣೆಗಳ-ಲ್ಲಿ ಸಮರ್ಪಕವಾದ ಪ್ರಭಾವಿ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಮಯದಲ್ಲಿ ಅಜೀಂ ಪ್ರೇಮ್‌ಜಿ ಸೇರಿದಂತೆ ಏಳು ಯಶಸ್ವಿ ಉದ್ಯಮಿಗಳನ್ನು ಸನ್ಮಾನಿಸಲಾಯಿತು.

ಹಿತಾಸಕ್ತಿ ಸಹಭಾಗಿತ್ವಕ್ಕೆ ಒತ್ತು

ಕಾರ್ಮಿಕರ ಹಿತಾಸಕ್ತಿಯ ಜತೆಗೆ ಕೈಗಾರಿಕೆಗಳ ಶ್ರೇಯೋಭಿ-ವೃದ್ಧಿಗೂ ಹೊಸ ಕಾರ್ಮಿಕ ಕಾನೂನು ಆದ್ಯತೆ ನೀಡಬೇಕು ಎಂಬ ನಿರೀಕ್ಷೆ ಇದೆ ಎಂದು ಕೆಇಎ ಆಧ್ಯಕ್ಷ ಬಿ.ಸಿ. ಪ್ರಭಾಕರ್ ಹೇಳಿದರು.

ಕಾರ್ಮಿಕರ ನಿವೃತ್ತಿ ವಯಸ್ಸು ಹೆಚ್ಚಿಸುವುದು, ಮುಷ್ಕರಗಳು ಮತ್ತು ಕಾರ್ಯ ಸ್ಥಗಿತದಂತಹ ಸಮಸ್ಯೆಗಳ ಕುರಿತು ಸರ್ಕಾರಗಳಿಂದ ಸಕಾರಾತ್ಮಕವಾಗಿ ಸ್ಪಂದನೆ ದೊರಕಬೇಕಿದೆ. ಉದ್ಯೋಗದಾತರು ನ್ಯಾಯಯುತ, ಜವಾಬ್ದಾರಿ ಹೊತ್ತು ಕಾರ್ಮಿಕ ಜತಗೆ ಸಾಮರಸ್ಯದ ಸಂಬಂಧಗಳನ್ನು ಉತ್ತೇಜಿಸ-ಬೇಕಿದೆ. ಅದಕ್ಕಾಗಿ ಸರ್ಕಾರದ ಜತೆಗೆ ಕೆಇಎ ಯಶಸ್ವಿಯಾಗಿ ಸಂಧಾನ ಕಾರ್ಯನಿರ್ವಹಿಸಿದೆ ಎಂದರು.

1962ರಲ್ಲಿ ಜನ್ಮತಾಳಿದ ಸಂಸ್ಥೆ

ಮೈಸೂರು ಸ್ಟೇಟ್ ಎಂಪ್ಲಾಯರ್ಸ್ ಅಸೋಸಿಯೇಶನ್ ಎಂಬ ಹೆಸರಿನಲ್ಲಿ ರಾಜ್ಯದಲ್ಲಿ ಉದ್ಯೋಗದಾತರ ಹಿತಸಕ್ತಿಗಾಗಿ 1962ರಲ್ಲಿ ವಕೀಲರಾಗಿದ್ದ ಜಿ.ಕೆ. ಗೋವಿಂದ ಭಟ್, ಬಿ.ಆರ್.ಪುಟ್ಟನಂಜಪ್ಪ ಹುಟ್ಟು-ಹಾಕಿದ್ದರು.

ಹೆಸರು ಬದಲಾವಣೆಯೊಂದಿಗೆ ಸಂಸ್ಥೆ ಇಂದು ಗಮನಾರ್ಹ ಪ್ರಗತಿ ಕಂಡಿದೆ. ಭಾರತದಲ್ಲಿ ಅತ್ಯಂತ ದೊಡ್ಡ ಮತ್ತು ಗೌರವಯುತ ಸಂಸ್ಥೆ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. ಇದು ಕರ್ನಾಟಕ ರಾಜ್ಯದ ಮೊದಲ ಉದ್ಯೋಗದಾತರ ಸಂಘವಾಗಿದೆ.

ಡಿಜಿಟಲ್ ರೂಪಾಯಿ: ನಾಳೆಯಿಂದ ಪ್ರಾಯೋಗಿಕ ಬಳಕೆ

ಮುಂಬೈ (ಪಿಟಿಐ): ಚಿಲ್ಲರೆ ವಹಿವಾಟುಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಗೆ ಡಿಸೆಂಬರ್ 1ರಂದು ಚಾಲನೆ ನೀಡಲಾಗುವುದು ಎಂದು ಆರ್‌ಬಿಐ ಮಂಗಳವಾರ ಹೇಳಿದೆ. ನಾಲ್ಕು ನಗರಗಳಲ್ಲಿ ಇದು ಆರಂಭವಾಗಲಿದ್ದು, ಬೆಂಗಳೂರು ಕೂಡ ಈ ಪೈಕಿ ಒಂದು.

ಎಸ್‌ಬಿಐ, ಐಸಿಐಸಿಐ, ಐಡಿಎಫ್‌ಸಿ ಫಸ್ಟ್ ಮತ್ತು ಯೆಸ್ ಬ್ಯಾಂಕ್ ಈ ಯೋಜನೆಯಲ್ಲಿ ಈಗ ಪಾಲ್ಗೊಳ್ಳಲಿವೆ.

ಆರ್‌ಬಿಐ, ಡಿಜಿಟಲ್ ರೂಪಾಯಿಯ ಬಳಕೆಯನ್ನು ಸಗಟು ವಹಿವಾಟುಗಳಿಗೆ ಪ್ರಾಯೋಗಿಕವಾಗಿ ನವೆಂಬರ್ 1ರಂದು ಚಾಲನೆ ನೀಡಿದೆ. ಈಗ ಆಯ್ದ ಗ್ರಾಹಕರು ಹಾಗೂ ವ್ಯಾಪಾರಿಗಳ ನಡುವೆ ಮಾತ್ರ ಚಿಲ್ಲರೆ ವಹಿವಾಟುಗಳಿಗೆ ಪ್ರಾಯೋಗಿಕವಾಗಿ ಡಿಜಿಟಲ್ ರೂಪಾಯಿ ಬಳಕೆಗೆ ಚಾಲನೆ ನೀಡಲಾಗುತ್ತದೆ.

‘ಡಿಜಿಟಲ್ ರೂಪಾಯಿಯು ಡಿಜಿಟಲ್ ಟೋಕನ್ ರೂಪದಲ್ಲಿ ಇರಲಿದೆ. ಇದು ಕಾನೂನುಬದ್ಧ ಕರೆನ್ಸಿಯಾಗಿರುತ್ತದೆ’ ಎಂದು ಆರ್‌ಬಿಐ ಹೇಳಿದೆ. ಡಿಜಿಟಲ್ ರೂಪಾಯಿಯನ್ನು ಬ್ಯಾಂಕ್ ಶಾಖೆಗಳ ಮೂಲಕ ವಿತರಿ-ಸಲಾಗುತ್ತದೆ. ಬ್ಯಾಂಕ್‌ಗಳು ನೀಡುವ ಡಿಜಿಟಲ್ ವಾಲೆಟ್‌ಗಳ ಮೂಲಕ ಇದನ್ನು ವಹಿವಾಟಿಗೆ ಬಳಸಿಕೊಳ್ಳಬಹುದು.

ಇಬ್ಬರು ವ್ಯಕ್ತಿಗಳ ನಡುವೆ ಹಾಗೂ ಗ್ರಾಹಕ ಮತ್ತು ವ್ಯಾಪಾರಿ ನಡುವೆ ವಹಿವಾಟುಗಳಿಗೆ ಇದನ್ನು ಬಳಸಬಹುದು. ದಿನನಿತ್ಯದ ವಹಿ-ವಾಟುಗಳಲ್ಲಿ ಬಳಸಿಕೊಳ್ಳುವ ನಗದು ಹಣದ ರೀತಿಯಲ್ಲಿಯೆ, ಡಿಜಿಟಲ್ ರೂಪಾಯಿಯನ್ನು ಠೇವಣಿ ಇರಿಸಲು ಬಳಸಬಹುದು.

ಆರಂಭಿಕವಾಗಿ ಇದು ಬೆಂಗಳೂರು ಮಾತ್ರವಲ್ಲದೆ, ಮುಂಬೈ, ನವದೆಹಲಿ ಮತ್ತು ಭುವನೇಶ್ವರ ನಗರಗಳಲ್ಲಿ ಪ್ರಾಯೋ ಗಿಕವಾಗಿ ಬಳಕೆಗೆ ಬರಲಿದೆ.

ಅಸ್ಪೃಶ್ಯ ಪದ ಬಳಕೆ: ಎಚ್‌ಡಿಕೆ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ‘ಜೆಡಿಎಸ್ ಅಧಿಕಾರಕ್ಕೆ ಬಂದಲ್ಲಿ ನಮ್ಮ ಪಕ್ಷದ ಸಿ.ಎಂ. ಇಬ್ರಾಹಿಂ ಏಕೆ ಮುಖ್ಯಮಂತ್ರಿ ಆಗಬಾರದು. ಅವರೇನು ಅಸ್ಪೃಶ್ಯರೆ’ ಎಂದು ಪ್ರಶ್ನಿಸಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಛಲವಾದಿ ಮಹಾಸಭಾ ಮಂಗಳವಾರ ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದೆ.

‘ಅಸ್ಪೃಶ್ಯತೆ ಶಬ್ದ ಬಳಸುವ ಮೂಲಕ ಕುಮಾರಸ್ವಾಮಿ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಎಸ್.ಸಿ/ಎಸ್.ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆ ಅಡಿ ದೂರು ದಾಖಲಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಮಹಾಸಭಾ ದೂರಿನಲ್ಲಿ ಹೇಳಿದೆ.

‘ಛಲವಾದಿ ಮಹಾಸಭಾ ಮುಖಂಡರಿಂದ ದೂರು ಸ್ವೀಕ-ರಿಸಲಾಗಿದೆ. ಇನ್ನೂ ಎಫ್‌ಐಆರ್ ದಾಖಲಾಗಿಲ್ಲ’ ಎಂದು ನಗರ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ರೇಣುಕಾ ಯಾದವ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಅಸ್ಪೃಶ್ಯತೆ ಶಬ್ದ ಬಳಕೆಯೇ ಅಸ್ಪೃಶ್ಯತೆ ಆಚರಣೆಯ ಮೊದಲ ಹೆಜ್ಜೆ. ಆ ಶಬ್ದ ಬಳಸುವುದು ಕೂಡ ಎಸ್.ಸಿ./ಎಸ್.ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆ ಅಡಿ ಅಪರಾಧವಾಗುತ್ತದೆ. ಕುಮಾರಸ್ವಾಮಿ ಅವರ ಈ ಹೇಳಿಕೆ ಸಂವಿಧಾನ ವಿರೋಧಿ ಮತ್ತು ಕಾನೂನು ಬಾಹಿರವಾಗಿದ್ದು, ಕೂಡಲೇ ಅವರು ಬೇಷರತ್ ಕ್ಷಮೆ ಯಾಚಿಸಬೇಕು’ ಎಂದು ಛಲವಾದಿ ಮಹಾಸಭಾದ ಮುಖಂಡ ಜಿ. ಲಕ್ಷ್ಮಿಪತಿ ಮಂಗಳವಾರ ಇಲ್ಲಿ ಸುದ್ದಿ-ಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಜೆಡಿಎಸ್ ತನ್ನ ಹೆಸರಿನಲ್ಲಿರುವ ಜಾತ್ಯತೀತ ಪದ ತೆಗೆದು ಹಾಕಿ ‘ಜಾತಿವಾದಿ ಜನತಾದಳ’ ಎಂದು ಬದಲಾಯಿಸಿಕೊಳ್ಳುವುದು ಒಳಿತು’ ಎಂದು ಅವರು ಸಲಹೆ ಮಾಡಿದರು.

‘ವಿ.ವಿಗಳ ಸಭೆ: ವೆಬ್‌ನಲ್ಲಿ ಪ್ರಸಾರಕ್ಕೆ ನಾಳೆ ಚಾಲನೆ’

ಉನ್ನತ ಶಿಕ್ಷಣ, ಐಟಿಬಿಟಿ, ಕೌಶಲಾಭಿವೃದ್ಧಿ ಇಲಾಖೆಯಲ್ಲಿ ‘ಸುಶಾಸನ ಮಾಸ’: ಸಚಿವ ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಪ್ರಧಾನಿ ವಾಜಪೇಯಿ ನೆನಪಿನಲ್ಲಿ ಡಿಸೆಂಬರ್ ತಿಂಗಳನ್ನು ‘ಸುಶಾಸನ ಮಾಸ’ವಾಗಿ ಆಚರಿಸುತ್ತಿದ್ದು, ಅದರ ಭಾಗವಾಗಿ ವೆಬ್‌ಸೈಟ್ ಮೂಲಕ ವಿಶ್ವವಿದ್ಯಾ-ಲಯಗಳ ಅಕಾಡೆಮಿಕ್ ಕೌನ್ಸಿಲ್, ಹಣಕಾಸು ಸಮಿತಿ, ಸಿಂಡಿಕೇಟ್ ಸಭೆಯ ನೇರ ಪ್ರಸಾರ ವ್ಯವಸ್ಥೆಗೆ ಚಾಲನೆ ನೀಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ವಾಜಪೇಯಿ ಜನ್ಮದಿನವಾದ ಡಿ. 25ರಂದು ‘ಸುಶಾಸನ ದಿನ’ ಆಚರಿಸಲಾಗುತ್ತಿತ್ತು. ಈ ವರ್ಷ ಡಿಸೆಂಬರ್ ತಿಂಗಳಿಡೀ ‘ಸುಶಾಸನ ಮಾಸ’ವಾಗಿ ಆಚರಿಸಲಾಗು-ತ್ತದೆ. ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಿ. 1ರಂದು ಚಾಲನೆ ನೀಡಲಿದ್ದಾರೆ’ ಎಂದರು.

‘ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಡಿ. 10ರೊಳಗೆ ಆಯಾಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನಿರ್ದೇಶನ ನೀಡಲಾಗಿದೆ. ಸಂಯೋಜಿತ ಕಾಲೇಜುಗಳು ಹಾಗೂ ಘಟಕ ಕಾಲೇಜುಗಳು ಕೂಡ ಇದನ್ನು ಪಾಲಿಸಬೇಕು. ಶುಲ್ಕ ವಿವರದಿಂದ ಹಿಡಿದು ವಿಶ್ವವಿದ್ಯಾಲಯಗಳಿಗೆ ಮಂಜೂರಾದ ಅನುದಾನದ ಮೊತ್ತ, ಕೈಗೊಂಡಿರುವ ಪ್ರಾಜೆಕ್ಟ್‌ಗಳು, ಬೋಧಕ, ಬೋಧಕೇತರ ಸಿಬ್ಬಂದಿ ಸಂಖ್ಯೆ ಹೀಗೆ ಪ್ರತಿಯೊಂದು ಮಾಹಿತಿಯನ್ನೂ ವೆಬ್‌ಸೈಟ್‌ನಲ್ಲಿ ಅಳವಡಿಸಬೇಕು. ಒಂದೊಮ್ಮೆ ಘಟಕ ಕಾಲೇಜುಗಳಲ್ಲಿ ವೆಬ್‌ಸೈಟ್ ಇಲ್ಲದಿದ್ದರೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪ್ರಕಟಿಸಬೇಕು’ ಎಂದು ಸಚಿವರು ಸೂಚಿಸಿದರು.

‘ಕೌಶಲಾಭಿವೃದ್ಧಿ ಇಲಾಖೆಯ ‘ಸ್ಕಿಲ್ ಕನೆಕ್ಟ್’ ಪೋರ್ಟಲ್ ಅನ್ನು ಪರಿಷ್ಕರಿಸಲಾಗಿದ್ದು, ಅದನ್ನೂ ಡಿ. 1ರಂದು ಮುಖ್ಯಮಂತ್ರಿ ಲೋಕಾರ್ಪಣೆ ಮಾಡಲಿದ್ದಾರೆ. ಸ್ವಸಹಾಯ ಗುಂಪುಗಳ ಮಹಿಳೆಯರ ಜೀವನೋಪಾಯ ಸಾಮರ್ಥ್ಯ ವೃದ್ಧಿಗಾಗಿ ತಂತ್ರಾಂಶ ಅಳವಡಿಕೆ, ಬೆಂಗಳೂರಿನಲ್ಲಿ ಉತ್ಕೃಷ್ಟತಾ ಕೇಂದ್ರ ಕಟ್ಟಡದ ಉದ್ಘಾಟನೆ, ಹುಬ್ಬಳ್ಳಿಯಲ್ಲಿ ಬಹು ಕೌಶಲ್ಯ ಕೇಂದ್ರದ ಉದ್ಘಾಟನೆ ಕೂಡಾ ಇದೇ ಸಂದರ್ಭದಲ್ಲಿ ನಡೆಯಲಿದೆ. ಎನ್‌ಇಪಿ ಅನುಷ್ಠಾನಕ್ಕೆ ಪೂರಕವಾಗಿ ಐದು ವರ್ಷಗಳ ಗುರಿಯಿರಿಸಿ ಸಾಂಸ್ಥಿಕ ಅಭಿವೃದ್ಧಿ ಯೋಜನೆ (ಐಡಿಪಿ) ಸಿದ್ಧಪಡಿಸಲು ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ. ಡಿಸೆಂಬರ್ ಮೊದಲ ವಾರದಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಾರ್ಯಾಗಾರ ಆಯೋಜಿಸಲಿದೆ’ ಎಂದರು.

‘ಉಳಿದಂತೆ, ಡಿ. 1ರಿಂದ ಪ್ರತಿದಿನವೂ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ಪೋಸ್ಟರ್ ರಚನೆ ಸ್ಪರ್ಧೆ, ಉದ್ಯಮ-ಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕಾರ್ಯಾಗಾರಗಳು, ವಿದ್ವತ್ ಗೋಷ್ಠಿಗಳು ನಡೆಯಲಿವೆ. ಜೊತೆಗೆ, ಬೇರೆ ಬೇರೆ ವಿಭಾಗಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದರು.



‘ಜನಸ್ಪಂದನ’ ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ ‘ಪ್ರಜಾವಾಣಿ’ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಈಗ ಬಿಜೆಪಿಯ ಸಚಿವರೇ ಆದ ಆರ್. ಅಶೋಕ ಕೂಡ ಲಾಲ್‌ಬಾಗ್ ಸ್ವರೂಪವೇ ಬದಲಾಗಬೇಕು ಎಂದಿದ್ದಾರೆ.

‘ಲಾಲ್‌ಬಾಗ್ ಉದ್ಯಾನ: ಸ್ವರೂಪ ಬದಲಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಾಲ್‌ಬಾಗ್ ಉದ್ಯಾನದ ಸ್ವರೂಪವೇ ಬದಲಾಗಬೇಕು. ಅಲ್ಲಿ ಹಸಿರೀಕರಣ-ವನ್ನು ಹೆಚ್ಚಿಸುವುದರ ಜತೆಗೆ, ಪಕ್ಷಿಗಳಿಗೆ ಆಶ್ರಯ ತಾಣವಾಗಿಸುವ ಬಗ್ಗೆಯೂ ಚಿಂತನೆ ನಡೆಸಬೇಕು’ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ಹೇಳಿದರು.

‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ಯಾವ ಪುಣ್ಯಾತ್ಮ ಕಟ್ಟಿಸಿದನೋ, ಈ ಉದ್ಯಾನ ನಗರಕ್ಕೆ ವರದಾನವಾಗಿದೆ. ನಗರದ ಪರಿಸರ ಸಮತೋಲನ ಕಾಪಾಡುವಲ್ಲಿ ಮತ್ತು ಮಾಲಿನ್ಯ ನಿಯಂತ್ರಣ ಮಾಡುವಲ್ಲಿ ಮಹತ್ವದ ಪಾತ್ರವ-ಹಿಸುತ್ತದೆ. ಇದನ್ನು ಮುಂದಿನ ಜನಾಂಗಕ್ಕಾಗಿ ಉಳಿಸಿಕೊಂಡು ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ’ ಎಂದು ತಿಳಿಸಿದರು.

‘ಈ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವೈವಿಧ್ಯಮಯ ಹಕ್ಕಿಗಳು ಬರುವಂತಾಗಬೇಕು. ಇದಕ್ಕಾಗಿ ಅವುಗಳನ್ನು ಆಕರ್ಷಿಸುವ ಹಣ್ಣಿನ ಮರಗಳು ಮತ್ತು ಹೂವಿನ ಗಿಡಗಳನ್ನು ಬೆಳೆಸಲು ತಜ್ಞರ ಸಲಹೆಗಳನ್ನು ಪಡೆಯುವುದು ಸೂಕ್ತ. ಉದ್ಯಾನದಲ್ಲಿ ಹಕ್ಕಿಗಳ ಕಲರವ ತುಂಬಿದ್ದರೆ, ಅಲ್ಲಿ ವಾಯುವಿಹಾರ ಮಾಡುವವರಿಗೆ ವಿಶಿಷ್ಟ ಅನುಭವ ಸಿಗಲಿದೆ’ ಎಂದು ಅವರು ಅಭಿಪ್ರಾಯಪಟ್ಟರು.

‘ಹಿಂದೆ ಇಲ್ಲಿಗೆ ಬರುತ್ತಿದ್ದ ಎಷ್ಟೋ ರೀತಿಯ ಪಕ್ಷಿಗಳು ಈಗ ಕಾಣುತ್ತಿಲ್ಲ. ಗುಬ್ಬಚ್ಚಿಗಳನ್ನು ಈಗ ಬೆಂಗಳೂರಿನಲ್ಲಿ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಲಾಲ್‌ಬಾಗ್‌ನಲ್ಲಿ ಬಳಕೆ ಮಾಡದೇ ಇರುವ ಜಾಗಗಳನ್ನು ಗುರುತಿಸಿ, ಅಲ್ಲಿ ಹಣ್ಣುಗಳ ಮರ ಮತ್ತು ಹೂವಿನ ಗಿಡಗಳನ್ನು ನೆಡುವುದರಿಂದ ಅನುಕೂಲ ಆಗಬಹುದು. ಆದರೆ, ಇಲ್ಲಿ ನಡೆಯುವ ಹಣ್ಣುಗಳ ಮೇಳ, ಹಣ್ಣು– ತರಕಾರಿ ಮಾರಾಟದಂತಹ ಚಟುವಟಿಕೆ, ಪ್ರದರ್ಶನಗಳನ್ನು ನಿಲ್ಲಿಸಬೇಕು. ಇವುಗಳ ಮಾರಾಟಕ್ಕೆ ಬೇರೆ ಕಡೆಗಳಲ್ಲಿ ಸಾಕಷ್ಟು ಜಾಗಗಳಿವೆ. ಲಾಲ್‌ಬಾಗ್ ಉದ್ಯಾನ ಚಟುವಟಿ-ಕೆಗಳಿಗಷ್ಟೇ ಮೀಸಲಾಗಬೇಕು. ಇದರಿಂದ ಜನರ ದೈಹಿಕ ಮತ್ತು ಆರೋಗ್ಯಕ್ಕೂ ಅನುಕೂಲವಾಗು-ತ್ತದೆ’ ಎಂದರು.

ತುರಹಳ್ಳಿಯಲ್ಲಿ ಇದೇ ಮಾದರಿಯ ಉದ್ಯಾನ ರೂಪಿಸುವ ಸರ್ಕಾರದ ಪ್ರಯತ್ನಕ್ಕೆ ಕೆಲವರು ಅಡ್ಡಿಪಡಿಸಿದರು. ಅಲ್ಲಿ ಕೇವಲ ನೀಲಗಿರಿ ಮರಗಳಿವೆ. ನಗರದಲ್ಲಿ ಹಲವು ಕಡೆಗಳಲ್ಲಿ ಉದ್ಯಾನಗಳ-ನ್ನು ಮಾಡುವುದರಿಂದ ಪರಿಸರ ಮಾಲಿನ್ಯದ ಪರಿಣಾಮವನ್ನು ತಗ್ಗಿಸಬಹುದು. ಇಲ್ಲವಾದರೆ ದೆಹಲಿಯ ರೀತಿಯಲ್ಲಿ ಇಲ್ಲೂ ಮಾಲಿನ್ಯ ಹೆಚ್ಚಾಗಬಹುದು. ಜನರೂ ಇದರ ಬಗ್ಗೆ ಆಸಕ್ತಿ ವಹಿಸಬೇಕು ಎಂದು ಅಶೋಕ ಹೇಳಿದರು.

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸೌಲಭ್ಯ ಮೊಟಕು

ನವದೆಹಲಿ (ಪಿಟಿಐ): ಇತರೆ ಹಿಂದುಳಿದ ವರ್ಗ (ಒಬಿಸಿ) ಮತ್ತು ಅಲ್ಪಸಂಖ್ಯಾತ ವರ್ಗಗಳ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಮಾತ್ರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ ಯೋಜನೆಯನ್ನು ಸರ್ಕಾರ ಸೀಮಿತಗೊಳಿಸಿದೆ. ಶಿಕ್ಷಣ ಹಕ್ಕು ಕಾಯ್ದೆಯಡಿ 8ನೇ ತರಗತಿಯವರೆಗೆ ಮಾತ್ರ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣ ದೊರೆಯಲಿದೆ ಎಂದೂ ಪ್ರತಿಪಾದಿಸಿದೆ.

ಇದಕ್ಕೂ ಮೊದಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ಸೌಲಭ್ಯ ಅಲ್ಪಸಂಖ್ಯಾತ ಸಮುದಾಯದ 1 ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೂ ದೊರೆಯುತ್ತಿತ್ತು. ಎಸ್‌ಸಿ, ಎಸ್‌ಟಿಯ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳು ಮಾತ್ರವೇ ಪೂರ್ಣ ಪ್ರಮಾಣದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ.

ಈ ಕುರಿತ ಹೇಳಿಕೆಯಲ್ಲಿ ಕೇಂದ್ರ ಸರ್ಕಾರ ತನ್ನ ಕ್ರಮವನ್ನು ಸಮರ್ಥಿಸಿ-ಕೊಂಡಿದೆ. ಶಿಕ್ಷಣ ಹಕ್ಕು ಕಾಯ್ದೆ 2009ರ ಅನ್ವಯ ಪ್ರತಿ ಮಗುವಿಗೂ 1 ರಿಂದ 8ನೇ ತರಗತಿವರೆಗೂ ಮಾತ್ರ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡಬೇಕಾಗಿದೆ ಎಂದಿದೆ.

ಇತ್ತೀಚೆಗೆ ನಡೆದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 26ನೇ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆದ ವಿದ್ಯಾರ್ಥಿಗಳೊಂದಿಗೆ ಅತಿಥಿಗಳು

‘ತಾಂತ್ರಿಕ, ಡಿಜಿಟಲ್ ಕೌಶಲ ಅಳವಡಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ಯುವ ಉದ್ಯೋಗಿಗಳು ತಾಂತ್ರಿಕ ಮತ್ತು ಡಿಜಿಟಲ್ ಕೌಶಲಗಳನ್ನು ಅಳವಡಿಸಿಕೊಂಡು ಮೂಲ ಸೌಕರ್ಯ ಅಭಿವೃದ್ಧಿ ಮತ್ತು ದೇಶದ ಜಿಡಿಪಿ ಬೆಳವಣಿಗೆಗೆ ಕೈಜೋಡಿಸಬೇಕು’ ಎಂದು ವೋಲ್ವೊ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ ಹೇಳಿದರು.

ಇತ್ತೀಚೆಗೆ ನಡೆದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 26ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ‘ವಿದ್ಯಾರ್ಥಿಗಳು ನೈತಿಕ ಮೌಲ್ಯಗಳೊಂದಿಗೆ ನವೀನತೆ ಮತ್ತು ಬೆಳವಣಿಗೆಯನ್ನು ಉತ್ತೇಜಿಸುವ ಸಮತೋಲಿತ ಸಂಸ್ಕೃತಿಯನ್ನು ಅಳವ-ಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ 172 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಉತ್ತಮ ಶೈಕ್ಷಣಿಕ ಸಾಧನೆ ಮಾಡಿದ ಧನಂಜಯ ವಿ. ಅವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಶ್ರೇಷ್ಠ ವಿದ್ಯಾರ್ಥಿಯಾಗಿ ಆಯ್ಕೆಯಾದ ಪೂಜಾ ಓಹ್ಸಾ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿ.ಎಸ್. ರಾಮಪ್ರಸಾದ್ ಮಾತನಾಡಿದರು. ಸಂಸ್ಥೆಯ ನಿರ್ದೇಶಕರಾದ ಎಂ.ಆರ್. ಆನಂದರಾಮ್, ಜಿ. ರಾಮಚಂದ್ರ, ಶೈಕ್ಷಣಿಕ ಸಂಶೋಧನೆ ಮತ್ತು ಆಡಳಿತದ ನಿರ್ದೇಶಕರಾದ ಮಾನಸ ನಾಗಭೂಷಣಂ, ಮೌಲ್ಯಮಾಪನ ಕುಲಸಚಿವೆ ಸವಿತಾ ರಾಣಿ ರಾಮಚಂದ್ರನ್ ಇದ್ದರು.

ನಗರದಲ್ಲಿ ಇಂದು

ನೃತ್ಯವೈಭವ-2022: ಅತಿಥಿಗಳು: ಭುವನ ಜಿ. ಪ್ರಸಾದ್, ಅನಂತ ವಿಕ್ರಂ, ಸಾಯಿ ವೆಂಕಟೇಶ್, ಎಸ್. ನಂಜುಂಡರಾವ್, ಸೀತಾ ಗುರುಪ್ರಸಾದ್, ಮಣ್ಣೆ ಮೋಹನ್, ಆಯೋಜನೆ: ನಾಟ್ಯ ದೇಗುಲ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಸ್ಥಳ: ಸೇವಾ ಸದನ ಅಸೋಸಿಯೇಷನ್, 14ನೇ ಕ್ರಾಸ್, ಮಲ್ಲೇಶ್ವರ. ಬೆಳಿಗ್ಗೆ 9.30ರಿಂದ.

ನಾಡಹಬ್ಬ 2022: ಅತಿಥಿಗಳು: ರಾಮಲಿಂಗಾರೆಡ್ಡಿ, ಇಂದ್ರಜಿತ್ ಲಂಕೇಶ್, ವಸುಂಧರಾ ಕದಲೂರು, ಅಧ್ಯಕ್ಷತೆ: ಲಲಿತಾ ಥಾಮಸ್, ಆಯೋಜನೆ ಮತ್ತು ಸ್ಥಳ: ಕನ್ನಡ ವಿಭಾಗ, ಜ್ಯೋತಿ ನಿವಾಸ್ ಕಾಲೇಜು, ಕೋರಮಂಗಲ 5ನೇ ಹಂತ, ಬೆಳಿಗ್ಗೆ 10:30

2022-23ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ: ಬಿ.ಶ್ರೀರಾಮುಲು, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಪುಟ್ಟಣ್ಣ, ಕೆ.ವೈ. ನಾರಾಯಣಸ್ವಾಮಿ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ಸ್ನಾತಕೋತ್ತರ ಕಾನೂನು ಶಿಕ್ಷಣದಲ್ಲಿ ಸುಧಾರಣೆಯ ಕುರಿತು ಉಪನ್ಯಾಸ: ಉದ್ಘಾಟನೆ: ಹುಲುವಾಡಿ. ಜಿ. ರಮೇಶ್, ಅತಿಥಿಗಳು: ಸಿ. ಬಸವರಾಜು, ಅಧ್ಯಕ್ಷತೆ: ಸುರೇಶ.ವಿ. ನಾಡಗೌಡರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ ಆವರಣ, ಬೆಳಿಗ್ಗೆ 11

ಪದವಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಅತಿಥಿಗಳು: ಎಸ್. ಸಡಗೋಪನ್, ಪ್ರತಾಪ್ ಜಯರಾಮ್, ಎಂ. ಆರ್. ಜಯರಾಮ್, ಉಪಸ್ಥಿತಿ: ಎಂ. ಆರ್. ರಾಮಯ್ಯ, ಎಂ. ಆರ್. ಸೀತಾರಾಮ್, ಬಿ. ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ, ಮಕ್ಕಳ ದಿನಾಚರಣೆ: ಉದ್ಘಾಟನೆ: ಕೆ. ಜಯಪ್ರಕಾಶ ಹೆಗ್ಡೆ, ಅತಿಥಿಗಳು: ಬೈರಮಂಗಲ ರಾಮೇಗೌಡ, ಅಚ್ಯುತರಾವ್ ಪದಕಿ, ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಮಧ್ಯಾಹ್ನ 3

‘ಯಮನ ಸೋಲು’ ಪೌರಾಣಿಕ ನಾಟಕಗಳ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ವೆಂಕಟರಮಣಯ್ಯ ಡಿ., ಪ್ರಸ್ತುತಿ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸಂಜೆ 6, ‘ಸ್ಮಶಾನ ಕುರುಕ್ಷೇತ್ರಂ’ ನಾಟಕ: ರಚನೆ: ಕುವೆಂಪು, ನಿರ್ದೇಶನ: ಎಚ್. ಎನ್. ಆನಂದಮೂರ್ತಿ, ನಿರ್ವಹಣೆ: ಆಂಜನೇಯ, ಪ್ರಸ್ತುತಿ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಪೇಜಾವರಶ್ರೀ ವಿಶ್ವೇಶ ತೀರ್ಥ ಶ್ರೀಪಾದ ರಂಗಮಂದಿರ, ನ್ಯೂ ಇನ್‌ಕಮ್ ಟ್ಯಾಕ್ಸ್ ಬಡಾವಣೆ, ನಾಗರಬಾವಿ ವಾರ್ಡ್ ಆಫೀಸ್ ಎದುರು ರಸ್ತೆ, ಸಂಜೆ 7

ವಿದ್ಯಾರ್ಥಿಗಳ ಬ್ಯಾಗ್‌ನಲ್ಲಿ ಕಾಂಡೋಮ್!

ಒಂದನೇ ಪುಟದಿಂದ...

ಈ ಬಗ್ಗೆ ಪ್ರಶ್ನಿಸಿದಾಗ, ‘ಸಹಪಾಠಿಗಳು, ಶಾಲೆಗೆ ಬರುವ ಮೊದಲು ಖಾಸಗಿ ಟ್ಯೂಷನ್‌ನಲ್ಲಿ ಇರುವವರ ಕಡೆಗೆ ಬೆರಳು ತೋರಿಸಿದ್ದಾಳೆ’ ಎಂದೂ ಅವರು ಹೇಳಿದರು.

‘ಕಾಮ್ಸ್‌ನ ಶೇ 80ರಷ್ಟು ಸದಸ್ಯ ಶಾಲೆಗಳು ದಿಢೀರ್ ಆಗಿ ತಮ್ಮ ವಿದ್ಯಾರ್ಥಿಗಳ ಬ್ಯಾಗ್‌ಗಳನ್ನು ಪರಿಶೀಲಿಸಿ ಮಾಹಿತಿ ನೀಡಿವೆ’ ಎಂದು ಕಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ತಿಳಿಸಿದ್ದಾರೆ. ‘ಒಂದು ಶಾಲೆಯ ವಿದ್ಯಾರ್ಥಿಯ ಬ್ಯಾಗ್‌ನಲ್ಲಿ ಗರ್ಭ ನಿರೋಧಕ ಮಾತ್ರೆ (ಐ-ಪಿಲ್) ಕಂಡುಬಂದಿವೆ. ಅಲ್ಲದೆ, ನೀರಿನ ಬಾಟಲಿಗಳಲ್ಲಿ ಆಲ್ಕೋಹಾಲ್ ಇತ್ತು’ ಎಂದೂ ಅವರು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಅಭಯ ಆಸ್ಪತ್ರೆಯ ಸಲಹೆಗಾರ, ಮನೋವೈದ್ಯ ಎ. ಜಗದೀಶ್, ‘ಒಂಟಿ ತಾಯಿ ತನ್ನ 14 ವರ್ಷದ ಮಗನ ಶೂ ಇಡುವ ಜಾಗದಲ್ಲಿ ಕಾಂಡೋಮ್ ಕಂಡು ಆಘಾತಕ್ಕೆ ಒಳಗಾದ ಪ್ರಕರಣವೊಂದು ಇತ್ತೀಚೆಗೆ ನನ್ನ ಬಳಿ ಬಂದಿತ್ತು. ಅಂತಹ ಚಟುವ-ಟಿಕೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ಪ್ರಯೋಗ ಮಾಡಲು ಇಷ್ಟಪಡುವ ಕೆಲವು ಮಕ್ಕಳೂ ಇದ್ದಾರೆ. ಮಾದಕ ವ್ಯಸನ ಮತ್ತು ಅನ್ಯ ಲಿಂಗಿಯೊಂದಿಗೆ ಅತಿಯಾಗಿ ಬೆರೆಯುವುದು ದೈಹಿಕ ಸಂಪರ್ಕಕ್ಕೂ ಕಾರಣ ಆಗಬಹುದು. ಪೋಷಕರು ತಮ್ಮ ಮಕ್ಕಳೊಂದಿಗೆ ಕುಳಿತು ಮಾತನಾಡಬೇಕು. ಜೊತೆಗೆ ಮಾರ್ಗದರ್ಶನವನ್ನೂ ನೀಡಬೇಕು’ ಎಂದು ಸಲಹೆ ನೀಡಿದರು.

ಡಿ.10ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ‘ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್’ ಸಂಸ್ಥೆಯಿಂದ ರಾಜ್ಯೋತ್ಸವ ಮತ್ತು ಸಂಸ್ಥೆಯ 8ನೇ ವಾರ್ಷಿಕೋತ್ಸವದ ಅಂಗವಾಗಿ ಡಿ. 10ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿದೆ.

ಸ್ಪರ್ಧೆಯನ್ನು 3 ವರ್ಗಗಳಾಗಿ ವಿಂಗಡಿಸಿದ್ದು, 8, 12, 16 ವರ್ಷದ ಮಕ್ಕಳು ಪಾಲ್ಗೊಳ್ಳಬಹುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಮಾಣಪತ್ರ, ವಿಜೇತರಿಗೆ ಬಹುಮಾನ ನೀಡಲಾಗುವುದು. ಆಸಕ್ತರು 9380671947 ಸಂಖ್ಯೆಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ರೇಸ್

ಕೋಆಲ ಗೆಲ್ಲುವ ನಿರೀಕ್ಷೆ

ಪಿ. ಎಂ. ಚೆನ್ನಬಸವಣ್ಣ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೋಆಲ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೆವೆನ್ತ್ ಸ್ಟಾರ್ 7, ಮೈ ಒನ್ ಅಂಡ್ ಓನ್ಲಿ 3, ಸರ್ಪ್ರೈಸ್ ಪ್ಯಾಕೇಜ್ 6
2ನೇ ರೇಸ್: ಕಾವಾರೋಝಿ 5, ಗ್ಯಾರಿಸನ್ 2, ಕ್ರೆಸೆಂಡೊ 6
3ನೇ ರೇಸ್: ಬಾಕ್ಕಸ್ 7, ಶಿವಾಲಿಕ್ ಆಟಿಟ್ಯೂಡ್ 9, ಮಿಸ್ ಚೈನಾ 12
4ನೇ ರೇಸ್: ಓ ಕನ್ಹಯ್ಯ 4, ಪಾರ್ಕರ್ 6, ಕುಶಾಕ್ 1
5ನೇ ರೇಸ್: ಕೋಆಲ 6, ಕ್ವೀನ್ ಸ್ಟಾರ್ 8, ಕ್ಯೂಟ್ ಲಿಟಲ್ ಹಂಟರ್ 4
6ನೇ ರೇಸ್: ಸ್ಮಾರ್ಟ್ ಕ್ಯಾಡಿಲಾಕ್ 10, ಮ್ಯೂಟಂಟ್ 3, ಸರ್ ಕ್ಯಾಕ್ಯುಲಸ್ 9
7ನೇ ರೇಸ್: ವಿಂಡ್ ವಿಸ್ಲರ್ 8, ತರೇಕ್ 7, ಸೆಫಿನ 2

ಉತ್ತಮ ಬೆಟ್: ವಿಂಡ್ ವಿಸ್ಲರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

‘ಕನ್ನಡ ಚಿತ್ತಾರ’ ಚಿತ್ರ ರಚನಾ ಸ್ಪರ್ಧೆ • ಕ್ಯಾನ್ವಾಸ್ ಮೇಲೆ ಅರಳಿದ ಹತ್ತಾರು ಚಿತ್ತಾರಗಳು

ಮಕ್ಕಳ ಕುಂಚದಲ್ಲಿ ‘ಕನ್ನಡದ ನಾಳೆಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟ ಕೈಗಳ ಕುಂಚದಲ್ಲಿ ಮೂಡಿಬಂದ ಕನ್ನಡ ನಾಡಿನ ವೈಭವ, ಭಾಷಾಭಿಮಾನದ ಸಾಲುಗಳು, ನಾಡಿನ ಭವಿಷ್ಯದ ಕನಸುಗಳು... ಹೀಗೆ ಹತ್ತಾರು ಚಿತ್ತಾರಗಳು ಕ್ಯಾನ್ವಾಸ್ ಮೇಲೆ ಅರಳಿದವು.

ಮುಳಿಯ ಪ್ರತಿಷ್ಠಾನದ ವತಿಯಿಂದ ನಗರದ ಮಣಿಪಾಲ್ ಸೆಂಟರ್‌ನಲ್ಲಿರುವ ಮುಳಿಯ ಜುವೆಲ್ಸ್ ಆವರಣದಲ್ಲಿ ಮಕ್ಕಳಲ್ಲಿ ಕನ್ನಡ ಜಾಗೃತಿ ಮೂಡಿಸುವ ಸಲುವಾಗಿ ಹಮ್ಮಿಕೊಂಡ ‘ಕನ್ನಡ ಚಿತ್ತಾರ’ ಚಿತ್ರ ರಚನಾ ಸ್ಪರ್ಧೆಯ ನೋಟವಿದು.

ಹಂಪಿಯ ರಥ, ಮಲೆನಾಡಿನ ಹಸಿರು ವನರಾಶಿ, ಪ್ರಾಣಿ ಪಕ್ಷಿಗಳು ಬಣ್ಣ ತಾಳಿದವು. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು... ಸಾಲುಗಳೂ ಚಿತ್ರದ ಚೌಕಟ್ಟಿಗೆ ತೋರಣ ಕಟ್ಟಿದವು. ‘ಕಾಂತಾರ’ ಚಿತ್ರದ ಪಂಜುರ್ಲಿಯ ಮುಖವರ್ಣಿಕೆಗೆ ಮಕ್ಕಳು ಜೀವ ತುಂಬಿದರು.

ಬೆಂಗಳೂರಿನ ಮುಳಿಯ ಜ್ಯುವೆಲ್ಸ್ ಆವರಣದಲ್ಲಿ ನಡೆದ ‘ಕನ್ನಡ ಚಿತ್ತಾರ’ದ ಸಮಾರೋಪದಲ್ಲಿ ಬಿ.ಎಲ್. ಶಂಕರ್ (ಎಡದಿಂದ ನಾಲ್ಕನೆಯವರು) ಅವರು ಮಕ್ಕಳಿಗೆ ಬಹುಮಾನ ವಿತರಿಸಿದರು. ಸುಬ್ರಹ್ಮಣ್ಯ ಭಟ್, ಮಧುಸೂದನ ಸುಣ್ಣಂಬಳ, ನಾ. ದಾಮೋದರ ಶೆಟ್ಟಿ, ತೀರ್ಪುಗಾರರಾದ ಅವನಿ ಶರ್ಮಾ ಮತ್ತು ತಂಡದವರು ಇದ್ದರು

ಚಿತ್ರ ರಚನೆ ಮುಗಿಸಿದ ಮಕ್ಕಳು ವೇದಿಕೆಯೇರಿ ಹಾಡಿದರು, ಶ್ಲೋಕಗಳನ್ನು ಹೇಳಿದರು. ಒಟ್ಟಿನಲ್ಲಿ ‘ಕನ್ನಡದ ನಾಳೆ’ಗಳು ಬಣ್ಣ ಪಡೆದವು.

ಕಾರ್ಯಕ್ರಮ ಉದ್ಘಾಟಿಸಿದ ಅಂತ-ರರಾಷ್ಟ್ರೀಯ ಚಿತ್ರ ಕಲಾವಿದ ಎಂ.ಎಸ್. ಮೂರ್ತಿ, ‘ಮಕ್ಕಳ ಚಿತ್ರಗಳನ್ನು ಪೋಷಕರು ಗಂಭೀರವಾಗಿ ಓದಿ ಅರ್ಥಮಾಡಿಕೊಳ್ಳಬೇಕು. ಮಕ್ಕಳ ಚಿತ್ರಗಳನ್ನು ಸಂಗ್ರಹಿಸಬೇಕು. ಇದು ದೇಶದ ದೊಡ್ಡ ಆಸ್ತಿ’ ಎಂದರು.

ಹಿರಿಯ ಪತ್ರಕರ್ತ ದು.ಗು. ಲಕ್ಷ್ಮಣ, ಸಾಹಿತಿ, ರಂಗಕರ್ಮಿ ನಾ. ದಾಮೋದರ ಶೆಟ್ಟಿ ಮಾತನಾಡಿದರು. ಮುಳಿಯ ಜ್ಯುವೆಲ್ಸ್ ವ್ಯವಸ್ಥಾಪಕ ಸುಬ್ರಹ್ಮಣ್ಯ ಭಟ್ ಸ್ವಾಗತಿಸಿದರು. ಮುಳಿಯ ಜ್ಯುವೆಲ್ಸ್‌ನ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕ ಶ್ಯಾಮ ಮೂರ್ತಿ ಇದ್ದರು.

ಕನ್ನಡ ಮಾತಾಡಿ ಕ್ಯುಆರ್ ಕೋಡ್ ಬಿಡುಗಡೆ: ಕನಕಪುರ ರಸ್ತೆ ಕನ್ನಡ ಬಳಗ ಹಾಗೂ ಸ್ಲೇಟು ಬಳಪ ಸಂಸ್ಥೆಯ ಸಂಸ್ಥಾಪಕಿ ಭಾರ್ಗವಿ ಹೇಮಂತ್ ಅವರು ರೂಪಿಸಿದ ಸಂವಹನ ಕನ್ನಡ ವಾಕ್ಯಗಳ ಡಿಜಿಟಲ್ ವೇದಿಕೆ ‘ಸ್ಕ್ಯಾನ್ ಮಾಡಿ ಕನ್ನಡ ಮಾತಾಡಿ’ ಪರಿಕಲ್ಪನೆಯ ಕ್ಯುಆರ್ ಕೋಡನ್ನು ಎಂ.ಎಸ್.ಮೂರ್ತಿ ಬಿಡುಗಡೆ ಮಾಡಿದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ಬಿಜಿಎಸ್ ಇಂಟ-ರ್‌ನ್ಯಾಷನಲ್ ಅಕಾಡೆಮಿಯಾ ಸ್ಕೂಲ್‌ನ ಪ್ರಾಂಶುಪಾಲ ಮಧುಸೂದನ ಸುಣ್ಣಂಬಳ ಮಾತನಾಡಿದರು. ಕಾರ್ಯಕ್ರಮವನ್ನು ವೇಣು ಶರ್ಮ ಸಂಯೋಜನೆ ಮಾಡಿದ್ದರು.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ),
ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು-560094 ದೂರವಾಣಿ: 080-22172033/2032/2476
ಫ್ಯಾಕ್ಸ್: 080-23513126

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕೆಲಸಕ್ಕೆ ಐಟಂ ದರದ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ಅಂತರಿಕ್ಷ ಭವನ, ಇಸ್ರೋ ಮುಖ್ಯಾಲಯ ಬೆಂಗಳೂರು ಇಲ್ಲಿರುವ ಹವಾ ನಿಯಂತ್ರಣ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ವಾರ್ಷಿಕ ನಿರ್ವಹಣೆ ಸೇವಾ ಗುತ್ತಿಗೆ.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಜಿ/ಇಸ್ರೋ-ಹೆಚ್‌ಕ್ಯೂ/ಎಸಿ/ಎಎಂಸಿ/04/ಪಿ/2022-23 ದಿನಾಂಕ: 28.11.2022
ಟೆಂಡರ್‌ಗೆ ಇಟ್ಟಿರುವ ಅಂದಾಜು ವೆಚ್ಚ	ರೂ. 26.31 ಲಕ್ಷಗಳು
ಪೂರ್ಣಗೊಳಿಸುವ ಅವಧಿ	ಹನ್ನೆರಡು (12) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ	28.11.2022, 18:10 ಗಂಟೆಯಿಂದ 06.12.2022, 23:59 ಗಂಟೆವರೆಗೆ
ಟೆಂಡರ್‌ಗಳನ್ನು ಸ್ವೀಕರಿಸುವ ಕಡೆಯ ದಿನಾಂಕ & ಸಮಯ	09.12.2022, 15.00 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	09.12.2022, 16:30 ಗಂಟೆಗೆ.
ಇಎಂಡಿ	ರೂ.52,620.00

ಆಸಕ್ತಿಯುಳ್ಳ ಟೆಂಡರ್‌ದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು www.isro.gov.in ಇಲ್ಲಿ ಪರಿವೀಕ್ಷಿಸಬಹುದು. ಟೆಂಡರ್ ಪ್ರಕಟಣೆ ವಿವರ ಮತ್ತು ಟೆಂಡರ್ ದಸ್ತಾವೇಜುಗಳನ್ನು www.tenderwizard.com/ISRO ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ, ಇಸ್ರೋ ಮುಖ್ಯಾಲಯ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❤ ಸುಭಾಷಿತ ❤

ಯಾವುದೇ ಒಂದು ಸಮಾಜದ ಬೆಳವಣಿಗೆಯನ್ನು ನಾನು ಆ ಸಮಾಜದ ಹೆಣ್ಣುಮಕ್ಕಳ ಸ್ಥಿತಿಗತಿಯ ಮೇಲೆ ನಿರ್ಧರಿಸುತ್ತೇನೆ.

-ಡಾ. ಬಿ.ಆರ್.ಅಂಬೇಡ್ಕರ್

ಸಲಿಂಗ ವಿವಾಹ: ವಿಚಾರಣೆಗೆ ಕೈಗೆತ್ತಿಕೊಂಡ ನಡೆ ಸ್ವಾಗತಾರ್ಹ

ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು ತಮ್ಮ ಇಚ್ಛೆಯ ವ್ಯಕ್ತಿಯನ್ನು ವಿವಾಹವಾದರೆ ಅದಕ್ಕೆ ಶಾಸನಾತ್ಮಕ ಮಂಜೂರಾತಿ ಇರಬೇಕು ಹಾಗೂ ಅದಕ್ಕೆ ಕಾನೂನಿನ ಮಾನ್ಯತೆ ಇರಬೇಕು ಎಂಬ ಬೇಡಿಕೆ ಇರಿಸಿರುವ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸಮ್ಮತಿಸುವ ಮೂಲಕ ಸುಪ್ರೀಂ ಕೋರ್ಟ್ ಸ್ವಾಗತಾರ್ಹ ಕೆಲಸ ಮಾಡಿದೆ. ತಮಗೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ವಿವಾಹ ಆಗಲು ಸಾಧ್ಯವಿಲ್ಲದವರು 1954ರ ವಿಶೇಷ ವಿವಾಹ ಕಾಯ್ದೆಯ ಅಡಿಯಲ್ಲಿ ಮದುವೆ ಆದರೆ ಅದನ್ನು ಕಾನೂನುಬದ್ಧಗೊಳಿಸಬೇಕು ಎಂಬ ಬೇಡಿಕೆ ಹೊಂದಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರು ಇರುವ ನ್ಯಾಯಪೀಠವು ಸೂಚಿಸಿದೆ. ಬೇರೆ ಹೈಕೋರ್ಟ್‌ಗಳಲ್ಲಿ ಈ ವಿಚಾರವಾಗಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾವಣೆ ಮಾಡುವಂತೆಯೂ ನ್ಯಾಯಪೀಠ ಸೂಚಿಸಿದೆ. ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ತೀರ್ಮಾನವೇ ಸಕಾರಾತ್ಮಕ ನಡೆ. 2018ರಲ್ಲಿ ನವತೇಜ್ ಸಿಂಗ್ ಜೋಹರ್ ಪ್ರಕರಣದಲ್ಲಿ, ಸಲಿಂಗಕಾಮ ಅಪರಾಧವಲ್ಲ ಎಂದು ಹೇಳಿದ್ದ ಹಾಗೂ 2017ರಲ್ಲಿ ಪುಟ್ಟಸ್ವಾಮಿ ಪ್ರಕರಣದಲ್ಲಿ, ಖಾಸಗಿತನದ ಹಕ್ಕನ್ನು ಎತ್ತಿಹಿಡಿದಿದ್ದ ನೆಲೆಯಲ್ಲಿಯೇ ಕೋರ್ಟ್ ಈ ಅರ್ಜಿಗಳನ್ನು ಪರಿಗಣಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಈ ವಿಚಾರವಾಗಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ಸುಪ್ರೀಂ ಕೋರ್ಟ್ ತೀರ್ಮಾನವೇ ಸಕಾರಾತ್ಮಕ ನಡೆ

ಕೇಂದ್ರ ಸರ್ಕಾರವು ಸಲಿಂಗ ವಿವಾಹವನ್ನು ಈ ಹಿಂದೆ ವಿರೋಧಿಸಿದೆ. 'ಭಾರತದಲ್ಲಿ ವಿವಾಹವು ಹಿಂದಿನಿಂದಲೂ ಬಂದಿರುವ ಸಂಪ್ರದಾಯಗಳು, ಆಚರಣೆಗಳು, ವಿಧಿಗಳು, ಸಾಂಸ್ಕೃತಿಕ ಮೌಲ್ಯಗಳು ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ನಿಂತಿರುತ್ತದೆ' ಎಂದು ಸರ್ಕಾರ ಹೇಳಿತ್ತು. ಸಲಿಂಗ ವಿವಾಹವನ್ನು ಕಾನೂನಿನ ಅಡಿಯಲ್ಲಿ ಮಾನ್ಯ ಮಾಡುವ ರೀತಿಯಲ್ಲಿ ಯಾವ ಮೂಲಭೂತ ಹಕ್ಕಿನ ವ್ಯಾಪ್ತಿಯನ್ನೂ ವಿಸ್ತರಿಸಲು ಆಗದು ಎಂದು ಅದು ಹೇಳಿತ್ತು. ಆದರೆ, ಸಮಾಜದ ವರ್ತನೆಗಳು ಹಾಗೂ ಸಮಾಜದ ಬಯಕೆಗಳನ್ನು ಮುಂದಿಟ್ಟುಕೊಂಡು, ದೇಶದ ಇತರ ಯಾವುದೇ ಪ್ರಜೆಗೆ ಸಮನಾಗಿರುವ ಒಂದು ನಿರ್ದಿಷ್ಟ ವರ್ಗದವರ ವಿರುದ್ಧದ ತಾರತಮ್ಯವನ್ನು ಸಮರ್ಥಿಸಿಕೊಳ್ಳಲು ಆಗದು. ಅರ್ಜಿದಾರರ ಪರವಾಗಿ ಕೆಲವು ಮಹತ್ವದ ಅಂಶಗಳನ್ನು ನ್ಯಾಯಾಲಯದ ಮುಂದೆ ಇರಿಸಲಾಗಿದೆ. ಅಂತರ್ಜಾತಿ ಹಾಗೂ ಅಂತರ್‌ಧರ್ಮ ವಿವಾಹಿತರು ಸಮಾಜದಲ್ಲಿ ಹಲವು ಸಂದರ್ಭಗಳಲ್ಲಿ ಈಗಲೂ ವಿರೋಧ ಎದುರಿಸುತ್ತಾರೆ. ಅವರಿಗೆ ಕಾನೂನಿನ ಅಡಿಯಲ್ಲಿ ಇರುವಂತಹ ರಕ್ಷಣೆಯನ್ನೇ ತಮಗೂ ನೀಡಬೇಕು ಎಂದು ಸಲಿಂಗ ವಿವಾಹಕ್ಕೆ ಮಾನ್ಯತೆ ಕೋರಿ ಅರ್ಜಿ ಸಲ್ಲಿಸಿರುವವರು ಕೋರ್ಟ್ ಮುಂದೆ ಮನವಿ ಮಾಡಿದ್ದಾರೆ. ತಮ್ಮ ಬೇಡಿಕೆ ಇರುವುದು 1954ರ ಕಾಯ್ದೆಯನ್ನು ಲಿಂಗ ನಿರಪೇಕ್ಷ ಆಗಿಸುವುದಕ್ಕೆ ಎಂದು ಅವರು ಕೋರ್ಟ್ ಮುಂದೆ ವಿವರಣೆ ನೀಡಿದ್ದಾರೆ.

2018ರಲ್ಲಿ ಸುಪ್ರೀಂ ಕೋರ್ಟ್ ಸಲಿಂಗಕಾಮದ ವಿಚಾರವಾಗಿ ನೀಡಿದ ತೀರ್ಪು, ಸಮಾಜದ ಧೋರಣೆಯನ್ನು ಬದಲಾಯಿಸುವಲ್ಲಿ ಹಾಗೂ ಸಮಾನತೆಯ ಸಂದೇಶವನ್ನು ಹರಡುವಲ್ಲಿ ನೆರವಾಗಿದೆ. ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು, ಘನತೆಯಿಂದ ಬದುಕುವ ಹಕ್ಕು ತಮಗೂ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಇದು ನೆರವಾಗಿದೆ. ಲೈಂಗಿಕ ಅಲ್ಪಸಂಖ್ಯಾತರ ವಿವಾಹದ ಹಕ್ಕುಗಳನ್ನು ನ್ಯಾಯಾಲಯಗಳು ಗುರುತಿಸಿವೆ. ಅವರ ಹಕ್ಕುಗಳನ್ನು ರಕ್ಷಿಸುವಂತೆ ಪೊಲೀಸರಿಗೆ ಸೂಚನೆ ನೀಡಿವೆ. ಸಾಮಾಜಿಕ ಬದಲಾವಣೆಗಳು ಆಗುವ [illegible]. ಸುಪ್ರೀಂ ಕೋರ್ಟ್ ತನ್ನ ಪ್ರಗತಿಪರ ತೀರ್ಪುಗಳ ಮೂಲಕ ಅಂತಹ ಬದಲಾವಣೆಗಳಿಗೆ ವೇಗ ನೀಡಿದೆ. ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಹಕ್ಕು ಸೇರಿದಂತೆ ಹಲವು ಹಕ್ಕುಗಳು ಮತ್ತು ಸೌಲಭ್ಯಗಳಿಗೂ ಮದುವೆಯ ವಿಚಾರವಾಗಿ ಕಾನೂನಿನ ಮೂಲಕ ಸಿಗುವ ಹಕ್ಕಿಗೂ ಸಂಬಂಧ ಇದೆ. 2018ರಲ್ಲಿ, ಸಲಿಂಗಕಾಮವನ್ನು ಅಪರಾಧವಲ್ಲ ಎಂದು [illegible] ನ್ಯಾಯಪೀಠದಲ್ಲಿ ಈಗ ಸಿಜೆಐ ಆಗಿರುವ ಚಂದ್ರಚೂಡ್ ಅವರೂ ಇದ್ದರು. ಸಲಿಂಗಕಾಮವು ಅಪರಾಧ ಅಲ್ಲ ಎಂದಷ್ಟೇ ಹೇಳಿ ಸಮಾನತೆ ಸಾಧಿಸಲು ಆಗದು, ಸಮಾನತೆಯು ಮನೆ, ಕೆಲಸದ ಸ್ಥಳ ಸೇರಿದಂತೆ ಬದುಕಿನ ಎಲ್ಲ ವಲಯಗಳಿಗೂ ವಿಸ್ತರಿಸಬೇಕು ಎಂದು ಅವರು ಹೇಳಿದ್ದರು. ಅವರ ಮಾತುಗಳ ಹಿಂದಿನ ಚಿಂತನೆ ಬಹಳ ಸ್ಪಷ್ಟವಾದ ಸಂದೇಶವನ್ನು ನೀಡುತ್ತದೆ.

ಮತ್ತೊಮ್ಮೆ ಅಧಿಕಾರ ಹಿಡಿಯಲು ಹೊರಟಿರುವ ಮಾರ್ಗದಲ್ಲಿ ಹಲವು ಅಡ್ಡಗಾಲು

ಇಮ್ರಾನ್: ಪಾಕ್ ಒಡಕಿಗೆ ಮುನ್ನುಡಿ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪಾಕಿಸ್ತಾನದಲ್ಲಿ ನಾಟಕೀಯ ಬೆಳವಣಿಗೆಗಳು ಸದ್ಯಕ್ಕೆ ಮುಗಿಯುವ ಹಾಗೆ ಕಾಣುತ್ತಿಲ್ಲ. ರಾವಲ್ಪಿಂಡಿ ಮತ್ತು ಇಸ್ಲಾಮಾಬಾದ್ ಎಂಬ ಎರಡು ಅಧಿಕಾರ ಕೇಂದ್ರಗಳನ್ನು ಹೊಂದಿರುವ ಪಾಕಿಸ್ತಾನದಲ್ಲಿ, ಆ ಕೇಂದ್ರಗಳ ನಡುವೆ ಪೈಪೋಟಿ, ಗುದ್ದಾಟ, ಹೊಂದಾಣಿಕೆ ಮತ್ತು ಮುನಿಸು ಸಾಮಾನ್ಯ ಎನ್ನುವಂತಾಗಿದೆ. ಕಳೆದ ವರ್ಷ ಗುಪ್ತಚರ ಇಲಾಖೆಯ ಮುಖ್ಯಸ್ಥರ ನೇಮಕದ ವಿಷಯದಲ್ಲಿ ಅಂದಿನ ಪ್ರಧಾನಿ ಇಮ್ರಾನ್ ಖಾನ್ ಮತ್ತು ಸೇನಾ ಮುಖ್ಯಸ್ಥ ಖಮರ್ ಜಾವೇದ್ ಬಾಜ್ವಾ ಅವರ ನಡುವೆ ಭಿನ್ನಾಭಿಪ್ರಾಯ ಮೊಳೆತಿತ್ತು. ಅದು ಹಿರಿದಾಗುತ್ತಾ ಪ್ರತಿಪಕ್ಷಗಳು ಇಮ್ರಾನ್ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಹಂತಕ್ಕೆ ಬೆಳೆಯಿತು.

ಪಾಕಿಸ್ತಾನ್ ತೆಹರೀಕ್ ಇ ಇನ್ಸಾಫ್‌ನ (ಪಿಟಿಐ) ಕೆಲವು ಸಂಸದರು ಪ್ರತಿಪಕ್ಷದ ಪಾಳಯದಲ್ಲಿ ಗುರುತಿಸಿಕೊಂಡರು. ಸಂಸತ್ತಿನಲ್ಲಿ ಅವಿಶ್ವಾಸ ಮತ ಪ್ರಕ್ರಿಯೆ ವಿಳಂಬವಾದಾಗ, ವಿಷಯವು ನ್ಯಾಯಾಲಯದ ಅಂಗಳಕ್ಕೆ ಹೋಯಿತು. ಅಂತೂ ಕೊನೆಗೆ ಇಮ್ರಾನ್ ಖಾನ್ ತಮ್ಮ ಸ್ಥಾನ ತ್ಯಜಿಸಿದರು. ಆದರೆ ಅವರು ಸುಮ್ಮನೆ ಕೂರಲಿಲ್ಲ. ತಮ್ಮ ಪದಚ್ಯುತಿಗೆ ಸೇನೆ ಕಾರಣ ಎಂದರು. ನವಾಜ್ ಷರೀಫ್ ಇಂಗ್ಲೆಂಡಿನಲ್ಲಿ ಕೂತು ರಾಜಕೀಯ ಬಿಕ್ಕಟ್ಟು ಸೃಷ್ಟಿಸುತ್ತಿದ್ದಾರೆ ಎಂದರು. ಅಮೆರಿಕಕ್ಕೆ ತಾನು ಅಧಿಕಾರದಲ್ಲಿ ಇರುವುದು ಬೇಕಿಲ್ಲ ಹಾಗಾಗಿ ಹಿಂಬದಿ ನಿಂತು ಅದು ದಾಳ ಉರುಳಿಸುತ್ತಿದೆ, ಪಾಕಿಸ್ತಾನದ ಆಂತರಿಕ ವಿಷಯದಲ್ಲಿ ಮೂಗು ತೂರಿಸುತ್ತಿದೆ ಎಂದು ಆರೋಪಿಸಿದರು. ಆದರೆ ಈ ಯಾವ ಆರೋಪಕ್ಕೂ ಅವರು ಸೂಕ್ತ ದಾಖಲೆ ಒದಗಿಸಲಿಲ್ಲ. ಇಷ್ಟಕ್ಕೇ ಸುಮ್ಮನಾಗದ ಇಮ್ರಾನ್, ಪಾಕಿಸ್ತಾನದ ವಿವಿಧ ನಗರಗಳಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು. ಆ ಸಭೆಗಳಿಗೆ ಜನಸಾಗರವೇ ಹರಿದುಬಂತು. ಇದರಿಂದ ಜನರ ಅನುಕಂಪ ತಮ್ಮ ಪರ ಇದೆ ಎಂಬುದನ್ನು ಖಾನ್ ಕಂಡುಕೊಂಡರು. ಸೇನೆ ಮತ್ತು ಶೆಹಬಾಜ್ ಷರೀಫ್ ನೇತೃತ್ವದ ಸರ್ಕಾರದ ವಿರುದ್ಧ 'ಲಾಂಗ್ ಮಾರ್ಚ್'ಗೆ ಕರೆ ಕೊಟ್ಟರು.

ಪೇಶಾವರದಿಂದ ಇಮ್ರಾನ್ ಖಾನ್ ಇಸ್ಲಾಮಾಬಾದ್‌ನತ್ತ ಹೊರಟರೆ, ಇತರ ಭಾಗಗಳಿಂದ ಖಾನ್ ಬೆಂಬಲಿಗರು ಇಸ್ಲಾಮಾಬಾದ್‌ನತ್ತ ಮುಖ ಮಾಡಿದರು. ಸಂಸತ್ತನ್ನು ಕೂಡಲೇ ವಿಸರ್ಜಿಸಬೇಕು, ಸಾರ್ವತ್ರಿಕ ಚುನಾವಣೆಯನ್ನು ತಡಮಾಡದೇ ಘೋಷಿಸಬೇಕು ಎಂಬ ಎರಡು ಆಗ್ರಹಗಳು ಈ ಸುದೀರ್ಘ ಜಾಥಾದ ಗುರಿಯಾಗಿದ್ದವು. ತ್ವರಿತವಾಗಿ ಚುನಾವಣೆ ನಡೆದರೆ, ಜನರ ಅನುಕಂಪವು ಮತವಾಗಿ ಪರಿವರ್ತನೆಗೊಳ್ಳುತ್ತದೆ, ಬಹುಮತದಿಂದ ಸರ್ಕಾರ ರಚಿಸಬಹುದು ಎಂಬುದು ಇಮ್ರಾನ್ ಲೆಕ್ಕಾಚಾರವಾಗಿತ್ತು. ಮುಖ್ಯವಾಗಿ ಸೇನೆಯ ಮುಖ್ಯಸ್ಥರ ಅಧಿಕಾರದ ಅವಧಿ ಅಂತ್ಯಗೊಳ್ಳುವ (ನ. 29) ಮುನ್ನವೇ ಚುನಾವಣೆ ನಡೆದು ತಮ್ಮ ಸರ್ಕಾರ ರಚನೆಯಾದರೆ, ತಮ್ಮ ಆಪ್ತವಲಯದ ಅಧಿಕಾರಿಯನ್ನು ಸೇನೆಯ ಉನ್ನತ ಹುದ್ದೆಗೆ ನಿಯುಕ್ತಿ ಮಾಡಬಹುದು ಎಂಬ ಅಭಿಲಾಷೆಯನ್ನು ಇಮ್ರಾನ್ ಹೊಂದಿದ್ದರು. ಹಾಗಾಗಿಯೇ ಮೇ ತಿಂಗಳಿನಲ್ಲಿ ಇಮ್ರಾನ್ ತಮ್ಮ ಆಂದೋಲನವನ್ನು ಆರಂಭಿಸಿದರು.

ಆದರೆ ಎಲ್ಲವೂ ಇಮ್ರಾನ್ ಅಂದುಕೊಂಡಂತೆ ಆಗಲಿಲ್ಲ. ಮಾರ್ಗ ಮಧ್ಯದಲ್ಲಿ ಇಮ್ರಾನ್ ಅವರ ಮೇಲೆ ದಾಳಿ ಆಯಿತು. ಅವರ ಕಾಲಿಗೆ ಗುಂಡು ತಗುಲಿತು. ಇದು ಹತ್ಯೆಯ ಪ್ರಯತ್ನ ಎಂದ ಇಮ್ರಾನ್, ತಮ್ಮನ್ನು ಹತ್ಯೆ ಮಾಡಲು ಸರ್ಕಾರ ಮತ್ತು ಸೇನೆ ಸಂಚು ರೂಪಿಸಿವೆ ಎಂದರು. ಆದರೆ ಯಾವುದೇ ದಾಖಲೆ ಮುಂದಿಡಲಿಲ್ಲ. ದಾಳಿಯ ಬಳಿಕ ಇಮ್ರಾನ್ ಜನಪ್ರಿಯತೆ ಮತ್ತಷ್ಟು ಹೆಚ್ಚಿತು. ಇಮ್ರಾನ್ ಉತ್ತಮ ಕ್ರಿಕೆಟರ್ ಮಾತ್ರ ಅಲ್ಲ, ಅವರೊಬ್ಬ ಚಾಣಾಕ್ಷ ರಾಜಕಾರಣಿ. ಇದೀಗ ಪಾಕ್ ಸೇನೆಯ ವಿರುದ್ಧ ಮಾತನಾಡುತ್ತಿರುವ ಇಮ್ರಾನ್, ತಾವು ರಾಜಕೀಯದ ಮೆಟ್ಟಿಲು ಏರುವಾಗ, ಪಾಕಿಸ್ತಾನದ ದುಃಸ್ಥಿತಿಗೆ ಸೇನೆಯ ರಾಜಕೀಯ ಹಸ್ತಕ್ಷೇಪವೂ ಕಾರಣ ಎಂದು ನೆಪಮಾತ್ರಕ್ಕೂ ಹೇಳಿರಲಿಲ್ಲ. ಅಮೆರಿಕವನ್ನು ಮೆಚ್ಚಿಸುವ ಮಾತನ್ನು ಆಡಿದ್ದರು. ಕಟ್ಟಾ ಇಸ್ಲಾಮ್ ಅನುಯಾಯಿ ಎಂಬಂತೆ ಬಿಂಬಿಸಿಕೊಂಡರು. ತಾಲಿಬಾನ್ ಜೊತೆ ಗುರುತಿಸಿಕೊಂಡರು. ಪ್ರಧಾನಿ ಪಟ್ಟ ಇಮ್ರಾನ್ ಅವರ ಕೈಗೆಟುಕಿತು. ಆದರೆ ಅಫ್ಗಾನಿಸ್ತಾನದಿಂದ ಅಮೆರಿಕ ಕಾಲ್ತೆಗೆಯಲು ನಿರ್ಧರಿಸಿದಾಗ, ಇಮ್ರಾನ್ ಅಮೆರಿಕದಿಂದ ಅಂತರ ಕಾಯ್ದುಕೊಂಡರು.

ಇದೀಗ ಅವರು ದೇಶದ ಜನರ ಅನುಕಂಪವನ್ನು ಸಾಂದ್ರ ಮಾಡಿಕೊಳ್ಳುವತ್ತ ಹೆಜ್ಜೆ ಇರಿಸಿದ್ದಾರೆ. ಬಾಹ್ಯ-ಶಕ್ತಿಗಳ ಹಸ್ತಕ್ಷೇಪ, ತಮ್ಮ ಮೇಲಾದ ಹತ್ಯೆಯ ಪ್ರಯತ್ನ ಇಮ್ರಾನ್ ಅವರಿಗೆ ಆಸರೆಯಾಗಿ ಒದಗಿವೆ. ಆದರೆ ಇಮ್ರಾನ್ ಮತ್ತೊಮ್ಮೆ ಅಧಿಕಾರ ಹಿಡಿಯಲು ಹೊರಟಿರುವ ಮಾರ್ಗದಲ್ಲಿ ಹಲವು ಬುಗುಟಿಗಳು ಕಾಣುತ್ತಿವೆ.

ಸಾಮಾನ್ಯವಾಗಿ ಪಾಕಿಸ್ತಾನದ ಸೇನಾ ಮುಖ್ಯಸ್ಥರು ಯಾರಾಗುತ್ತಾರೆ ಎಂಬುದನ್ನು ಜಗತ್ತು ಹೆಚ್ಚಿನ ಕುತೂಹಲದಿಂದ ಗಮನಿಸುತ್ತದೆ. ಏಕೆಂದರೆ ಪಾಕಿಸ್ತಾನದ ರಾಜಕೀಯಕ್ಕೆ ಸೇನೆಯ ಅಂಕುಶ ಇರುತ್ತದೆ. ಪಾಕಿಸ್ತಾನದ ವಿದೇಶಾಂಗ ನೀತಿ ಮತ್ತು ರಕ್ಷಣಾ ನೀತಿಗಳು ಸೇನೆಯ ಕಣ್ಣಳತೆಯಲ್ಲಿ ರೂಪುಗೊಳ್ಳುತ್ತವೆ. ಇದೀಗ ಜನರಲ್ ಬಾಜ್ವಾ ಅವರ ನಿವೃತ್ತಿಯ ನಂತರ ಆ ಸ್ಥಾನಕ್ಕೆ ಪ್ರಧಾನಿ ಶೆಹಬಾಜ್ ಷರೀಫ್ ಅವರು ಲೆಫ್ಟಿನೆಂಟ್ ಜನರಲ್ ಅಸೀಮ್ ಮುನೀರ್ ಅವರನ್ನು ನೇಮಿಸಿ ಚಾಣಾಕ್ಷತೆ ಮೆರೆದಿದ್ದಾರೆ. 2019ರಲ್ಲಿ ಇಮ್ರಾನ್ ಖಾನ್, ಪಾಕಿಸ್ತಾನದ ಗುಪ್ತಚರ ಇಲಾಖೆಯ ಮುಖ್ಯಸ್ಥರಾಗಿದ್ದ ಮುನೀರ್ ಅವರ ಅವಧಿಯನ್ನು ಕಡಿತಗೊಳಿಸಿ ಅವರ ಜಾಗಕ್ಕೆ ತಮ್ಮ ಆಪ್ತವಲಯದಲ್ಲಿದ್ದ ಫಯಾಸ್ ಹಮೀದ್ ಅವರನ್ನು ತಂದಿದ್ದರು. ಇದು ಬಾಜ್ವಾ ಮತ್ತು ಇಮ್ರಾನ್ ನಡುವೆ ವೈಮನಸ್ಯ ಮೂಡುವಂತೆ ಮಾಡಿತ್ತು.

ಇನ್ನು ಮೂರು ವರ್ಷಗಳ ಕಾಲ ಮುನೀರ್ ಪಾಕಿಸ್ತಾನದ ಸೇನೆಯ ಮುಖ್ಯಸ್ಥರಾಗಿ ಇರುತ್ತಾರೆ. ಸೇನೆಯ ಮರ್ಜಿಗೆ ಬೀಳದೆ ಯಾರೂ ಪಾಕಿಸ್ತಾನದಲ್ಲಿ ಅಧಿಕಾರ ಹಿಡಿಯುವುದು ಸಾಧ್ಯವಿಲ್ಲ. ಮುನೀರ್ ಅವರ ಅಡ್ಡಗಾಲನ್ನು ದಾಟಿ ಇಮ್ರಾನ್ ನಡೆಯಬೇಕಾಗುತ್ತದೆ. ಅದು ಮೊದಲ ಸವಾಲು. ಒಂದೊಮ್ಮೆ 2023ರ ದ್ವಿತೀಯಾರ್ಧದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಪಿಟಿಐ ಬಹುಮತ ಪಡೆದು ಇಮ್ರಾನ್ ಪ್ರಧಾನಿಯಾದರೂ, ಸೇನೆಯೊಂದಿಗಿನ ತಿಕ್ಕಾಟ ಮುಂದುವರಿದರೆ ಅಚ್ಚರಿಯಿಲ್ಲ.

ಇಸ್ಲಾಮಾಬಾದ್‌ನೆಡೆಗೆ ಹೊರಟಿದ್ದ ಇಮ್ರಾನ್ ಖಾನ್, ಇದೀಗ ತಮ್ಮ ಯೋಜನೆ ಬದಲಿಸಿಕೊಂಡಂತೆ ಕಾಣುತ್ತಿದೆ. ಇಸ್ಲಾಮಾಬಾದ್ ತಲುಪಿ ಅಲ್ಲಿ ಚುನಾವಣೆ ಘೋಷಿಸುವ ತನಕ ಧರಣಿ ನಡೆಸುವುದು ಇಮ್ರಾನ್ ಅವರ ಮೂಲ ಯೋಜನೆಯಾಗಿತ್ತು. ಆದರೆ ಶೆಹಬಾಜ್ ನೇತೃತ್ವದ ಸರ್ಕಾರ ಸುಲಭಕ್ಕೆ ಮಣಿಯಲಾರದು, ಸಾರ್ವತ್ರಿಕ ಚುನಾವಣೆಯವರೆಗೆ ಕಾಯುವುದು ಅನಿವಾರ್ಯ ಎಂಬುದು ಇದೀಗ ಇಮ್ರಾನ್ ಅವರಿಗೆ ಮನವರಿಕೆಯಾದಂತಿದೆ. ಹಾಗಾಗಿ ಇದೇ 26ರಂದು ರಾವಲ್ಪಿಂಡಿಯಲ್ಲಿ ನಡೆದ ಸಭೆಯಲ್ಲಿ ಇಮ್ರಾನ್ 'ಲಾಂಗ್ ಮಾರ್ಚ್'ಗೆ ಕೊನೆ ಹಾಡಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ಧರಣಿ ನಡೆಸಿದರೆ ಅರಾಜಕತೆ ಉಂಟಾಗಬಹುದು, ಅದು ದೇಶಕ್ಕೆ ಹಿತವಲ್ಲ ಎಂದು ಬೆಂಬಲಿಗರ ಮನವೊಲಿಸಿದ್ದಾರೆ. ಆದರೆ ಮುಂದಿನ ವರ್ಷಾಂತ್ಯದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯವರೆಗೂ ತಮ್ಮೆಡೆಗೆ ವ್ಯಕ್ತವಾಗಿರುವ ಅನುಕಂಪವನ್ನು ಕಾಯ್ದುಕೊಳ್ಳುವುದು ಇಮ್ರಾನ್ ಅವರಿಗೆ ಕಷ್ಟವಾಗಬಹುದು. ಅದು ಎರಡನೆಯ ಸವಾಲು.

ಈ ಹಿಂದೆ ಭಾರತದ ಕುರಿತು ಮೆಚ್ಚುಗೆಯ ಮಾತನಾಡಿದ್ದ ಇಮ್ರಾನ್ ಖಾನ್, ಇತ್ತೀಚಿನ ದಿನಗಳಲ್ಲಿ ತಮ್ಮ ಭಾಷಣದಲ್ಲಿ ಪೂರ್ವ ಪಾಕಿಸ್ತಾನದ ವಿಷಯ ಪ್ರಸ್ತಾಪಿಸುತ್ತಿದ್ದಾರೆ. 'ಪೂರ್ವ ಪಾಕಿಸ್ತಾನದಲ್ಲಿ ಜನಮತ ಗೆದ್ದ ಪ್ರಮುಖ ರಾಜಕೀಯ ಪಕ್ಷವನ್ನು ಕಡೆಗಣಿಸಿದ್ದರಿಂದ ಏನಾಯಿತು ಎಂಬುದನ್ನು ನಾವು ಮರೆಯಬಾರದು' ಎನ್ನುತ್ತಿದ್ದಾರೆ. ಇಮ್ರಾನ್ ಬದಲಿ ಯೋಜನೆಯನ್ನು ಹೆಣೆಯುತ್ತಿದ್ದಾರೆಯೇ?

ಇತ್ತ ಭಾರತದ ರಕ್ಷಣಾ ಸಚಿವರು ಪಾಕ್ ಆಕ್ರಮಿತ ಕಾಶ್ಮೀರವನ್ನು ಹಿಂಪಡೆಯಲಾಗುವುದು ಎಂದು ಪರೋಕ್ಷವಾಗಿ ಹೇಳಿದ್ದು ವರದಿಯಾಗಿದೆ. ಹಿಂದಿನ ವಾರ ಭಾರತ ಸೇನೆಯ ಉತ್ತರ ವಿಭಾಗದ ಕಮಾಂಡರ್ ಉಪೇಂದ್ರ ದ್ವಿವೇದಿ, 'ಪಾಕ್ ಆಕ್ರಮಿತ ಕಾಶ್ಮೀರವನ್ನು ಪುನರ್ವಶ ಮಾಡಿಕೊಳ್ಳುವ ಕುರಿತು ಕೇಂದ್ರ ಸರ್ಕಾರ ನೀಡುವ ಯಾವುದೇ ಆದೇಶವನ್ನು ಪಾಲಿಸಲಾಗುವುದು' ಎಂದಿದ್ದಾರೆ. ದುರ್ಬಲ ಆರ್ಥಿಕತೆ, ಹಣದುಬ್ಬರದಿಂದ ನಿಡುಸುಯ್ಯುತ್ತಿರುವ ಪಾಕಿಸ್ತಾನದಲ್ಲಿ ಅಂತರ್ಯುದ್ಧ ಆರಂಭವಾದರೆ, ಇಮ್ರಾನ್ ತಮ್ಮ ಬದಲಿ ಯೋಜನೆಗೆ ಕಾವು ಕೊಡಬಹುದು. ಭಾರತದ ರಕ್ಷಣಾ ಸಚಿವರ ಮಾತಿಗೆ ಇನ್ನಷ್ಟು ಪುಷ್ಟಿ ಬರಬಹುದು.

ಚುರುಮುರಿ

ಬಸ್ ಬಲಿ

• ಮಣ್ಣೆರಾಜು

ಮಹಾರಾಷ್ಟ್ರಕ್ಕೆ ಹೋಗಿದ್ದ ಕರ್ನಾಟಕ ಬಸ್ ಮಸಿ ಬಳಿಸಿಕೊಂಡು ಬಂದಿತ್ತು, ಕಿಟಕಿ ಗಾಜು ಒಡೆಸಿಕೊಂಡು ಗಾಯಗೊಂಡಿತ್ತು.

'ಪರಿಸ್ಥಿತಿ ಉದ್ರಿಕ್ತವಾಗಿದೆ, ಗಡಿ ಗೆರೆ ದಾಟಿ ನೀನೂ ಬರಬೇಡ, ನಾನೂ ಬರುವುದಿಲ್ಲ' ಎಂದು ಮಹಾರಾಷ್ಟ್ರ ಬಸ್ ಬುದ್ಧಿ ಹೇಳಿದರೂ ಕರ್ನಾಟಕದ ಬಸ್ ಕೇಳಿರಲಿಲ್ಲ, ಎಲ್ಲೆ ದಾಟಿ ಹೋಗಿ ಹಲ್ಲೆಗೊಳಗಾಗಿತ್ತು.

ಬಸ್ಸಿನ ಗ್ರಹಚಾರ ಸರಿಯಿಲ್ಲ. ಮಾರಿ ಕಣ್ಣು ಹೋರಿ ಮೇಲೆ ಎನ್ನುವಂತೆ ಉದ್ರಿಕ್ತರ ಕಣ್ಣು ಸದಾ ಬಸ್ಸಿನ ಮೇಲೆ ಇರುತ್ತದೆ. ಗಡಿ ಗಲಾಟೆಯಾಗಲಿ, ರಸ್ತೆತಡೆ, ಬಂದ್, ಚಳವಳಿಗಳಾಗಲಿ ಪ್ರತಿಭಟನಾಕಾರರ ಕೆಂಗಣ್ಣಿಗೆ ಮೊದಲು ಬಲಿಯಾಗುವುದು ಬಸ್ಸೇ. ಬೀದಿ ನಾಯಿ ಮೇಲೆ ಕಲ್ಲೆಸೆದು ಕೀಟಲೆ ಮಾಡುವಂತೆ ಕ್ಯಾತೆ ತೆಗೆದು ಬಸ್ಸಿನ ಮೇಲೆ ಕಲ್ಲೆಸೆಯುವ ವಿಕೃತ ಖುಷಿಕರೂ ಇದ್ದಾರೆ.

ಸಾಮಾಜಿಕ ಅನ್ಯಾಯ, ಆಕ್ರೋಶ ವ್ಯಕ್ತವಾದಾಗ ಅಮಾಯಕ ಬಸ್ ಸುಲಭದ ತುತ್ತಾಗುತ್ತದೆ. ಅಪಘಾತ ನಡೆದಾಗ ಅದರ ಪೂರ್ವಾಪರ ವಿಚಾರಿಸದೆ, ಬಸ್ಸನ್ನು ಚಚ್ಚಿರಿ, ಬೆಂಕಿ ಹಚ್ಚಿರಿ ಎಂದು ಜನ ರೊಚ್ಚಿಗೇಳುತ್ತಾರೆ.

ಜನಸೇವೆಯನ್ನೇ ಬದುಕಾಗಿಸಿಕೊಂಡು ಊರೂರು ಅಲೆಯುವ ಬಸ್‌ಗೆ ದಿನಬೆಳಗಾದರೆ ಆತಂಕ. ಎಲ್ಲಿ, ಯಾರು ರಸ್ತೆತಡೆ ಮಾಡುವರೋ ಇನ್ಯಾರು ಕಲ್ಲು ಹೊಡೆಯುವರೋ ಮತ್ಯಾರು ಬೆಂಕಿ ಹಚ್ಚುವರೋ ಎಂದು ಜೀವ ಕೈಯ್ಯಲ್ಲಿ ಹಿಡಿದು ಓಡಾಡುವಂತಾಗಿದೆ. ಆದರೆ, ತನಗೆ ಜೀವಭಯವಿದೆ ರಕ್ಷಣೆ ಕೊಡಿ, ಬಸ್ ಭದ್ರತಾ ಪಡೆ ನೇಮಿಸಿ, ಬಸ್ ರಕ್ಷಣೆಗೆ ಹೊಸ ಕಾಯ್ದೆ ರೂಪಿಸಿ ಎಂದು ಒತ್ತಾಯಿಸಿ ಇತರ ಬಸ್‌ಗಳನ್ನು ಸೇರಿಸಿಕೊಂಡು ಬಸ್ ಯಾವತ್ತೂ ಪ್ರತಿಭಟನೆ ಮಾಡಿಲ್ಲ, ಜೀವಭಯ, ಮಾರಣಾಂತಿಕ ಹಲ್ಲೆಗಳನ್ನು ಲೆಕ್ಕಿಸದೆ ಸಂಚಾರ ಮುಂದುವರಿಸುತ್ತದೆ.

ಬಸ್ ಅನ್ನು ಬದುಕಲು ಬಿಡಬೇಕು. ಪ್ರಾಣಿ ಹಿಂಸೆ ಮಹಾ ಪಾಪ, ಬಸ್ ಹಿಂಸೆ ಅಯ್ಯೋ ಪಾಪ...!

ದಿನದ ಟ್ವೀಟ್

ಎರಡನೆಯ ಪೀಠ ಹೊಂದಬಹುದೇ?

ಒಡಿಶಾದಲ್ಲಿ ಹೈಕೋರ್ಟ್‌ನ ಎರಡನೆಯ ಪೀಠವನ್ನು ಸ್ಥಾಪಿಸಬೇಕು ಎಂಬ ಬೇಡಿಕೆ ಇದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಒಡಿಶಾ ಅಷ್ಟೊಂದು ದೊಡ್ಡ ರಾಜ್ಯವಲ್ಲ ಎಂದು ಹೇಳಿದೆ. ಭಾರತ ಬಹಳ ದೊಡ್ಡ ದೇಶ. ನಾವು ಧಾರವಾಡದಲ್ಲಿ ಸುಪ್ರೀಂ ಕೋರ್ಟ್‌ನ ಎರಡನೆಯ ಪೀಠವನ್ನು ಹೊಂದಬಹುದೇ?

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಅನೇಕ ಭಯೋತ್ಪಾದನಾ ಹಾಗೂ ದೇಶ ವಿರೋಧಿ ಚಟುವಟಿಕೆಗಳು ಬಹಿರಂಗಗೊಂಡಾಗ ದೇಶದ ಮುಸ್ಲಿಂ ಸಮುದಾಯದ ಮೌನದಿಂದ ನಿಜಕ್ಕೂ ಬೇಸರವಾಗುತ್ತದೆ. ಯಾವಾಗ ಈ ದೇಶದ ಸಮಸ್ತ ಮುಸ್ಲಿಂ ಸಮುದಾಯ ಭಯೋತ್ಪಾದನೆಯ ವಿರುದ್ಧ ಬೀದಿಗಿಳಿದು ಹೋರಾಡುತ್ತದೆಯೋ ಅಂದು, ಧರ್ಮದ ಮುಖವಾಡ ಹೊತ್ತಿರುವ ವಿನಾಶಕಾರಿ ಉಗ್ರರು ಬಿಲ ಸೇರಿಕೊಳ್ಳುತ್ತಾರೆ...
ದೇಶ ಮೊದಲು- ನೆನಪಿಟ್ಟುಕೊಳ್ಳಿ.

ದಾವೂದ್ ಅಬೂಬಕ್ಕರ್, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಉಡುಪಿ ಜಿಲ್ಲಾ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 30-11-1997

• **ಬಿರುಸಿನ ರಾಜಕೀಯ ಚಟುವಟಿಕೆ ಮುಂದುವರಿದ ಅನಿಶ್ಚಿತ ಸ್ಥಿತಿ**

ನವದೆಹಲಿ, ನ. 29– ಪ್ರಧಾನಿ ಐ.ಕೆ. ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರದ ರಾಜೀನಾಮೆಯಿಂದಾಗಿ ರಾಜಧಾನಿಯಲ್ಲಿ ರಾಜಕೀಯ ಚಟುವಟಿಕೆ ತೀವ್ರಗೊಂಡಿದ್ದು, ಕಾಂಗ್ರೆಸ್ ಹಾಗೂ ಭಾರತೀಯ ಜನತಾ ಪಕ್ಷಗಳು ಸರ್ಕಾರ ರಚನೆಗೆ ಅಗತ್ಯವಿರುವಷ್ಟು ಸದಸ್ಯರ ಬೆಂಬಲ ಪಡೆಯುವ ಬಗ್ಗೆ ತಮ್ಮ ಮಿತ್ರಪಕ್ಷಗಳ ಜತೆ ಸಮಾಲೋಚಿಸುತ್ತಿವೆ.

ಸರ್ಕಾರ ರಚಿಸುವ ನಿಟ್ಟಿನಲ್ಲಿ ಯಾವುದೇ ಪಕ್ಷ ಅಗತ್ಯವಿರುವಷ್ಟು ಸದಸ್ಯರ ಬೆಂಬಲ ಗಳಿಸುವ ಸೂಚನೆಗಳು ಕಂಡುಬರದಿರುವ ಹಿನ್ನೆಲೆಯಲ್ಲಿ, ಕೇಂದ್ರದಲ್ಲಿ ರಾಜಕೀಯ ಅನಿಶ್ಚಯತೆ ಮುಂದುವರಿದಿದೆ.

• **ಕೇಂದ್ರದಲ್ಲಿ ಸರ್ಕಾರ ರಚನೆ ಪ್ರಕ್ರಿಯೆ ಆರಂಭ**

ನವದೆಹಲಿ, ನ. 29– ಕೇಂದ್ರದಲ್ಲಿ ಪರ್ಯಾಯ ಸರ್ಕಾರ ರಚಿಸುವ ಸಲುವಾಗಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಪ್ರಕ್ರಿಯೆ ಪ್ರಾರಂಭಿಸಿದ್ದು, ಮೊದಲ ಹಂತವಾಗಿ ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಚರ್ಚೆಗೆ ಆಹ್ವಾನಿಸಿದ್ದಾರೆ.

ಸಂಯುಕ್ತ ರಂಗ ಸರ್ಕಾರ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಉದ್ಭವಿಸಿರುವ ಪರಿಸ್ಥಿತಿಯನ್ನು ನಿಭಾಯಿಸುವ ಕುರಿತು ಕಾನೂನು ತಜ್ಞರ ಸಲಹೆಯನ್ನೂ ರಾಷ್ಟ್ರಪತಿ ಅವರು ಪಡೆದಿದ್ದಾರೆ ಎಂದು ರಾಷ್ಟ್ರಪತಿ ಭವನದ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಗುರುವಾರ, 30-11-1972

• **ಠಾಕೂರ್ ಚೌಕ ಪ್ರದೇಶ: ವಿವಾದಕ್ಕೆ ಹೊಸ ತಿರುವು**

ರಾವಲ್ಪಿಂಡಿ, ನ. 29– ಕಾಶ್ಮೀರದಲ್ಲಿ ಹತೋಟಿ ರೇಖೆ ಗುರುತಿಸುವುದಕ್ಕೆ ಏಕೈಕ ಅಡ್ಡಿಯಾಗಿರುವ ಠಾಕೂರ್ ಚೌಕ ಪ್ರದೇಶವು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಭಾಗವೆಂಬ ವಾದವನ್ನು ಪಾಕಿಸ್ತಾನ ಈಗ ಮಂಡಿಸುತ್ತಿರುವಂತೆ ಕಂಡುಬರುತ್ತಿದ್ದು ಇದರಿಂದ ವಿವಾದಕ್ಕೆ ಹೊಸ ತಿರುವು ಉಂಟಾಗಿದೆ.

ಹತೋಟಿ ರೇಖೆ ಗುರುತಿಸುವ ಸಂಬಂಧದಲ್ಲಿ ಉಂಟಾಗಿರುವ ವಿವಾದವನ್ನು ತಮ್ಮ ತಮ್ಮ ಸರ್ಕಾರಗಳ ಪರಿಶೀಲನೆಗೇ ಒಪ್ಪಿಸಲು ಭಾರತ ಹಾಗೂ ಪಾಕಿಸ್ತಾನ ದಂಡನಾಯಕರು ನಿರ್ಧರಿಸಿದ್ದು, ಸಿಮ್ಲಾ ಒಪ್ಪಂದ ಜಾರಿಗೆ ಬರುವುದು ಇನ್ನಷ್ಟು ನಿಧಾನವಾಗುವುದಕ್ಕೆ ಕಾರಣವಾಗಬಹುದೆಂದು ಇಲ್ಲಿನ ಅಧಿಕೃತ ವಲಯಗಳು ಭಾವಿಸಿವೆ.

• **ವಿದ್ಯಾರ್ಥಿ ಚಳವಳಿಕಾರರ ಮೇಲೆ ಲಾಠಿ: 27 ಮಂದಿಗೆ ಗಾಯ**

ಹುಬ್ಬಳ್ಳಿ, ನ. 29– ವಿದ್ಯಾರ್ಥಿಗಳ ಚಳವಳಿಯ 3ನೇ ದಿನವಾದ ಇಂದು, ಇಲ್ಲಿನ ಜೆ.ಜಿ. ಕಾಮರ್ಸ್ ಕಾಲೇಜಿಗೆ ಸಮೀಪದ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಅಡ್ಡಗಟ್ಟಿದ ವಿದ್ಯಾರ್ಥಿ ಚಳವಳಿಕಾರರ ಮೇಲೆ ಪೊಲೀಸರು ಎರಡು ಬಾರಿ ಲಾಠಿ ಪ್ರಹಾರ ಮಾಡಿದರು.

ಲಾಠಿ ಪ್ರಹಾರದಿಂದ 20 ಮಂದಿ ವಿದ್ಯಾರ್ಥಿಗಳು ಮತ್ತು ಕಲ್ಲೆಸೆತದಿಂದ ಇಬ್ಬರು ಅಧಿಕಾರಿಗಳ ಸಹಿತ ಒಟ್ಟು 27 ಪೊಲೀಸರು ಗಾಯಗೊಂಡರು.

ಖಾಸಗಿ ಕಾಲೇಜುಗಳಲ್ಲಿ ಶಿಕ್ಷಣ ಶುಲ್ಕ ಇಳಿಸಬೇಕೆಂದು ಒತ್ತಾಯಿಸಿ ವಿದ್ಯಾರ್ಥಿಗಳು ಚಳವಳಿ ನಡೆಸುತ್ತಿದ್ದಾರೆ.

ಸಂಗತ

ಸಾಹಿತ್ಯ ಮತ್ತು ಬಂಡವಾಳ

ಎಲ್ಲ ವ್ಯವಹಾರಗಳೂ ಲಾಭ– ನಷ್ಟದ ಲೆಕ್ಕಾಚಾರದಲ್ಲೇ ನಡೆಯುವಾಗ, ಸಾಹಿತ್ಯಕ್ಕೆ ಸಂಬಂಧಿಸಿದ ವ್ಯವಹಾರಗಳು ಮಾತ್ರ ಲಾಭರಹಿತವಾಗಿಯೇ ನಡೆಯಬೇಕೆ?

• ಎಚ್.ಕೆ.ಶರತ್

ಸಾಹಿತ್ಯಕ ಚಟುವಟಿಕೆಗಳ ಆಯೋಜನೆ ಮತ್ತು ಪುಸ್ತಕ ಪ್ರಕಟಣೆಯಲ್ಲಿ ಆರ್ಥಿಕವಾಗಿ ಲಾಭ ಗಳಿಸುವ ಉದ್ದೇಶ ಇರಬಾರದೆ? ಸಾಹಿತ್ಯವನ್ನು ಹಣ ಗಳಿಸುವ ಸರಕಾಗಿ ನೋಡುವುದು ಅನೈತಿಕವೇ? ಸಾಹಿತ್ಯ ಕ್ಷೇತ್ರವನ್ನು ಹೂಡಿಕೆ ಮತ್ತು ಗಳಿಕೆಯ ವರ್ತುಲದಿಂದ ಹೊರಗಿಡಬೇಕೆ?

ಬರಹಗಾರರು 'ಸಾಹಿತ್ಯ ಕ್ಷೇತ್ರದಲ್ಲಿ ದುಡ್ಡಿದೆ, ಬರೆಯುವ ಮೂಲಕ ಹಣ ಸಂಪಾದಿಸಬಹುದು' ಎನ್ನುವ ಧೋರಣೆ ತಳೆಯಲು ಅನುವು ಮಾಡಿಕೊಡುವ ವಾತಾವರಣ ನಿರ್ಮಾಣವಾಗಬಾರದೆ? ಹಣವುಳ್ಳವರು ಸಾಂಸ್ಕೃತಿಕ ವಲಯದಲ್ಲಿ ಮನ್ನಣೆ ಗಳಿಸುವ ಸಲುವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಮುಂದಾದರೆ, ಅದನ್ನು ಹೇಗೆ ಸ್ವೀಕರಿಸಬೇಕು? ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಕ್ರಿಯೆಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಮತ್ತಷ್ಟು ವೇಗ ದಕ್ಕಿರುವಂತೆ ಭಾಸವಾಗುತ್ತಿದೆ. ಪ್ರವೇಶ ದರ ನಿಗದಿಪಡಿಸಿ ಆಯೋಜಿಸುವ ಸಾಹಿತ್ಯಕ ಕಾರ್ಯಕ್ರಮಗಳಿಗೆ ವಿರೋಧ ವ್ಯಕ್ತವಾಗುತ್ತಿದೆ. 'ಸಾಹಿತ್ಯಕ ಕಾರ್ಯಕ್ರಮಗಳು ಎಲ್ಲರನ್ನೂ ಒಳಗೊಳ್ಳಬೇಕು. ಹಣವಿಲ್ಲದ ಕಾರಣಕ್ಕೆ ಆಸಕ್ತಿ ಇದ್ದೂ ಪಾಲ್ಗೊಳ್ಳಲು ಸಾಧ್ಯವಾಗದವರ ಕುರಿತೂ ಚಿಂತಿಸಬೇಕು' ಎನ್ನುವ ವಾದ ಮುನ್ನೆಲೆಗೆ ಬರುತ್ತಿದೆ. ಕನ್ನಡ ಪುಸ್ತಕಗಳಿಗೆ ಪ್ರಕಾಶಕರು ಹೆಚ್ಚಿನ ಬೆಲೆ ನಿಗದಿಪಡಿಸುತ್ತಿರುವುದರಿಂದ ಓದುಗರು ಪುಸ್ತಕ ಕೊಳ್ಳಲು ಹಿಂದೆ ಮುಂದೆ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎನ್ನುವ ಆಕ್ಷೇಪವೂ ಆಗಾಗ ಕೇಳಿಬರುವುದುಂಟು.

ಕನ್ನಡ ಕಥಾ ಸ್ಪರ್ಧೆಗಳ ಸಂಖ್ಯೆ ಹೆಚ್ಚುವುದರ ಜೊತೆಗೆ ಬಹುಮಾನಗಳ ಮೊತ್ತವೂ ಗಣನೀಯವಾಗಿ ಏರುತ್ತಿದೆ. ಇದರಿಂದ ಸ್ಪರ್ಧೆಗಾಗಿ ಕತೆ ಬರೆಯುವವರು ಹುಟ್ಟಿಕೊಳ್ಳುತ್ತಿದ್ದಾರೆ. ದುಡ್ಡು ಕಥೆಗಾರರ ದಿಕ್ಕು ತಪ್ಪಿಸುತ್ತಿದೆ. ಬರಹಗಾರರ ನಡುವೆ ಸ್ಪರ್ಧೆ ಏರ್ಪಡುವುದು ಆರೋಗ್ಯಕರ ಬೆಳವಣಿಗೆಯಲ್ಲ. ಸ್ಪರ್ಧೆ ಸಂಕುಚಿತ ಮನೋಭಾವ ಬೆಳೆಸಲು ಹಾಗೂ ಅನಾರೋಗ್ಯಕರ ಪೈಪೋಟಿಗೆ ಕಾರಣವಾಗುತ್ತಿದೆ ಎಂದು ಕೂಡ ಕೆಲವರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಹಾಗಾದರೆ, ಸಾಹಿತ್ಯ ರಚನೆಯಲ್ಲಿ ತೊಡಗಿರುವವರು, ಪುಸ್ತಕ ಬರೆಯುವವರು, ಪ್ರಕಟಿಸುವವರು, ಮಾರುವವರು, ಸಾಹಿತ್ಯಕ ಕಾರ್ಯಕ್ರಮ, ಕಾರ್ಯಾಗಾರ, ಸ್ಪರ್ಧೆಗಳನ್ನು ಆಯೋಜಿಸುವವರು ಯಾವ ಮಾದರಿ ಆರಿಸಿಕೊಳ್ಳಬೇಕು? ಎಲ್ಲ ವ್ಯವಹಾರಗಳೂ ಲಾಭ- ನಷ್ಟದ ಲೆಕ್ಕಾಚಾರದಲ್ಲೇ ನಡೆಯುವಾಗ, ಸಾಹಿತ್ಯಕ್ಕೆ ಸಂಬಂಧಿಸಿದ ವ್ಯವಹಾರಗಳು ಮಾತ್ರ ಲಾಭರಹಿತವಾಗಿಯೇ ನಡೆಯಬೇಕೆ? ಬೇರೆಲ್ಲ ಕೆಲಸ ಮತ್ತು ಶ್ರಮಕ್ಕೂ ತಕ್ಕ ಆರ್ಥಿಕ ಪ್ರತಿಫಲ ಅಪೇಕ್ಷಿಸುವುದು ಸಹಜವಾಗಿರುವಾಗ, ಪುಸ್ತಕವೊಂದನ್ನು ರೂಪುಗೊಳಿಸುವ ಸಲುವಾಗಿ ಶ್ರಮ ಹಾಕುವವರು ಮಾತ್ರ ಈ ಲೆಕ್ಕಾಚಾರಕ್ಕೆ ವಿಮುಖರಾಗಿ ನಡೆದುಕೊಳ್ಳಬೇಕೆಂದು ನಿರೀಕ್ಷಿಸುವುದು ಸೂಕ್ತವೇ? ಸಾಹಿತ್ಯಕ ಚಟುವಟಿಕೆಗಳನ್ನು ಲಾಭರಹಿತವಾಗಿ ನಡೆಸಿಕೊಂಡು ಹೋಗುವುದರಿಂದ ಸಾಹಿತ್ಯ ಕ್ಷೇತ್ರಕ್ಕೆ ಒಳಿತಾಗುವುದೇ? ಕನ್ನಡ ಪುಸ್ತಕಗಳಿಗೆ ಕಡಿಮೆ ಬೆಲೆ ನಿಗದಿಪಡಿಸುವುದರಿಂದ ನಿಜಕ್ಕೂ ಓದುಗರ ಹಿತ ಕಾಯ್ದಂತೆ ಆಗುವುದೇ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಾಗ ವಾಸ್ತವಿಕ ನೆಲೆಗಟ್ಟಿನಲ್ಲಿ ಯೋಚಿಸಬೇಕಾಗಿದೆ.



ಸಾಹಿತ್ಯಕ ಕಾರ್ಯಕ್ರಮಗಳ ಆಯೋಜನೆಗೆ ಬೇಕಿರುವ ಸಂಪನ್ಮೂಲ ಹೊಂದಿಸಲು ಪ್ರವೇಶ ದರ ನಿಗದಿಪಡಿಸಿ, ಹಣ ಕೊಟ್ಟು ಸಾಹಿತ್ಯಕ ಕಾರ್ಯಕ್ರಮಗಳಿಗೆ ಹಾಜರಾಗುವ ಸಾಹಿತ್ಯಾಸಕ್ತರ ಸಮೂಹ ಕಟ್ಟಿಕೊಳ್ಳಲು ಕೆಲವರಿಗೆ ಸಾಧ್ಯವಾಗುವುದಾದರೆ ಅದರಿಂದ ಯಾರಿಗೆ ತಾನೆ ನಷ್ಟ? ಹೆಚ್ಚೆಚ್ಚು ಜನರನ್ನು ಸೆಳೆಯಲು ಇಂತಹ ಕಾರ್ಯಕ್ರಮಗಳಿಗೆ ಸಾಧ್ಯವಾಗುವುದಾದರೆ ಅದರಿಂದ ಸಾಹಿತ್ಯ ಕ್ಷೇತ್ರಕ್ಕೆ ಒಳಿತಾಗುವುದಿಲ್ಲವೇ? ಬೇರೆಲ್ಲ ಉತ್ಪನ್ನಗಳ ಮಾರಾಟ ಮಳಿಗೆಗಳ ಸಂಖ್ಯೆ ಹೆಚ್ಚುತ್ತಲೇ ಇರುವಂತೆ, ಕನ್ನಡ ಪುಸ್ತಕ ಮಾರಾಟ ಮಳಿಗೆಗಳ ಸಂಖ್ಯೆಯೂ ಹೆಚ್ಚಬೇಕಲ್ಲವೇ? ಪುಸ್ತಕ ಪ್ರಕಾಶನ ಮತ್ತು ಮಾರಾಟವನ್ನು ಸೇವೆಯ ರೀತಿಯಲ್ಲಿ ಬಿಂಬಿಸುವ ಬದಲಿಗೆ, ವ್ಯವಹಾರವಾಗಿ ಪರಿಗಣಿಸುವ ವಾತಾವರಣ ನಿರ್ಮಾಣವಾಗಬಾರದೆ? ನಷ್ಟದಲ್ಲಿ ನಡೆಸಬೇಕಿರುವ ಸೇವೆಯಲ್ಲಿ ವೃತ್ತಿಪರತೆ ನಿರೀಕ್ಷಿಸಲಾದೀತೆ? ಕನ್ನಡ ಪುಸ್ತಕೋದ್ಯಮವು ಲಾಭದಾಯಕವಾಗಿ ಮಾರ್ಪಟ್ಟರೆ, ವೃತ್ತಿಪರತೆ ಮೈಗೂಡುವ ಸಂಭವನೀಯತೆಯೂ ಹೆಚ್ಚು. ವೈವಿಧ್ಯಮಯ ವಸ್ತುವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಪ್ರಕಟವಾಗುತ್ತಾ ಹೋದರೆ ಅದರಿಂದ ಓದುಗರಿಗೂ ಉತ್ತಮ ಆಯ್ಕೆಗಳು ದೊರೆಯಲಿವೆ.

ಸಾಹಿತ್ಯ ಕ್ಷೇತ್ರ ಇತರ ವ್ಯವಹಾರಗಳ ರೀತಿ ಲಾಭಕೇಂದ್ರಿತ ಆಗಬಾರದು ಎಂದು ಆಶಿಸಬಹುದು. ಆದರೆ, ಈ ಆಶಯವನ್ನು ಕಾರ್ಯಗತಗೊಳಿಸುವ ಸುಸ್ಥಿರ ಮಾದರಿಯ ಅನುಪಸ್ಥಿತಿಯಲ್ಲಿ ಸಾಹಿತ್ಯ ಕ್ಷೇತ್ರವೂ ಲಾಭಕೇಂದ್ರಿತವಾಗಿ ಮುನ್ನಡೆಯುವುದೇ ಉತ್ತಮ. ಇಲ್ಲವಾದಲ್ಲಿ ಅನುಷ್ಠಾನಕ್ಕೆ ತರಲಾಗದ ನೈತಿಕ ಆಶಯಕ್ಕೆ ಜೋತು ಬಿದ್ದವರನ್ನು ಹಿನ್ನೆಲೆಗೆ ಸರಿಸುವಲ್ಲಿ, ಈಗಾಗಲೇ ಲಾಭ ಪಥದಲ್ಲಿ ಮುನ್ನಡೆಯುತ್ತಿರುವ ಜನಪ್ರಿಯ ಸವಕಲು ಮಾದರಿಗಳಿಗೆ ಪೈಪೋಟಿ ಇಲ್ಲದಂತಾಗಲಿದೆ. ಸಾಹಿತ್ಯವನ್ನು ಬಂಡವಾಳಶಾಹಿ ಧೋರಣೆಯಿಂದ ಮುಕ್ತಗೊಳಿಸುವ ಆಶಯವು ಪರೋಕ್ಷವಾಗಿ ಕಳಪೆ ಪುಸ್ತಕಗಳಿಗೆ ಮಾರುಕಟ್ಟೆ ಆಳುವ ಅವಕಾಶ ಕಲ್ಪಿಸಲಷ್ಟೇ ಶಕ್ತವಾಗುವ ಅಪಾಯವೂ ಇದೆ.

ಮಾರುಕಟ್ಟೆಯಲ್ಲಿ ಪೈಪೋಟಿ ಹೆಚ್ಚಿದಂತೆಲ್ಲ ಗ್ರಾಹಕರಿಗೆ ಗುಣಮಟ್ಟದ ಸೇವೆ ಹಾಗೂ ಉತ್ಪನ್ನ ಕಡಿಮೆ ಬೆಲೆಗೆ ಲಭ್ಯವಾಗಲಿದೆ ಎನ್ನುವ ಮುಕ್ತ ಮಾರುಕಟ್ಟೆಯ ಧೋರಣೆಯನ್ನು ಕನ್ನಡ ಸಾಹಿತ್ಯ ಹಾಗೂ ಪುಸ್ತಕ ಕ್ಷೇತ್ರಕ್ಕೂ ಅನ್ವಯಿಸಲು ಸಾಧ್ಯವಿಲ್ಲವೇ? ಹೀಗೆ ಮಾಡುವುದೂ ಅನೈತಿಕವೇ?

ವಾಚಕರ ವಾಣಿ

ಗಡಿಭಾಗದಲ್ಲಿ ಕನ್ನಡವನ್ನು ಗಟ್ಟಿಗೊಳಿಸಿ

ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿಗಳಿಂದ ಬೇಜವಾಬ್ದಾರಿ ಹೇಳಿಕೆಗಳು ಬಂದರೆ ಏನಾಗುತ್ತದೆ ಎಂಬುದಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಮಧ್ಯೆ ಈಗ ಉಂಟಾಗಿರುವ ದ್ವೇಷಮಯ ಪರಿಸ್ಥಿತಿಯೇ ನಿದರ್ಶನ. ಇದರಿಂದ ಎರಡು ರಾಜ್ಯಗಳ ಮಧ್ಯೆ ಸಾರಿಗೆ ಸಂಚಾರ ನಿಂತುಹೋಗಿ ಸಾರ್ವಜನಿಕರಿಗೆ ತುಂಬಾ ಅನನುಕೂಲವಾಗಿದೆ ಹಾಗೂ ಸಾರಿಗೆ ಸಂಸ್ಥೆಗಳಿಗೆ ಅಪಾರ ನಷ್ಟವುಂಟಾಗಿದೆ. ಎರಡೂ ರಾಜ್ಯಗಳ ನಡುವಿನ ಸೌಹಾರ್ದಕ್ಕೆ ಧಕ್ಕೆಯಾಗಿದೆ. ಅಲ್ಲದೆ ಮಹಾರಾಷ್ಟ್ರದ ಗಡಿ ಪಟ್ಟಣ ಇಚಲಕರಂಜಿಯಿಂದ ಕರ್ನಾಟಕದ ಕನ್ನಡ ಪ್ರೌಢಶಾಲೆಗಳಿಗೆ ದಿನಾಲೂ ಬಂದು ಹೋಗುವ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 28). ಕರ್ನಾಟಕ ಸರ್ಕಾರವು ಗಡಿ ಭಾಗದ ಮರಾಠಿ ಭಾಷಿಕರಿಗೆ ಕಲ್ಪಿಸಿರುವಷ್ಟು ಶಿಕ್ಷಣ ಸೌಲಭ್ಯವನ್ನು ಮಹಾರಾಷ್ಟ್ರ ತನ್ನ ಗಡಿಭಾಗದ ಕನ್ನಡ ಭಾಷಿಕರಿಗೆ ಕಲ್ಪಿಸದೇ ಇರುವುದಕ್ಕೆ ಇದೊಂದು ಉದಾಹರಣೆ. ಜತ್ತ ಮತ್ತು ಅಕ್ಕಲಕೋಟೆ ತಾಲ್ಲೂಕುಗಳ ಕನ್ನಡ ಶಾಲೆಗಳಿಗೆ ಮಹಾರಾಷ್ಟ್ರ ಸರ್ಕಾರ ಕಲ್ಪಿಸಿರುವ ಸೌಲಭ್ಯ ಕೂಡ ಅಷ್ಟಕ್ಕಷ್ಟೆ.

ಕರ್ನಾಟಕದ ಗಡಿ ಭಾಗದಲ್ಲಿ, ಅದರಲ್ಲೂ ನಿಪ್ಪಾಣಿ, ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳ ಗಡಿ ಪ್ರದೇಶದಲ್ಲಿ ಕೆಲವು ಕನ್ನಡ ಪ್ರೌಢಶಾಲೆಗಳನ್ನು ತೆರೆಯಬೇಕೆಂಬುದು ಆ ಪ್ರದೇಶದ ಜನರ ಬಹುದಿನಗಳ ಬೇಡಿಕೆ. ಸರ್ಕಾರದ ಹೊಸ ನೀತಿಯ ಪ್ರಕಾರ, ಈ ಗ್ರಾಮಗಳಿಗೆ 8, 9 ಮತ್ತು 10ನೇ ತರಗತಿಗಳನ್ನು 'ಮುಂದುವರಿದ ಶಿಕ್ಷಣ' ಎಂದು ಪರಿಗಣಿಸಿ ಪ್ರೌಢ ತರಗತಿಗಳನ್ನು ಶೀಘ್ರದಲ್ಲಿ ಮಂಜೂರು ಮಾಡಬೇಕು. ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಅಗತ್ಯ ಸೌಲಭ್ಯ ಕಲ್ಪಿಸಿ, ಗಡಿಭಾಗದಲ್ಲಿ ಕನ್ನಡವನ್ನು ಗಟ್ಟಿಗೊಳಿಸುವ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ಗುರು–ಶಿಷ್ಯನ ಅಭಿನಂದನಾರ್ಹ ನಡೆ

ತರಗತಿಯಲ್ಲಿ ತನ್ನನ್ನು 'ಕಸಬ್' ಎಂದು ಕರೆದ ಪ್ರಾಧ್ಯಾಪಕರನ್ನು ತರಾಟೆಗೆ ತೆಗೆದುಕೊಂಡ ಮಣಿಪಾಲದ ಎಂಐಟಿ ವಿದ್ಯಾರ್ಥಿ ಪಿ.ಹಮ್ಜ, ಅವರಿಂದ ಕ್ಷಮೆಯಾಚನೆಯ ನಂತರ ವಿವಾದವನ್ನು ಅಂತ್ಯಗೊಳಿಸಿದ್ದು ಆತನ ಪ್ರೌಢ ನಡೆಯನ್ನು ತೋರಿಸುತ್ತದೆ. ದೇಶದಲ್ಲಿ ಕ್ಷುಲ್ಲಕ ವಿಷಯಗಳು ಕೋಮು ಸೌಹಾರ್ದ ಕದಡಲು ಬಳಕೆಯಾಗುತ್ತಿರುವ ಈ ಸಂದರ್ಭದಲ್ಲಿ, ಪ್ರಾಧ್ಯಾಪಕ ರವೀಂದ್ರನಾಥ್ ಅವರು ತಮ್ಮ ತಮಾಷೆಯು ಪ್ರಮಾದಕರವಾಗಿದ್ದನ್ನು ಕೂಡಲೇ ಮನಗಂಡು ವಿದ್ಯಾರ್ಥಿಯ ಬಳಿ ಕ್ಷಮೆಯಾಚಿಸಿದ್ದು ಕೂಡಾ ಅನುಕರಣಾರ್ಹ.

ಮಾತುಗಳು ನಮ್ಮ ಯೋಚನಾ ಲೋಕದ ಪ್ರತಿಫಲನಗಳು ಮತ್ತು ಲೋಕ ಗ್ರಹಿಕೆಯ ಉತ್ಪನ್ನ. ಸಾಮಾಜಿಕ ಪ್ರಾಣಿಯಾಗಿರುವ ಮಾನವನ ಪ್ರತಿಯೊಂದೂ ಆಲೋಚನೆ, ವರ್ತನೆ, ನಡವಳಿಕೆಯು ಆಯಾ ಸಾಮಾಜಿಕ ಸನ್ನಿವೇಶದ ಒಟ್ಟು ಪರಿಸ್ಥಿತಿಗಳನ್ನು ಆಧರಿಸಿ ಅಭಿವ್ಯಕ್ತಗೊಳ್ಳುತ್ತವೆ. ಇದೆಲ್ಲಾ ಏನೇ ಇದ್ದರೂ ಹಮ್ಜ ಮತ್ತು ರವೀಂದ್ರನಾಥ್ ಅವರು ತಮ್ಮ ನಡುವಿನ ವಿವಾದವನ್ನು ಅಂತ್ಯಗೊಳಿಸಿಕೊಂಡದ್ದು ಸಂತೋಷಕರವಷ್ಟೇ ಅಲ್ಲ, ಮಾದರಿ ನಡೆಯೂ ಹೌದು.

ಅಯ್ಯಪ್ಪ ಹೂಗಾರ್, ಮೈಸೂರು

ಮೀಸಲಾತಿ ಎಂಬ ಕುದುರೆಯನೇರಿ...

ಕೆಲವು ಸ್ವಾಮೀಜಿಗಳು ಮತ್ತು ಸಮುದಾಯಗಳ ಮುಖಂಡರ ಮುಂದಾಳತ್ವದಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಮೀಸಲಾತಿ ಹೋರಾಟಗಳು, ಸಭೆಗಳು, ಮೀಸಲಾತಿ ಹೆಚ್ಚಳಕ್ಕಾಗಿ ಸರ್ಕಾರಕ್ಕೆ ಕೊಡುತ್ತಿರುವ ಗಡುವು ಮತ್ತು ತರಹೇವಾರಿ ಪತ್ರಿಕಾಗೋಷ್ಠಿಗಳನ್ನು ನೋಡಿದರೆ, ಇವರೆಲ್ಲ ಬಸವಾದಿ ಶರಣರ ತತ್ವ, ಕನಕದಾಸರ ಕೀರ್ತನೆಯ ಸಾರ, ಶರೀಫರ ಗೀತೆಯ ಅರ್ಥ, ಕಬೀರದಾಸರು, ಗುರುನಾನಕರ ಸಮಾಜ ಸುಧಾರಣೆ ಮೌಲ್ಯಗಳನ್ನು ಗಾಳಿಗೆ ತೂರಿದ್ದಾರೆ, ಅವು ತಮಗೆ ಅನ್ವಯವಾಗುವುದಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಅನಿಸದೇ ಇರದು.

ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ತೊಲಗಿಸಿ ಎಲ್ಲರೂ ಅಣ್ಣ ತಮ್ಮಂದಿರಂತೆ ಬದುಕಲು ಸಲಹೆ ನೀಡಬೇಕಾದ ಮಹನೀಯರೇ ಇಂದು ನಮ್ಮದು ಆ ಜಾತಿ, ಈ ಜಾತಿ ಎನ್ನುತ್ತ ಮೀಸಲಾತಿ ಎಂಬ ಕುದುರೆಯನ್ನು ಏರ ಹೊರಟಿರುವುದನ್ನು ನೋಡಿದರೆ, ನಾವು ತಂತ್ರಜ್ಞಾನದಲ್ಲಿ ಮುಂದೆ ಹೋಗುತ್ತಿದ್ದೇವೆಯೇ ವಿನಾ ಮಾನವೀಯತೆ, ಸಹೋದರತ್ವದಲ್ಲಿ ನೂರು ವರ್ಷ ಹಿಂದಕ್ಕೆ ಹೋಗುತ್ತಿದ್ದೇವೆ ಅನ್ನಿಸುತ್ತಿದೆ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಶಾಲೆಗಳಿಗೆ ಸೌಲಭ್ಯ: ಸಮರೋಪಾದಿಯಲ್ಲಿ ಒದಗಿಸಿ

ಶಾಲೆಗಳಲ್ಲಿ ಕುಡಿಯುವ ನೀರು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಶೌಚಾಲಯ ವ್ಯವಸ್ಥೆ ಎಂದು ಡಾ. ಕೆ.ಎಸ್. ಚೈತ್ರಾ ಅಭಿಪ್ರಾಯಪಟ್ಟಿದ್ದಾರೆ (ಸಂಗತ, ನ. 25). ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ನಮ್ಮ ಎಷ್ಟೋ ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ನಾಚಿಕೆಗೇಡು. ಹೆಣ್ಣುಮಕ್ಕಳು ಶೌಚಕ್ಕೆ ಹೋಗಲು ಅನುಭವಿಸುತ್ತಿರುವ ತೊಂದರೆ ಹೇಳತೀರದು. ಕೆಲವು ಶಾಲೆಗಳಲ್ಲಿ ಶೌಚಾಲಯ ಇದ್ದರೂ ನೀರಿನ ಸೌಲಭ್ಯ ಇಲ್ಲದೆ ಅವು ಗಬ್ಬು ನಾರುತ್ತಿರುತ್ತವೆ. ಶಾಲೆಗಳಿಗೆ ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ಸರ್ಕಾರ ಸಮರೋಪಾದಿಯಲ್ಲಿ ಯೋಜನೆ ರೂಪಿಸಿ ಅನುಷ್ಠಾನ ಮಾಡಲಿ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಸಂಬಂಧಗಳ ಮಹತ್ವ ಅರಿಯಬೇಕಿದೆ

ಶ್ರದ್ಧಾ ವಾಲಕರ್ ಬರ್ಬರ ಹತ್ಯೆ ಪ್ರಕರಣ ಜನಮಾನಸದಿಂದ ಮರೆಯಾಗುವ ಮುನ್ನವೇ ಅಂತಹದ್ದೇ ಮತ್ತೊಂದು ಪ್ರಕರಣ ದೆಹಲಿಯಿಂದ ವರದಿಯಾಗಿರುವುದು ದುರದೃಷ್ಟಕರ. ಅಕ್ರಮ ಸಂಬಂಧ ಹೊಂದಿದ್ದರೆಂದು ದೂರಿ ವ್ಯಕ್ತಿಯೊಬ್ಬರನ್ನು ಅವರ ಎರಡನೇ ಪತ್ನಿ ಮತ್ತು ಮಲಮಗ ಸೇರಿ ಕೊಂದು, ದೇಹದ ತುಂಡುಗಳನ್ನು ಫ್ರಿಡ್ಜ್‌ನಲ್ಲಿ ಇಟ್ಟು, ಕೊನೆಗೆ ರಾತ್ರಿಯ ವೇಳೆ ಮೈದಾನವೊಂದಕ್ಕೆ ಎಸೆದಿದ್ದಾರೆ ಎಂದು ವರದಿಯಾಗಿದೆ. ಕಾರಣ ಏನೇ ಇರಬಹುದು, ಮನುಷ್ಯ ಹೀಗೆ ಮನುಷ್ಯನನ್ನೇ ತುಂಡು ತುಂಡು ಮಾಡಿ ಕೊಲ್ಲುವಷ್ಟು ಕ್ರೂರಿಯಾಗಲು ಸಾಧ್ಯವೇ ಎನ್ನುವ ಪ್ರಶ್ನೆ ಕಾಡುತ್ತದೆ. ವ್ಯಕ್ತಿ ತಪ್ಪು ಮಾಡಿದ್ದರೆ ಶಿಕ್ಷೆ ನೀಡಲು ಕಾನೂನು ವ್ಯವಸ್ಥೆ ಇದೆ. ಸ್ವತಃ ಕಾನೂನು ಕೈಗೆತ್ತಿಕೊಳ್ಳಬಾರದು. ತಪ್ಪು ಮಾಡಿದಾಗ ಕೊಲ್ಲುವುದೇ ಪರಿಹಾರ ಎಂದಾದರೆ, ನಮ್ಮ ಸಮಾಜ ಎಲ್ಲಿಗೆ ಹೋಗಿ ಮುಟ್ಟುತ್ತದೆ? ಬದಲಾಗುತ್ತಿರುವ ಪ್ರಪಂಚದಲ್ಲಿ ತಂತ್ರಜ್ಞಾನದ ಜೊತೆಗೆ ನೀತಿ ಪಾಠಗಳು, ಸಂಬಂಧಗಳ ಮಹತ್ವ ಅರಿಯುವ ಅಗತ್ಯವಿದೆ.

ಆನಂದ ಜೇವೂರ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸವರ್ಣೀಯ ಜಾತಿಗಳಲ್ಲಿರುವ ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ (ಇಡಬ್ಲ್ಯುಎಸ್) 103ನೇ ಸಂವಿಧಾನ ತಿದ್ದುಪಡಿ ಮೂಲಕ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಈ ತಿದ್ದುಪಡಿಯು ಸಾಂವಿಧಾನಿಕವಾಗಿ ಸಿಂಧುವಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಬಹುಮತದ ತೀರ್ಪು ನೀಡಿದೆ. ಸಿಂಧುತ್ವವನ್ನು ಎತ್ತಿ ಹಿಡಿದ ಮತ್ತು ಭಿನ್ನಮತದ ತೀರ್ಪಿನ ಸಾರಾಂಶ ಇಲ್ಲಿದೆ

ಇಡಬ್ಲ್ಯುಎಸ್ ತೀರ್ಪು ಭಿನ್ನ ನಿಲುವಿಗೆ ಸಮರ್ಥನೆಗಳೇನು?

‘ಸಮಾನತೆ ಸಂಹಿತೆ ಉಲ್ಲಂಘನೆ ಆಗಿಲ್ಲ’

ಪ್ರಜಾವಾಣಿ ವಾರ್ತೆ

ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಅವರ ತೀರ್ಪು ಇಡಬ್ಲ್ಯುಎಸ್ ಮೀಸಲಾತಿಯನ್ನು ಬಲವಾಗಿಯೇ ಸಮರ್ಥಿಸಿಕೊಂಡಿದೆ. ಅವರ ತೀರ್ಪಿನ ಸಾರ ಹೀಗಿದೆ:

ಬೇಲಾ ಎಂ. ತ್ರಿವೇದಿ

ಮೀಸಲಾತಿ ಚರ್ಚೆ 3

ಸಂವಿಧಾನವು ಜಾರಿಗೆ ಬಂದಾಗಿನಿಂದಲೂ ಅದರ ಪ್ರಸ್ತಾವನೆಯ ಸ್ಫೂರ್ತಿಯನ್ನು ಜೀವಂತವಾಗಿ ಇರಿಸಲು ಮತ್ತು ಕಲ್ಯಾಣ ರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸಲು ನಿರಂತರ ಪ್ರಯತ್ನ ನಡೆದಿದೆ. ಈ ಪ್ರಕ್ರಿಯೆಯಲ್ಲಿ, ಸಾಂವಿಧಾನಿಕ ನೈತಿಕತೆ, ನ್ಯಾಯಸಮ್ಮತತೆಯನ್ನು ಕಾಯ್ದುಕೊಳ್ಳಲಾಗಿದೆ. ಹೀಗಾಗಿಯೇ ಸಂವಿಧಾನಕ್ಕೆ ಈವರೆಗೆ 105 ತಿದ್ದುಪಡಿಗಳನ್ನು ತರಲಾಗಿದೆ. 103ನೇ ತಿದ್ದುಪಡಿಯ (ಸವರ್ಣೀಯ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಮೀಸಲಾತಿ) ಸಾಂವಿಧಾನಿಕ ಸಿಂಧುತ್ವವನ್ನು ಇಲ್ಲಿ ಪರಿಶೀಲನೆಗೆ ಒಳಪಡಿಸಲಾಗಿದೆ.

ಆರಂಭದಲ್ಲಿಯೇ, ಮಹರಾವ್ ಸಾಹಿಬ್ ಶ್ರೀ ಭೀಮ್ ಸಿಂಗ್‌ಜಿ ಮತ್ತು ಕೇಂದ್ರ ಸರ್ಕಾರ ಹಾಗೂ ಇತರರು ಪ್ರಕರಣದಲ್ಲಿ ಕೃಷ್ಣ ಅಯ್ಯರ್ ಜೆ. ಅವರು ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು. ‘ಸಮಾನತೆಯ ಪ್ರತಿಯೊಂದು ಉಲ್ಲಂಘನೆಯನ್ನೂ ಸಂವಿಧಾನದ ಮೂಲ ನೆಲೆಗಟ್ಟಿನ ಉಲ್ಲಂಘನೆ ಎಂದು ಪರಿಗಣಿಸಲಾಗದು. ಸಮಾನತೆಯ ದೊಡ್ಡ ಮಟ್ಟದ ಪ್ರಕ್ರಿಯೆಯಲ್ಲಿ ಕೆಲವು ಕಿರಿಯ ಅಸಮಾನತೆಗಳು ಅನಿವಾರ್ಯ. ಕಣ್ಣಿಗೆ ಚುಚ್ಚುವ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಲು ಕಾನೂನು ಒಂದನ್ನು ಸಿದ್ಧಪಡಿಸಲು ಸುಪ್ರೀಂ ಕೋರ್ಟ್‌ನ ಎಲ್ಲ ನ್ಯಾಯಮೂರ್ತಿಗಳು ಅರ್ಧ ವರ್ಷ ಕುಳಿತು ಪರಿಶೀಲನೆ ನಡೆಸಿದರೂ ಕಿರು ಅಸಮಾನತೆಗಳನ್ನು ತಡೆಯಲು ಸಾಧ್ಯವಾಗದು. ಪ್ರತಿಯೊಂದು ದೊಡ್ಡ ವಿಚಾರವೂ ಹುತಾತ್ಮರನ್ನು ಸೃಷ್ಟಿಸುತ್ತದೆ ಎಂಬುದು ಸಮಾಜಶಾಸ್ತ್ರಜ್ಞರಿಗೆ ತಿಳಿದೇ ಇದೆ. ಹಾಗಾಗಿ, ಸಂವಿಧಾನದ 14ನೇ ವಿಧಿಯ ಉಲ್ಲಂಘನೆಯು ಮೂಲ ನೆಲೆಗಟ್ಟಿನ ಉಲ್ಲಂಘನೆ ಎನಿಸಿಕೊಳ್ಳದು. ಸಮಾನ ನ್ಯಾಯದ ಆಘಾತಕರ, ನಿರ್ಲಜ್ಜ ಮತ್ತು ಆತ್ಮಸಾಕ್ಷಿರಹಿತ ಉಲ್ಲಂಘನೆ ಆದಾಗ ಮೂಲ ನೆಲೆಗಟ್ಟು ಉಲ್ಲಂಘನೆ ಆಗುತ್ತದೆ...’

ಇಂದಿರಾ ನೆಹರೂ ಗಾಂಧಿ ಮತ್ತು ರಾಜ್ ನಾರಾಯಣ್ ಪ್ರಕರಣ, ಕೇರಳ ಸರ್ಕಾರ–ಎನ್.ಎಂ. ಥಾಮಸ್ ಮತ್ತು ಇತರರ ಪ್ರಕರಣ, ವಾಮನ ರಾವ್–ಕೇಂದ್ರ ಸರ್ಕಾರ ಮತ್ತು ಇತರರ ಪ್ರಕರಣ, ಎಂ.ನಾಗರಾಜ್ ಮತ್ತು ಇತರರು–ಕೇಂದ್ರ ಸರ್ಕಾರದ ನಡುವಣ ಪ್ರಕರಣಗಳ ತೀರ್ಪಿನಲ್ಲಿ ಸಮಾನತೆ ಮತ್ತು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಅಭಿಮತಗಳನ್ನು ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಅವರು ಉಲ್ಲೇಖಿಸಿದ್ದಾರೆ.

ತನ್ನ ಜನರ ಅಗತ್ಯಗಳನ್ನು ಶಾಸಕಾಂಗವು ಅರ್ಥ ಮಾಡಿಕೊಳ್ಳಬೇಕು ಎಂಬುದು ಒಪ್ಪಿತ ವಿಚಾರವೇ ಆಗಿದೆ. ಅದು ರೂಪಿಸುವ ಕಾನೂನುಗಳು ಅನುಭವಕ್ಕೆ ಬಂದ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದ್ದಾಗಿರುತ್ತದೆ. ಕಾನೂನುಗಳು ಮಾಡುವ ತಾರತಮ್ಯಕ್ಕೆ ಸಮರ್ಪಕವಾದ ಸಮರ್ಥನೆಗಳು ಇರುತ್ತವೆ. ಹಾಗಾಗಿಯೇ, ಈ ಸಂವಿಧಾನ ತಿದ್ದುಪಡಿಯನ್ನು ಸಮರ್ಥಿಸುವ ಕಾರಣಗಳನ್ನು ಸರ್ಕಾರವು ಮುಂದಿಟ್ಟರೆ, ತಿದ್ದುಪಡಿಯು ತಾರತಮ್ಯದಿಂದ ಕೂಡಿದೆ ಎಂದು ರದ್ದುಪಡಿಸಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಒಬಿಸಿಗೆ ನೀಡಿರುವ ಮೀಸಲಾತಿಯಿಂದ ಸವರ್ಣೀಯ ಜಾತಿಗಳ ಆರ್ಥಿಕವಾಗಿ ಹಿಂದುಳಿದವರನ್ನು ಹೊರಗಿರಿಸಲಾಗಿದೆ ಎಂಬುದು ಶಾಸಕಾಂಗದ ಅರಿವಿನಲ್ಲಿದೆ. ಹಾಗಾಗಿಯೇ, ಸವರ್ಣೀಯ ಜಾತಿಗಳ ಜನರ (ಸಂವಿಧಾನದ 15ನೇ ವಿಧಿಯ 4 ಮತ್ತು 5ನೇ ಖಂಡಗಳಲ್ಲಿ ಉಲ್ಲೇಖವಾಗದೇ ಇರುವ ಜಾತಿಗಳು) ಅಭಿವೃದ್ಧಿಗಾಗಿ ವಿಶೇಷ ಅವಕಾಶವನ್ನು ಸರ್ಕಾರವು ಸೃಷ್ಟಿಸಿಕೊಂಡಿದೆ. ಇದು ಆರ್ಥಿಕವಾಗಿ ದುರ್ಬಲವಾದ ವರ್ಗವನ್ನು ಸಶಕ್ತೀಕರಿಸಲು ಸರ್ಕಾರ ಕೈಗೊಂಡ ಕ್ರಮ ಎಂದು ಪರಿಗಣಿಸಬೇಕಾಗುತ್ತದೆ.

ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳನ್ನು ಪ್ರತ್ಯೇಕ ವರ್ಗ ಎಂದು ಪರಿಗಣಿಸುವುದು ಸಮರ್ಥನೀಯವೇ ಆಗಿದೆ. ಇದನ್ನು ಸಂವಿಧಾನದ 14ನೇ ವಿಧಿ ಅಥವಾ ಸಂವಿಧಾನದ ಮೂಲ ನೆಲೆಗಟ್ಟಿನ ಉಲ್ಲಂಘನೆ ಎಂದು ಪರಿಗಣಿಸಲಾಗದು. ಈ ಕೋರ್ಟ್ ಈ ಹಿಂದೆ ಹೇಳಿದಂತೆ, ಸಮಾನರನ್ನು ಅಸಮಾನರೊಂದಿಗೆ ಹೋಲಿಸುವುದು, ಅಸಮಾನರನ್ನು ಸಮಾನರೊಂದಿಗೆ ಹೋಲಿಸುವುದು, ಅಸಮಾನರನ್ನು ಸಮಾನರೊಂದಿಗೆ ಹೋಲಿಸುವುದು ಸಂವಿಧಾನದ 14 ಮತ್ತು 16ನೇ ವಿಧಿ ಅಥವಾ ಸಮಾನತೆಯ ತತ್ವದ ಉಲ್ಲಂಘನೆ ಆಗುತ್ತದೆ. ಪರಿಶಿಷ್ಟ ಜಾತಿ/ಪಂಗಡ ಮತ್ತು ಒಬಿಸಿಯನ್ನು ಸಂವಿಧಾನದ ವಿಧಿಗಳಾದ 15 (4), 15 (5) ಮತ್ತು 16 (4) ಅಡಿಯಲ್ಲಿ ವಿಶೇಷ ವರ್ಗ ಎಂದು ಪರಿಗಣಿಸಲಾಗಿದೆ. ಹಾಗಾಗಿಯೇ ಅವರನ್ನು ಸಾಮಾನ್ಯ ವರ್ಗ ಅಥವಾ ಮೀಸಲಾತಿರಹಿತ ವರ್ಗಕ್ಕೆ ಸಮಾನವಾಗಿ ನೋಡಲಾಗದು. ಇಡಬ್ಲ್ಯುಎಸ್‌ಗೆ ನೀಡಿರುವ ಮೀಸಲಾತಿಯು ಪರಿಶಿಷ್ಟ ಜಾತಿ/ಪಂಗಡ ಮತ್ತು ಒಬಿಸಿ ಮೀಸಲಾತಿಯನ್ನು ಬಾಧಿಸುವುದಿಲ್ಲ. ಹಾಗಾಗಿಯೇ, ಈ ವರ್ಗವನ್ನು ಇಡಬ್ಲ್ಯುಎಸ್ ಮೀಸಲಾತಿಯಿಂದ ಹೊರಗೆ ಇರಿಸಿರುವುದು ತಾರತಮ್ಯ ಎಂದು ಹೇಳಲಾಗದು.

ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕವಾಗಿರುವ ಅಂಶಗಳು ಮತ್ತು ಸಂವಿಧಾನದ ಭಾಗ–3 ಮತ್ತು ಭಾಗ–4ರಲ್ಲಿ ಅನುಮತಿ ನೀಡಲಾದ ವಿಚಾರಗಳು ಮೂಲನೆಲೆಗಟ್ಟಿನ ಉಲ್ಲಂಘನೆ ಆಗುವುದು ಸಾಧ್ಯವಿಲ್ಲ. ಸಂವಿಧಾನವು ನೀಡಿರುವ ಯಾವುದೇ ಅವಕಾಶವನ್ನು ತೊಡೆದು ಹಾಕಲಾಗಿಲ್ಲ. ಅಥವಾ ಈಗಾಗಲೇ ಇರುವ ಸಮಾನತೆಯ ಸಂಹಿತೆ ಅಥವಾ ಸಂವಿಧಾನದ ಮೂಲ ನೆಲೆಗಟ್ಟಿನ ಉಲ್ಲಂಘನೆಯೂ ಆಗಿಲ್ಲ. ಹಾಗಾಗಿಯೇ ಇಡಬ್ಲ್ಯುಎಸ್‌ಗೆ ಮೀಸಲಾತಿ ನೀಡುವ 103ನೇ ತಿದ್ದುಪಡಿ ಸಿಂಧುವಾಗಿದೆ.

‘ಮೀಸಲಾತಿಗೆ ಗಡುವು ಬೇಕು’

ಮೀಸಲಾತಿಗೆ ಗಡುವು ಹಾಕಿಕೊಳ್ಳಬೇಕು ಎಂಬುದು ಸಂವಿಧಾನ ರಚನೆಕಾರರು ಮತ್ತು 1985ರ ಸಂವಿಧಾನ ಪೀಠದ ಆಶಯವಾಗಿತ್ತು. ಸಂವಿಧಾನ ಜಾರಿಗೆ ಬಂದು 50 ವರ್ಷಗಳಲ್ಲಿ ಮೀಸಲಾತಿಯ ಉದ್ದೇಶ ಸಾಧನೆ ಆಗಬೇಕು ಎಂದು ಬಯಸಲಾಗಿತ್ತು. ಆದರೆ, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಅದು ಸಾಧ್ಯವಾಗಿಲ್ಲ. ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೂ ಇರುವ ಜಾತಿ ವ್ಯವಸ್ಥೆಯಿಂದಾಗಿಯೇ ಮೀಸಲಾತಿಯ ಅಗತ್ಯ ಉಂಟಾಯಿತು. ಚಾರಿತ್ರಿಕವಾದ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿಯೇ ಮೀಸಲಾತಿ ನೀಡಲಾಯಿತು. ಹಾಗಿದ್ದರೂ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿರುವ ಈ ಸಂದರ್ಭದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಸಮಾಜದ ಒಟ್ಟು ಹಿತದೃಷ್ಟಿಯಿಂದ ಮರುಪರಿಶೀಲನೆಗೆ ಒಳಪಡಿಸುವ ಅಗತ್ಯ ಇದೆ ಎಂದು ತಮ್ಮ ತೀರ್ಪಿನಲ್ಲಿ ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಹೇಳಿದ್ದಾರೆ.

‘ಸಂವಿಧಾನಬಾಹಿರ, ಮೂಲ ನೆಲೆಗಟ್ಟಿಗೆ ಧಕ್ಕೆ’

ಯು.ಯು. ಲಲಿತ್

‘103ನೇ ತಿದ್ದುಪಡಿಯ ಮೂಲಕ ಆರ್ಥಿಕವಾಗಿ ದುರ್ಬಲ ವರ್ಗಗಳು (ಇಡಬ್ಲ್ಯುಎಸ್) ಎಂಬ ಹೊಸ ವರ್ಗವನ್ನು ಸೃಷ್ಟಿಸಿರುವುದು ಸಂವಿಧಾನ ವಿರೋಧಿಯಲ್ಲ. ಆದರೆ, ಈ ಹೊಸ ವರ್ಗದಿಂದ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ) ಮತ್ತು ಇತರೆ ಹಿಂದುಳಿದ ವರ್ಗಗಳನ್ನು (ಒಬಿಸಿ) ಹೊರಗಿಟ್ಟಿರುವುದು ಸಂವಿಧಾನ ಬಾಹಿರ’ ಎಂದು ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಮತ್ತು ಅಂದಿನ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ತೀರ್ಪು ನೀಡಿದ್ದಾರೆ. ಐವರು ಸದಸ್ಯರ ಸಂವಿಧಾನ ಪೀಠದಲ್ಲಿ ಈ ಇಬ್ಬರು ಮಾತ್ರ ಈ ರೀತಿಯ ತೀರ್ಪು ನೀಡಿದ ಕಾರಣ, ಇದನ್ನು ಅಲ್ಪಮತದ ತೀರ್ಪು ಎಂದು ಪರಿಗಣಿಸಲಾಗಿದೆ.

ಇಡಬ್ಲ್ಯುಎಸ್ ಮೀಸಲಾತಿಯಿಂದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯನ್ನು ಹೊರಗಿಟ್ಟಿರುವುದರಿಂದ ಸಂವಿಧಾನದ ಮೂಲ ನೆಲೆಗಟ್ಟಿಗೆ ಧಕ್ಕೆಯಾಗಿದೆಯೇ ಎಂಬುದು, ಈ ಪೀಠದ ಎದುರು ಇದ್ದ ಮೂರನೇ ಪ್ರಶ್ನೆ. ನ್ಯಾಯಮೂರ್ತಿ ರವೀಂದ್ರ ಭಟ್ ಮತ್ತು ಯು.ಯು.ಲಲಿತ್, ಈ ತಿದ್ದುಪಡಿಯಿಂದ ಸಂವಿಧಾನದ ಮೂಲ ನೆಲೆಗಟ್ಟಿಗೆ ಧಕ್ಕೆಯಾಗುತ್ತದೆ ಎಂದೇ ತೀರ್ಪು ನೀಡಿದ್ದಾರೆ.

ಇಡಬ್ಲ್ಯುಎಸ್ ಎಂಬ ಹೊಸ ವರ್ಗವನ್ನು ಸೃಷ್ಟಿಸುವ ಮತ್ತು ಅದಕ್ಕೆ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿದೆ. ಈ ತಿದ್ದುಪಡಿಯ ಮೂಲಕ ಸಂವಿಧಾನದ 15 ಮತ್ತು 16ನೇ ವಿಧಿಗಳಿಗೆ ಹಲವು ಉಪವಿಧಿಗಳನ್ನು ಸೇರಿಸಲಾಗಿದೆ. ಆದರೆ ಸಂವಿಧಾನದ ಮೂಲ ನೆಲೆಗಟ್ಟಿಗೆ ಧಕ್ಕೆ ತರುವ ವಿಧಿಗಳೆಂದರೆ, 15(6) ಮತ್ತು 16(6)ನೇ ವಿಧಿಗಳು. ಈ ಮೀಸಲಾತಿಯು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗೆ ಅನ್ವಯವಾಗುವುದಿಲ್ಲ ಎಂದು ಈ ವಿಧಿಗಳಲ್ಲಿ ಹೇಳಲಾಗಿದೆ. ಈ ಮೀಸಲಾತಿ ಅನ್ವಯವಾಗುವುದು ಮುಂದುವರಿದ ವರ್ಗಗಳಿಗೆ (ಫಾರ್ವರ್ಡ್ ಕ್ಲಾಸಸ್) ಮಾತ್ರ ಎಂದು ಇವರ ತೀರ್ಪಿನಲ್ಲಿ ವಿವರಿಸಲಾಗಿದೆ.



ಎಸ್. ರವೀಂದ್ರ ಭಟ್

ಸಂವಿಧಾನದ 15, 16, 17ನೇ ವಿಧಿಗಳು ಮತ್ತು ಅವುಗಳ ಉಪವಿಧಿಗಳು ಒಟ್ಟಾರೆಯಾಗಿ ಸಮಾನತೆಯ ಸಂಹಿತೆಗಳಾಗಿವೆ. 15 ಮತ್ತು 16ನೇ ವಿಧಿಗಳಿಗೆ ಪ್ರತ್ಯೇಕವಾಗಿ (6)ನೇ ಉಪವಿಧಿಯನ್ನು ಸೇರಿಸುವ ಮೂಲಕ ಅಸಮಾನತೆಗೆ ಆಸ್ಪದ ನೀಡಲಾಗಿದೆ. ಆರ್ಥಿಕವಾಗಿ ದುರ್ಬಲ ವರ್ಗಗಳು ಎಂಬ ಹೊಸ ವರ್ಗವನ್ನು ಸೃಷ್ಟಿಸುವಾಗ, ಆರ್ಥಿಕ ಸ್ಥಿತಿಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಆದರೆ, ಇದೇ ಮೀಸಲಾತಿಯಿಂದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯನ್ನು ಹೊರಗೆ ಇಡುವಾಗ ಜಾತಿಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಜಾತಿ ಆಧಾರದಲ್ಲಿ ಇಲ್ಲಿ ಅಸಮಾನತೆಗೆ ಆಸ್ಪದ ನೀಡಲಾಗಿದೆ. ಈ 6ನೇ ಉಪವಿಧಿಯು ಈ ಮೂಲಕ ಸಂವಿಧಾನದ ಸಮಾನತೆಯ ಸಂಹಿತೆಯನ್ನು ಉಲ್ಲಂಘಿಸುತ್ತದೆ. ಈ ಕಾರಣದಿಂದ 15(6) ಮತ್ತು 16(6)ನೇ ಉಪವಿಧಿಗಳನ್ನು ರದ್ದುಪಡಿಸಬೇಕು ಎಂದು ಈ ಇಬ್ಬರು ನ್ಯಾಯಮೂರ್ತಿಗಳು ತೀರ್ಪು ನೀಡಿದ್ದಾರೆ.

ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿಯನ್ನು ಈ ತಿದ್ದುಪಡಿಯು ನೀಡುತ್ತದೆ. ಈ ಇಬ್ಬರು ನ್ಯಾಯಮೂರ್ತಿಗಳು ತಿದ್ದುಪಡಿಯ ಈ ಭಾಗವೂ ಸಂವಿಧಾನಬಾಹಿರ ಮತ್ತು ಇದು ಸಂವಿಧಾನದ ಮೂಲ ನೆಲೆಗಟ್ಟಿಗೆ ಧಕ್ಕೆ ತರುತ್ತದೆ. ಈ ರೀತಿಯ ಮೀಸಲಾತಿಯಿಂದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗದವರನ್ನು ಹೊರಗೆ ಇಡಲಾಗಿದೆ. ಆ ಮೂಲಕ ಅಸಮಾನತೆಗೆ ಆಸ್ಪದ ಮಾಡಿಕೊಡಲಾಗಿದೆ ಮತ್ತು ಇದರಿಂದ ಸಂವಿಧಾನದ ಮೂಲ ನೆಲೆಗಟ್ಟಿಗೆ ಧಕ್ಕೆಯಾಗುತ್ತದೆ. ಈ ಕಾರಣದಿಂದ, ತಿದ್ದುಪಡಿಯ ಈ ಭಾಗವನ್ನೂ ತೆಗೆದುಹಾಕಬೇಕು ಎಂದು ಈ ಇಬ್ಬರು ನ್ಯಾಯಮೂರ್ತಿಗಳು ತೀರ್ಪು ನೀಡಿದ್ದಾರೆ.

‘ಪಟ್ಟಭದ್ರ ಹಿತಾಸಕ್ತಿ ಆಗದಿರಲಿ’

ಜೆ.ಬಿ. ಪಾರ್ದೀವಾಲಾ

‘ಈ ತಿದ್ದುಪಡಿ ಸರಿಯಿದೆ ಎಂಬ ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಅವರ ಅಭಿಪ್ರಾಯಕ್ಕೆ ನನ್ನ ಸಹಮತ ಇದೆ. ಇಡೀ ವಿಷಯವನ್ನು ನಾನು ಬೇರೊಂದು ದೃಷ್ಟಿಕೋನದಲ್ಲಿ ನೋಡಲು ಬಯಸುತ್ತೇನೆ’ ಎಂದು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಅವರು ಹೇಳಿದ್ದಾರೆ.

‘ದೋಷಪೂರಿತ ಎನ್ನಲಾದ ತಿದ್ದುಪಡಿ ಮಸೂದೆಯು ಸರಿಯಾಗಿದೆ. ಅದರಿಂದ ಸಂವಿಧಾನದ ಮೂಲ ನೆಲೆಗಟ್ಟಿಗೆ ಯಾವುದೇ ಧಕ್ಕೆಯಾಗುವುದಿಲ್ಲ. ನನ್ನ ಪ್ರಕಾರ, ತಿದ್ದುಪಡಿ ಮಸೂದೆಯನ್ನು ಪ್ರಶ್ನಿಸಿದ್ದ ಅರ್ಜಿಗಳಲ್ಲಿ ತಥ್ಯವಿಲ್ಲ. ಮೀಸಲಾತಿ ಎಂಬುದು ಕೊನೆಯಲ್ಲ. ಆದರೆ, ಸಾಮಾಜಿಕ ಭದ್ರತೆ ಮತ್ತು ಆರ್ಥಿಕ ಸೌಲಭ್ಯ ಪಡೆಯಲು ಇರುವ ಮಾರ್ಗವಾಗಿದೆ. ಮೀಸಲಾತಿಯು ಪಟ್ಟಭದ್ರ ಹಿತಾಸಕ್ತಿಯಾಗಲು ಅವಕಾಶ ಮಾಡಿಕೊಡಬಾರದು’ ಎಂದು ಪಾರ್ದೀವಾಲಾ ಅವರು ಹೇಳಿದ್ದಾರೆ.

ಸಮಾಜದ ದುರ್ಬಲ ವರ್ಗದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವಿಕೆಗೆ ಕಾರಣವಾಗುವ ಅಂಶಗಳನ್ನು ನಿವಾರಣೆ ಮಾಡುವುದೇ ಮೀಸಲಾತಿಯ ಉದ್ದೇಶ. ದೇಶಕ್ಕೆ ಸ್ವಾತಂತ್ರ್ಯ ದೊರೆತ ತಕ್ಷಣವೇ, ಹಿಂದುಳಿದಿರುವಿಕೆಗೆ ಕಾರಣವಾಗುವ ಅಂಶಗಳನ್ನು ತೊಡೆದು ಹಾಕುವ ಪ್ರಕ್ರಿಯೆಗಳು ಶುರುವಾದವು. ಸುಮಾರು ಏಳು ದಶಕಗಳ ಹಿಂದೆ ಶುರುವಾದ ಈ ಪ್ರಕ್ರಿಯೆ ಈಗಲೂ ಮುಂದುವರಿದಿದೆ ಎಂದು ಹೇಳಿದ್ದಾರೆ.

ಸಮಾಜದ ವಿವಿಧ ವರ್ಗಗಳ ನಡುವೆ ಇದ್ದ ಅಸಮಾನತೆಯ ಪ್ರಮಾಣವನ್ನು ತಗ್ಗಿಸುವಲ್ಲಿ ಅಭಿವೃದ್ಧಿ ಕೆಲಸಗಳು ಹಾಗೂ ಶಿಕ್ಷಣದ ಪ್ರಸರಣ ದೊಡ್ಡ ಕೊಡುಗೆ ನೀಡಿವೆ. ಹಿಂದುಳಿದ ವರ್ಗಗಳಿಗೆ ಸೇರಿದ ಅಪಾರ ಪ್ರಮಾಣದ ಜನರು ಇಂದು ಅತ್ಯುತ್ತಮ ಶಿಕ್ಷಣ ಹಾಗೂ ಉದ್ಯೋಗ ಪಡೆದಿದ್ದಾರೆ. ಹೀಗಾಗಿ, ಈ ಸೌಲಭ್ಯಗಳಿಂದ ವಂಚಿತವಾಗಿರುವ ಇತರ ಸಮುದಾಯಗಳ ಜನರತ್ತಲೂ ಗಮನ ಹರಿಸಬೇಕಿದೆ ಎಂದು ನ್ಯಾಯಮೂರ್ತಿ ಪ್ರತಿಪಾದಿಸಿದ್ದಾರೆ.

ಹಿಂದುಳಿದ ವರ್ಗಗಳನ್ನು ಗುರುತಿಸುವ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಅತ್ಯಗತ್ಯವಾಗಿ ಪರಿಶೀಲನೆ ನಡೆಸಬೇಕಿದೆ. ಯಾರು ಹಿಂದುಳಿದವರು ಎಂದು ನಿರ್ಣಯಿಸುವ ವಿಧಾನವೂ ಪರಿಶೀಲನೆಗೆ ಒಳಪಡಬೇಕು. 117 ಹಿಂದುಳಿದ ಸಮುದಾಯಗಳನ್ನು ಗುರುತಿಸಲು ಅಳವಡಿಸಿಕೊಂಡಿರುವ ವಿಧಾನವು, ಈಗಿನ ಪರಿಸ್ಥಿತಿಯಲ್ಲೂ ಪ್ರಸ್ತುತವಾಗಿದೆಯೇ ಎಂದು ಆಲೋಚಿಸಬೇಕಿದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ದಿನೇಶ್ ಮಾಹೇಶ್ವರಿ

ಸಾಮಾಜಿಕ ಸಾಮರಸ್ಯ ಸಾಧಿಸಲು ಮೀಸಲಾತಿ ತರುವುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಇದು 10 ವರ್ಷ ಇದ್ದರಷ್ಟೆ ಸಾಕು ಎಂದು ಅವರು ಬಯಸಿದ್ದರು. ಆದರೆ, ಏಳು ದಶಕಗಳಾದರೂ ಅದು ಮುಂದುವರಿದಿದೆ. ಅದು ಅನಿರ್ದಿಷ್ಟ ಅವಧಿಗೆ ಮುಂದುವರಿಯಬಾರದು. ಮುಂದುವರಿದರೆ ಅದು ಪಟ್ಟಭದ್ರ ಹಿತಾಸಕ್ತಿಯಾಗಿ ಕೆಲಸ ಮಾಡುತ್ತದೆ ಎಂದು ಪಾರ್ದೀವಾಲಾ ಅವರು ಹೇಳಿದ್ದಾರೆ.

ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಅವರೂ ಬಹುತೇಕ ಇದೇ ರೀತಿಯ ತೀರ್ಪು ಕೊಟ್ಟಿದ್ದಾರೆ.

ಆಧಾರ: ಇಡಬ್ಲ್ಯುಎಸ್ ಮೀಸಲಾತಿ ಪ್ರಶ್ನಿಸಿದ್ದ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ನೀಡಿದ ತೀರ್ಪು

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು



ಕರ್ನಾಟಕ –ಮಹಾರಾಷ್ಟ್ರ ಗಡಿವಿವಾದಕ್ಕೆ ಸಂಬಂಧಿಸಿದಂತೆ ಉಭಯ ರಾಜ್ಯಗಳವರು ಹೇಳಿಕೆ ನೀಡಿ ಪರಿಸ್ಥಿತಿ ಉದ್ವಿಗ್ನಗೊಳಿಸುವ ಬದಲು, ಕೋರ್ಟ್‌ನ ತೀರ್ಮಾನದವರೆಗೆ ಕಾಯುವುದು ಸೂಕ್ತ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

‘350 ಕೋಟಿ ಜನರಿಗೆ ಬಾಯಿ ಅನಾರೋಗ್ಯ’

ವಿಶ್ವ ಆರೋಗ್ಯ ಸಂಸ್ಥೆಯ ವರದಿ



ಬಾಯಿ ಕ್ಯಾನ್ಸರ್, ವಸಡಿನಲ್ಲಿ ಊತ, ಹಲ್ಲುಗಳಲ್ಲಿ ಸೋಂಕು ಮೊದಲಾದ ಬಾಯಿಗೆ ಸಂಬಂಧಿಸಿದ ಕಾಯಿಲೆಗಳಿಂದ ಜಗತ್ತಿನ ಅರ್ಧದಷ್ಟು ಜನರು ಬಳಲುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

ಬಾಯಿ ಆರೋಗ್ಯಕ್ಕೆ ಸಂಬಂಧಿಸಿದ ಚಿಕಿತ್ಸೆ ಎಲ್ಲ ಕಡೆಯೂ ಒಂದೇ ತೆರನಾಗಿ ದೊರೆಯುತ್ತಿಲ್ಲ ಎಂದು ಹೇಳಿರುವ ಸಂಸ್ಥೆ, ದುರ್ಬಲ ವರ್ಗದವರು ಹಾಗೂ ಸೌಲಭ್ಯ ವಂಚಿತ ಜನರಲ್ಲಿ ಈ ಸಮಸ್ಯೆಗಳು ಕೆಟ್ಟ ಪರಿಣಾಮ ಬೀರುತ್ತಿವೆ ಎಂದು ‘ಎಲ್ಲರಿಗೂ ಬಾಯಿ ಆರೋಗ್ಯದ ಅವಕಾಶಗಳು ಮತ್ತು ಸವಾಲುಗಳು’ ಎಂಬ ವರದಿಯಲ್ಲಿ ತಿಳಿಸಿದೆ.

ಜಗತ್ತಿನ ಜನಸಂಖ್ಯೆಯ ಪೈಕಿ 350 ಕೋಟಿ ಜನರು (ಶೇ 45) ಹಲ್ಲಿನ ಸೋಂಕು, ವಸಡಿನ ಊತ ಹಾಗೂ ಬಾಯಿ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ವಿಚಾರದಲ್ಲಿ 194 ದೇಶಗಳ ಸ್ಥಿತಿಗತಿ ತಿಳಿಸುವ ವರದಿಯನ್ನು ಪ್ರಕಟಿಸಿರುವ ಡಬ್ಲ್ಯುಎಚ್‌ಒ, ಕಳೆದ 30 ವರ್ಷಗಳಲ್ಲಿ ಇಂತಹ 100 ಕೋಟಿ ಪ್ರಕರಣಗಳು ಪತ್ತೆಯಾಗಿವೆ ಎಂದು ಮಾಹಿತಿ ನೀಡಿದೆ.

ವಸಡಿನಲ್ಲಿ ಊತ ಕಾಣಿಸಿಕೊಳ್ಳುವುದು, ಸೋಂಕು ಕಾಣಿಸಿಕೊಂಡು ಹಲ್ಲುಗಳು ಹುಳುಕಾಗುವುದು, ಬಾಯಿ ಕ್ಯಾನ್ಸರ್ ಉಂಟಾಗುವ ಪ್ರಕರಣಗಳು ಹೆಚ್ಚಾಗಿ ದಾಖಲಾಗಿವೆ. ಹಲ್ಲಿನ ಸವೆತ ಎಂಬುದು ಅತಿ ಸಾಮಾನ್ಯವಾಗಿರುವ ವಿಚಾರ. ಜಗತ್ತಿನ ಸುಮಾರು 250 ಕೋಟಿ ಜನರು ಈ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ವರದಿ ಹೇಳಿದೆ.

ವಸಡಿನಲ್ಲಿ ಗಂಭೀರವಾಗಿ ಊತ ಕಾಣಿಸಿಕೊಂಡಿರುವ 100 ಕೋಟಿ ಜನರು ಇದ್ದಾರೆ. ಪ್ರತೀ ವರ್ಷ ಜಗತ್ತಿನಾದ್ಯಂತ ಬಾಯಿ ಕ್ಯಾನ್ಸರ್‌ನ 3.8 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿರುವ ದೇಶಗಳಲ್ಲೇ ಈ ಸಮಸ್ಯೆ ಅಧಿಕವಾಗಿದೆ. ನಾಲ್ಕನೇ ಮೂರು ಭಾಗದಷ್ಟು ಇಂತಹ ಸಮಸ್ಯೆಗಳು ಈ ರೀತಿಯ ದೇಶಗಳಲ್ಲೇ ವರದಿಯಾಗಿವೆ. ಎಲ್ಲ ದೇಶಗಳಲ್ಲೂ ಕಡಿಮೆ ಆದಾಯ ಹೊಂದಿರುವ, ಅಶಕ್ತ, ವಯಸ್ಸಾದ, ಏಕಾಂಗಿಯಾದ, ವೃದ್ಧಾಶ್ರಮಗಳಲ್ಲಿ ವಾಸಿಸುತ್ತಿರುವ ಜನರು ಬಾಯಿ ಅನಾರೋಗ್ಯದ ದೊಡ್ಡ ಸಂತ್ರಸ್ತರು ಎಂದು ತಿಳಿಸಿದೆ.

ಹೆಚ್ಚಿನ ಪ್ರಮಾಣದ ಸಕ್ಕರೆ ಬಳಕೆ, ತಂಬಾಕು ಮತ್ತು ಮದ್ಯ ಬಳಕೆಯಿಂದ ಸಮಸ್ಯೆಗಳು ಎದುರಾಗುತ್ತವೆ. ಬಾಯಿ ಅನಾರೋಗ್ಯಕ್ಕೂ ಇವು ಕಾರಣವಾಗಿವೆ.

ಕಾಯಿಲೆಯ ಬಗ್ಗೆ ಮಾಹಿತಿಯ ಕೊರತೆ ಹಾಗೂ ಅಸಮರ್ಪಕ ನಿಗಾ ವ್ಯವಸ್ಥೆಯಿಂದ ಬಹಳ ಜನರು ಸೋಂಕು ತಗುಲಿದ ಎಷ್ಟೋ ಸಮಯದ ಬಳಿಕ ಚಿಕಿತ್ಸೆಗೆ ಮುಂದಾಗುತ್ತಾರೆ. ಹೀಗಾಗುವುದನ್ನು ತಡೆಯಬೇಕಾದರೆ ಎಲ್ಲ ದೇಶಗಳು ತಮ್ಮ ಪ್ರಾಥಮಿಕ ಆರೋಗ್ಯ ಕಾರ್ಯಕ್ರಮದಲ್ಲಿ ಬಾಯಿ ಆರೋಗ್ಯವನ್ನು ಸೇರಿಸಿ ಅನುಷ್ಠಾನಕ್ಕೆ ತರಬೇಕು ಎಂದು ಡಬ್ಲ್ಯುಎಚ್‌ಒ ಸಲಹೆ ನೀಡಿದೆ.

ಆಧಾರ: ಎಎಫ್‌ಪಿ, ಬಾಯಿ ಆರೋಗ್ಯ ಸ್ಥಿತಿಗತಿ ಕುರಿತ ಡಬ್ಲ್ಯುಎಚ್‌ಒ ವರದಿ

ದೇಶದಲ್ಲೂ ಗಂಭೀರ ಸಮಸ್ಯೆ

ಭಾರತದಲ್ಲಿ ಪತ್ತೆಯಾಗುವ ಕ್ಯಾನ್ಸರ್ ಪ್ರಕರಣಗಳಲ್ಲಿ ಬಾಯಿ ಕ್ಯಾನ್ಸರ್ ಪ್ರಕರಣಗಳ ಪ್ರಮಾಣ ಶೇ 30ರಷ್ಟಿದೆ ಎಂದು ವರದಿಯಾಗಿದೆ. 2020ರಲ್ಲಿ 1.30 ಲಕ್ಷ ಜನರಲ್ಲಿ ಬಾಯಿ ಕ್ಯಾನ್ಸರ್ ಇರುವುದು ದೃಢಪಟ್ಟಿತ್ತು ಎಂದು ಜಾಗತಿಕ ಕ್ಯಾನ್ಸರ್ ಮೇಲ್ವಿಚಾರಣೆ ಸಂಸ್ಥೆ ತಿಳಿಸಿದೆ.

ಭಾರತದಲ್ಲಿ ತಂಬಾಕು ಬಳಸುವ ಪ್ರವೃತ್ತಿ ವ್ಯಾಪಕವಾಗಿದೆ. ಈ ಪ್ರವೃತ್ತಿಯು ಬಾಯಿ ಕ್ಯಾನ್ಸರ್‌ನ ಅಪಾಯಕ್ಕೆ ಒಡ್ಡಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಸಪ್ತಮಿ ಗಂ. 08-59 ನಕ್ಷತ್ರ: ಧನಿಷ್ಠಾ ಗಂ. 07-11 ಶತಭಿಷ ಗಂ. 30-12 ಯೋಗ: ವ್ಯಾಘಾತ ಗಂ. 12-01, ಕರಣ: ವಣಿಜ ಗಂ. 08-59 ವೃಶ್ಚಿಕ ಮಾಸದ 13ನೇ ದಿನ. ರಾಹುಕಾಲ : ಮಧ್ಯಾಹ್ನ 12-00 –01-30
ಸೂರ್ಯೋದಯ : 06-41 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 05 ಜುಮಾದುಲ್ಲಾವಲ್ ದಿನ ವಿಶೇಷ : ಮಿತ್ರ ಸಪ್ತಮಿ
ಅದೃಷ್ಟ ಸಂಖ್ಯೆ : 1, 7

ಮೇಷ: ಸಂಬಂಧ ಮತ್ತು ಒಪ್ಪಂದಗಳತ್ತ ಗಮನವು ಈ ದಿನ ನಿಶ್ಚಿತವಾಗಿ ತೆಗೆದುಕೊಳ್ಳಬೇಕಾಗಲಿದೆ. ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲ ಹೊರ ತೆಗೆಯಲು ವೇದಿಕೆ ಸಿಗುವುದು. ಹೊಸತು ಕಲಿಯಲು ಆಸಕ್ತಿ ಉಂಟಾಗಲಿದೆ

ವೃಷಭ: ವಿಭಿನ್ನ ರೀತಿಯ ಕೆಲಸವೊಂದನ್ನು ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಸಾಕಷ್ಟು ಆದಾಯ ಮತ್ತು ಹೆಸರು ತರಲಿದೆ. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸದ ಬಗ್ಗೆ ಯೋಚಿಸಬೇಕಾಗುವುದು.

ಮಿಥುನ: ಮಕ್ಕಳ ಆಸೆಗೆ ಅಡ್ಡಗಾಲು ಹಾಕಿ ಮನಸ್ಸನ್ನು ನೋವಿಸುವ ಕೆಲಸ ಮಾಡದಿರಿ. ಅಧಿಕಾರಸ್ಥರು ಹಾಗೂ ಹಿರಿಯ ನೌಕರರ ಜತೆ ನಿಮ್ಮ ಸ್ನೇಹ ಸಂಬಂಧ ಹೆಚ್ಚಾಗಿ ಬೆಳೆದು ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ.

ಕರ್ಕಾಟಕ: ಸಹಾಯಕರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ. ಆದರೆ ಈ ಪ್ರಯತ್ನ ಸದ್ಯಕ್ಕೆ ಸರಿಯಲ್ಲ. ಸಿದ್ಧ ಉಡುಪು ಮಾರಾಟಗಾರರಿಗೆ ಲಾಭ.

ಸಿಂಹ: ಸ್ವ ಸಾಮರ್ಥ್ಯದಿಂದ ಗುರಿ ಸಾಧಿಸಿದ ಹೆಮ್ಮೆ ಈ ದಿನ ನಿಮ್ಮದಾಗಲಿದೆ. ನಡೆದು ಹೋದ ಸಂಗತಿಗಳ ಅಥವಾ ದುರ್ಘಟನೆಗಳ ಬಗ್ಗೆ ಯೋಚಿಸದೆ ಕಾರ್ಯ ಪ್ರವೃತ್ತರಾದಲ್ಲಿ ಜಯ ಸಾಧ್ಯ. ವಿರೋಧಿಗಳು ಏನೂ ಮಾಡಲಾರರು

ಕನ್ಯಾ: ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ. ನಿಮ್ಮ ಅಭಿವೃದ್ಧಿಗೆ ಸ್ನೇಹಿತರ ಬಳಗವು ಕಾರಣವಾಗುತ್ತದೆ. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ. ಬಣ್ಣ ಮಾರಾಟಗಾರರಿಗೆ ವ್ಯಾಪಾರವಿದೆ.

ತುಲಾ: ಸಂಭ್ರಮದ ಜೀವನ ಶೈಲಿಯಿಂದ ಖರ್ಚುಗಳು ಸಂಭವಿಸುವುದು. ಆದಾಯಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗಲಾರದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುತ್ತದೆ. ದೇಹದಲ್ಲಿ ಪಿತ್ತಾಧಿಕ್ಯದ ಸಮಸ್ಯೆ ಕಾಣಬಹುದು.

ವೃಶ್ಚಿಕ: ಮುಂದಿನ ಯೋಜನೆಗಳ ಬಗ್ಗೆ ಈ ದಿನದಿಂದಲೇ ಕಾರ್ಯಾಚರಣೆ ಪ್ರಾರಂಭಿಸುವಿರಿ. ಕಟ್ಟಡ ಕಾರ್ಮಿಕರಿಗೆ, ದಿನಕೂಲಿಗಾರರಿಗೆ ಸಾಕಷ್ಟು ಅವಕಾಶಗಳು ಸಿಗುವುದು. ಮಕ್ಕಳ ಆರೋಗ್ಯ ಉತ್ತಮವಾಗಿರುವುದು.

ಧನು: ಈ ದಿನ ನೀವು ನಿಮ್ಮ ಕುಟುಂಬದ ಅಭಿವೃದ್ಧಿಗೋಸ್ಕರವಾಗಿ ತೆಗೆದುಕೊಂಡಿರುವ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ ಸೃಷ್ಟಿ.

ಮಕರ: ಹಣಕಾಸಿನ ದುರಾಸೆಯು ಗೌರವವನ್ನು ಕಡಿಮೆಮಾಡಲಿದೆ. ನಿಮಗೆ ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸುವುದು ಒಳ್ಳೆಯದು. ಗೃಹಿಣಿಯರಿಗೆ ವಿಶೇಷ ದಿನ.

ಕುಂಭ: ವಿದ್ಯಾ ಕ್ಷೇತ್ರದವರಿಗೆ ಹೆಚ್ಚಿನ ಮನ್ನಣೆ, ಗೌರವ ದೊರಕಲಿದೆ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ. ದಾಖಲೆಗಳು ಕಳೆದುಹೋಗಬಹುದು, ಆದ್ದರಿಂದ ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ.

ಮೀನ: ಕಟ್ಟಡ ನಿರ್ಮಾಣದ ಗುತ್ತಿಗೆ ಪಡೆಯುವವರು ಆಮೂಲಾಗ್ರ ಚಿಂತನೆ ನಡೆಸಿ ಒಪ್ಪಿಕೊಳ್ಳುವುದು ಸೂಕ್ತ. ಸಿಹಿ ತಿಂಡಿಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು. ತಂತ್ರಜ್ಞಾನದ ವಿಚಾರದಲ್ಲಿ ಸಿದ್ಧಹಸ್ತರಾಗುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಾಯಿಯ ಉಪದೇಶ

ಕ್ಷಣದಿಂದನುಕ್ಷಣಕೆ, ದಿನದಿಂದ ಮರುದಿನಕೆ |
ಅನಿತನಿತರೊಳೆ ಬದುಕುತಾಯುವನು ಕಳೆವಾ ||
ಮನದ ಲಘುಸಂಚಾರವೊಂದು ಯೋಗದುಪಾಯ
ಶುನಕೋಪದೇಶವದು – ಮಂಕುತಿಮ್ಮ || 767 ||

ಪದ-ಅರ್ಥ: ಅನಿತನಿತರೊಳೆ = ಅಷ್ಟಿಷ್ಟರಲ್ಲಿ, ಬದುಕುತಾಯವನು = ಬದುಕುತ + ಆಯುವನು-(ಆಯುಷ್ಯವನ್ನು), ಲಘುಸಂಚಾರ = ಹಗುರಾದ ಯೋಚನೆ, ಯೋಗದುಪಾಯ = ಯೋಗದ + ಉಪಾಯ, ಶುನಕೋಪದೇಶ = ಶುನಕ (ನಾಯಿ) + ಉಪದೇಶ.

ವಾಚ್ಯಾರ್ಥ: ಒಂದು ಕ್ಷಣದಿಂದ ಮತ್ತೊಂದು ಕ್ಷಣಕ್ಕೆ, ದಿನದಿಂದ ಮತ್ತೊಂದು ದಿನಕ್ಕೆ, ದೊರಕಿದಷ್ಟರಲ್ಲಿ ಬದುಕುತ್ತ, ಆಯುಷ್ಯವನ್ನು ಕಳೆಯುವ ಮನಸ್ಸಿನ ಹಗುರಾದ ಆಲೋಚನೆ ಒಂದು ಯೋಗದ ಉಪಾಯ. ಇದು ನಾಯಿಯಿಂದ ದೊರೆಯುವ ಉಪದೇಶ.

ವಿವರಣೆ: ಆಚಾರ್ಯ ಚಾಣಕ್ಯ ಭಾರವಾಗದ ಬದುಕನ್ನು ನಡೆಸುವುದು ಹೇಗೆ ಎಂಬುದನ್ನು ವಿವರಿಸುತ್ತ ನಾವು ನಾಯಿಯ ಹಾಗೆ ಇರಬೇಕು ಎನ್ನುತ್ತಾರೆ. ನಾಯಿಯ ಉಳಿದ ಗುಣಗಳಾದ ಕೃತಜ್ಞತೆ, ನಂಬಿಕೆ, ಧೈರ್ಯಗಳ ಜೊತೆಗೆ ಮುಖ್ಯವಾದದ್ದು, ನಾಳೆಯನ್ನು ಚಿಂತಿಸದೆ ಬದುಕುವುದು. ಇದು ಸಾಕಿದ ನಾಯಿಯ ಉದಾಹರಣೆಯಲ್ಲ. ಕೆಲವೊಂದು ಸಾಕಿದ ನಾಯಿಗಳಿಗೆ ಎಷ್ಟೋ ಮನುಷ್ಯರಿಗೆ ದೊರಕದ ಸುಖ ಭೋಗಗಳು ದೊರೆಯುತ್ತವೆ. ಇದು ಬೀದಿಯ ನಾಯಿಯ ಜೀವನ. ಅದಕ್ಕೆ ನಾಳೆ ಏನು ಸಿಕ್ಕೀತೋ ತಿಳಿಯದು. ಅದು ಇಂದು, ಈಗ ಏನು ಸಿಕ್ಕಿತೋ ಅದನ್ನೇ ತಿಂದು ಸಂತೋಷದಿಂದ ಬದುಕುತ್ತದೆ. ಅದಕ್ಕೆ ಕೂಡಿಡುವ ಹವ್ಯಾಸವಿಲ್ಲ. ಕಗ್ಗ ಅದೇ ಉದಾಹರಣೆಯನ್ನು ಉಪದೇಶವನ್ನಾಗಿ ಕೊಡುತ್ತದೆ. ಒಂದು ಕ್ಷಣದಿಂದ ಮತ್ತೊಂದು ಕ್ಷಣಕ್ಕೆ, ಒಂದು ದಿನದಿಂದ ಮರುದಿನಕ್ಕೆ ಚಿಂತೆಯಿಲ್ಲದೆ ಬದುಕುವ ನಾಯಿಗೆ, ದೊರಕಿದ್ದಷ್ಟರೊಳಗೆ ಬದುಕುವ ಅನಿವಾರ್ಯತೆ ಮತ್ತು ಮನಸ್ಸಿನ ಸಿದ್ಧತೆ ಇದೆ. ಇಂಥ ಮನಸ್ಸೇ ಬದುಕನ್ನು ಹಗುರಾಗಿಸುವುದು. ನಾಳೆಯ, ಮುಂದಿನ ವರ್ಷದ, ಮುಂದಿನ ತಲೆಮಾರಿನ ಚಿಂತೆ, ಮನುಷ್ಯನನ್ನು ಕಂಗೆಡಿಸಿ, ಕುಗ್ಗಿಸಿ ಬಿಡುತ್ತದೆ. ಸಂತನೊಬ್ಬ ಯಾತ್ರೆಗೆ ಹೊರಟಿದ್ದ. ಅವನನ್ನು ರೈಲುನಿಲ್ದಾಣದಲ್ಲಿ ಕಳುಹಿಸಿಕೊಡಲು ನೂರಾರು ಮಂದಿ ನೆರೆದಿದ್ದರು. ಒಬ್ಬ ಶಿಷ್ಯ ಗುರುವಿನ ದಾರಿ ಖರ್ಚಿಗೆ ಸಾವಿರ ರೂಪಾಯಿಗಳನ್ನು ಕೊಡಹೋದ. ಆಗ ಸಂತ ನಕ್ಕು ಹೇಳಿದ, ‘ಸಂತನಿಗೆ ಹೆಚ್ಚು ಆಸೆ ಇರಬಾರದು. ನಾನು ನಾಡಿದ್ದಿನ ಬಗ್ಗೆ ಚಿಂತೆ ಮಾಡುವುದಿಲ್ಲ. ಅದು ಭಗವಂತನ ಜವಾಬ್ದಾರಿ. ಕೇವಲ ನಾಳೆಗೆಂದು ಹತ್ತು ರೂಪಾಯಿ ಮಾತ್ರ ಇಟ್ಟುಕೊಂಡಿದ್ದೇನೆ’ ಎಂದು ಅದನ್ನು ಹೊರತೆಗೆದು ತೋರಿಸಿದ. ಅಲ್ಲಿ ಒಬ್ಬ ಹುಚ್ಚನಂತಿದ್ದ ವ್ಯಕ್ತಿ ಬಂದು ಕೇಳಿದ, ‘ಸಂತರೇ, ನಾಡಿದ್ದು ಭಗವಂತ ನಿಮ್ಮನ್ನು ನೋಡಿಕೊಳ್ಳುತ್ತಾನೆ ಎಂಬ ನಂಬಿಕೆ ಇದ್ದರೆ, ನಾಳೆಯೂ ಅವನು ನಿಮ್ಮ ಕಾಳಜಿ ಮಾಡಲಾರನೆ? ಅದರ ಅಪನಂಬಿಕೆಯಿಂದ ಹತ್ತು ರೂಪಾಯಿ ಇಟ್ಟುಕೊಂಡಿದ್ದೀರಾ?’ ಸಂತ ಅವನನ್ನೊಮ್ಮೆ ನೋಡಿ, ‘ಹೌದಪ್ಪ, ನನ್ನದು ಆಸೆ ಮತ್ತು ಅಪನಂಬಿಕೆ ಎರಡೂ’ ಎಂದು ಆ ಹತ್ತು ರೂಪಾಯಿಯನ್ನು ಅವನ ಕೈಯಲ್ಲಿ ಹಾಕಿ, ಕಾಲುಮುಟ್ಟಿ ನಮಸ್ಕರಿಸಿದ. ನಾಳಿನ ಚಿಂತೆ ಇಲ್ಲದೆ, ಇಂದು ದೊರೆತದ್ದರಲ್ಲಿ ತೃಪ್ತಿಯಿಂದ ಬದುಕುವುದನ್ನು ಕಗ್ಗ ‘ಲಘು ಸಂಚಾರ’ ಎಂದು ಕರೆಯುತ್ತದೆ. ಇದು ನಮಗೆ ನಾಯಿಯಿಂದ ದೊರೆಯುವ ಉಪದೇಶ. ಮನದ ಕಣ್ಣು ತೆರೆದು ನೋಡುವವನಿಗೆ ಪ್ರತಿಯೊಂದು ವಸ್ತು, ಪ್ರತಿಯೊಂದು ಜೀವ ಗುರುವಾದೀತು.

ಪದಬಂಧ 5154

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕ್ರಮ ಕೊನೆಗಿಟ್ಟು ತೋರಿದ ಕಲಿತನ (4)
3. ತೋರಿಕೆಗಾಗಿ ನಗುವ ನಗು (4)
5. ಒನಪು ತೋರಿದಾಗ ಬಂದಿರುವ ಸ್ಮರಣೆ (3)
6. ಆಕ್ಷೇಪವಿಲ್ಲದ ಗುಪ್ತನಿಧಿ! (3)
8. ಕುಲದಲ್ಲಿ ಎಲ್ಲರೂ ಕ್ಷೇಮ! (3)
9. ಹಿತವಲ್ಲದ್ದು ಇದು (3)
10. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12. ವನದಲ್ಲಿಯೇ ತ್ಯಜಿಸುವಿಕೆ (3)
14. ಕರುಣೆಯೇ ಇಲ್ಲದ ಕ್ರೂರ (4)
15. ಚಾರನ ಕೆಟ್ಟ ನಡುವಳಿಕೆ (4)

ಮೇಲಿಂದ ಕೆಳಕ್ಕೆ

1. ಹಾಲು ಕರೆಯುವ ಹಸು (4)
2. ಮದಿಸಿದ ಗಜ (3)
3. ಚರಪು ತಿನ್ನಲು ತೋರಿದ ಉತ್ಸಾಹ! (3)
4. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
7. ಪಾಪ ಮಾಡಿದವನು (3)
8. ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ! (3)
9. ಸ್ಮರಣ ಶಕ್ತಿ ಚನ್ನಾಗಿರುವವನು (4)
11. ಕರದಲ್ಲಿರುವ ದೇಹ (4)
12. ನೀರಿನ ಅಧಿದೇವತೆ (3)
13. ಕೈಯಲ್ಲಿನ ಹಣ (3)



5153ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವತೋಮುಖ
4.ಅವಧಿ 5.ರಸನ
9.ನಾನು 10.ವಾರಸು
11.ಲಾಭ 12.ವಲ್ಲರಿ
15.ಜಳಕ 16.ಪುನರುತ್ಥಾನ

ಮೇಲಿಂದ ಕೆಳಕ್ಕೆ:
1.ಸಂತೋಷ 2.ವಿಧಿ
3.ಖರ 4.ಅವಿನಾಭಾವ
6.ನರಭಕ್ಷಕ 7.ಜವಾಬು
8.ಕುಸುರಿ 13.ರಿಪು
14.ಅರುಣ 15.ಜನ

ಸುಡೊಕು 5540

	6			9				8
1			8			5		2
		2		6				
		7			9	6		
4	2			3			5	9
6			7		8			
2		5	4		7	9		6
								5
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5539 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18562
ಇಂದಿನ ಅಂತ್ಯ	18618
▲	55
ದಿನದ ಕನಿಷ್ಠ	18678

ವಿನಿಮಯ ದರ

$ ಡಾಲರ್	81.72
£ ಪೌಂಡ್	98.03
€ ಯುರೊ	84.66
¥ ಯೆನ್ (100ಕ್ಕೆ)	58.99

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515(1490)
ಸೋಯಾ (ರಿಫೈನ್ಡ್)	₹1310(1300)
ಸೂರ್ಯಕಾಂತಿ (ರಿಫೈನ್ಡ್)	₹1430(1430)
ಪಾಮೋಲಿನ್	₹970(960)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2600
ಮಧ್ಯಮ	₹1500-2000
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹128

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ದಿವಂಗತ ಶ್ರೀ ಕೆ. ವೆಂಕಟಪ್ಪ
(ಅಕ್ಕೂರ್ ಮಾಸ್ಟರ್) ಬ್ಯಾಂಕಿನ ಪ್ರಥಮ ಸ್ಥಾಪಕರು
ನಿಧನ : 30-11-1993
ಸದಾ ತಮ್ಮನ್ನು ಸ್ಮರಿಸುವ:
ಆಡಳಿತ ಮಂಡಳಿಯವರು,
ಸಿಬ್ಬಂದಿವರ್ಗ ಹಾಗೂ ಸದಸ್ಯರು,
ಶ್ರೀ ಲಕ್ಷ್ಮೀ ನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಬೆಂಗಳೂರು.

12ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಕಮಲ ಮರಣ:30.11.2010
ಪತಿ: ಎಂ.ನಂಜೇಗೌಡ ಮತ್ತು
ಶ್ರೀಮತಿ, ಶ್ರೀ. ಪ್ರಶಾಂತ್ ಮತ್ತು ಮಕ್ಕಳು,
ಶ್ರೀಮತಿ, ಶ್ರೀ. ಡಾ|| ಅರುಣ್ ಮತ್ತು ಮಕ್ಕಳು
ನಾಗಶೆಟ್ಟಿಹಳ್ಳಿ, ಬೆಂಗಳೂರು

ಶ್ರೀಲಂಕಾ: 24 ಭಾರತೀಯ ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಶ್ರೀಲಂಕಾದ ಜಲ ಗಡಿ ಪ್ರವೇಶಿಸಿ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಶ್ರೀಲಂಕಾ ನೌಕಾಪಡೆಯು 24 ಭಾರತೀಯ ಮೀನುಗಾರರನ್ನು ಬಂಧಿಸಿ, ಅವರ ಐದು ದೋಣಿಗಳನ್ನು ವಶಕ್ಕೆ ಪಡೆದಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

'ಉತ್ತರ ಜಾಫ್ನಾ ಪರ್ಯಾಯ ದ್ವೀಪದ ಕಾರೈನಗರ್ ಕರಾವಳಿಯಲ್ಲಿ ಶ್ರೀಲಂಕಾ ನೌಕಾಪಡೆ ಮತ್ತು ಕರಾವಳಿ ಕಾವಲು ಪಡೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೀನುಗಾರರನ್ನು ಬಂಧಿಸಲಾಗಿದೆ. ನಂತರ ಅವರನ್ನು ಕಂಕೆಸಂತುರೈ ಬಂದರಿಗೆ ಕರೆತಂದು ಮೀನುಗಾರಿಕಾ ವಿಭಾಗದ ಕಚೇರಿಗೆ ಹಸ್ತಾಂತರಿಸಲಾಯಿತು' ಎಂದು ನೌಕಾಪಡೆ ತಿಳಿಸಿದೆ.

ಶ್ರೀಲಂಕಾದ ಜಲ ಗಡಿಯೊಳಗೆ ಪ್ರವೇಶಿಸಿ ಮೀನುಗಾರಿಕೆ ನಡೆಸಿದ ಆರೋಪದ ಮೇಲೆ ಈವರೆಗೆ ಒಟ್ಟು 252 ಭಾರತೀಯ ಮೀನುಗಾರರನ್ನು ಬಂಧಿಸಲಾಗಿದೆ ಎಂದು ಅದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಭದ್ರಾವತಿ	
ರಾಶಿ	42299-45699
ಚನ್ನಗಿರಿ	
ರಾಶಿ	42999-46279
ಕಾರ್ಕಳ	
ಹೊಸತು	25000-37500
ಹಳತು	40000-54500
ಪುತ್ತೂರು	
ಕೋಕ	11000-26000
ಹೊಸತು	32000-38000
ಸಾಗರ	
ಬಿಳಿಗೋಟು	27789-29209
ಚಾಲಿ	35689-36509
ಕೋಕ	33319-33989
ರಾಶಿ	42209-45899
ಸಿಪ್ಪೆಗೋಟು	15759-188990
ಶಿಕಾರಿಪುರ	
ಅಪಿ	44372-46587
ಶಿವಮೊಗ್ಗ	
ಬೆಟ್ಟೆ	48619-50919
ಗೊರಬಲು	17050-35169
ಹೊಸತು	42559-46469
ರಾಶಿ	44099-47559
ಸರಕು	55053-76200
ಸಿದ್ದಾಪುರ	
ಬಿಳಿಗೋಟು	28699-33800
ಕೋಕ	26699-31889
ಚಾಲಿ	35319-39039
ಕೆಂಪುಗೋಟು	24099-28699
ರಾಶಿ	43009-45099
ತಟ್ಟಿಬೆಟ್ಟೆ	37009-40889
ಶಿರಸಿ	
ಬೆಟ್ಟೆ	41289-43669
ಬಿಳಿಗೋಟು	17199-35899
ಚಾಲಿ	32299-40801
ಕೆಂಪುಗೋಟು	28699-31331
ರಾಶಿ	37889-45699
ಯಲ್ಲಾಪುರ	
ಅಪಿ	52909-55899
ಬಿಳಿಗೋಟು	24899-34129
ಚಾಲಿ	34150-40401
ಕೋಕ	15399-29699
ಕೆಂಪುಗೋಟು	26899-33375
ರಾಶಿ	44800-48930
ತಟ್ಟಿಬೆಟ್ಟೆ	35809-43992

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)	
ಮುದ್ರೆಮನೆ	
ಎಪಿ	13,200
ಎಸಿ	6,720
ಆರ್‌ಪಿ	8,500
ಆರ್‌ಸಿ	4,530

ಮುಂಬೈ ಧಾರಣೆ

ಶೇಂಗಾ

29-11-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525(1500)
ಒಂದು ವಾರದ ಡೆಲಿವರಿ	1520(1495)
ಸೋಯಾ ಕಚ್ಚಾ	1285(1295)
ಪಾಮ್ ವಾರದ ಡೆಲಿವರಿ	968(958
ಸೂರ್ಯಕಾಂತಿ ಎಣ್ಣೆ ಕಚ್ಚಾ	-

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52500(52650)
ಬೆಳ್ಳಿ ಕೆ.ಜಿ 61650(62200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಅರಸೀಕೆರೆ	₹12175-12300
ಪುತ್ತೂರು (ಇತರ)	₹4500-9000
ತುರುವೇಕೆರೆ	₹12300-12300
ಹುಳಿಯಾರು(ಉಂಡೆ)	₹10000-10300

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹402-728
ದ್ವಿತಳಿ (ಬಿ.ವಿ)	₹455-831

ಸೆನ್ಸೆಕ್ಸ್, ನಿಫ್ಟಿ ಏರಿಕೆ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಮಂಗಳವಾರದ ವಹಿವಾಟಿನಲ್ಲಿ ಏರಿಕೆ ದಾಖಲಿಸಿವೆ, ದಾಖಲೆಯ ಮಟ್ಟದಲ್ಲಿ ವಹಿವಾಟು ಕೊನೆಗೊಳಿಸಿವೆ. ಸೆನ್ಸೆಕ್ಸ್ 177 ಅಂಶ ಹಾಗೂ ನಿಫ್ಟಿ 55 ಅಂಶ ಏರಿಕೆ ಕಂಡಿವೆ.

'ಮಾರುಕಟ್ಟೆಯು ತುಸು ಅಸ್ಥಿರವಾಗಿತ್ತು. ಹೂಡಿಕೆದಾರರು ಒಂದಿಷ್ಟು ಎಚ್ಚರಿಕೆಯಿಂದ ವಹಿವಾಟು ನಡೆಸಿದ್ದಾರೆ. ಕಠಿಣ ಲಾಕ್‌ಡೌನ್ ವಿರೋಧಿಸಿ ಚೀನಾದಲ್ಲಿ ಪ್ರತಿಭಟನೆಗಳು ಹೆಚ್ಚುತ್ತಿರುವುದು ಕಳವಳ ಮೂಡಿಸಿವೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಧಾರಾವಿ ಅಭಿವೃದ್ಧಿ: ಅದಾನಿ ಅತಿಹೆಚ್ಚಿನ ಬಿಡ್

ಮುಂಬೈ (ಪಿಟಿಐ): ಧಾರಾವಿ ಮರುಅಭಿವೃದ್ಧಿ ಯೋಜನೆಗೆ ಅದಾನಿ ಸಮೂಹವು ಅತಿಹೆಚ್ಚಿನ ಮೊತ್ತದ ಬಿಡ್ ಸಲ್ಲಿಸಿದೆ ಎಂದು ಯೋಜನೆಯ ಸಿಇಒ ಎಸ್.ವಿ.ಆರ್. ಶ್ರೀನಿವಾಸ್ ತಿಳಿಸಿದ್ದಾರೆ.

ವಿಶ್ವದ ಅತಿದೊಡ್ಡ ಕೊಳೆಗೇರಿಗಳಲ್ಲಿ ಒಂದಾಗಿರುವ ಈ ಪ್ರದೇಶದ ಮರುಅಭಿವೃದ್ಧಿಗೆ ಸಮೂಹವು ₹ 5,069 ಕೋಟಿ ಮೊತ್ತದ ಬಿಡ್ ಸಲ್ಲಿಸಿದೆ. ಪ್ರತಿಸ್ಪರ್ಧಿ ಕಂಪನಿಯಾದ ಡಿಎಲ್‌ಎಫ್ ₹ 2,025 ಕೋಟಿ ಮೊತ್ತದ ಬಿಡ್ ಸಲ್ಲಿಸಿದೆ ಎಂದು ಶ್ರೀನಿವಾಸ್ ಹೇಳಿದ್ದಾರೆ.

'ಈ ವಿವರಗಳನ್ನು ನಾವು ಈಗ ಸರ್ಕಾರಕ್ಕೆ ಕಳುಹಿಸುತ್ತೇವೆ. ಅದು ಅಂತಿಮ ಒಪ್ಪಿಗೆ ನೀಡಲಿದೆ' ಎಂದು ಅವರು ತಿಳಿಸಿದ್ದಾರೆ.

ಬಿಡ್ ಗೆದ್ದವರು, ಈ ಕೊಳೆಗೇರಿಯಲ್ಲಿ ವಾಸಿಸುತ್ತಿರುವ 6.5 ಲಕ್ಷ ಜನರಿಗೆ ಏಳು ವರ್ಷಗಳಲ್ಲಿ ಪುನರ್ವಸತಿ ಕಲ್ಪಿಸಬೇಕು. ಬಿಡ್ ಗೆದ್ದವರಿಗೆ ಮುಂಬೈನ ಕೇಂದ್ರ ಭಾಗದಲ್ಲಿರುವ ಈ ಪ್ರದೇಶದ ವಾಣಿಜ್ಯ ಮತ್ತು ವಸತಿ ಜಾಗವನ್ನು ಮಾರಾಟ ಮಾಡಿ ವರಮಾನ ಪಡೆಯುವ ಅವಕಾಶ ಕೂಡ ಸಿಗುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪುಂಡಲೀಕ ರಾವ್, ಊರು ಬೇಡ

● **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 83 ವರ್ಷ. ಸಂಬಳದಲ್ಲಿ ಉಳಿತಾಯ ಮಾಡಿದ ಹಣವನ್ನು ಎಫ್.ಡಿ. ಮಾಡಲು ಬ್ಯಾಂಕಿಗೆ ಹೋಗಿದ್ದೆ. ಆದರೆ ಅಲ್ಲಿನ ಸಿಬ್ಬಂದಿ, ಮ್ಯಾನೇಜರ್‌ರನ್ನು ಭೇಟಿ ಮಾಡಲು ತಿಳಿಸಿದರು. ಎಫ್.ಡಿ.ಗೆ ಶೇ 5.5ರಷ್ಟು ಬಡ್ಡಿ ಇದೆ. ಅದರ ಬದಲು ತಮ್ಮ ಮ್ಯೂಚುವಲ್ ಫಂಡ್‌ನಲ್ಲಿ ಹಣ ತೊಡಗಿಸಿದರೆ ಶೇ 7ರಿಂದ ಶೇ 8ರಷ್ಟು ಲಾಭ ಬರುತ್ತದೆ ಎಂದು ಮ್ಯಾನೇಜರ್ ಸಲಹೆ ನೀಡಿದರು. ಒಂದು ಮುದ್ರಿತ ಬಾಂಡ್ ಕೊಟ್ಟರು. ತದನಂತರ ಬ್ಯಾಂಕಿನ ಮ್ಯಾನೇಜರ್ ಫೋನ್ ನಂಬರ್ ಕೊಟ್ಟು ಒಟಿಪಿ ಬಂದರೆ ತಿಳಿಸಬೇಕೆಂದೂ ಬೇರಾವುದೇ ಕಡೆಯಿಂದ ಕರೆ ಬಂದರೆ ಒಟಿಪಿ ಹೇಳಬಾರದಾಗಿಯೂ ಸೂಚಿಸಿದರು. ಇದರಿಂದ ಮೋಸವಿಲ್ಲವೆಂದು ತಿಳಿದಿದ್ದೇನೆ. ಒಂದು ವರ್ಷದೊಳಗೆ ನಾನು ಹಣ ವಾಪಸ್ ಪಡೆಯಬಹುದೇ? ಇದರ ಬಗ್ಗೆ ಮತ್ತಷ್ಟು ಮಾಹಿತಿ ನೀಡಿ.

ಉತ್ತರ: ಬ್ಯಾಂಕ್ ಅಧಿಕಾರಿಗಳು ನಿಮಗೆ ಅನುಕೂಲವಾಗುವ ಹೊಸದೊಂದು ಹೂಡಿಕೆ ಉತ್ಪನ್ನ ಪರಿಚಯಿಸಿದ್ದಾರೆ. ಹೂಡಿಕೆಗೆ ಅನೇಕ ಉತ್ಪನ್ನಗಳಿವೆ. ಹೀಗಾಗಿ ವ್ಯವಹಾರದ ದೃಷ್ಟಿಯಿಂದ ಎಲ್ಲ ಬ್ಯಾಂಕ್ ಅಧಿಕಾರಿಗಳು ಅಥವಾ ಹೂಡಿಕೆ ದಲ್ಲಾಳಿಗಳು ಅವನ್ನು ಪ್ರಚಾರ ಮಾಡುತ್ತಾರೆ, ಸಲಹೆ ನೀಡುತ್ತಾರೆ. ಇಂತಹ ಉತ್ಪನ್ನಗಳನ್ನು ನಾವು ಖರೀದಿಸುವ ಮುನ್ನ ಕೆಲವು ಮಾಹಿತಿ ಹೊಂದುವುದು ಅಗತ್ಯ. ಕೆಲವು ಸಾಮಾನ್ಯ ಮಾಹಿತಿ ಮೇಲ್ನೋಟಕ್ಕೆ ಅವಗಾಹನೆಗೆ ಬರದಿರಬಹುದು. ಆದರೆ, ಅವೂ ಬಹಳ ಮುಖ್ಯ. ಉದಾಹರಣೆಗೆ, ಹೂಡಿಕೆ ಹಿಂಪಡೆಯಲು ಇರುವ ಸಮಯ ನಿರ್ಬಂಧ, ಹೆಚ್ಚುವರಿ ಆದಾಯಕ್ಕಿರುವ ಹೆಚ್ಚುವರಿ ಅಪಾಯಗಳು, ಬಡ್ಡಿ ದರದ ಏರಿಳಿತದ ಪ್ರಭಾವ, ಅಸಲು ಮೊತ್ತದ ಭದ್ರತೆ ಇತ್ಯಾದಿ.

ನಿಮ್ಮ ವಿಚಾರದಲ್ಲಿ, ನಿಮ್ಮ ಬಾಂಡ್ ಯಾವ ಮಾಹಿತಿ ಹೊಂದಿದೆ ಹಾಗೂ ಅದರ ಮುಕ್ತಾಯ ದಿನಾಂಕ ಏನೆಂದು ಪರಿಶೀಲಿಸಿ ಹಣ ಮರಳಿ ಪಡೆಯುವುದನ್ನು ತಿಳಿದುಕೊಳ್ಳಿ. ನಿಮ್ಮ ಹೂಡಿಕೆ ಮೊತ್ತ ಭದ್ರವಾಗಿಯೇ ಇರಬಹುದು. ಆದರೆ ಶಾಖೆಗೆ ಖುದ್ದಾಗಿ ಭೇಟಿ ನೀಡಿ ಮುಕ್ತವಾಗಿ ಮಾತುಕತೆ ನಡೆಸಿ ಸಂದೇಹ ಬಗೆಹರಿಸಿಕೊಳ್ಳಿ. ಇನ್ನು ಒಟಿಪಿ ವಿಚಾರ. ಯಾವುದೇ ಬ್ಯಾಂಕ್ ಅಧಿಕಾರಿ ಗ್ರಾಹಕರಿಂದ ಒಟಿಪಿ ನೀಡಲು ಸಲಹೆ ಕೊಡುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಹಾಗೂ ಆಯಾ ಬ್ಯಾಂಕ್‌ಗಳು ಗ್ರಾಹಕರಿಗೆ ಎಚ್ಚರಿಕೆ ನೀಡುತ್ತಿರುತ್ತವೆ. ಒಂದು ವೇಳೆ ಅಸಹಜ ವಿನಂತಿಯೆಂದು ಕಂಡುಬಂದರೆ ಜಾಗ್ರತರಾಗಿರಿ.

ಬಿ.ವಿ. ವೆಂಕಟೇಶ ಮೂರ್ತಿ, ಹಾರೋಹಳ್ಳಿ, ರಾಮನಗರ ಜಿಲ್ಲೆ

● **ಪ್ರಶ್ನೆ:** ನಾನು ಹಿರಿಯ ನಾಗರಿಕ. ವಯಸ್ಸು 67 ವರ್ಷ. ನಾನು ಬೆಂಗಳೂರು ಜಲಮಂಡಳಿಯಲ್ಲಿ ಅಟೆಂಡರ್ ಆಗಿದ್ದೆ ಹಾಗೂ 2016ರಲ್ಲಿ ನಿವೃತ್ತಿ ಹೊಂದಿದೆ. ನನಗೀಗ ಪಿಂಚಣಿಯಾಗಿ ₹ 48,451 ಬರುತ್ತಿದೆ (ವಾರ್ಷಿಕ ಸುಮಾರು ₹ 5.83 ಲಕ್ಷ). ಹಿರಿಯ ನಾಗರಿಕರಿಗೆ ಆದಾಯ ತೆರಿಗೆ ₹ 6 ಲಕ್ಷದ ತನಕ ಇರುವುದಿಲ್ಲ ಎಂದು ಈ ಹಿಂದೆ ಓದಿದ್ದೆ. ಅಂದರೆ ₹ 5 ಲಕ್ಷದ ತನಕ ಮೂಲ ಆದಾಯದ ನೇರ ರಿಯಾಯಿತಿ, ₹ 50,000ದ ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ಬಡ್ಡಿ ಆದಾಯಕ್ಕೆ ₹ 50,000 ರಿಯಾಯಿತಿ. ಇತ್ತೀಚೆಗೆ ನನ್ನ ಲೆಕ್ಕ ಪರಿಶೋಧಕರು ತೆರಿಗೆ ಕಟ್ಟಬೇಕೆಂದು ಸೂಚಿಸಿರುತ್ತಾರೆ ಹಾಗೂ ಅದರಂತೆ ನಾನು ₹ 16,130 ತೆರಿಗೆ ರೂಪದಲ್ಲಿ ಕಟ್ಟಿರುತ್ತೇನೆ. ನಾನು ₹ 10 ಲಕ್ಷದ ಬ್ಯಾಂಕ್ ಠೇವಣಿ ಹೊಂದಿದ್ದೇನೆ. ನನ್ನ ಸಮಸ್ಯೆ ಎಂದರೆ, ಕೆಲವರು ನನಗಿರುವ ಆದಾಯಕ್ಕೆ ತೆರಿಗೆ ಕಟ್ಟಬೇಕೆನ್ನುತ್ತಾರೆ, ಇನ್ನು ಕೆಲವರು ಈ ಮೊತ್ತದ ಆದಾಯಕ್ಕೆ ತೆರಿಗೆ ಕಟ್ಟುವುದು ಬೇಡ ಎನ್ನುತ್ತಾರೆ. ಈ ಗೊಂದಲ ಪರಿಹರಿಸಿ.

ಉತ್ತರ: ನೀವು 60ರಿಂದ 80ರ ವರ್ಷದ ನಡುವಿನ ವಯೋಮಾನದಲ್ಲಿರುವುದರಿಂದ ನಿಮ್ಮ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ₹ 3 ಲಕ್ಷ. ಇದಕ್ಕೂ ಮಿಕ್ಕ ಮೊತ್ತಕ್ಕೆ ಯಾವುದೇ ವಿನಾಯಿತಿಗಳಿಲ್ಲದಿದ್ದರೆ, ನೀವು ತೆರಿಗೆ ಕಟ್ಟಬೇಕು. ಹೀಗಾಗಿ ಎಲ್ಲ ವಿನಾಯಿತಿಗಳನ್ನು 'ಒಟ್ಟು ಆದಾಯ'ದಿಂದ ಕಳೆದು ಕೊನೆಗೆ ತೆರಿಗೆಗೆ ಒಳಪಡುವ ಮೊತ್ತ 'ನಿವ್ವಳ ತೆರಿಗೆ ಆದಾಯ'ವಾಗಿರುತ್ತದೆ. ಹೀಗೆ ನಿವ್ವಳ ತೆರಿಗೆ ಆದಾಯ ಲೆಕ್ಕ ಹಾಕಲು ಸೆಕ್ಷನ್ 16ರ ಅಡಿ ವೇತನ/ಪಿಂಚಣಿದಾರರಿಗೆ ಸಿಗುವ ₹ 50,000ದ ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ಬಡ್ಡಿ ಆದಾಯಕ್ಕೆ ಸಂಬಂಧಿಸಿದ ವಿನಾಯಿತಿ ಇತ್ಯಾದಿಗಳನ್ನೂ ಒಳಗೊಂಡಂತೆ, ಸೆಕ್ಷನ್ 80ಸಿ ಇಂದ 80ಯು ತನಕ ಸಿಗುವ ಇತರ ಎಲ್ಲ ವಿನಾಯಿತಿಗಳನ್ನೂ ನೀಡಿ ಉಳಿದ ಮೊತ್ತ ತೆರಿಗೆಗೆ ಒಳಪಡುತ್ತದೆ.

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 87ಎ ಪ್ರಕಾರ, ಯಾವುದೇ ವ್ಯಕ್ತಿಗೆ ತೆರಿಗೆಗೊಳಪಡುವ ನಿವ್ವಳ ಆದಾಯ ₹ 5 ಲಕ್ಷಕ್ಕಿಂತ ಹೆಚ್ಚಿಲ್ಲದಿದ್ದರೆ, ಅಂಥವರು ವಿಶೇಷ ತೆರಿಗೆ ವಿನಾಯಿತಿಯಾಗಿ, ಸಂಪೂರ್ಣ ತೆರಿಗೆ ಅಥವಾ ₹ 12,500, ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ವಿನಾಯಿತಿಯಾಗಿ ಪಡೆಯಲು ಅರ್ಹರು. ಆದರೆ ತೆರಿಗೆಗೊಳಪಡುವ ನಿವ್ವಳ ಆದಾಯ ₹ 5 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಾಗ ಈ ವಿಶೇಷ ವಿನಾಯಿತಿ ದೊರಕುವುದಿಲ್ಲ. ಈ ವಿಶೇಷ ಸೌಲಭ್ಯವು 'ಕಡಿಮೆ ಆದಾಯ ವರ್ಗ'ದವರಿಗಾಗಿ ಇರುವಂಥದ್ದು.

ನಿಮ್ಮ ತೆರಿಗೆ ಲೆಕ್ಕ ಹಾಕಲು, ಮೊದಲ ಹಂತದಲ್ಲಿ ಮೇಲಿನ ಎಲ್ಲ ವಿನಾಯಿತಿಗಳನ್ನು ನೀಡಿ ತೆರಿಗೆಗೊಳಪಡುವ ಆದಾಯ ₹ 3 ಲಕ್ಷಕ್ಕಿಂತ ಅಧಿಕವಿದ್ದಾಗ, ₹ 3 ಲಕ್ಷದಿಂದ ₹ 5 ಲಕ್ಷದವರೆಗಿನ ಆದಾಯಕ್ಕೆ ಶೇ. 5ರಷ್ಟು ಹಾಗೂ ₹ 5 ಲಕ್ಷದಿಂದ ₹ 10 ಲಕ್ಷದವರೆಗಿನ ಆದಾಯಕ್ಕೆ ಶೇ. 20ರ ಮೂಲ ತೆರಿಗೆ ದರದಲ್ಲಿ ಒಟ್ಟು ತೆರಿಗೆ ಲೆಕ್ಕ ಹಾಕಲಾಗುತ್ತದೆ. ನೀವು ₹ 3 ಲಕ್ಷಕ್ಕಿಂತ ಅಧಿಕ ಆದಾಯವುಳ್ಳ ವರ್ಗದ ಹಿರಿಯ ನಾಗರಿಕ. ಸೆಕ್ಷನ್ 87ಎ ಅಡಿ ಎಲ್ಲ ವರ್ಗದ ತೆರಿಗೆದಾರರಿಗೂ ಖಚಿತ ವಿನಾಯಿತಿ ಸಿಗುವುದಿಲ್ಲ.

ನೀವು ನೀಡಿರುವ ಮಾಹಿತಿಯಂತೆ, ಬಡ್ಡಿ ಆದಾಯ ಸಂಪೂರ್ಣ ವಿನಾಯಿತಿಯೊಳಗೆ ಬರಬಹುದೆಂದು ತಿಳಿದು ಉಳಿದ ಪಿಂಚಣಿ ಆದಾಯ ಲೆಕ್ಕ ಹಾಕಿದರೂ, ₹ 50,000ದ ಸ್ಟ್ಯಾಂಡರ್ಡ್ ಡಿಡಕ್ಷನ್ ನೀಡಿದ ಮೇಲೂ ₹ 5 ಲಕ್ಷಕ್ಕಿಂತ ಅಧಿಕ ಆದಾಯವಿದೆ. ಹೀಗಾಗಿ ಮೇಲೆ ಉಲ್ಲೇಖಿಸಿದ ತೆರಿಗೆ ಲೆಕ್ಕ ಹಾಕುವ ಹಂತಗಳನ್ನು ಮತ್ತೊಮ್ಮೆ ತಿಳಿಯಲೆತ್ನಿಸಿ ನಿಮ್ಮಲ್ಲಿರುವ ರಿಟರ್ನ್ಸ್ ಮತ್ತೊಮ್ಮೆ ಪರಿಶೀಲಿಸಿ. ಮೇಲ್ನೋಟಕ್ಕೆ ನೀವು ಸಂಪೂರ್ಣ ತೆರಿಗೆಯಿಂದ ಮುಕ್ತರಲ್ಲ, ಕಟ್ಟಿರುವ ತೆರಿಗೆ ಸರಿಯಾಗಿಯೇ ಇರಬಹುದು. ನೀವು ಯಾವುದೇ ತೆರಿಗೆ ಉಳಿತಾಯ ಖಾತೆಗಳಲ್ಲಿ ಪ್ರತಿ ವರ್ಷ ಹೂಡಿಕೆ ಮಾಡಿದಾಗ ಸೆಕ್ಷನ್ 80ಸಿ ಅಡಿ ₹ 1.50 ಲಕ್ಷದ ತನಕ ವಿನಾಯಿತಿ ಪಡೆದು ತೆರಿಗೆ ಪ್ರಮಾಣವನ್ನು ಸಂಪೂರ್ಣ ಉಳಿಸಲು ಅವಕಾಶ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ ಎಲ್ಲಾ ಜಿಲ್ಲಾದ್ಯಂತ ಆಫೀಸ್ ಗಳಲ್ಲಿ, ಫ್ಯಾಕ್ಟರಿಗಳಲ್ಲಿ,ಗಾರ್ಮೆಂಟ್ಸ್ ಗಳಲ್ಲಿ, ಆಸ್ಪತ್ರೆಗಳಲ್ಲಿ,ಶೋರೂಮ್ ಗಳಲ್ಲಿ,ಫೈನಾನ್ಸ್ ಗಳಲ್ಲಿ ಮಾಲ್ಗಳಲ್ಲಿ ಯಾವುದೇ ಕೆಲಸಕ್ಕೆ ಸೂಕ್ತ ಅಭ್ಯರ್ಥಿಗಳು ಬೇಕಾಗಿದ್ದಲ್ಲಿ ಯಾವುದೇ ಕೆಲಸಬೇಕಾಗಿದ್ದಲ್ಲಿ ಸಂಪರ್ಕಿಸಿ:9164277549, 9008062377.

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000-15,000. 8951315839, 9880545002

ಮಹಿಳಾ ಹೌಸಿಂಗ್ ಟ್ರಸ್ಟ್ (MHT) ನಲ್ಲಿ ಪೂರ್ಣ ಅವಧಿ ಕಾರ್ಯ ನಿರ್ವಹಿಸಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ: 1. ಕ್ಷೇತ್ರ ಸಂಘಟಕರು (Field Organizer): ಕ್ಷೇತ್ರ ಭೇಟಿಯ ಜೊತೆಗೆ (slums) ಸರ್ಕಾರಿ ಹಾಗೂ ಇತರೆ ಸಂಸ್ಥೆ ಗಳೊಂದಿಗೆ ಸಮನ್ವಯ ಮಾಡಿ ಕೊಂಡು ಹೋಗುವುದು. 12 ನೇ ತರಗತಿ ಅಥವಾ ಪದವಿ ಮುಗಿಸಿರಬೇಕು, ಕಂಪ್ಯೂಟರ್ ಬಗ್ಗೆ ತಿಳುವಳಿಕೆ ಇರಬೇಕು, ಕ್ಷೇತ್ರ ಭೇಟಿ ಮಾಡಲು ಸಿದ್ಧರಿರುವ, ಕನ್ನಡ, ತಮಿಳು ಹಾಗೂ ಹಿಂದಿ ಭಾಷೆಯು ತಿಳಿದಿರ ಬೇಕು. 2 - 3 ವರ್ಷ ಅನುಭವ ಇರುವವರಿಗೆ ಪ್ರಥಮ ಆದ್ಯತೆ. 2.ತರಬೇತಿದಾರರು (Trainer): ಸ್ಲಂ ನಲ್ಲಿರುವ ಮಹಿಳೆ ಯರಿಗೆ ಸರಳ ಭಾಷೆ ಯಲ್ಲಿ ತರಬೇತಿ ನೀಡಲು ಸಕ್ಷಮರಿರುವ 12 ನೇ ತರಗತಿ ಅಥವಾ ಪದವಿ ಮುಗಿಸಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ, 2 - 3 ವರ್ಷ ಗಳ ಅನುಭವ ಇರುವವರಿಗೆ ಮೊದಲ ಆದ್ಯತೆ. ಹೆಚ್ಚಿನ ಮಾಹಿತಿ ಗಾಗಿ ಸಂಪರ್ಕಿಸಿರಿ: 6360088263. Email: info@mahilahsg.org

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Hotel

ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಪ್ರಾರಂಭವಾಗಿದ್ದು ನುರಿತ ಅನುಭವಸ್ಥ ಕ್ಯಾಶಿಯರ್, ಟೀಮಾಸ್ಟರ್, ಜ್ಯೂಸ್ ಮಾಸ್ಟರ್ಗಳು ಬೇಕಾಗಿರುತ್ತಾರೆ ನೇರ ನೇಮಕಾತಿ ಇರುತ್ತದೆ. ಉದ್ಯಮದಲ್ಲಿ ಸಂಬಳ ಅತ್ಯುತ್ತಮವಾಗಿರುತ್ತದೆ. ಸಂಪರ್ಕಿಸಿ: 8884442517/ 9845577977.

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಸರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

COLLECTIONS AGENCIESಅಲ್ಲಿ ಕೆಲಸ ಮಾಡುವುದಕ್ಕೆ Collections Officers ಬೇಕಾಗಿದ್ದಾರೆ ಸ್ಥಳ: ಚಿಕ್ಕಬಳ್ಳಾಪುರ, ಚಿಂತಾಮಣಿ, ದೊಡ್ಡಬಳ್ಳಾಪುರ , ಬಂಗಾರ ಪೇಟೆ, ಆಕರ್ಷಕ ಸಂಬಳ ಪ್ರೋತ್ಸಾಹ ಧನ ಮತ್ತು Commission Bases: 9538287743/ 8197243298

ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land Converted

General

WANTED AGRICULTURAL LAND (50 - 100 ACRES) within 5 - 10 K.M. from
1. Tondebhavi
2. Gauribidanur
3. Channapatna
4. Maddur
Genuine Owners or Agents may contact Secretary: THE IDEAL HOMES CO-OPERATIVE BUILDING SOCIETY LIMITED, Ideal Homes Co Operative Building Society Ltd, Rajarajeswari Nagar, Mysore Rd, B'lore- 98 Ph: 080-28600892 Mob: 9901500872

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Tumkur

ತುಮಕೂರಿನಲ್ಲಿ 100 ವಿದ್ಯಾರ್ಥಿಗಳಿಗೆ ಅವಕಾಶವಿರುವ ಸುಸಜ್ಜಿತ ಹಾಸ್ಟೆಲ್ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ. 99005 45854.

ಪ್ರವಾಸ

Travel

18.11.2022`ಮತ್ತು 9.01.23ರಿಂದ 13/16ದಿನಗಳು ವಿಮಾನ`ಮತ್ತು ಎಸಿ.ಬಸ್ಸಿನಲ್ಲಿ ಪಶುಪತಿನಾಥ್,ಮುಕ್ತಿನಾಥ್, ಫೋಕ್ರ,ಪುರಿ,ಜನಕಪುರಿ,ನೇಪಾಳ, ಕಾಶಿ,ಕೋಲ್ಕತ್ತ ಹಾಗು 9.12.2022ರಿಂದ `ಮಹಾಶಿವರಾತ್ರಿ`ಪ್ರಯುಕ್ತ ಪಶುಪತಿನಾಥ`ದರ್ಶನ: ಏಷ್ಯನ್`ಟ್ರಾವೆಲ್`ಲೈನ್ಸ್. 164/3`ಆರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ,ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 26.01.2023 ರಿಂದ 15/10 ದಿನಗಳು. ವಿಯವಾಡ, ಭದ್ರಾಚಲಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು ಗೌಹಾಟಿ,ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 03.02.2023 ರಿಂದ 14 ದಿನಗಳು. ಕಾಶಿ,ಗಯಾ,ಪ್ರಯಾಗ ನೈಮೀಶಾರಣ್ಯ 26.01.2023 ರಿಂದ 8 ದಿನಗಳು ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ A/C ರೂಂ/ A/C ಬಸ್ಸಿನಲ್ಲಿ 15.12.2022 ಸೋಮನಾಥ ಕಚ್‌ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಹಾಗೂ ಪೂರಿಜಗನ್ನಾಥ್ ಕಲ್ಕತ್ತ,ಗ್ಯಾಂಗ್‌ಟಕ್,ಡಾರ್ಜಲಿಂಗ್ ಇತ್ಯಾದಿ. ಹೈದ್ರಾಬಾದ್ ಭದ್ರಾಚಲಂ,ಪಂಚರಾಮ ಕ್ಷೇತ್ರ 14 ದಿನಗಳು. 24.12.2022 ಕಾಶಿ,ಬುದ್ಧಗಯಾ ಅಲಹಾಬಾದ್ ಇತ್ಯಾದಿ. ಶಿರಡಿ ಪ್ರವಾಸ 6 ದಿನಗಳು. ರಾಮೇಶ್ವರ,ಮದುರೈ ಕನ್ಯಾಕುಮಾರಿ 9 ದಿನಗಳು. ಮಹಾಶಿವರಾತ್ರಿ ಪ್ರಯುಕ್ತ 11.02.2023 ನೇಪಾಳ.ಪೋಖ್ರಾ ವಾರಣಾಸಿ ಅಯೋಧ್ಯ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708

ಭವಿಷ್ಯ

Astrology

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY
@ 960/-* Per Sqcm
Single Column
conditions apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

ಚೀನಾದಲ್ಲಿ ಪೊಲೀಸ್ ಸರ್ಪಗಾವಲು: ಪ್ರತಿಭಟನೆಗೆ ಅಂಕುಶ

ಹಾಂಗ್‌ಕಾಂಗ್/ವಾಷಿಂಗ್ಟನ್ (ಎಪಿ): ಚೀನಾದಲ್ಲಿ ಸರ್ಕಾರ ಹೇರಿರುವ ಕೋವಿಡ್ ಕಠಿಣ ಲಾಕ್‌ಡೌನ್ ವಿರುದ್ಧದ ಜನಾಕ್ರೋಶ ಹತ್ತಿಕ್ಕಲು ಪ್ರತಿ ರಸ್ತೆ, ಬೀದಿಗಳಲ್ಲಿ ಪೊಲೀಸ್ ಪಡೆ ಗಳ ಸರ್ಪ ಗಾವಲು ನಿಯೋಜಿಸಿರುವುದರಿಂದ ಮಂಗಳವಾರ ದೇಶದಲ್ಲಿ ಹೊಸದಾಗಿ ಎಲ್ಲಿಯೂ ಪ್ರತಿಭಟನೆ ಕಂಡುಬರಲಿಲ್ಲ.

ಬೀಜಿಂಗ್, ಶಾಂಘೈ, ನಾನ್‌ಜಿಂಗ್ ನಗರಗಳು ಸಹ ಶಾಂತವಾಗಿದ್ದವು. ಬೀಜಿಂಗ್ ನಗರದಲ್ಲಿ ಕೋವಿಡ್ ಸೋಂಕು ಕಂಡುಬರುವ ಅಪಾರ್ಟ್‌ಮೆಂಟ್‌ಗಳಿಗೆ ಬೀಗಮುದ್ರೆ ಹಾಕುವುದಿಲ್ಲವೆಂದು ನಗರದ ಆಡಳಿತ ಪ್ರಕಟಿಸಿದೆ. ಕೋವಿಡ್ ಸೋಂಕು ಶೂನ್ಯಕ್ಕಿಳಿಸುವ ಸರ್ಕಾರದ ಲಾಕ್‌ಡೌನ್ ವಿರೋಧಿಸಿ ಜನಾಕ್ರೋಶ ಕಳೆದ ವಾರ ಭುಗಿಲೆದ್ದಿತ್ತು.

ಚೀನಾದಲ್ಲಿನ ಬೆಳವಣಿಗೆಯನ್ನು ಅಮೆರಿಕ ಸೂಕ್ಷ್ಮವಾಗಿ ಗಮನಿಸುತ್ತಿದೆ. ನಾಗರಿಕರ ಪ್ರತಿಭಟನೆ ಹಕ್ಕನ್ನು ಬೆಂಬಲಿಸಲಾಗುವುದು ಎಂದು ಶ್ವೇತಭವನ ಮಂಗಳವಾರ ಹೇಳಿದೆ. ಬಿಬಿಸಿ ವರದಿಗಾರನನ್ನು ಬಂಧಿಸಿದ ಸಂಬಂಧ ಚೀನಾದ ರಾಯಭಾರಿಗೆ ಬ್ರಿಟನ್ ಸಮನ್ಸ್ ಜಾರಿ ಮಾಡಿದೆ.

ಬ್ರಿಟನ್– ಚೀನಾ ಬಾಂಧವ್ಯದ ಸುವರ್ಣಯುಗ ಅಂತ್ಯ: ರಿಷಿ ಸುನಕ್

ರಿಷಿ ಸುನಕ್

ಲಂಡನ್ (ಪಿಟಿಐ): ಚೀನಾ ಆಡಳಿತವು ನಮ್ಮ ಮೌಲ್ಯಗಳು ಮತ್ತು ಹಿತಾಸಕ್ತಿಗಳಿಗೆ ವ್ಯವಸ್ಥಿತವಾದ ಸವಾಲೊಡ್ಡುತ್ತಿರುವುದರಿಂದ ಉಭಯ ರಾಷ್ಟ್ರಗಳ ಬಾಂಧವ್ಯದ ಸುವರ್ಣ ಯುಗ ಅಂತ್ಯವಾಗಿದೆ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮಂಗಳವಾರ ಘೋಷಿಸಿದರು.

ಲಂಡನ್‌ನ ಲಾರ್ಡ್ ಮೇಯರ್ ಔತಣಕೂಟದಲ್ಲಿ ಸೋಮವಾರ ರಾತ್ರಿ ತಮ್ಮ ವಿದೇಶಾಂಗ ನೀತಿಯ ಮೊದಲ ಪ್ರಮುಖ ಭಾಷಣ ಮಾಡಿದ ಅವರು, ಏಷ್ಯಾದ ಅತಿ ದೊಡ್ಡ ಆರ್ಥಿಕತೆಯಲ್ಲಿ ಒಂದೆನಿಸಿದ ಚೀನಾದಲ್ಲಿ, ದಾಖಲೆ ಪ್ರಮಾಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿರುವುದನ್ನು ಟೀಕಿಸಿದರು.

ಜಾಗತಿಕ ವ್ಯವಹಾರಗಳಲ್ಲಿ ಚೀನಾದ ಮಹತ್ವವನ್ನು ಸುಲಭವಾಗಿ ನಿರ್ಲಕ್ಷಿಸಲಾಗದು ಎಂದು ಒಪ್ಪಿಕೊಂಡ ಅವರು, 'ಚೀನಾ ನಮ್ಮ ಮೌಲ್ಯಗಳು ಮತ್ತು ಹಿತಾಸಕ್ತಿಗಳಿಗೆ ವ್ಯವಸ್ಥಿತ ಸವಾಲು ಒಡ್ಡುತ್ತಿರುವುದನ್ನು ಮನಗಂಡಿದ್ದೇವೆ. ಅದು ಹೆಚ್ಚಿನ ಸರ್ವಾಧಿಕಾರದತ್ತ ಸಾಗುತ್ತಿರುವಾಗ, ಆ ಸವಾಲು ಇನ್ನಷ್ಟು ತೀವ್ರವಾಗಿ ಬೆಳೆಯುತ್ತದೆ. ಇದು ಸ್ಪಷ್ಟ. ಈ ಹಿಂದೆ ಉಭಯ ದೇಶಗಳ ಸಂಬಂಧವನ್ನು ಸುವರ್ಣಯುಗವೆಂದು ಕರೆಯುತ್ತಿದ್ದುದು ಕೊನೆಗೊಂಡಿದೆ' ಎಂದರು.

ಚೀನಾದಲ್ಲಿ ವಾರಾಂತ್ಯ ನಡೆದ ನಾಗರಿಕರ ಬೃಹತ್ ಪ್ರತಿಭಟನೆ ವೇಳೆ ವರದಿ ಮಾಡುತ್ತಿದ್ದ ಬಿಬಿಸಿ ಪತ್ರಕರ್ತನನ್ನು ಬಂಧಿಸಿರುವ ಕ್ರಮವನ್ನು ಖಂಡಿಸಿದ ಸುನಕ್, ಜನರ ಶಾಂತಿಯುತ ಪ್ರತಿಭಟನೆ ನಿಭಾಯಿಸುವಲ್ಲಿ ಚೀನಾ ಸರ್ಕಾರ ವಿಫಲವಾಗಿದೆ. ಜನರ ಕಳವಳ ಆಲಿಸದೆ, ಮತ್ತಷ್ಟು ಬಿರುಕು ಮೂಡಿಸುವ ಮಾರ್ಗವನ್ನು ಅದು ಹಿಡಿದಿದೆ ಎಂದು ಟೀಕಿಸಿದರು.

'ಭಾರತದೊಂದಿಗೆ ಹೊಸ ಎಫ್‌ಟಿಎಗೆ ಬದ್ಧ'

ಇಂಡೊ- ಪೆಸಿಫಿಕ್ ಪ್ರದೇಶದೊಂದಿಗಿನ ಸಂಬಂಧ ಹೆಚ್ಚಿಸುವ ಸಲುವಾಗಿ ಭಾರತದ ಜತೆಗೆ ಹೊಸದಾಗಿ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಮಾಡಿಕೊಳ್ಳಲು ಬ್ರಿಟನ್ ಬದ್ಧವಾಗಿದೆ ಎಂದು ರಿಷಿ ಸುನಕ್ ಇದೇ ವೇಳೆ ಪುನರುಚ್ಚರಿಸಿದರು.

ಯುರೋಪ್ ಮತ್ತು ಉತ್ತರ ಅಮೆರಿಕಕ್ಕೆ ಹೋಲಿಸಿದರೆ 2050ರ ವೇಳೆಗೆ ಭಾರತ– ಪೆಸಿಫಿಕ್ ಜಾಗತಿಕ ಬೆಳವಣಿಗೆ ಅರ್ಧದಷ್ಟನ್ನು ಸಾಧಿಸಲಿದೆ. ಹೀಗಾಗಿ ಟ್ರಾನ್ಸ್- ಪೆಸಿಫಿಕ್ ವ್ಯಾಪಾರ ಒಪ್ಪಂದಕ್ಕೆ ಮುಂದಾಗುತ್ತಿದ್ದೇವೆ ಎಂದು ತಿಳಿಸಿದರು.

'2050ರ ವೇಳೆಗೆ ಇಂಡೊ-ಪೆಸಿಫಿಕ್, ಜಾಗತಿಕ ಬೆಳವಣಿಗೆಯ ಅರ್ಧದಷ್ಟು ಸಾಧಿಸಲಿದೆ. ಅದಕ್ಕಾಗಿಯೇ ನಾವು ಭಾರತ ಮತ್ತು ಇಂಡೊನೇಷ್ಯಾದ ಜತೆಗೆ ಹೊಸ ಎಫ್‌ಟಿಎ ಮಾಡಿಕೊಳ್ಳಲಿದ್ದೇವೆ' ಎಂದರು.

38 ವರ್ಷಗಳಲ್ಲಿ ಇದೇ ಮೊದಲ ಬಾರಿ ಸ್ಫೋಟ; ಹೊರಹೊಮ್ಮಿದ ಕಿತ್ತಳೆ ಬಣ್ಣದ ಲಾವಾ

ಹವಾಯಿ ದ್ವೀಪ: ಜ್ವಾಲಾಮುಖಿ ಸ್ಫೋಟ

ಹವಾಯಿ (ಪಿಟಿಐ): ಹವಾಯಿ ದ್ವೀಪದಲ್ಲಿರುವ ವಿಶ್ವದ ಅತಿದೊಡ್ಡ ಸಕ್ರಿಯ ಜ್ವಾಲಾಮುಖಿ ಎನಿಸಿರುವ ಮೌನಾ ಲೊವಾ ತನ್ನ ರೌದ್ರಾವತಾರ ಪ್ರದರ್ಶಿಸುತ್ತಿದೆ. 38 ವರ್ಷಗಳಲ್ಲಿ ಇದೇ ಮೊದಲ ಬಾರಿ ಸ್ಫೋಟಗೊಂಡಿರುವ ಜ್ವಾಲಾಮುಖಿಯು ಕಿತ್ತಳೆ ಬಣ್ಣದ ಲಾವಾ ಮತ್ತು ಬೃಹತ್ ಪ್ರಮಾಣದ ಹೊಗೆಮಿಶ್ರಿತ ಬೂದಿಯನ್ನು ಹೊರಸೂಸುತ್ತಿದೆ.

ಲಾವಾ ಹೊರಹೊಮ್ಮುತ್ತಿರುವ ಪ್ರದೇಶವು ಜನವಸತಿ ಪ್ರದೇಶಗಳಿಂದ ದೂರದಲ್ಲಿದೆ. ಸುಮಾರು 2 ಮೈಲಿಗಳಷ್ಟು ಪ್ರದೇಶದಲ್ಲಿ ಮೂರು ಪ್ರತ್ಯೇಕ ಬಿರುಕುಗಳಿಂದ 100 ರಿಂದ 200 ಅಡಿ ಎತ್ತರಕ್ಕೆ ಲಾವಾ ಚಿಮ್ಮುತ್ತಿದ್ದು, ಅವುಗಳಿಂದ ದೂರವಿರಲು ಅಧಿಕಾರಿಗಳು ಸಾರ್ವಜನಿಕರಿಗೆ ಸೂಚಿಸಿದ್ದಾರೆ.

'ಭಾನುವಾರ ರಾತ್ರಿ ಸ್ಥಳೀಯ ಕಾಲಮಾನ 11.30ಕ್ಕೆ ಜ್ವಾಲಾಮುಖಿ ಸ್ಫೋಟಿಸಿದೆ. ಆರಂಭದಲ್ಲಿ ಲಾವಾದ ಹರಿವು ಶಿಖರ ಪ್ರದೇಶಕ್ಕೆ ಸೀಮಿತವಾಗಿತ್ತು. ಮುಂಜಾನೆ ವೇಳೆಗೆ ಅದು ಈಶಾನ್ಯ ಭಾಗದ ಬಿರುಕು ವಲಯದತ್ತ ಸಾಗಿದೆ' ಎಂದು ಅಮೆರಿಕದ ಭೂವೈಜ್ಞಾನಿಕ ಸರ್ವೆ ಸಂಸ್ಥೆ ತಿಳಿಸಿದೆ.

ಈವರೆಗೆ 33 ಬಾರಿ ಸ್ಫೋಟ: 1843ರಿಂದ ಈವರೆಗೂ ಮೌನಾ ಲೊವಾ ಜ್ವಾಲಾಮುಖಿ ಒಟ್ಟು 33 ಬಾರಿ ಸ್ಫೋಟಗೊಂಡಿದೆ. ಈ ಪೈಕಿ ಹೆಚ್ಚಿನ ಸ್ಫೋಟಗಳು 1950ಕ್ಕೂ ಮುನ್ನವೇ ದಾಖಲಾಗಿವೆ. 1975 ಮತ್ತು 1984ರಲ್ಲಿ ದೊಡ್ಡ ಪ್ರಮಾಣದಲ್ಲಿ ಜ್ವಾಲಾಮುಖಿ ಸ್ಫೋಟಗೊಂಡಿತ್ತು. 1984ರ ಸ್ಫೋಟದ ವೇಳೆ ಲಾವಾವು ಹಿಲೊ ನಗರದತ್ತ ಹರಿದಿತ್ತು. ಆಗ ನಗರದೆಲ್ಲೆಡೆ ವಾಯು ಮಾಲಿನ್ಯ ಉಂಟಾಗಿತ್ತು.

ಹವಾಯಿ ದ್ವೀಪದಲ್ಲಿ ಜ್ವಾಲಾಮುಖಿ ಸ್ಫೋಟಗೊಂಡಿರುವುದು
–ಎಎಫ್‌ಪಿ ಚಿತ್ರ

ಗುಜರಾತ್ ಮಾದರಿ ಬೆನ್ನೇರಿ ಸೋಳಂಕಿ ದಾಖಲೆಯತ್ತ ಕಣ್ಣು

ಗುಜರಾತ್ ಚುನಾವಣೆ

ಅಖಾಡದಲ್ಲೊಂದು ಸುತ್ತು

ಮಂಜುನಾಥ ಹೆಬ್ಬಾರ್

ಅಹಮದಾಬಾದ್ (ಗುಜರಾತ್): ದೇಶದ ಜನರ ಹೃದಯದಲ್ಲಿ 'ಗುಜರಾತ್ ಮಾದರಿ' ಎಂಬ ಕನಸನ್ನು ಬಿತ್ತಿ ಸತತ ಗೆಲುವಿನ ಕೊಯಿಲನ್ನು ಪಡೆದಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಈ ಸಲ 'ದಾಖಲೆಯ ಗೆಲುವು' ಸಾಧಿಸಲು ನಾನಾ ತಂತ್ರ ಹಾಗೂ ಪ್ರಯೋಗಗಳನ್ನು ಮಾಡುತ್ತಿದೆ.

ಗುಜರಾತ್ ಚುನಾವಣಾ ಫಲಿತಾಂಶವು ಮುಂದಿನ ವರ್ಷ ನಡೆಯಲಿರುವ ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಡ ವಿಧಾನ ಸಭೆಗಳ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಅರಿತಿರುವ ಮೋದಿ– ಗೃಹ ಸಚಿವ ಅಮಿತ್ ಶಾ ಜೋಡಿ ತವರು ರಾಜ್ಯದಲ್ಲಿ ಬೆವರು ಹರಿಸುತ್ತಿದೆ.

ಗುಜರಾತ್ ರಾಜಕಾರಣವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಪಟೇಲರ ಪ್ರಾಬಲ್ಯವನ್ನು ಮೊದಲ ಬಾರಿಗೆ ಮುರಿದವರು ಕಾಂಗ್ರೆಸ್‌ನ ಮಾಧವ ಸಿನ್ಹ ಸೋಲಂಕಿ. 1985ರ ಚುನಾವಣೆಯಲ್ಲಿ 'ಕ್ಷತ್ರೀಯ– ಹರಿಜನ–ಆದಿವಾಸಿ–ಮುಸ್ಲಿಂ' ಸಮುದಾಯಗಳನ್ನು ಒಳಗೊಂಡ 'ಖಾಮ್ ಕೂಟ ಕಟ್ಟಿ ಕಾಂಗ್ರೆಸ್ ಅನ್ನು ಅಧಿಕಾರದ ಗದ್ದುಗೆಗೆ ಏರಿಸಿದರು. ಈ ಜಾತಿ ಸಮೀಕರಣದ ರಾಜಕೀಯ ಲಾಭ ಪಡೆದ ಕಾಂಗ್ರೆಸ್ ಆ ಚುನಾವಣೆಯಲ್ಲಿ 149 ಸ್ಥಾನಗಳನ್ನು (ಶೇ 55 ಮತ) ಪಡೆಯಿತು.

ಕಳೆದೆರಡು ದಶಕಗಳಲ್ಲಿ ಗುಜರಾತ್‌ನ ಜನರನ್ನು ಮೋಡಿ ಮಾಡಿದ ನರೇಂದ್ರ ಮೋದಿ ಅವರಿಗೂ ಈ ದಾಖಲೆಯ ಹತ್ತಿರ ಸುಳಿಯಲು ಸಾಧ್ಯವಾಗಿಲ್ಲ. 'ಈ ಚುನಾವಣೆಯ ಲೆಕ್ಕಾಚಾರವೇ ಬೇರೆ. ಈ ಚುನಾವಣೆಯಲ್ಲಿ ಸೋಳಂಕಿ ಅವಧಿಯ ದಾಖಲೆಯನ್ನು ಪುಡಿಗಟ್ಟಿ ಪಕ್ಷವು ಅಧಿ ಕಾರದ ಚುಕ್ಕಾಣಿ ಹಿಡಿಯಲಿದೆ' ಎಂಬುದು ಬಿಜೆಪಿ ಕಾರ್ಯಕರ್ತರ ವಿಶ್ವಾಸದ ನುಡಿ.

'ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ ಯಾತ್ರೆ'ಗೆ ಜನರಿಂದ ಉತ್ತಮ ಪ್ರತಿಕ್ರಿಯೆ ದೊರಕುತ್ತಿರುವ ಹೊತ್ತಿನಲ್ಲಿ 'ಹಿಂದುತ್ವದ ಪ್ರಯೋಗಶಾಲೆ'ಯಲ್ಲಿ ಸ್ವಲ್ಪ ಏರುಪೇರಾದರೂ ಇಡೀ ದೇಶಕ್ಕೆ ಬೇರೆ ರೀತಿಯ ಸಂದೇಶ ಹೋಗಲಿದೆ' ಎಂದು ಗಾಂಧಿನಗರದ ಬಿಜೆಪಿ ಮುಖಂಡ ಹಿತೇಂದ್ರ ಠಾಕೂರ್ ವಿಶ್ಲೇಷಿಸುತ್ತಾರೆ.

ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ನೇತೃತ್ವದ ಎಡರಂಗಗಳ ಸರ್ಕಾರ ಸತತ ಏಳು ಬಾರಿ ಅಧಿಕಾರಕ್ಕೆ ಏರಿತ್ತು. ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರ 1995ರಿಂದ (6 ಬಾರಿ) ಸತತವಾಗಿ ಅಧಿಕಾರದಲ್ಲಿದೆ. ಒಂದು ವೇಳೆ, ಈ ಬಾರಿಯೂ ಅಧಿಕಾರ ಹಿಡಿದರೆ, ಸಿಪಿಎಂ ದಾಖಲೆಯನ್ನು ಸರಿಗಟ್ಟಿದಂತಾಗುತ್ತದೆ. ಬಿಜೆಪಿಯು ನರೇಂದ್ರ ಮೋದಿ ನೇತೃತ್ವದಲ್ಲಿ ನಾಲ್ಕು ಚುನಾವಣೆಗಳನ್ನು (2002, 2007, 2012 ಹಾಗೂ 2017) ಎದುರಿಸಿದೆ.

ಬಿಜೆಪಿ ಪಡೆದ ಮತ

ಚುನಾವಣೆ	ಮತಪ್ರಮಾಣ (ಶೇ)
1990	26.69
1995	42.51
1998	44.81
2002	49.85
2007	49.12
2012	47.85
2017	49.44

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪ್ರಚಾರ ಮಾಡಿದರು –ಪಿಟಿಐ ಚಿತ್ರ

2002ರಲ್ಲಿ ಕೋಮು ದಂಗೆಯ ಬೆನ್ನಲ್ಲೇ ನಡೆದ ಚುನಾವಣೆಯಲ್ಲಿ ಬಿಜೆಪಿ 127 ಸ್ಥಾನಗಳನ್ನು ಗಳಿಸಿತು. 2007ರಲ್ಲಿ 117 ಹಾಗೂ 2012ರಲ್ಲಿ 115 ಸ್ಥಾನಗಳನ್ನು ಪಡೆಯಿತು. 2017ರಲ್ಲಿ ಬಿಜೆಪಿ ತಿಣುಕಾಡಿ ಗೆದ್ದಿದ್ದು 99 ಸ್ಥಾನಗಳನ್ನು.

ಬಳಿಕ ಚುರುಕಾದ ಕೇಸರಿ ಪಡೆ 2020ರಲ್ಲಿ ಕಾಂಗ್ರೆಸ್‌ನ 16 ಶಾಸಕರನ್ನು ಸೆಳೆದುಕೊಂಡಿತು. ಕಳೆದೊಂದು ತಿಂಗಳಲ್ಲೇ ಕಾಂಗ್ರೆಸ್‌ನ ಹಲವು ಮುಖಂಡರು ಬಿಜೆಪಿ ಪಾಳಯ ಸೇರಿಕೊಂಡಿದ್ದಾರೆ. 2017ರ ಚುನಾವಣೆಯಲ್ಲಿ ಬಿಜೆಪಿಗೆ ಸೋಲಿನ ಭೀತಿ ಹುಟ್ಟಿಸಿದ್ದ ಯುವ ಮುಖಂಡರಾದ ಹಾರ್ದಿಕ್ ಪಟೇಲ್ ಹಾಗೂ ಅಲ್ಪೇಶ್ ಠಾಕೂರ್ ಅವರು ಈಗ ಮೋದಿ ನೆರಳಲ್ಲೇ ಆಶ್ರಯ ಪಡೆದಿದ್ದಾರೆ. ಕಮಲದ ಪಾಳಯದಲ್ಲೇ ಭವಿಷ್ಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಪಕ್ಷವು 'ಅಭಿನವ ಪ್ರಯೋಗ'ದ ಹೆಸರಿನಲ್ಲಿ ಕಳೆದ ವರ್ಷ ಮುಖ್ಯಮಂತ್ರಿ ಹಾಗೂ ಇಡೀ ಸಚಿವ ಸಂಪುಟವನ್ನು ಬದಲಿಸಿತು. ಈ ಚುನಾವಣೆಯಲ್ಲಿ 42 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿದೆ. ಇದು ನರೇಂದ್ರ ಮೋದಿ ಹಾಗೂ ಅಮಿತ್ ಶಾ ಜೋಡಿ ಚಾಣಾಕ್ಷ ನಡೆಗೆ ಸಾಕ್ಷಿ. ಇದರಿಂದ ಭರಪೂರ ಚುನಾವಣಾ ಫಸಲು ಸಿಗಲಿದೆ ಎಂದೂ ಬಿಜೆಪಿ ಕಾರ್ಯಕರ್ತರು ಹೇಳುತ್ತಾರೆ.

ಉತ್ತರ ಪ್ರದೇಶದ ಚುನಾವಣೆ ಮುಗಿದ ಬಳಿಕ ಉಳಿದ ಪಕ್ಷಗಳ ಮುಖಂಡರು ವಿಶ್ರಾಂತಿಯ ಮೊರೆ ಹೋದರು. ಫಲಿತಾಂಶದ ಮರುದಿನವೇ ನರೇಂದ್ರ ಮೋದಿ ಅವರು ಗುಜರಾತ್‌ಗೆ ಧಾವಿಸಿ ಬಂದು ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಿದರು. ಕಳೆದ ನಾಲ್ಕೈದು ತಿಂಗಳ ಅವಧಿಯಲ್ಲೇ ಪ್ರಧಾನಿ ಅವರು ₹1.10 ಲಕ್ಷ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ (ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಸೇರಿ) ಕಣವನ್ನು ಹದಗೊಳಿಸಿದ್ದಾರೆ. ಕಳೆದ ಎರಡು ವಾರಗಳಲ್ಲೇ ಕನಿಷ್ಠ 35 ರ‍್ಯಾಲಿಗಳಲ್ಲಿ ಪಾಲ್ಗೊಂಡು ಎಲ್ಲ ವರ್ಗದ ಜನರ ವಿಶ್ವಾಸವನ್ನು ಗಳಿಸುವ ಯತ್ನ ಮಾಡಿದ್ದಾರೆ. ಬಹುತೇಕ ರ‍್ಯಾಲಿಗಳು ನಡೆದಿರುವುದು ಕಳೆದ ಚುನಾವಣೆಯಲ್ಲಿ ಪಕ್ಷ ಕಳಪೆ ಸಾಧನೆ ಮಾಡಿದ ಕ್ಷೇತ್ರಗಳಲ್ಲೇ ಎಂದು ಬಿಜೆಪಿ ಕಾರ್ಯಕರ್ತರು ವಿಶ್ಲೇಷಿಸುತ್ತಾರೆ.

ಅಹಮದಾಬಾದ್‌ನ ಬಿಜೆಪಿ ಕಚೇರಿ ಬಳಿಯಲ್ಲಿ ಸಿಕ್ಕ ಬಿಜೆಪಿ ಕಾರ್ಯಕರ್ತ ರಘುಬೀರ್, 'ಅಭಿವೃದ್ಧಿ ಮಾದರಿ ಹಾಗೂ ಜಾತಿ ಸಮೀಕರಣವನ್ನು ಬದಲಿಸುವ ಮೂಲಕ ಇಡೀ ರಾಜ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಯಾಜಾಲದಲ್ಲಿ ಕೆಡವಿದ್ದಾರೆ. ರಾಜ್ಯದಲ್ಲಿ ಪ್ರಮುಖ ನಾಯಕರ ವಲಸೆಯಿಂದಾಗಿ ಕಾಂಗ್ರೆಸ್ ಅಸ್ಥಿಪಂಜರದಂತಾಗಿದೆ. ಅಬ್ಬರದ ಪ್ರಚಾರ ಮಾಡುತ್ತಿರುವ ಎಎಪಿ ತಳಮಟ್ಟದಲ್ಲಿ ಇಲ್ಲವೇ ಇಲ್ಲ' ಎಂದು ವಿಶ್ಲೇಷಿಸುತ್ತಾ ಹೋದರು. ಅದಕ್ಕೆ ಧ್ವನಿಗೂಡಿಸಿದ ಮತ್ತೊಬ್ಬ ಕಾರ್ಯಕರ್ತ ಮಹೇಂದ್ರ ಪಟೇಲ್, 'ಈ ಸಲದ ಚುನಾವಣಾ ಫಲಿತಾಂಶ ಯಾವ ಸಮೀಕ್ಷೆಗೂ ನಿಲುಕುವುದಿಲ್ಲ. ಶೇ 52ಕ್ಕಿಂತ ಹೆಚ್ಚು ಮತ ಪಡೆಯಲಿದ್ದೇವೆ. ನೀವು ಇದನ್ನು ಬರೆದಿಟ್ಟುಕೊಳ್ಳಿ' ಎಂದು ವಿಶ್ವಾಸದಿಂದಲೇ ಹೇಳಿದರು. 'ರಾಷ್ಟ್ರೀಯತೆ, ಹಿಂದುತ್ವ ಹಾಗೂ ಗುಜರಾತ್ ಅಸ್ಮಿತೆಯೇ ಜನರಿಗೆ ಪ್ರಮುಖವಾಗಲಿದೆ' ಎಂಬುದು ಅವರ ಸ್ಪಷ್ಟ ನುಡಿ.

'ಹಾಗಿದ್ದರೆ ಗುಜರಾತ್‌ನಲ್ಲಿ ಸಮಸ್ಯೆಗಳೇ ಇಲ್ಲವೇ' ಎಂದು ಪ್ರಶ್ನಿಸಿದರೆ ಉತ್ತರಿಸಲು ಬಿಜೆಪಿ ಕಾರ್ಯಕರ್ತರು ತಡಬಡಾಯಿಸುತ್ತಾರೆ. 'ಯಾವುದೇ ವ್ಯವಸ್ಥೆ ಶೇ 100ರಷ್ಟು ಪರಿಪೂರ್ಣವಾಗಿರಲು ಸಾಧ್ಯವೇ' ಎಂದು ಮರು ಪ್ರಶ್ನೆ ಹಾಕುತ್ತಾರೆ. 'ನಿರುದ್ಯೋಗ, ಬಡತನ, ಬೆಲೆ ಏರಿಕೆ ಸಮಸ್ಯೆ ಇದೆ. ರಾಜ್ಯದಲ್ಲಿ ಭ್ರಷ್ಟಾಚಾರವೂ ಇದೆ' ಎಂದು ಒಪ್ಪಿಕೊಳ್ಳುತ್ತಾರೆ. 'ಆದರೆ ನಿಮ್ಮ ರಾಜ್ಯದಷ್ಟು (ಕರ್ನಾಟಕ) ಇಲ್ಲ' ಎಂದೂ ಹೇಳುತ್ತಾರೆ.

ಪ್ರಧಾನಿ ಮೋದಿಗೆ ಮಲ್ಲಿಕಾರ್ಜುನ ಖರ್ಗೆ ಪ್ರಶ್ನೆ: ಬಿಜೆಪಿ–ಕಾಂಗ್ರೆಸ್ ಜಟಾಪಟಿ

'ರಾವಣನಂತೆ ನಿಮಗೆ 100 ತಲೆ ಇದೆಯೇ?'

ಅಹಮದಾಬಾದ್/ನವದೆಹಲಿ (ಪಿಟಿಐ): 'ರಾವಣನಂತೆ ನಿಮಗೆ 100 ತಲೆ ಇದೆಯೇ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ. ಇದು ಎರಡೂ ಪಕ್ಷಗಳ ನಡುವಣ ಜಟಾಪಟಿಗೆ ಕಾರಣವಾಗಿದೆ.

ಗುಜರಾತ್ ವಿಧಾನಸಭಾ ಚುನಾವಣೆಯ ಅಂಗವಾಗಿ ಅಹಮದಾಬಾದ್‌ನ ಬೆಹ್ರಾಮ್‌ಪುರದಲ್ಲಿ ಪರಚಾರ ನಡೆಸಿದ ಖರ್ಗೆ ಅವರು ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು. 'ಮೋದಿ ಅವರು ಪ್ರಧಾನಿ. ಆದರೆ, ಅವರು ಪ್ರಧಾನಿ ಕೆಲಸ ಬಿಟ್ಟು ಚುನಾವಣಾ ಪ್ರಚಾರಕನ ಕೆಲಸ ಮಾಡುತ್ತಿದ್ದಾರೆ. ನಗರಸಭೆ ಚುನಾವಣೆ, ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಯಲ್ಲೂ ಅವರೇ ಪ್ರಚಾರ ನಡೆಸುತ್ತಾರೆ' ಎಂದು ಖರ್ಗೆ ಲೇವಡಿ ಮಾಡಿದ್ದಾರೆ.

'ಎಲ್ಲಾ ಚುನಾವಣೆಗಳಲ್ಲೂ ಮೋದಿ ಪ್ರಚಾರ ನಡೆಸುತ್ತಾರೆ. ಎಷ್ಟು ಬಾರಿ ನಿಮ್ಮ ಅದೇ ಮುಖ ನೋಡುವುದು? ನಿಮಗೇನು ರಾವಣನಂತೆ 100 ತಲೆ ಇದೆಯೇ' ಎಂದು ಖರ್ಗೆ ಪ್ರಶ್ನಿಸಿದ್ದಾರೆ.

ಖರ್ಗೆ ಅವರ ಈ ಟೀಕೆಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, 'ಗುಜರಾತಿಗಳ ಬಗ್ಗೆ ಕಾಂಗ್ರೆಸ್‌ಗೆ ಇರುವ ದ್ವೇಷವನ್ನು ಖರ್ಗೆ ಅವರ ಈ ಮಾತು ಪ್ರತಿಬಿಂಬಿಸುತ್ತದೆ. ನಾವು ಅಭಿವೃದ್ಧಿಯ ಮಾತನಾಡುತ್ತಿದ್ದೇವೆ. ಕಾಂಗ್ರೆಸ್, ಗುಜರಾತ್ ಮತ್ತು ಗುಜರಾತಿಗಳನ್ನು ತೆಗಳುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಖರ್ಗೆ ಅವರನ್ನು ಬಿಜೆಪಿಯು ಸಮಾಜಘಾತುಕ ಶಕ್ತಿ ಎಂದು ಕರೆದಿದೆ. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, ಬಿಜೆಪಿಯು ದಲಿತ ವಿರೋಧಿ ಎಂದು ಟೀಕಿಸಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ನುಡಿ–ಕಿಡಿ

ಗುಜರಾತ್ ಚುನಾವಣೆಯ ಬಿಸಿ ತಡೆಯಲಾರದೆ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಾಜಘಾತುಕರಾಗಿದ್ದಾರೆ. ಅವರು ತಮ್ಮ ಮಾತಿನ ಮೇಲೆ ನಿಯಂತ್ರಣ ಕಳೆದುಕೊಂಡು, ಪ್ರಧಾನಿ ನರೇಂದ್ರ ಮೋದಿ ಅವರನ್ನು 'ರಾವಣ' ಎಂದಿದ್ದಾರೆ. ಮೊದಲು ಸಾವಿನ ವ್ಯಾಪಾರಿ, ಈಗ ರಾವಣ. ಇದು ಗುಜರಾತ್ ಮತ್ತು ಗುಜರಾತಿನ ಮಗನಿಗೆ ಮಾಡಿದ ಅವಮಾನ

ಅಮಿತ್ ಮಾಳವೀಯ, ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ

ಖರ್ಗೆ ಅವರು ತಮ್ಮ ಸಾಮರ್ಥ್ಯದಿಂದಲೇ ಮುಂದೆ ಬಂದಿದ್ದಾರೆ ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅವರನ್ನು ಸಮಾಜಘಾತುಕ ಎಂದು ಕರೆದಿರುವುದು, ದಲಿತರ ಬಗ್ಗೆ ನಿಮ್ಮ ಮತ್ತು ನಿಮ್ಮ ಪಕ್ಷದ ನಿಲುವನ್ನು ತೋರಿಸುತ್ತದೆ

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಅತ್ಯಂತ ತುಳಿತಕ್ಕೆ ಒಳಗಾದ ಸಮುದಾಯದಿಂದ ಬಂದಿರುವ ಮತ್ತು 55 ವರ್ಷಗಳಿಂದ ಚುನಾವಣೆಗಳಲ್ಲಿ ಗೆಲ್ಲುತ್ತಾ ಬಂದಿರುವ ವ್ಯಕ್ತಿಯನ್ನು ಸಮಾಜಘಾತುಕ ಎಂದು ಕರೆಯುವುದು ಉದ್ಧಟತನ. ಖರ್ಗೆ ಅವರ ಬಗ್ಗೆ ನಮಗೆ ಹೆಮ್ಮೆ ಇದೆ. ನೀವು ನಿಮ್ಮ ದಲಿತ ವಿರೋಧಿ ನಿಲುವನ್ನು ಬಿಡಿ

ಸುಪ್ರಿಯಾ ಶ್ರೀನಾತೆ, ಕಾಂಗ್ರೆಸ್ ವಕ್ತಾರೆ

ಮೊದಲ ಹಂತದ ಮತದಾನ: ಬಹಿರಂಗ ಪ್ರಚಾರ ಅಂತ್ಯ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಮೊದಲ ಹಂತದಲ್ಲಿ ಡಿ.1ರಂದು ಮತದಾನ ನಡೆಯಲಿರುವ 89 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ಮಂಗಳವಾರ ಅಂತ್ಯಗೊಂಡಿದೆ. ದಕ್ಷಿಣ ಗುಜರಾತ್ ಮತ್ತು ಕಛ್–ಸೌರಾಷ್ಟ್ರದ 19 ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ. ಒಟ್ಟು 788 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ.

ಸಾಂಪ್ರದಾಯಿಕವಾಗಿ ಈ ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇತ್ತು. ಈ ಬಾರಿ ಆಮ್ ಆದ್ಮಿ ಪಕ್ಷ ಕೂಡ ಕಣದಲ್ಲಿ ಇದೆ. ಪಕ್ಷವು 182 ಕ್ಷೇತ್ರಗಳ ಪೈಕಿ 181ರಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಹಾಗಾಗಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ.

ಆಮ್ ಆದ್ಮಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಈಸುದಾನ್ ಗಢವಿ, ಗುಜರಾತ್‌ನ ಮಾಜಿ ಸಚಿವ ಪುರುಷೋತ್ತಮ ಸೋಲಂಕಿ, ಆರು ಬಾರಿ ಗೆದ್ದಿರುವ ಕುನ್ವರ್‌ಜಿ ಬಾವಲಿಯಾ, ಮೊರ್ಬಿ 'ಹೀರೊ' ಕಾಂತಿಲಾಲ್ ಅಮೃತಿಯಾ, ಕ್ರಿಕೆಟಿಗ ರವೀಂದ್ರ ಜಡೇಜಾ ಅವರ ಹೆಂಡತಿ ರಿವಾ ಮತ್ತು ಗುಜರಾತ್ ಎಎಪಿ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಕಣದಲ್ಲಿರುವ ಪ್ರಮುಖರು.

ಪ್ರಧಾನಿ ಮೋದಿ ಅವರೇ ಬಿಜೆಪಿ ಪ್ರಚಾರದ ನೇತೃತ್ವ ವಹಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮುಂತಾದ ಮುಖಂಡರು ಪ್ರಚಾರ ನಡೆಸಿದ್ದಾರೆ. ಎಎಪಿ, ಸಂಚಾಲಕ ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ಅಬ್ಬರದ ಪ್ರಚಾರ ನಡೆಸಿದೆ. ಮನೆ ಮನೆ ಪ್ರಚಾರಕ್ಕೆ ಕಾಂಗ್ರೆಸ್ ಹೆಚ್ಚು ಒತ್ತು ನೀಡಿದೆ.

788 ಅಭ್ಯರ್ಥಿಗಳ ಪೈಕಿ 70 ಮಹಿಳೆಯರಿದ್ದರೆ 718 ಪುರುಷರು. ಮಾಯಾವತಿ ನೇತೃತ್ವದ ಬಿಎಸ್‌ಪಿ 57 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಭಾರತೀಯ ಟ್ರೈಬಲ್ ಪಾರ್ಟಿಯು 14 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದಿದೆ. ಸಮಾಜವಾದಿ ಪಕ್ಷ 12, ಸಿಪಿಎಂ ನಾಲ್ಕು, ಸಿಪಿಐ 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ. 339 ಮಂದಿ ಪಕ್ಷೇತರರೂ ಇದ್ದಾರೆ.

ಗೆಹಲೋತ್–ಪೈಲಟ್ ಒಗ್ಗಟ್ಟು ಪ್ರದರ್ಶನ

ಜೈಪುರ (ಪಿಟಿಐ): ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಅವರು ಮಂಗಳವಾರ ಒಟ್ಟಿಗೆ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದು, ಒಗ್ಗಟ್ಟು ಪ್ರದರ್ಶಿಸಿದ್ದಾರೆ.

ಈ ಇಬ್ಬರ ಕೈಗಳನ್ನು ಎತ್ತಿಹಿಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರು, 'ಇದು, ರಾಜಸ್ಥಾನದ ಕಾಂಗ್ರೆಸ್' ಎಂದು ಹೇಳುವ ಮೂಲಕ ರಾಜ್ಯ ಘಟಕದಲ್ಲಿ ಒಗ್ಗಟ್ಟಿದೆ ಎಂದು ಪ್ರತಿಪಾದಿಸಿದರು.

ಪಕ್ಷದ ಮುಖಂಡ ರಾಹುಲ್‌ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಡಿ. 4ರಂದು ರಾಜಸ್ಥಾನವನ್ನು ಪ್ರವೇಶಿಸಲಿದ್ದು ಪೂರ್ವಭಾವಿ ಸಿದ್ಧತೆ ತಿಳಿಸಲು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಒಗ್ಗಟ್ಟು ಪ್ರದರ್ಶನವಾಯಿತು.

'ಗೆಹಲೋತ್ ಮತ್ತು ಪೈಲಟ್ ಇಬ್ಬರೂ ಪಕ್ಷದ ಆಸ್ತಿಯಾಗಿದ್ದಾರೆ ಎಂಬ ರಾಹುಲ್ ಅವರ ಹೇಳಿಕೆಯನ್ನು ವೇಣುಗೋಪಾಲ್ ಇದೇ ಸಂದರ್ಭದಲ್ಲಿ ಪುನರುಚ್ಚರಿಸಿದರು.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು, 'ನಾಯಕರು ನಮ್ಮನ್ನು ಆಸ್ತಿ ಎಂದಿದ್ದಾರೆ. ಹೀಗಿದ್ದಾಗ, ಭಿನ್ನಮತ ಎಲ್ಲಿದೆ?' ಎಂದು ಪ್ರಶ್ನಿಸಿದರು. 'ನಾಯಕರು ಹೇಳಿದ ಮೇಲೆ ನಂತರದ ಚರ್ಚೆಗೆ ಅರ್ಥವಿಲ್ಲ' ಎಂದು ಹೇಳಿದರು.

'ಪಕ್ಷದ ಮುಂದೆ ಈಗಿರುವ ವಿಷಯ 2023ರ ಚುನಾವಣೆ ಮಾತ್ರ. ಖಂಡಿತ,ನಾವು ಚುನಾವಣೆ ಗೆಲ್ಲುತ್ತೇವೆ. ವಿವಿಧ ಜನಕಲ್ಯಾಣ ಕಾರ್ಯಕ್ರಮ ನೀಡಿದ್ದೇವೆ. ಜನರಿಂದ ಉತ್ತಮ ಪ್ರತಿಕ್ರಿಯೆಯಿದೆ' ಎಂದು ವಿಶ್ವಾಸವ್ಯಕ್ತಪಡಿಸಿದರು.

ಸಚಿನ್ ಪೈಲಟ್ ಅವರನ್ನು ಕುರಿತು ಗೆಹಲೋತ್ ಅವರು 'ವಿಶ್ವಾಸಘಾತುಕ' ಎಂದು ಟೀಕಿಸಿದ್ದರು. ಇದು, ರಾಜಕೀಯವಾಗಿ ಚರ್ಚೆಗೆ ಗ್ರಾಸವಾಗಿದ್ದು, ರಾಜ್ಯ ಕಾಂಗ್ರೆಸ್‌ನಲ್ಲಿ ಭಿನ್ನಮತದ ಧ್ವನಿಗೆ ಕಾರಣವಾಗಿತ್ತು.

ಅಶೋಕ್ ಗೆಹಲೋತ್, ಮುಖಂಡ ಸಚಿನ್ ಪೈಲಟ್ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಉಪಸ್ಥಿತಿಯಲ್ಲಿ ಒಗ್ಗಟ್ಟು ಪ್ರದರ್ಶಿಸಿದರು –ಪಿಟಿಐ ಚಿತ್ರ

'ಯಾತ್ರೆಯಿಂದ ತಾಳ್ಮೆ ಹೆಚ್ಚಾಗಿದೆ'

ಇಂದೋರ್: 'ಭಾರತ್ ಜೋಡೊ ಯಾತ್ರೆ'ಯಿಂದಾಗಿ ನನ್ನಲ್ಲಿ ತಾಳ್ಮೆ ಹೆಚ್ಚಾಗಿದೆ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಸೋಮವಾರ ಇಲ್ಲಿ ಮಾತನಾಡಿದ ಅವರು 'ಇತರರ ಮಾತುಗಳನ್ನು ಕೇಳುವ ಸಾಮರ್ಥ್ಯ ಕೂಡ ನನ್ನಲ್ಲಿ ವೃದ್ಧಿಯಾಗಿದೆ' ಎಂದಿದ್ದಾರೆ. ರಾಹುಲ್ ಅವರ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಭಾನುವಾರ ಮಧ್ಯಪ್ರದೇಶದ ಇಂದೋರ್ ತಲುಪಿತ್ತು.

ಕಾಶ್ಮೀರ್ ಫೈಲ್ಸ್: 53ನೇ ಇಫ್ಫಿ ಜ್ಯೂರಿ ಮುಖ್ಯಸ್ಥ ಹೊತ್ತಿಸಿದ್ದ ಕಿಡಿ

ಲಾಪಿಡ್ ಟೀಕೆಗೆ ಕ್ಷಮೆ ಕೋರಿದ ಇಸ್ರೇಲ್

ನವದೆಹಲಿ/ಮುಂಬೈ (ಪಿಟಿಐ): 'ವಿವೇಕ್ ಅಗ್ನಿಹೋತ್ರಿ ನಿರ್ದೇಶನದ 'ದಿ ಕಾಶ್ಮೀರ್ ಫೈಲ್ಸ್' ಹಿಂದಿ ಚಿತ್ರದ ಕುರಿತ ಚರ್ಚೆಯು ಭಾರತ ಮತ್ತು ಇಸ್ರೇಲ್ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತದೆ. ಈ ಚಿತ್ರದ ಕುರಿತು 53ನೇ ಇಫಿ ಜ್ಯೂರಿ ಮುಖ್ಯಸ್ಥ ನಾದವ್ ಲಾಪಿಡ್ ಮಾಡಿರುವ ಟೀಕೆ ಸಮರ್ಥನೀಯವಲ್ಲ' ಎಂದು ಇಸ್ರೇಲ್ ಕಾನ್ಸುಲ್ ಜನರಲ್ ಕೊಬ್ಬಿ ಶೋಶಾನಿ ಮಂಗಳವಾರ ಹೇಳಿದರು.

ಮುಂಬೈನಲ್ಲಿ ಮಂಗಳವಾರ ನಟ ಅನುಪಮ್ ಖೇರ್ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಲಾಪಿಡ್ ಅವರ ವಿವಾದಿತ ಟೀಕೆ, ಅವರ ವೈಯಕ್ತಿಕ ಹೇಳಿಕೆಗಾಗಿ ನನ್ನ ಸ್ನೇಹಿತ ಅನುಪಮ್ ಬಳಿ ಕ್ಷಮೆಯಾಚಿಸಿರುವೆ. ಲಾಪಿಡ್ ಹೇಳಿಕೆಗೂ ಇಸ್ರೇಲ್‌ಗೂ ಅಧಿಕೃತ ಮತ್ತು ಅನಧಿಕೃತವಾಗಿಯೂ ಯಾವುದೇ ಸಂಬಂಧವಿಲ್ಲ' ಎಂದರು.

'ಈ ಚಿತ್ರವು ರಾಜಕೀಯ ಪ್ರಚಾರ ಉದ್ದೇಶದ ಚಿತ್ರವಲ್ಲ. ಕಾಶ್ಮೀರಿ ಪಂಡಿತರ ಸಂಕಷ್ಟಗಳನ್ನು ತೆರೆದಿಡುವ ಗಟ್ಟಿ ಚಿತ್ರ. ನಾದವ್ ಟೀಕೆಯಿಂದ ನಾವು (ಇಸ್ರೇಲ್) ಅಂತರ ಕಾಯ್ದುಕೊಂಡಿದ್ದೇವೆ' ಎಂದು ಶೋಶಾನಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಲಾಪಿಡ್ ಹೇಳಿಕೆಯಿಂದ ನನ್ನ ಹೃದಯ ಒಡೆದಿದೆ. ಇದು ಹಾನಿಕಾರಕ ಎನ್ನುವುದನ್ನು ನಾವು ಖಂಡಿತವಾಗಿಯೂ ಒಪ್ಪಿಕೊಳ್ಳಬೇಕು. ನಮ್ಮ ರಾಯಭಾರಿ ಮತ್ತು ನಾನು ಬೆಳಿಗ್ಗೆಯೇ ಇದನ್ನು ಸ್ಪಷ್ಟಪಡಿಸಿರುವೆವು. ಕಾಶ್ಮೀರಿ ಪಂಡಿತರು ಅನುಭವಿಸಿದ ನೋವಿನ ಬಗ್ಗೆ ಪ್ರಶ್ನೆ ಎದ್ದಿರುವುದು ಒಳ್ಳೆಯದೇ. ಭಾರತದ ನನ್ನ ಸ್ನೇಹಿತರಿಗೆ ನನ್ನ ಬೆಂಬಲ ನೀಡಲು ನಾನು ಇಲ್ಲಿಗೆ ಬಂದಿದ್ದೇನೆ. ಭಾರತ ಮತ್ತು ಇಸ್ರೇಲ್ ಪೂರ್ಣ ಪ್ರಜಾಪ್ರಭುತ್ವ ದೇಶಗಳು. ಎರಡೂ ದೇಶಗಳಲ್ಲಿ ಇರುವ ವಾಕ್ ಸ್ವಾತಂತ್ರ್ಯ ಬಹಳ ಮುಖ್ಯವಾದುದು' ಎಂದು ಶೋಶಾನಿ ಹೇಳಿದರು. ನಟ ಅನುಪಮ್ ಖೇರ್ ಅವರ ಪಾತ್ರವು ಕಾಶ್ಮೀರಿ ಪಂಡಿತರ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಶೋಶಾನಿ ಅವರ ಹೇಳಿಕೆಯನ್ನು ಸಮ್ಮತಿಸಿದ ನಟ ಅನುಪಮ್ ಖೇರ್, 'ಇಸ್ರೇಲಿ ಚಿತ್ರ ನಿರ್ದೇಶಕ ನಾದವ್ ಲಾಪಿಡ್ ಒಬ್ಬ ಅಸಭ್ಯ ಮತ್ತು ಅವಕಾಶವಾದಿ ವ್ಯಕ್ತಿ' ಎಂದು ವಾಗ್ದಾಳಿ ಮಾಡಿದರು.

'ನಿಮಗೆ ಚಿತ್ರ ಇಷ್ಟವಾಗದಿದ್ದರೆ ಅದನ್ನು ಹೇಳುವುದು ಸ್ವಾಗತಾರ್ಹ. ಆದರೆ ನೀವು, ಜ್ಯೂರಿ ಆಗಿದ್ದಾಗ 'ಅಸಭ್ಯ', 'ರಾಜಕೀಯ ಪ್ರಚಾರದ ಉದ್ದೇಶ' ಇಂತಹ ಪದ ಬಳಸುವಂತಿಲ್ಲ. ಕಳೆದ 32 ವರ್ಷಗಳಿಂದ ಕಾಶ್ಮೀರಿ ಪಂಡಿತರು ಅನುಭವಿಸುತ್ತಿರುವ ನೋವು ಮತ್ತು ಸಮಸ್ಯೆಗಳನ್ನು ಜಗತ್ತು ಈ ಚಿತ್ರದ ಮೂಲಕ ಗುರುತಿಸಿದೆ' ಎಂದು ಹೇಳಿದರು.

'ದಿ ಕಾಶ್ಮೀರ್ ಫೈಲ್ಸ್ ಚಿತ್ರವು ಅಸಭ್ಯ ಮತ್ತು ಕೀಳು ಅಭಿರುಚಿ ಹೊಂದಿದೆ. ರಾಜಕೀಯ ಪ್ರಚಾರ ಉದ್ದೇಶದ ಈ ಚಿತ್ರವು ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸ್ಪರ್ಧಿಸಲು ಯೋಗ್ಯವಲ್ಲ' ಎಂದು ಗೋವಾದಲ್ಲಿ ಸೋಮವಾರ ರಾತ್ರಿ ನಡೆದ ಇಫ್ಫಿ ಸಮಾರೋಪದಲ್ಲಿ ನಾದವ್ ಲಾಪಿಡ್ ಹೇಳಿದ್ದರು.

ಲಾಪಿಡ್ ಅವರ ಹೇಳಿಕೆ ವಿರೋಧಿಸಿ ಟ್ವಿಟರ್‌ನಲ್ಲಿ ಬಹಿರಂಗ ಪತ್ರ ಬರೆದಿರುವ ಭಾರತದಲ್ಲಿನ ಇಸ್ರೇಲ್ ರಾಯಭಾರಿ ನಔರ್ ಗಿಲೋನ್, 'ಆತ ದೇಶ ವಿರೋಧಿ ನಿರ್ದೇಶಕ. ತೀರ್ಪುಗಾರ ಮುಖ್ಯಸ್ಥರಾಗಲು ಭಾರತ ನೀಡಿದ ಆಹ್ವಾನವನ್ನು ಕೆಟ್ಟ ರೀತಿ ದುರುಪಯೋಗಪಡಿಸಿಕೊಂಡಿದ್ದಾರೆ. ಭಾರತದ ನಂಬಿಕೆ, ಗೌರವ ಮತ್ತು ಆತಿಥ್ಯಕ್ಕೆ ದ್ರೋಹ ಬಗೆದಿರುವುದಕ್ಕೆ ಆತನಿಗೆ ನಾಚಿಕೆಯಾಗಬೇಕು. ನಾದವ್ ಹೇಳಿಕೆ ವೈಯಕ್ತಿಕವಾದುದು' ಎಂದಿದ್ದಾರೆ.

'ದಿ ಕಾಶ್ಮೀರ್ ಫೈಲ್ಸ್' 53ನೇ ಇಫಿಯ ಭಾರತೀಯ ಪನೋರಮಾ ವಿಭಾಗದಲ್ಲಿ ನ. 22ರಂದು ಪ್ರದರ್ಶನ ಕಂಡಿತ್ತು.

> ಇಸ್ರೇಲಿ ಚಿತ್ರನಿರ್ದೇಶಕ ನಾದವ್ ಸೇರಿ ಬುದ್ಧಿಜೀವಿಗಳು 'ದಿ ಕಾಶ್ಮೀರ್ ಫೈಲ್ಸ್'ನಲ್ಲಿ ಚಿತ್ರಿಸಿರುವ ಘಟನೆಗಳು ಸುಳ್ಳೆಂದು ಸಾಬೀತುಪಡಿಸಿದರೆ ಸಿನಿಮಾ ಮಾಡುವುದನ್ನೇ ನಿಲ್ಲಿಸುವೆ
>
> **ವಿವೇಕ್ ಅಗ್ನಿಹೋತ್ರಿ,** ಚಿತ್ರನಿರ್ದೇಶಕ

ಸಂಕ್ಷಿಪ್ತ ಸುದ್ದಿ

'ಉಗ್ರರ ದಾಳಿ: ಎಚ್ಚರಿಕೆಯಿಂದ ವರದಿ ಮಾಡಿ'

ನವದೆಹಲಿ (ಪಿಟಿಐ): 'ಭಯೋತ್ಪಾದನಾ ದಾಳಿಗಳ ಕುರಿತು ನೇರಪ್ರಸಾರದಲ್ಲಿ ವರದಿಗಾರಿಕೆ ಮಾಡುವಾಗ ಸಾಕಷ್ಟು ಎಚ್ಚರಿಕೆ ವಹಿಸಬೇಕು. ವರದಿಗಾರಿಕೆಯು ದಾಳಿಕೋರರಿಗೆ ಸುಳಿವು ನೀಡುವಂತಿರಬಾರದು' ಎಂದು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಅವರುಮಾಧ್ಯಮಗಳಿಗೆ ಸಲಹೆ ನೀಡಿದರು.

ಪ್ರಸಾರ ಭಾರತಿ ಆಯೋಜಿಸಿರುವ 59ನೇ ಏಷ್ಯಾ–ಪೆಸಿಫಿಕ್ ಬ್ರಾಡ್‌ಕಾಸ್ಟಿಂಗ್ ಯೂನಿಯನ್‌ನ (ಎಬಿಯು) ಸಾಮಾನ್ಯ ಸಭೆಯಲ್ಲಿ ಮಂಗಳವಾರ ಅವರು ಮಾತನಾಡಿದರು.

'ಭೂಕಂಪ, ಬೆಂಕಿ ಅವಘಡದಂಥ ಸಂದರ್ಭಗಳಲ್ಲಿ ಜವಾಬ್ದಾರಿಯುತವಾಗಿ ವರದಿಗಾರಿಕೆ ಮಾಡಬೇಕಾಗುತ್ತದೆ. ಅದರಲ್ಲೂ ಭಯೋತ್ಪಾದನಾ ದಾಳಿಯಂಥ ಸಂದರ್ಭದಲ್ಲಿ ಇನ್ನಷ್ಟು ಎಚ್ಚರಿಕೆ ವಹಿಸಬೇಕು' ಎಂದರು.

'ಜನರಿಗೆ ಬಹುಬೇಗ ಸುದ್ದಿ ತಲುಪಬೇಕು ಎನ್ನುವುದು ಎಷ್ಟು ಮುಖ್ಯವೊ, ನಿಖರವಾದ ಸುದ್ದಿ ತಲುಪಬೇಕು ಎನ್ನುವುದು ಅಷ್ಟೇ ಮುಖ್ಯವಾಗಿದೆ. ಸುದ್ದಿ ಸಂಸ್ಥೆಗಳು ಈ ಕುರಿತು ನಿಗಾವಹಿಸಬೇಕು' ಎಂದರು.

ಪ್ರಧಾನಿ ಭೇಟಿ ವೇಳೆ ಭದ್ರತಾ ಲೋಪ: ಬಿಜೆಪಿ

ಚೆನ್ನೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಜುಲೈನಲ್ಲಿ ತಮಿಳುನಾಡಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪೊಲೀಸರಿಂದ ಗಂಭೀರ ಭದ್ರತಾ ಲೋಪ ಉಂಟಾಗಿತ್ತು. ಈ ಬಗ್ಗೆ ತನಿಖೆ ನಡೆಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ರಾಜ್ಯ ಬಿಜೆಪಿ ಘಟಕದ ಮುಖ್ಯಸ್ಥ ಕೆ.ಅಣ್ಣಾಮಲೈ ಅವರು ರಾಜ್ಯಪಾಲ ಆರ್.ಎನ್.ರವಿ ಅವರನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅಣ್ಣಾಮಲೈ, 'ಪ್ರಧಾನಿ ಮೋದಿ ಅವರು ಜುಲೈ 28 ಮತ್ತು 29ರಂದು ಚೆನ್ನೈಗೆ ಭೇಟಿ ನೀಡಿದ ಸಂದರ್ಭದಲ್ಲಿ ಡಿಎಂಕೆ ಸರ್ಕಾರ ಗಂಭೀರ ಭದ್ರತಾ ಲೋಪ ಎಸಗಿದೆ. ಭೇಟಿ ವೇಳೆ ಭದ್ರತಾ ಉದ್ದೇಶಕ್ಕೆ ಬಳಕೆ ಮಾಡಲಾದ ಬಹುತೇಕ ಲೋಹ ಶೋಧಕಗಳು ಮತ್ತು ಬಾಂಬ್ ಪತ್ತೆ ಸಾಧನಗಳು ಸರಿಯಾಗಿರಲಿಲ್ಲ. ಅವುಗಳ ಬಳಕೆಯ ಗಡುವು ಮೀರಿರುವುದು ಬೆಳಕಿಗೆ ಬಂದಿದೆ ' ಎಂದು ಹೇಳಿದ್ದಾರೆ.

ಶ್ರೀನಗರದಲ್ಲಿ ತಾಪಮಾನ ಕುಸಿತ

ಶ್ರೀನಗರ: ಶ್ರೀನಗರದಲ್ಲಿ ಸೋಮವಾರ ರಾತ್ರಿ ಮೈನಸ್ 2.2 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಇದು ಈ ಚಳಿಗಾಲದಲ್ಲಿ ಇಲ್ಲಿ ದಾಖಲಾಗಿರುವ ಅತ್ಯಂತ ಕಡಿಮೆ ತಾಪಮಾನ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಭಯೋತ್ಪಾದನೆ ನಿಗ್ರಹ: ಉಲೇಮಾ ಪಾತ್ರ ಮಹತ್ವದ್ದು'

ನವದೆಹಲಿ (ಪಿಟಿಐ): 'ಪ್ರಗತಿಪರ ವಿಚಾರಗಳನ್ನು ಪ್ರಚಾರ ಮಾಡುವ ಮೂಲಕ ತೀವ್ರವಾದಿ ಹಾಗೂ ಉಗ್ರಗಾಮಿಗಳನ್ನು ಹತ್ತಿಕ್ಕುವಲ್ಲಿ ಉಲೇಮಾಗಳ ಪಾತ್ರ ಮಹತ್ವದ್ದಾಗಿದೆ' ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ಡೊಭಾಲ್ ಹೇಳಿದ್ದಾರೆ.

ಇಂಡೊನೇಷ್ಯಾ ಮತ್ತು ಭಾರತೀಯ ಉಲೇಮಾಗಳು ಹಾಗೂ ಇತರ ನಾಯಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದ ಅವರು, 'ಐಸಿಸ್ ಪ್ರೇರಿತ ಭಯೋತ್ಪಾದನಾ ಸಂಘಟನೆಗಳು ಹಾಗೂ ಸಿರಿಯಾ, ಅಫ್ಘಾನಿಸ್ತಾನದಂತಹ ದೇಶಗಳಿಂದ ಮರಳಿರುವ ಉಗ್ರರು ದೇಶದ ಭದ್ರತೆಗೆ ಸವಾಲಾಗಿದ್ದಾರೆ. ಇವರ ನಿರ್ಮೂಲನೆಗೆ ನಾಗರಿಕರ ಸಹಕಾರ ಅಗತ್ಯ' ಎಂದಿದ್ದಾರೆ.

'ಉಲೇಮಾಗಳು ಇಸ್ಲಾಂ ಧರ್ಮದ ಮೂಲ ತತ್ವ ಹಾಗೂ ಸಹಿಷ್ಣುತೆ ಕುರಿತು ಅರಿವು ಮೂಡಿಸಬೇಕು ಉಗ್ರಗಾಮಿತ್ವ ಚಿಂತನೆಯು ಇಸ್ಲಾಂ ಧರ್ಮದ ಮೂಲ ತತ್ವಕ್ಕೆ ವಿರುದ್ಧವಾದುದು' ಎಂದಿದ್ದಾರೆ.

ಶಾಪುರ ಗಡಿ ಪ್ರದೇಶದಲ್ಲಿ ಪತ್ತೆಯಾದ ಪಾಕಿಸ್ತಾನದ ಡ್ರೋನ್ ಅನ್ನು ಗಡಿ ರಕ್ಷಣಾ ಪಡೆ ಯೋಧರು ಮಂಗಳವಾರ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ಮಾದಕವಸ್ತು ಕಳ್ಳಸಾಗಣೆ: ಪಾಕ್ ಡ್ರೋನ್ ಹೊಡೆದುರುಳಿಸಿದ ಸೇನೆ

ಚಂಡೀಗಡ (ಪಿಟಿಐ): ಭಾರತ–ಪಾಕಿಸ್ತಾನ ಗಡಿಯಲ್ಲಿ ಮಾದಕವಸ್ತು ಕಳ್ಳಸಾಗಣೆ ಉದ್ದೇಶದಿಂದ ಭಾರತದ ಗಡಿ ಪ್ರವೇಶಿಸಿದ್ದ ಪಾಕಿಸ್ತಾನದ ಎರಡು ಡ್ರೋನ್‌ಗಳನ್ನು ಗಡಿ ರಕ್ಷಣಾ ಪಡೆ (ಬಿಎಸ್‌ಎಫ್) ಸಿಬ್ಬಂದಿ ಹೊಡೆದುರುಳಿಸಿದ್ದಾರೆ. ಎರಡೂ ಡ್ರೋನ್‌ಗಳಿಂದ ಒಟ್ಟು 10 ಕೆ.ಜಿ ಹೆರಾಯಿನ್ ಅನ್ನು ವಶಪಡಿಸಿಕೊಳ್ಳಲಾಗಿದೆ.

'ಪಂಜಾಬ್‌ನ ಅಮೃತಸರ ಛತರಪುರ ಗ್ರಾಮದೊಳಗೆ ಪ್ರವೇಶಿಸುತ್ತಿದ್ದ ಡ್ರೋನ್‌ವೊಂದನ್ನು ಬಿಎಸ್‌ಎಫ್‌ನ ಇಬ್ಬರು ಮಹಿಳಾ ಕಾನ್‌ಸ್ಟೆಬಲ್‌ಗಳು 25 ಸುತ್ತು ಗುಂಡು ಹಾರಿಸಿ ಹೊಡೆದುರುಳಿಸಿದರು. ಡ್ರೋನ್‌ನಲ್ಲಿ 3.1 ಕೆ.ಜಿ ತೂಕದ ಮಾದಕವಸ್ತುಗಳು ಪತ್ತೆಯಾಗಿವೆ' ಎಂದು ಅಧಿಕಾರಿಗಳು ತಿಳಿಸಿದರು.

'ತರನ್ ತಾರನ್ ಜಿಲ್ಲೆಯ ಕಳಶ್ ಹವೇಲಿಯಾ ಗ್ರಾಮದಲ್ಲಿ 6.6 ಕೆ.ಜಿ ಹೆರಾಯಿನ್ ಹೊತ್ತಿದ್ದ 20 ಕೆ.ಜಿ ತೂಕದ ಮತ್ತೊಂದು ಡ್ರೋನ್ ಸೋಮವಾರ ರಾತ್ರಿ ಪತ್ತೆಯಾಗಿದೆ. ಡ್ರೋನ್ ಮೇಲೆ ಬಿಎಸ್‌ಎಫ್ ಯೋಧರು ಗುಂಡಿನ ದಾಳಿ ನಡೆಸಿದರು' ಎಂದು ಅವರು ಹೇಳಿದರು.

500ಕ್ಕೂ ಅಧಿಕ ಉತ್ಪನ್ನ ಪೂರೈಕೆ: ರಷ್ಯಾ ಬೇಡಿಕೆ

ನವದೆಹಲಿ (ರಾಯಿಟರ್ಸ್): 'ಕಾರು, ನವದೆಹಲಿ (ರಾಯಿಟರ್ಸ್): 'ಕಾರು, ವಿಮಾನ ಹಾಗೂ ರೈಲುಗಳ ಬಿಡಿಭಾಗ ಸೇರಿದಂತೆ 500ಕ್ಕೂ ಅಧಿಕ ಉತ್ಪನ್ನಗಳನ್ನು ಪೂರೈಸುವಂತೆ ರಷ್ಯಾವು ಭಾರತದ ಎದುರು ಬೇಡಿಕೆ ಇಟ್ಟಿದೆ' ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

'ಯಾವೆಲ್ಲಾ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತದೆ. ಅವುಗಳ ಪ್ರಮಾಣ ಎಷ್ಟು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ' ಎಂದೂ ಹೇಳಿವೆ. 'ಭಾರತವು ರಷ್ಯಾ ಜೊತೆಗಿನ ವ್ಯಾಪಾರದ ಕೊರತೆ ತಗ್ಗಿಸಲು ಯತ್ನಿಸುತ್ತಿರುವ ಸಮಯದಲ್ಲೇ ಆ ದೇಶದಿಂದ ಬೇಡಿಕೆ ಬಂದಿದೆ. ಈ ಮೂಲಕ ತನ್ನ ವ್ಯಾಪಾರ ವೃದ್ಧಿಸಿಕೊಳ್ಳಲು ಭಾರತವು ಉತ್ಸುಕವಾಗಿದೆ. ಕೆಲ ಕಂಪನಿಗಳು ಈ ಕುರಿತು ಕಳವಳ ವ್ಯಕ್ತಪಡಿಸಿವೆ' ಎಂದೂ ತಿಳಿಸಿವೆ.

'ತಮಗೆ ಅಗತ್ಯವಿರುವ ಕಚ್ಚಾ ವಸ್ತುಗಳು ಹಾಗೂ ಸಲಕರಣೆಗಳ ಪಟ್ಟಿಯನ್ನು ತನಗೆ ಒದಗಿಸುವಂತೆ ರಷ್ಯಾದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಪ್ರಮುಖ ಕಂಪನಿಗಳಿಗೆ ಕೇಳಿದೆ' ಎಂದು ಮಾಸ್ಕೊದ ಮೂಲಗಳು ಹೇಳಿವೆ.

ರಷ್ಯಾದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಭಾರತದ ವಿದೇಶಾಂಗ ಮತ್ತು ವಾಣಿಜ್ಯ ಸಚಿವಾಲಯ ಹಾಗೂ ಪ್ರಧಾನ ಮಂತ್ರಿಯವರ ಕಾರ್ಯಾಲಯವು ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ರಷ್ಯಾದಲ್ಲಿರುವ ಬಹುಪಾಲು ವಿಮಾನಗಳು ವಿದೇಶಿ ನಿರ್ಮಿತವಾಗಿವೆ. ಹೀಗಾಗಿ ವಿಮಾನಯಾನ ಸಂಸ್ಥೆಗಳು ಬಿಡಿಭಾಗಗಳ ಕೊರತೆ ಎದುರಿಸುತ್ತಿವೆ. ಕಾರುಗಳ ಬಿಡಿಭಾಗಗಳಿಗೂ ಬೇಡಿಕೆ ಹೆಚ್ಚಿದೆ.

ಅದಾನಿ ಬಂದರಿಗೆ ಬಿಗಿ ಭದ್ರತೆ

ಕೊಚ್ಚಿ: ಗೌತಮ್ ಅದಾನಿ ಸಮೂಹದ ವಿಳಿಂಜಾ ಬಂದರು ನಿರ್ಮಾಣ ಕಾಮಗಾರಿ ವಿರೋಧಿಸಿ ಸ್ಥಳೀಯರು ಪ್ರತಿಭಟನೆ ನಡೆಸಿರುವ ಕಾರಣ ಕೇರಳ ಪೊಲೀಸರು ಬಂದರಿಗೆ ಮಂಗಳವಾರ ಬಿಗಿ ಭದ್ರತೆ ಒದಗಿಸಿದ್ದಾರೆ.

'ಬಂದರಿನ ಭದ್ರತೆಗಾಗಿ ನೇಮಿಸಿದ್ದ ಪೊಲೀಸರ ಸಂಖ್ಯೆಯನ್ನು 300ರಿಂದ 400ಕ್ಕೆ ಏರಿಕೆ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಜನರ ಪ್ರತಿಭಟನೆಯ ಕಾರಣ 3 ತಿಂಗಳಿನಿಂದ ಬಂದರು ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿತ್ತು. ಕೆಥೋಲಿಕ್ ಧರ್ಮಗುರುಗಳು ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬಂದರು ನಿರ್ಮಾಣದಿಂದ ಅಲ್ಲಿನ ಜನರ ಜೀವನೋಪಾಯಕ್ಕೆ ಹೊಡೆತ ಬೀಳಲಿದೆ ಎಂಬುದು ಪ್ರತಿಭಟನಕಾರರ ಆರೋಪವಾಗಿದೆ.

20 ಮಂದಿ ಹೆಸರಿದ್ದ ಕಡತ ಕೊಲಿಜಿಯಂಗೆ ಮರಳಿಸಿದ ಕೇಂದ್ರ

ನವದೆಹಲಿ (ಪಿಟಿಐ): ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕಾತಿಗೆ ಸಂಬಂಧಿಸಿದ 20 ಕಡತಗಳನ್ನು ಸುಪ್ರೀಂಕೋರ್ಟ್ ಕೊಲಿಜಿಯಂಗೆ ವಾಪಸ್ ಕಳುಹಿಸಿರುವ ಕೇಂದ್ರ ಸರ್ಕಾರ, ಮರುಪರಿಶೀಲಿಸುವಂತೆ ಹೇಳಿದೆ.

'ಕೊಲಿಜಿಯಂ ಶಿಫಾರಸು ಬಗ್ಗೆ ಕೇಂದ್ರ ತೀವ್ರ ಅಸಮಾಧಾನ ಹೊರಹಾಕಿದೆ. ಈ ಕಾರಣಕ್ಕಾಗಿ ಶಿಫಾರಸುಗಳಿರುವ ಕಡತಗಳನ್ನು ಕೊಲಿಜಿಯಂಗೆ ನ. 25ರಂದು ವಾಪಸು ಕಳಿಸಿದೆ' ಎಂದು ಮೂಲಗಳು ಹೇಳಿವೆ.

20 ಹೆಸರುಗಳ ಪೈಕಿ 11 ಹೆಸರು ಹೊಸಬರದ್ದಾಗಿವೆ. 9 ಹೆಸರುಗಳನ್ನು ಪುನಃ ಶಿಫಾರಸು ಮಾಡಲಾಗಿದೆ ಎಂದು ಇವೇ ಮೂಲಗಳು ಹೇಳಿವೆ.

ತಾನು ಸಲಿಂಗಿ ಎಂಬುದಾಗಿ ಹೇಳಿಕೊಂಡಿರುವ ಹಿರಿಯ ವಕೀಲ ಸೌರಭ್ ಕೃಪಾಲ್ ಅವರ ಹೆಸರನ್ನು ಕೊಲಿಜಿಯಂ ಶಿಫಾರಸು ಮಾಡಿದೆ. ಕೃಪಾಲ್ ಅವರು ನಿವೃತ್ತ ಸಿಜೆಐ ಬಿ.ಎನ್. ಕೃಪಾಲ್ ಅವರ ಪುತ್ರ.

'ನನಗೆ ಬಡ್ತಿ ನೀಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ನಾನು ಸಲಿಂಗಿ ಆಗಿರುವುದೇ ಕಾರಣ' ಎಂಬುದಾಗಿ ಅವರು ಇತ್ತೀಚೆಗೆ ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು.

ಈ ಹಿಂದೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾ. ಎನ್.ವಿ.ರಮಣ ನೇತೃತ್ವದ ಕೊಲಿಜಿಯಂ, ಕೃಪಾಲ್ ಅವರಿಗೆ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲು ಕಳೆದ ವರ್ಷ ಶಿಫಾರಸು ಮಾಡಿತ್ತು. ಇದಕ್ಕೂ ಮುನ್ನ, ಕೃಪಾಲ್ ಅವರ ಹೆಸರನ್ನು ಶಿಫಾರಸು ಮಾಡುವ ನಿರ್ಧಾರವನ್ನು ಕೊಲಿಜಿಯಂ ಮೂರು ಬಾರಿ ಮುಂದೂಡಿತ್ತು.

ತೆಲಂಗಾಣದಲ್ಲಿ ರಾಜಕೀಯ ಹೈಡ್ರಾಮಾ ● ಗೃಹಬಂಧನದಲ್ಲಿ ಶರ್ಮಿಳಾ ತಾಯಿ

ಕಾರು ಸಮೇತ ಶರ್ಮಿಳಾರನ್ನು ಎಳೆದೊಯ್ದ ಪೊಲೀಸರು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಕಚೇರಿ ಎದುರು ಪ್ರತಿಭಟಿಸಲು ತೆರಳುತ್ತಿದ್ದ ವೈಎಸ್‌ಆರ್ ತೆಲಂಗಾಣ ಪಕ್ಷದ (ವೈಎಸ್‌ಆರ್‌ಟಿಪಿ) ಮುಖ್ಯಸ್ಥೆ ವೈ.ಎಸ್. ಶರ್ಮಿಳಾ ಅವರನ್ನು ತೆಲಂಗಾಣ ಪೊಲೀಸರು ಮಂಗಳವಾರ ಪುನಃ ಬಂಧಿಸಿದ್ದಾರೆ.

ಕೆಸಿಆರ್ ಕಚೇರಿಗೆ ಕಾರಿನಲ್ಲಿ ತೆರಳುತ್ತಿದ್ದ ಶರ್ಮಿಳಾ ಅವರನ್ನು ಅವರು ಕಾರಿನ ಡ್ರೈವಿಂಗ್ ಸೀಟಿನಲ್ಲಿ ಕುಳಿತಿರುವಾಗಲೇ ಪೊಲೀಸರು ಕ್ರೇನ್ ಬಳಸಿ ಎಳೆದುಕೊಂಡು ಹೋಗಿದ್ದಾರೆ. ಬಳಿಕ ಶರ್ಮಿಳಾ ಅವರ ಸೀಟಿನ ಬೆಲ್ಟ್ ಬಿಚ್ಚಿಸಿ ಬಲವಂತವಾಗಿ ಅವರನ್ನು ಕಾರಿನಿಂದ ಇಳಿಸಿ, ಬಂಧಿಸಿ ಎಸ್‌ಆರ್ ನಗರ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ.

ಮಗಳ ಬಂಧನ ವಿಷಯ ತಿಳಿಯುತ್ತಿದ್ದಂತೆಯೇ ಅವರನ್ನು ಭೇಟಿಯಾಗಲು ತೆರಳಲು ಹೊರಟಿದ್ದ ಶರ್ಮಿಳಾ ಅವರ ತಾಯಿ ವೈ.ಎಸ್. ವಿಜಯಮ್ಮ ಅವರನ್ನು (ಮಾಜಿ ಮುಖ್ಯಮಂತ್ರಿ ದಿ. ವೈ.ಎಸ್. ರಾಜಶೇಖರ ರೆಡ್ಡಿ ಅವರ ಪತ್ನಿ) ಅವರ 'ಲೋಟಸ್ ಪಾಂಡ್' ರೆಸಿಡೆನ್ಸಿಯಲ್ಲೇ ಪೊಲೀಸರು ಗೃಹಬಂಧನದಲ್ಲಿರಿಸಿದ್ದಾರೆ ಎಂದು ವೈಎಸ್‌ಆರ್‌ಟಿಪಿ ಮುಖಂಡರು ತಿಳಿಸಿದ್ದಾರೆ.

ವಾರಂಗಲ್‌ನ ನರಸಂಪೇಟೆಯಲ್ಲಿ ಸೋಮವಾರ ಪಾದಯಾತ್ರೆಯ ವೇಳೆ ಶರ್ಮಿಳಾ ಅವರು ಟಿಆರ್‌ಎಸ್ ಶಾಸಕ ಪೆದ್ದಿ ಸುದರ್ಶನ್ ಅವರನ್ನು ಟೀಕಿಸಿ ಮಾತನಾಡಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕರ ಅನುಯಾಯಿಗಳು ಸೋಮವಾರ ಶರ್ಮಿಳಾ ಅವರ ಬೆಂಗಾವಲು ಪಡೆಯ ಮೇಲೆ ದಾಳಿ ಮಾಡಿ, ಕಾರವಾನ್‌ಗೆ ಬೆಂಕಿ ಹಚ್ಚಿದ್ದರು, ಹಲವು ವಾಹನಗಳಿಗೆ ಹಾನಿಯನ್ನೂ ಮಾಡಿದ್ದರು.

ಈ ವೇಳೆ ತಮ್ಮ ಪಾದಯಾತ್ರೆಯನ್ನು ನಿಲ್ಲಿಸಲು ನಿರಾಕರಿಸಿದ್ದ ಶರ್ಮಿಳಾ ಟಿಆರ್‌ಎಸ್ ಕಾರ್ಯಕರ್ತರ ದಾಳಿಗೆ ಪ್ರತಿಭಟನೆ ವ್ಯಕ್ತಪಡಿಸಿದ್ದರು. ಬಳಿಕ ಅವರನ್ನು ಬಂಧಿಸಿದ್ದ ಪೊಲೀಸರು ಸೋಮವಾರ ರಾತ್ರಿ ಹೈದರಾಬಾದ್‌ನ ಅವರ ನಿವಾಸಕ್ಕೆ ಕರೆದೊಯ್ದಿದ್ದರು.

ಶರ್ಮಿಳಾ ಅವರು ಆಂಧ್ರಪ್ರದೇಶ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರ ತಂಗಿ. ಜಗನ್ ಅವರ ವಿರೋಧದ ನಡುವೆ ವೈಎಸ್‌ಆರ್ ತೆಲಂಗಾಣ ಪಕ್ಷವನ್ನು ಕಳೆದ ವರ್ಷ ಜುಲೈನಲ್ಲಿ ಕಟ್ಟಿರುವ ಅವರು, ಬಳಿಕ ರಾಜ್ಯಾದಾದ್ಯಂತ 'ಪ್ರಜಾ ಪ್ರಸ್ಥಾನಂ' ಪಾದಯಾತ್ರೆಯನ್ನು ಆರಂಭಿಸಿದ್ದಾರೆ. ಅವರ ಪಾದಯಾತ್ರೆ ಈಚೆಗಷ್ಟೇ 200 ದಿನಗಳನ್ನು ಪೂರೈಸಿದೆ. ಯಾತ್ರೆಯುದ್ದಕ್ಕೂ ಸಾರ್ವಜನಿಕ ಸಭೆಗಳಲ್ಲಿ ಶರ್ಮಿಳಾ ಕೆಸಿಆರ್ ಮತ್ತು ಅವರ ಪುತ್ರ, ಸಚಿವ ಕೆ.ಟಿ. ರಾಮರಾವ್ ಹಾಗೂ ಟಿಆರ್‌ಎಸ್ ಶಾಸಕರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ.

ವೈಎಸ್‌ಆರ್ ತೆಲಂಗಾಣ ಪಕ್ಷದ ಮುಖ್ಯಸ್ಥೆ, ಆಂಧ್ರ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರ ತಂಗಿ ವೈ.ಎಸ್. ಶರ್ಮಿಳಾ –ಪಿಟಿಐ ಚಿತ್ರ

ಫರ್ನಾಂಡಿಸ್ ಎರಡು ಗೋಲು: ಉರುಗ್ವೆಗೆ ಸೋಲುಣಿಸಿದ ಪೋರ್ಚುಗಲ್

16ರ ಘಟ್ಟಕ್ಕೆ ರೊನಾಲ್ಡೊ ಬಳಗ

ದೋಹಾ (ಎಎಫ್‌ಪಿ/ರಾಯಿಟರ್ಸ್): ಬ್ರೂನೊ ಫರ್ನಾಂಡಿಸ್ ಗಳಿಸಿದ ಚೆಂದದ ಎರಡು ಗೋಲುಗಳ ನೆರವಿನಿಂದ ಪೋರ್ಚುಗಲ್ ತಂಡವು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟಕ್ಕೆ ಲಗ್ಗೆ ಹಾಕಿತು.

ಲುಸೈಲ್ ಕ್ರೀಡಾಂಗಣದಲ್ಲಿ ಸೋಮವಾರ ತಡರಾತ್ರಿ ನಡೆದ 'ಎಚ್' ಗುಂಪಿನ ಹಣಾಹಣಿಯಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ನಾಯಕತ್ವದ ಪೋರ್ಚುಗಲ್ 2–0ಯಿಂದ ಉರುಗ್ವೆ ತಂಡದ ಸವಾಲು ಮೀರಿತು.

ಗೋಲು ಗಳಿಸಿದ ಬ್ರೂನೊ ಫರ್ನಾಂಡಿಸ್ ಸಂಭ್ರಮ– ಎಎಫ್‌ಪಿ ಚಿತ್ರ

ಗುಂಪು ಹಂತದಲ್ಲಿ ಪೋರ್ಚುಗಲ್ ಸತತ ಎರಡು ಪಂದ್ಯಗಳನ್ನು ಗೆದ್ದಿರುವುದು ಇದು ಎರಡನೇ ಬಾರಿ. ಪಂದ್ಯದ ಮೊದಲಾರ್ಧದಲ್ಲಿ ಪೋರ್ಚುಗಲ್ ಪಾರಮ್ಯ ಮೆರೆದಿತ್ತು. ಹೆಚ್ಚು ಹೊತ್ತು ಚೆಂಡನ್ನು ತನ್ನಲ್ಲೇ ಉಳಿಸಿಕೊಂಡಿದ್ದ ತಂಡವು, ಗೋಲು ಗಳಿಕೆಯ ಹಲವು ಅವಕಾಶಗಳನ್ನು ಸೃಷ್ಟಿಸಿಕೊಂಡಿತು. ಆದರೆ ಉರುಗ್ವೆ ಗೋಲ್‌ಕೀಪರ್ ಸೆರ್ಗಿಯೊ ರೊಚೆಟ್ ಕೋಟೆ ಭೇದಿಸಲು ಸಾಧ್ಯವಾಗಲಿಲ್ಲ.

ಮೊದಲಾರ್ಧ ಮುಗಿದ ಎಂಟು ನಿಮಿಷಗಳ ಬಳಿಕ ಫರ್ನಾಂಡಿಸ್ ಮೋಡಿ ಮಾಡಿದರು. ಎಡಭಾಗದಿಂದ ಚೆಂಡನ್ನು ಗೋಲ್‌ಪೋಸ್ಟ್‌ನತ್ತ ಕಿಕ್ ಮಾಡಿದರು. ಅಲ್ಲಿದ್ದ ರೊನಾಲ್ಡೊ ಚೆಂಗನೆ ಜಿಗಿದು ಚೆಂಡನ್ನು ಹೆಡರ್ ಮಾಡಲು ಯತ್ನಿಸಿದರು. ಆದರೆ ಅವರಿಗೆ 'ಕೂದಲೆಳೆ'ಯ ಅಂತರದಿಂದ ಅವರ ಹೆಡರ್ ತಪ್ಪಿದರೂ ಚೆಂಡು ಗೋಲ್‌ಪೋಸ್ಟ್‌ನೊಳಗೆ ನುಗ್ಗಿತು. ರೊನಾಲ್ಡೊ ಗೋಲು ಗಳಿಸಿದ ಸಂಭ್ರಮ ಆಚರಿಸಿದರು. ಆದರೆ ವಿಡಿಯೊ ಮರುಪರಿಶೀಲನೆಯ ಬಳಿಕ ಈ ಗೋಲು ಫರ್ನಾಂಡಿಸ್ ಖಾತೆಗೆ ಸೇರಿತು.

ಈ ಗೋಲು ರೊನಾಲ್ಡೊ ಗಳಿಸಿದ್ದರೆ ವಿಶ್ವಕಪ್ ಟೂರ್ನಿಯಲ್ಲಿ ಅವರ ಒಂಬತ್ತನೇಯದ್ದಾಗುತ್ತಿತ್ತು. ಆ ಮೂಲಕ ಅವರು ಪೋರ್ಚುಗಲ್ ತಂಡದ ದಿಗ್ಗಜ ಯುಸೆಬಿಯೊ ಅವರನ್ನು ಸರಿಗಟ್ಟುತ್ತಿದ್ದರು.

ಫರ್ನಾಂಡಿಸ್ ಗೋಲಿನ ಬಳಿಕ ಉರುಗ್ವೆ ವೇಗದ ಆಟಕ್ಕೆ ಮೊರೆಹೋಯಿತು. ತಂಡದ ಫಾರ್ವರ್ಡ್ ಆಟಗಾರ ಮ್ಯಾಕ್ಸಿ ಗೋಮೆಜ್ 20 ಯಾರ್ಡ್‌ನಿಂದ ಪಾಸ್ ಮಾಡಿದ ಚೆಂಡನ್ನು ಲೂಯಿಸ್ ಸ್ವಾರೆಜ್ ಗೋಲ್‌ಪೋಸ್ಟ್‌ನತ್ತ ತಳ್ಳಿದರು. ಆದರೆ ಚೆಂಡು ನೆಟ್ ಸಮೀಪದಿಂದ ಹಾಯ್ದುಹೋದಾಗ ನಿರಾಸೆ ಸ್ವಾರೆಜ್ ಅವರದಾಯಿತು.

ಇಂಜುರಿ ಅವಧಿಯಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಫರ್ನಾಂಡಿಸ್ ಅತಿ ಸುಲಭವಾಗಿ ಗೋಲಿನಲ್ಲಿ ಪರಿವರ್ತಿಸಿದರು. ಚೆಂಡನ್ನು ಗೋಲ್‌ಪೋಸ್ಟ್‌ನ ಬಲಭಾಗಕ್ಕೆ ಒದ್ದ ಅವರು ಗೋಲ್‌ಕೀಪರ್ ಸೆರ್ಗಿಯೊ ಅವರನ್ನು ವಂಚಿಸಿದರು. ಇಂಜುರಿ ಅವಧಿಯಲ್ಲೇ ಮತ್ತೊಂದು ಗೋಲು ಗಳಿಸಿ ಹ್ಯಾಟ್ರಿಕ್ ಸಾಧಿಸುವ ಅವಕಾಶ ಫರ್ನಾಂಡಿಸ್ ಅವರಿಗಿತ್ತು. ಆದರೆ ಸಾಧ್ಯವಾಗಲಿಲ್ಲ.

ಈ ಗೆಲುವಿನೊಂದಿಗೆ ಪೋರ್ಚುಗಲ್, ಈಗಾಗಲೇ 16ರ ಘಟ್ಟ ತಲುಪಿರುವ ಫ್ರಾನ್ಸ್ ಮತ್ತು ಬ್ರೆಜಿಲ್ ತಂಡಗಳ ಸಾಲಿಗೆ ಸೇರಿತು. 2018ರಲ್ಲಿ ರಷ್ಯಾದಲ್ಲಿ ನಡೆದ ವಿಶ್ವಕಪ್ ಟೂರ್ನಿಯ 16ರ ಘಟ್ಟದಲ್ಲಿ ಉರುಗ್ವೆ ತಂಡವು ಪೋರ್ಚುಗಲ್‌ಗೆ ಸೋಲುಣಿಸಿತ್ತು. ಅದೇ ರೀತಿಯ ಸಾಮರ್ಥ್ಯ ತೋರುವಲ್ಲಿ ತಂಡಕ್ಕೆ ಇಲ್ಲಿ ಸಾಧ್ಯವಾಗಲಿಲ್ಲ.

'ಮುಂದಿನ ಸುತ್ತಿಗೆ ಪ್ರವೇಶ ಪಡೆದಿದ್ದು ಮಹತ್ವದ್ದು. ಬಲಿಷ್ಠ ಎದುರಾಳಿಯನ್ನು ಸೋಲಿಸಿದ್ದು ಇನ್ನೂ ಮಹತ್ವದ್ದು. ಕೊನೆಯ ಪಂದ್ಯದಲ್ಲೂ ಗೆಲ್ಲಬೇಕಿದೆ' ಎಂದು ಫರ್ನಾಂಡಿಸ್ ಹೇಳಿದ್ದಾರೆ.

ಈ ಗುಂಪಿನಿಂದ ಉರುಗ್ವೆ ತಂಡಕ್ಕೂ ನಾಕೌಟ್ ಪ್ರವೇಶಿಸುವ ಅವಕಾಶವಿದೆ. ಗುಂಪಿನ ತನ್ನ ಕೊನೆಯ ಸೆಣಸಾಟದಲ್ಲಿ ಘಾನಾ ತಂಡವನ್ನು ಅದು ಮಣಿಸಬೇಕು.

ಅಂಗಣಕ್ಕೆ ನುಗ್ಗಿದ ಪ್ರತಿಭಟನಾಕಾರ

ಈ ವಿಶ್ವಕಪ್‌ನಲ್ಲಿ ಮೊದಲ ಬಾರಿ ಪ್ರತಿಭಟನಾಕಾರನೊಬ್ಬ ಅಂಗಣಕ್ಕೆ ನುಗ್ಗಿದ ಘಟನೆ ನಡೆಯಿತು. ಉರುಗ್ವೆ–ಪೋರ್ಚುಗಲ್ ಪಂದ್ಯದ ವೇಳೆ ಕಾಮನಬಿಲ್ಲಿನ ಧ್ವಜ ಹಿಡಿದಿದ್ದ ವ್ಯಕ್ತಿ ಅಂಗಣದೊಳಕ್ಕೆ ಓಡಿಬಂದ. ಆತನ ಟೀಶರ್ಟ್ ಮುಂಭಾಗದಲ್ಲಿ 'ಉಕ್ರೇನ್ ರಕ್ಷಿಸಿ' ಎಂದಿದ್ದರೆ, ಹಿಂಭಾಗದಲ್ಲಿ 'ಇರಾನಿ ಮಹಿಳೆಯರನ್ನು ಗೌರವಿಸಿ' ಎಂದು ಬರೆದಿತ್ತು.

ಭದ್ರತಾ ಸಿಬ್ಬಂದಿ ಕೂಡಲೇ ಪ್ರತಿಭಟನಾಕಾರರನ್ನು ಹಿಡಿದರು. ಈ ವೇಳೆ ಅಂಗಣದಲ್ಲಿ ಬಿದ್ದ ಧ್ವಜವನ್ನು ರೆಫರಿ ಎತ್ತಿಟ್ಟರು.

ಗುಂಪು 'ಎಚ್' ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ಅಂತರ	ಪಾಯಿಂಟ್
ಪೋರ್ಚುಗಲ್	2	2	0	0	3	6
ಘಾನಾ	2	1	0	1	0	3
ದ.ಕೊರಿಯಾ	2	0	1	1	-1	1
ಉರುಗ್ವೆ	2	0	1	1	-2	1

ಗೋಲುಗಳ ವಿವರ

ಪೋರ್ಚುಗಲ್- 2
ಬ್ರೂನೊ ಫರ್ನಾಂಡಿಸ್
(54ನೇ ಮತ್ತು 90+3 ನೇ ನಿ.)
ಉರುಗ್ವೆ-0

ಅರ್ಜೆಂಟೀನಾಗೆ ಗೆಲುವಿನ ವಿಶ್ವಾಸ

'ಸಿ' ಗುಂಪಿನಲ್ಲಿಂದು ರೋಚಕ ಹಣಾಹಣಿ ನಿರೀಕ್ಷೆ; ಪೋಲೆಂಡ್ ಸವಾಲು

ದೋಹಾ (ಎಪಿ): ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲಿ ಇಷ್ಟೊಂದು ಒತ್ತಡಕ್ಕೆ ಒಳಗಾಗಲಿದೆ ಎಂದು ಯಾರೂ ಊಹಿಸಿರಲಿಕ್ಕಿಲ್ಲ.

ಪ್ರಶಸ್ತಿ ಗೆಲ್ಲುವ 'ಫೇವರಿಟ್' ತಂಡಗಳಲ್ಲಿ ಒಂದಾಗಿರುವ ಅರ್ಜೆಂಟೀನಾ ಬುಧವಾರ ನಡೆಯಲಿರುವ 'ಸಿ' ಗುಂಪಿನ ಕೊನೆಯ ಪಂದ್ಯದಲ್ಲಿ ಪೋಲೆಂಡ್‌ನ ಸವಾಲು ಎದುರಿಸಲಿದ್ದು, ನಾಕೌಟ್ ಹಂತ ಪ್ರವೇಶಿಸಲು ಗೆಲುವು ಅನಿವಾರ್ಯ ಎನಿಸಿದೆ.

ಬುಧವಾರ ಕೊನೆಯ ಪಂದ್ಯ ಆಡಲಿರುವ 'ಸಿ' ಗುಂಪಿನ ಎಲ್ಲ ನಾಲ್ಕು ತಂಡಗಳೂ ನಾಕೌಟ್ ಪ್ರವೇಶಿಸುವ ಅವಕಾಶ ಹೊಂದಿವೆ. ಇನ್ನೊಂದು ಪಂದ್ಯದಲ್ಲಿ ಸೌದಿ ಅರೇಬಿಯಾ – ಪೋಲೆಂಡ್ ಎದುರಾಗಲಿವೆ.

ಪೋಲೆಂಡ್ ತಂಡ ನಾಲ್ಕು ಪಾಯಿಂಟ್‌ಗಳೊಂದಿಗೆ 'ಸಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ತಲಾ ಮೂರು ಪಾಯಿಂಟ್ಸ್ ಹೊಂದಿರುವ ಅರ್ಜೆಂಟೀನಾ ಮತ್ತು ಸೌದಿ ಅರೇಬಿಯಾ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನಗಳಲ್ಲಿವೆ. ಒಂದು ಪಾಯಿಂಟ್ ಗಳಿಸಿರುವ ಮೆಕ್ಸಿಕೊ ಕೊನೆಯ ಸ್ಥಾನದಲ್ಲಿದೆ.

ಮೊದಲ ಪಂದ್ಯದಲ್ಲಿ ಸೌದಿ ಅರೇಬಿಯಾ ಕೈಯಲ್ಲಿ 1–2 ರಲ್ಲಿ ಆಘಾತ ಅನುಭವಿಸಿದ್ದ ಮೆಸ್ಸಿ ಬಳಗ, ಎರಡನೇ ಪಂದ್ಯದಲ್ಲಿ ಪುಟಿದೆದ್ದು ನಿಂತು 2–0 ರಲ್ಲಿ ಮೆಕ್ಸಿಕೊ ತಂಡವನ್ನು ಮಣಿಸಿತ್ತು.

ಅರ್ಜೆಂಟೀನಾ ಬುಧವಾರ ಗೆದ್ದರೆ 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಡಲಿದೆ. ಡ್ರಾ ಸಾಧಿಸಿದರೆ, ನಾಕೌಟ್ ಪ್ರವೇಶಕ್ಕೆ ಸೌದಿ ಅರೇಬಿಯಾ– ಮೆಕ್ಸಿಕೊ ನಡುವಿನ ಪಂದ್ಯದ ಫಲಿತಾಂಶವನ್ನು ಅವಲಂಬಿಸಬೇಕಾಗುತ್ತದೆ.



ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ (ಎಡ) ಹಾಗೂ ರಾಡ್ರಿಗೊ ಡಿ ಪಾಲ್ –ಎಎಫ್‌ಪಿ ಚಿತ್ರ

ಅರ್ಜೆಂಟೀನಾ ತಂಡ ಮೆಸ್ಸಿ ಅವರನ್ನು ನೆಚ್ಚಿಕೊಂಡಿರುವಂತೆಯೇ ಪೋಲೆಂಡ್ ತಂಡ 34 ವರ್ಷದ ರಾಬರ್ಟ್ ಲೆವಂಡೊವ್‌ಸ್ಕಿ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದೆ. ಈ ಪಂದ್ಯ ಮೆಸ್ಸಿ– ಲೆವಂಡೊವ್‌ಸ್ಕಿ ನಡುವಿನ ಪೈಪೋಟಿಯ ಕಾರಣ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ.

ಲುಸೈಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಸೌದಿ ಅರೇಬಿಯಾ– ಮೆಕ್ಸಿಕೊ ಪಂದ್ಯ ಕೂಡಾ ಫುಟ್‌ಬಾಲ್ ಪ್ರೇಮಿಗಳ ಗಮನ ಸೆಳೆಯಲಿದೆ. ಮೆಕ್ಸಿಕೊ ತಂಡ ತಾನಾಡಿದ ಕೊನೆಯ ಏಳು ವಿಶ್ವಕಪ್ ಟೂರ್ನಿಗಳಲ್ಲೂ ನಾಕೌಟ್‌ಗೆ ತೇರ್ಗಡೆಯಾಗಿತ್ತು. ಆದರೆ ಈ ಬಾರಿ ಗುಂಪು ಹಂತದಲ್ಲೇ ನಿರ್ಗಮಿಸುವ ಅಪಾಯಕ್ಕೆ ಸಿಲುಕಿದೆ.

ಸೌದಿ ಅರೇಬಿಯಾ ತಂಡ 1994 ರಲ್ಲಿ ತನ್ನ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲಿ ನಾಕೌಟ್ ಹಂತ ಪ್ರವೇಶಿಸಿದ್ದನ್ನು ಬಿಟ್ಟರೆ, ಆ ಬಳಿಕ ಗುಂಪು ಹಂತದಿಂದ ಮೇಲೆ ಬಂದಿಲ್ಲ. ಈ ಬಾರಿ ಪ್ರಿ ಕ್ವಾರ್ಟರ್‌ಗೆ ಲಗ್ಗೆಯಿಡುವ ವಿಶ್ವಾಸ ಹೊಂದಿದೆ.

ಇಂದಿನ ಪಂದ್ಯ

ಪಂದ್ಯ	ಸಮಯ
ಆಸ್ಟ್ರೇಲಿಯಾ Vs ಡೆನ್ಮಾರ್ಕ್	ರಾತ್ರಿ 8.30
ಟುನೀಷಿಯಾ Vs ಫ್ರಾನ್ಸ್	ರಾತ್ರಿ 8.30
ಪೋಲೆಂಡ್ Vs ಅರ್ಜೆಂಟೀನಾ	ತಡರಾತ್ರಿ 12.30
ಸೌದಿ ಅರೇಬಿಯಾ Vs ಮೆಕ್ಸಿಕೊ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಈಕ್ವೆಡಾರ್‌ಗೆ ನಿರಾಸೆ; 3 ಪಂದ್ಯಗಳಲ್ಲೂ ಸೋತ ಕತಾರ್

ನೆದರ್ಲೆಂಡ್ಸ್, ಸೆನೆಗಲ್ ಅರ್ಹತೆ

ದೋಹಾ (ರಾಯಿಟರ್ಸ್): ಕೊನೆಯ ಲೀಗ್ ಪಂದ್ಯಗಳಲ್ಲಿ ಗೆಲುವು ಪಡೆದ ನೆದರ್ಲೆಂಡ್ಸ್ ಮತ್ತು ಸೆನೆಗಲ್ ತಂಡಗಳು ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 'ಎ' ಗುಂಪಿನಿಂದ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡವು.

ಖಲೀಫಾ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಮಾಡು ಇಲ್ಲವೇ ಮಡಿ' ಪಂದ್ಯದಲ್ಲಿ ಸೆನೆಗಲ್ 2–1 ಗೋಲುಗಳಿಂದ ಈಕ್ವೆಡಾರ್ ತಂಡವನ್ನು ಮಣಿಸಿತು. ಅಲ್‌ಬೈತ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ 2–0 ಗೋಲುಗಳಿಂದ ಆತಿಥೇಯ ಕತಾರ್ ತಂಡವನ್ನು ಪರಾಭವಗೊಳಿಸಿತು.

ಎಲ್ಲ ಮೂರು ಪಂದ್ಯಗಳನ್ನು ಆಡಿದ ನೆದರ್ಲೆಂಡ್ಸ್ ಏಳು ಪಾಯಿಂಟ್ಸ್‌ಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಸೆನೆಗಲ್ ಆರು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಗಳಿಸಿತು. ಕೊನೆಯ ಎರಡು ಸ್ಥಾನಗಳನ್ನು ಪಡೆದ ಈಕ್ವೆಡಾರ್ ಮತ್ತು ಕತಾರ್ ತಂಡಗಳು ಟೂರ್ನಿಯಿಂದ ಹೊರಬಿದ್ದವು.

ಸೆನೆಗಲ್ ತಂಡದ ಕಲೀದು ಕೊಲಿಬಾಲಿ (ಎಡ) ಅವರು ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ರೋಚಕ ಹೋರಾಟ: 16ರ ಘಟ್ಟಕ್ಕೆ ಪ್ರವೇಶಿಸಲು ಈ ಪಂದ್ಯದಲ್ಲಿ ಸೆನೆಗಲ್‌ಗೆ ಗೆಲುವು ಅನಿವಾರ್ಯವಾಗಿದ್ದರೆ, ಈಕ್ವೆಡಾರ್‌ಗೆ ಕನಿಷ್ಠ ಡ್ರಾ ಮಾಡಿದ್ದರೆ ಸಾಕಿತ್ತು. ಪ್ರಬಲ ಪೈಪೋಟಿ ನಡೆದ ಪಂದ್ಯದಲ್ಲಿ ವಿಂಗರ್ ಇಸ್ಮಾಯಿಲಾ ಸರ್ ಅವರು 44 ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೋಲು ಗಳಿಸಿ ಸೆನೆಗಲ್‌ಗೆ ಮುನ್ನಡೆ ತಂದುಕೊಟ್ಟರು.

ಎರಡನೇ ಅವಧಿಯ ಆರಂಭದಲ್ಲಿ ಮರುಹೋರಾಟ ನಡೆಸಿದ ಈಕ್ವೆಡಾರ್ ತಂಡ ಮೊಯ್ಸೆಸ್ ಕೈಸೆಡೊ 67ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಸಮಬಲ ಸಾಧಿಸಿತು.

ಆದರೆ 70ನೇ ನಿಮಿಷದಲ್ಲಿ ನಾಯಕ ಕಲೀದು ಕೊಲಿಬಾಲಿ ಅವರು ಗೋಲು ಗಳಿಸಿ ಸೆನೆಗಲ್ ತಂಡಕ್ಕೆ ಮತ್ತೆ ಮುನ್ನಡೆ ತಂದುಕೊಟ್ಟರು. ಈಕ್ವೆಡಾರ್ ತಂಡ ಸಮಬಲದ ಗೋಲಿಗೆ ಕಠಿಣ ಪ್ರಯತ್ನ ನಡೆಸಿತಾದರೂ ಯಶಸ್ಸು ಲಭಿಸಲಿಲ್ಲ.

ಗಾಕ್ಪೊ ಮಿಂಚು: ನೆದರ್ಲೆಂಡ್ಸ್ ತಂಡ ಕತಾರ್ ವಿರುದ್ಧ ಪೂರ್ಣ ಮೇಲುಗೈ ಸಾಧಿಸಿತು. ಕೋಡಿ ಗಾಕ್ಪೊ ಅವರು 26ನೇ ನಿಮಿಷದಲ್ಲಿ ತಮ್ಮ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಟೂರ್ನಿಯಲ್ಲಿ ಅವರು ಗಳಿಸಿದ ಮೂರನೇ ಗೋಲು ಇದು. ಫ್ರೆಂಕಿ ಡಿ ಜಾಂಗ್ (49ನೇ ನಿ.) ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಅತಿಥೇಯ ತಂಡ ಎಲ್ಲ ಮೂರೂ ಪಂದ್ಯಗಳನ್ನು ಸೋತಿತು.

ಗುಂಪು 'ಎ' ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ಅಂತರ	ಪಾಯಿಂಟ್
ನೆದರ್ಲೆಂಡ್ಸ್	3	2	1	0	4	7
ಸೆನೆಗಲ್	3	2	0	1	1	6
ಈಕ್ವೆಡಾರ್	3	1	1	1	1	4
ಕತಾರ್	3	0	0	3	-6	0

ಒನಾನಾ ಅಮಾನತು

ದೋಹಾ (ರಾಯಿಟರ್ಸ್): ಕ್ಯಾಮರೂನ್ ಫುಟ್‌ಬಾಲ್ ತಂಡದ ಮೊದಲ ಆಯ್ಕೆಯ ಗೋಲ್‌ಕೀಪರ್ ಆ್ಯಂಡ್ರೆ ಒನಾನಾ ಅವರನ್ನು ಅಶಿಸ್ತು ಕಾರಣ ನೀಡಿ ಅಮಾನತು ಮಾಡಲಾಗಿದೆ.

ಒನಾನಾ

ರಾಷ್ಟ್ರೀಯ ತಂಡದಿಂದ ಒನಾನಾ ಅವರನ್ನು ಅಮಾನತು ಮಾಡಲಾಗಿದೆ ಎಂದು ಕ್ಯಾಮರೂನ್‌ನ ರಾಷ್ಟ್ರೀಯ ಫೆಡರೇಷನ್ ಸೋಮವಾರ ತಿಳಿಸಿದೆ.

ಸೋಮವಾರ ಸರ್ಬಿಯಾ ಎದುರಿನ ಪಂದ್ಯದ ವೇಳೆ ಒನಾನಾ ತಂಡವನ್ನು ತೊರೆದಿದ್ದರು. ತಂಡದ ಪಟ್ಟಿಯಲ್ಲಿ ಅವರನ್ನು 'ಗೈರುಹಾಜರಿ' ಎಂದು ಉಲ್ಲೇಖಿಸಲಾಗಿತ್ತು. ಮುಖ್ಯ ಕೋಚ್ ರಿಗೊಬರ್ಟ್ ಸಾಂಗ್ ಅವರು ' ಒನಾನಾ ಅವರು ವೈಯಕ್ತಿಕ ಸಂಗತಿಗಿಂತ ತಂಡಕ್ಕೆ ಆದ್ಯತೆ ನೀಡಬೇಕು' ಎಂದಿದ್ದರು.

'400 ರಿಂದ 500 ಕಾರ್ಮಿಕರ ಸಾವು'

ದೋಹಾ (ಎಪಿ): ವಿಶ್ವಕಪ್ ಟೂರ್ನಿಗಾಗಿ ಅತ್ಯಾಧುನಿಕ ಕ್ರೀಡಾಂಗಣ ಸೇರಿ ವಿವಿಧ ಕಾಮಗಾರಿಗಳ ವೇಳೆ ಅಂದಾಜು 400–500 ವಲಸೆ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಟೂರ್ನಿ ಆಯೋಜನಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬ್ರಿಟಿಷ್ ಪತ್ರಕರ್ತ ಪಿಯರ್ಸ್ ಮಾರ್ಗನ್ ಅವರು ನಡೆಸಿದ ಸಂದರ್ಶನದಲ್ಲಿ ಟೂರ್ನಿಯ ವ್ಯವಸ್ಥಾಪಕ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಸನ್ ಅಲ್ ತವಾದಿ ಈ ಮಾತುಗಳನ್ನಾಡಿದ್ದಾರೆ.

ಕೊನೆ ಪಂದ್ಯದಲ್ಲೂ ಮಳೆಯಾಟದ ಸಾಧ್ಯತೆ

ಕಿವೀಸ್ ವಿರುದ್ಧದ ಏಕದಿನ ಕ್ರಿಕೆಟ್: ಸರಣಿ ಸಮಬಲದತ್ತ ಭಾರತ ತಂಡದ ಚಿತ್ತ

ಕ್ರೈಸ್ಟ್‌ಚರ್ಚ್ (ಪಿಟಿಐ): ಬುಧವಾರ ಇಲ್ಲಿ ನಡೆಯಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಮೂರನೇ ಹಾಗೂ ಕೊನೆಯ ಏಕದಿನ ಪಂದ್ಯಕ್ಕೂ ಮಳೆ ಅಡ್ಡಿಯಾಗುವ ಸಾಧ್ಯತೆ ಇದೆ.

ಸರಣಿಯ ಮೊದಲ ಪಂದ್ಯದಲ್ಲಿ ಸೋತಿರುವ ಭಾರತ ತಂಡವು ಎರಡನೇ ಪಂದ್ಯದಲ್ಲಿ ಗೆದ್ದು ಸಮಬಲ ಸಾಧಿಸುವ ಆಸೆಯು ಮಳೆಯಲ್ಲಿ ಕೊಚ್ಚಿಹೋಗಿತ್ತು. ಆದ್ದರಿಂದ ಮೂರನೇ ಪಂದ್ಯ ನಡೆದರೆ ಸರಣಿ ಸೋಲಿನಿಂದ ತಪ್ಪಿಸಿಕೊಳ್ಳಲು ಒಂದು ಅವಕಾಶ ಶಿಖರ್ ಧವನ್ ಬಳಗಕ್ಕೆ ಲಭಿಸಲಿದೆ. ಅಲ್ಲದೇ ಆತಿಥೇಯರಿಗೂ ಜಯದ ಅವಕಾಶ ಸಿಗಲಿದ್ದು, ಟಿ20 ಸರಣಿ ಸೋಲಿನ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ.

ಟಿ20 ಸರಣಿಯಲ್ಲಿಯೂ ಮಳೆಯ ಆಟವೇ ಹೆಚ್ಚು ನಡೆದಿತ್ತು. ಮೊದಲ ಪಂದ್ಯವು ರದ್ದಾಗಿತ್ತು. ಎರಡನೇಯದ್ದರಲ್ಲಿ ಭಾರತ ಜಯಿಸಿತ್ತು. ಮೂರನೇ ಪಂದ್ಯಕ್ಕೂ ಮಳೆ ತಡೆಯೊಡ್ಡಿದ್ದಾಗ ಡಕ್ವರ್ತ್ –ಲೂಯಿಸ್ ನಿಯಮದಲ್ಲಿ ಟೈ ಆಗಿತ್ತು. ಅದರಿಂದಾಗಿ ಭಾರತಕ್ಕೆ ಸರಣಿ ಒಲಿದಿತ್ತು.

ಭಾರತ ತಂಡದ ನಾಯಕ ಶಿಖರ್ ಧವನ್

ಆದರೆ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಮೂನ್ನೂರಕ್ಕೂ ಹೆಚ್ಚು ರನ್‌ಗಳ ಗುರಿ ನೀಡಿದ್ದ ಭಾರತ ತಂಡ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಟಾಮ್ ಲಥಾಮ್ ಶತಕ ಹೊಡೆದು ತಮ್ಮ ತಂಡವನ್ನು ಗೆಲ್ಲಿಸಿದ್ದರು.

ಈ ಪಂದ್ಯದಲ್ಲಿಯೂ ಉಭಯ ತಂಡಗಳು ಯಾವುದೇ ಬದಲಾವಣೆ ಇಲ್ಲದೇ ಕಣಕ್ಕಿಳಿಯುವ ಸಾಧ್ಯತೆ ಇದೆ.

ತಂಡಗಳು: ಶಿಖರ್ ಧವನ್ (ನಾಯಕ), ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ರಿಷಭ್ ಪಂತ್, ಸಂಜು ಸ್ಯಾಮ್ಸನ್ (ಇಬ್ಬರೂ ವಿಕೆಟ್‌ಕೀಪರ್), ದೀಪಕ್ ಹೂಡಾ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ದೀಪಕ್ ಚಾಹರ್, ಅರ್ಷದೀಪ್ ಸಿಂಗ್, ಶಾರ್ದೂಲ್ ಠಾಕೂರ್, ಉಮ್ರಾನ್ ಮಲಿಕ್.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಫಿನ್ ಅಲೆನ್, ಡೆವೊನ್ ಕಾನ್ವೆ, ಟಾಮ್ ಲಥಾಮ್, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಬ್ರೇಸ್‌ವೆಲ್, ಟಿಮ್ ಸೌಥಿ, ಮ್ಯಾಟ್ ಹೆನ್ರಿ, ಆ್ಯಡಂ ಮಿಲ್ನೆ, ಜಿಮ್ಮಿ ನಿಶಾಮ್, ಸ್ಯಾಂಟನರ್, ಲಾಕಿ ಫರ್ಗ್ಯುಸನ್.

ಪಂದ್ಯ ಆರಂಭ: ಬೆಳಿಗ್ಗೆ 7

ನೇರಪ್ರಸಾರ: ಅಮೆಜಾನ್ ಪ್ರೈಮ್

ನಾಳೆಯಿಂದ ಅಖಿಲ ಭಾರತ ಅಂಗವಿಕಲರ ಚೆಸ್

ಬೆಂಗಳೂರು: ತುಮಕೂರು ಜಿಲ್ಲಾ ಚೆಸ್ ಸಂಸ್ಥೆ ಹಾಗೂ ಎಂಎಂ ಚೆಸ್ ಡೆವಲಪ್‌ಮೆಂಟ್ ಟ್ರಸ್ಟ್ ವತಿಯಿಂದ ಅಖಿಲ ಭಾರತ 3ನೇ ಅಂಗವಿಕಲರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್ ಡಿ. 1 ರಿಂದ 4ರವರೆಗೆ ತುಮಕೂರಿನ ಶಿರಾ ರಸ್ತೆಯ ಶ್ರೀದೇವಿ ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದೆ.

ರಾಷ್ಟ್ರಮಟ್ಟದ ಅಂಗವಿಕಲರ ಚೆಸ್ ಫೆಡರೇಷನ್ ಸಂಸ್ಥೆಯು(ಸಿಎಫ್‌ಪಿಡಿ) ಕರ್ನಾಟಕ ರಾಜ್ಯಕ್ಕೆ ಮೊದಲ ಬಾರಿಗೆ ಅಂಗವಿಕಲರ ಚೆಸ್ ಚಾಂಪಿಯನ್‌ಷಿಪ್ ಆಯೋಜನೆಗೆ ಅವಕಾಶ ಕಲ್ಪಿಸಿದೆ. ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ ಶೇ.50ಕ್ಕೂ ಹೆಚ್ಚಿನ ವಿಕಲತೆಯುಳ್ಳ ಸುಮಾರು 150 ಮಂದಿ ಚೆಸ್ ಪಟುಗಳು ಭಾಗವಹಿಸಲಿದ್ದು ಇಲ್ಲಿ ವಿಜೇತರಾದವರು ಕಾಮನ್‌ವೆಲ್ತ್, ಒಲಂಪಿಯಾಡ್‌ಗಳಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ ಎಂದು ಆಯೋಜಕರಾದ ರಾಜ್ಯ ಚೆಸ್ ಸಂಸ್ಥೆಯ ಉಪಾಧ್ಯಕ್ಷ ಹಾಗೂ ತುಮಕೂರು ಜಿಲ್ಲಾ ಸಂಸ್ಥೆಯ ಅಧ್ಯಕ್ಷ ಟಿ.ಎನ್.ಮಧುಕರ್ ತಿಳಿಸಿದ್ದಾರೆ.

ಹಾಕಿ ಟ್ರಯಲ್ಸ್ ಡಿ.2ರಿಂದ

ಬೆಂಗಳೂರು: ಒಡಿಶಾದ ಭುವನೇಶ್ವರದಲ್ಲಿ ನಡೆಯಲಿರುವ ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದ ಸಿದ್ಧತೆಗಾಗಿ ಕರ್ನಾಟಕ 18 ವರ್ಷದೊಳಗಿನ ಬಾಲಕಿಯರ ಹಾಕಿ ತಂಡದ ಆಯ್ಕೆಗಾಗಿ ಡಿಸೆಂಬರ್ 2ರಂದು ಟ್ರಯಲ್ಸ್ ನಡೆಯಲಿದೆ.

ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅರೆನಾದಲ್ಲಿ ಬೆಳಿಗ್ಗೆ 9.30ರಿಂದ ಟ್ರಯಲ್ಸ್ ನಡೆಯಲಿದೆ ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟ ಡಿಸೆಂಬರ್ 20ರಿಂದ 30ರವರೆಗೆ ನಡೆಯಲಿದೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಸೆಮಿಫೈನಲ್

ಕರ್ನಾಟಕ–ಸೌರಾಷ್ಟ್ರ ಹಣಾಹಣಿ

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ತಂಡಕ್ಕೆ ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟ್ರೋಫಿ ಮುಡಿಗೇರಿಸಿಕೊಳ್ಳಬೇಕಾದರೆ ಇನ್ನೆರಡು ಕಠಿಣ ಸವಾಲುಗಳನ್ನು ಮೀರಿ ನಿಲ್ಲಬೇಕಿದೆ.

ಈ ಹಾದಿಯ ಮೊದಲ ಸವಾಲು ಬುಧವಾರದ ಸೆಮಿಫೈನಲ್. ಅನುಭವಿ ಆಟಗಾರ ಜೈದೇವ್ ಉನದ್ಕತ್ ನಾಯಕತ್ವದ ಸೌರಾಷ್ಟ್ರ ತಂಡವನ್ನು ಕರ್ನಾಟಕ ಎದುರಿಸಬೇಕಿದೆ. ಐದನೇ ಪ್ರಶಸ್ತಿ ಜಯಿಸುವ ಛಲದಲ್ಲಿ ಕರ್ನಾಟಕ ತಂಡವಿದೆ.

ಟೂರ್ನಿಯುದ್ದಕ್ಕೂ ಮಿಂಚಿರುವ ಅನುಭವಿ ಬ್ಯಾಟರ್ ಸಮರ್ಥ್ ಹಾಗೂ ನವಪ್ರತಿಭೆ ನಿಕಿನ್ ಜೋಸ್ ಅವರ ಆಟದಿಂದ ಬ್ಯಾಟಿಂಗ್ ಪಡೆಯ ಆತ್ಮವಿಶ್ವಾಸ ಹೆಚ್ಚಿದೆ. ನಿಕಿನ್ ಒಂಬತ್ತು ಪಂದ್ಯಗಳಿಂದ 438 ರನ್‌ಗಳನ್ನು ಗಳಿಸಿದ್ದಾರೆ. ಆರಂಭಿಕ ಸಮರ್ಥ್, ಮಧ್ಯಮ ಕ್ರಮಾಂಕದಲ್ಲಿ ಮನೀಷ್ ಪಾಂಡೆ ಉತ್ತಮ ಲಯದಲ್ಲಿದ್ದಾರೆ. ಮನೋಜ್ ಭಾಂಡಗೆ ಹಾಗೂ ಶ್ರೇಯಸ್ ಗೋಪಾಲ್ ಅಂತಿಮ ಹಂತದ ಓವರ್‌ಗಳಲ್ಲಿ ತಂಡಕ್ಕೆ ಆಸರೆಯಾಗಿದ್ದಾರೆ.

ಮನೀಷ್ ಪಾಂಡೆ ಮತ್ತು ಜೈದೇವ್

ಶ್ರೇಯಸ್ ಬೌಲಿಂಗ್‌ನಲ್ಲಿಯೂ ಉತ್ತಮ ಲಯದಲ್ಲಿದ್ದಾರೆ. ಮಧ್ಯಮವೇಗಿ ವಾಸುಕಿ ಕೌಶಿಕ್ ಒಟ್ಟು 17 ವಿಕೆಟ್‌ಗಳನ್ನು ಗಳಿಸಿದ್ದು, ಟೂರ್ನಿಯ ಬೌಲರ್‌ಗಳ ಪಟ್ಟಿಯಲ್ಲ ಅಗ್ರಸ್ಥಾನದಲ್ಲಿದ್ದಾರೆ. ಯುವಪ್ರತಿಭೆ ವಿದ್ವತ್ ಕಾವೇರಪ್ಪ ಕೂಡ ಗಮನ ಸೆಳೆದಿದ್ದಾರೆ.

ಕರ್ನಾಟಕದ ಬೌಲಿಂಗ್ ಪಡೆಗೆ ಸೌರಾಷ್ಟ್ರದ ಶೆಲ್ಡನ್ ಜಾಕ್ಸನ್, ಹರ್ವಿಕ್ ದೇಸಾಯಿ, ಅರ್ಪಿತ್ ವಸವದಾ ಹಾಗೂ ಚಿರಾಗ್ ಜಾನಿ ಅವರನ್ನು ನಿಯಂತ್ರಿಸುವ ಸವಾಲು ಇದೆ. ಚೇತೇಶ್ವರ್ ಪೂಜಾರ ಬಾಂಗ್ಲಾದಲ್ಲಿ ನಡೆಯುತ್ತಿರುವ 'ಟೆಸ್ಟ್' ಸರಣಿಯ ಎರಡನೇ ಪಂದ್ಯದಲ್ಲಿ ಭಾರತ 'ಎ' ತಂಡವನ್ನು ಪ್ರತಿನಿಧಿಸಲಿದ್ದಾರೆ. ಆದ್ದರಿಂದ ಅವರು ಈ ಪಂದ್ಯದಲ್ಲಿ ಆಡುವ ಕುರಿತು ಇನ್ನೂ ಖಚಿತ ವಾಗಿಲ್ಲ. ಎಂಟರ ಘಟ್ಟದಲ್ಲಿ ಸೌರಾಷ್ಟ್ರ ತಂಡವು ತಮಿಳುನಾಡು ಎದುರು ಜಯಿಸಲು ದೇಸಾಯಿ, ಚಿರಾಗ್ ಮತ್ತು ಅರ್ಪಿತ್ ಅವರ ಅರ್ಧಶತಕಗಳು ಕಾರಣವಾಗಿದ್ದವು.

ಬುಧವಾರ ನಡೆಯಲಿರುವ ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಮಹಾರಾಷ್ಟ್ರ ಮತ್ತು ಅಸ್ಸಾಂ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯವು ನರೇಂದ್ರ ಮೋದಿ ಕ್ರೀಡಾಂಗಣದ 'ಬಿ' ಮೈದಾನದಲ್ಲಿ ನಡೆಯಲಿದೆ.

ಆರಂಭ: ಬೆಳಿಗ್ಗೆ 9

ಪ್ರೊ ಕಬಡ್ಡಿ: ಪ್ರತೀಕ್ ಪರಾಕ್ರಮ

ಹೈದರಾಬಾದ್: ಆಲ್‌ರೌಂಡರ್ ಪ್ರತೀಕ್ ದಹಿಯಾ ಗಳಿಸಿದ ಅಮೋಘ 19 ಪಾಯಿಂಟ್ಸ್ ಬಲದಿಂದ ಗುಜರಾತ್ ಜೈಂಟ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಇಲ್ಲಿಯ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಗುಜರಾತ್ 51–39ರಿಂದ ಪುಣೇರಿ ಪಲ್ಟನ್ ತಂಡಕ್ಕೆ ಆಘಾತ ನೀಡಿತು.

ರೇಡಿಂಗ್‌ನಲ್ಲಿ 18 ಪಾಯಿಂಟ್ಸ್ ಕಲೆಹಾಕಿದ ಪ್ರತೀಕ್, ಟ್ಯಾಕಲ್‌ನಲ್ಲಿ ಒಂದು ಪಾಯಿಂಟ್ಸ್ ಗಳಿಸಿದರು. ಸೋನು (6) ಮತ್ತು ಅರ್ಕಂ ಶೇಖ್ (5) ಗೆಲುವಿಗೆ ಕೊಡುಗೆ ನೀಡಿದರು.

ಪುಣೇರಿ ಪರ ಆಕಾಶ್ ಶಿಂಧೆ (9), ಪಂಕಜ್ ಮೋಹಿತೆ (7) ಮತ್ತು ಅಸ್ಲಂ ಇನಾಂದಾರ್ (6) ಉತ್ತಮ ಆಟವಾಡಿ ಗಮನ ಸೆಳೆದರು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	19	12	5	2	69
ಜೈಪುರ	18	12	6	0	64
ಬೆಂಗಳೂರು	18	11	6	1	63
ಯುಪಿ	18	10	6	2	60
ತಲೈವಾಸ್	18	8	7	3	53
ಡೆಲ್ಲಿ	18	9	9	0	51

ಮೊದಲಾರ್ಧದಲ್ಲಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು. ಈ ಅವಧಿಯಲ್ಲಿ ಪುಣೇರಿ 22–21ರಿಂದ ಮುಂದಿತ್ತು. ಆದರೆ ದ್ವಿತೀಯಾರ್ಧದಲ್ಲಿ ಗುಜರಾತ್ (30–17) ಪ್ರಾಬಲ್ಯ ಮೆರೆಯಿತು.

ದಿನದ ಮತ್ತೊಂದು ಹಣಾಹಣಿಯಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 35–33ರಿಂದ ಯು ಮುಂಬಾ ತಂಡವನ್ನು ಸೋಲಿಸಿತು. ಹರಿಯಾಣದ ಮಂಜೀತ್ ಮತ್ತು ಮೋಹಿತ್ ನಂದಾಲ್ ತಲಾ ಏಳು ಪಾಯಿಂಟ್ಸ್ ಗಳಿಸಿದರು.

ಇಂದಿನ ಪಂದ್ಯಗಳು
ಬೆಂಗಳೂರು ಬುಲ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್
ದಬಾಂಗ್ ಡೆಲ್ಲಿ– ತಮಿಳ್ ತಲೈವಾಸ್

ರೋಜರ್ ಬಿನ್ನಿ

ಹಿತಾಸಕ್ತಿ ಸಂಘರ್ಷ ಬಿಸಿಸಿಐ ಅಧ್ಯಕ್ಷ ಬಿನ್ನಿಗೆ ನೋಟಿಸ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ರೋಜರ್ ಬಿನ್ನಿ ಅವರು ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘಿಸಿದ್ದಾರೆಂದು ನೀತಿ ಅಧಿಕಾರಿ ನೋಟಿಸ್ ಜಾರಿ ಮಾಡಿದ್ದಾರೆ. ಡಿಸೆಂಬರ್ 20ರೊಳಗೆ ವಿವರಣೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

'ಬಿನ್ನಿ ಅವರ ಸೊಸೆ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತ ತವರಿನಲ್ಲಿ ಆಡುವ ಕೆಲವು ಸರಣಿಗಳ ನೇರಪ್ರಸಾರದ ಹಕ್ಕುಗಳನ್ನು ಸ್ಟಾರ್ ಹೊಂದಿದೆ. ಇದು ಹಿತಾಸಕ್ತಿ ಸಂಘರ್ಷ' ಎಂದು ಮಧ್ಯಪ್ರದೇಶದ ಸಂಜೀವ್ ಗುಪ್ತಾ ದೂರು ಸಲ್ಲಿಸಿದ್ದಾರೆ.

'ಬಿಸಿಸಿಐ ನಿಯಮ 39(2)(ಬಿ) ಅಡಿಯಲ್ಲಿ ದೂರು ಸ್ವೀಕರಿಸಲಾಗಿದೆ. ತಾವು 38 (1) (ಐ) ಮತ್ತು 38 (2) ನಿಯಮವನ್ನು ಉಲ್ಲಂಘಿಸಿದ್ದೀರಿ. ಇದು ಹಿತಾಸಕ್ತಿ ಸಂಘರ್ಷವಾಗಿದೆ' ಎಂದು ನೀತಿ ಅಧಿಕಾರಿ ವಿನೀತ್ ಸರನ್ ಅವರು ಬಿನ್ನಿಯವರಿಗೆ ನೋಟಿಸ್ ನೀಡಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ 67 ವರ್ಷದ ಬಿನ್ನಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. 1983ರಲ್ಲಿ ವಿಶ್ವಕಪ್ ಜಯಿಸಿದ ಭಾರತ ತಂಡದ ಆಲ್‌ರೌಂಡರ್ ಆಗಿ ಗಮನ ಸೆಳೆದಿದ್ದರು.

ಸೌರಭ್, ಸೈನಿ ದಾಳಿಗೆ ಕುಸಿದ ಬಾಂಗ್ಲಾ 'ಎ'

ಕಾಕ್ಸ್ ಬಜಾರ್, ಬಾಂಗ್ಲಾದೇಶ (ಪಿಟಿಐ): ಮಧ್ಯಮವೇಗಿ ನವದೀಪ್ ಸೈನಿ ಮತ್ತು ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಅವರ ದಾಳಿಯ ಮುಂದೆ ಬಾಂಗ್ಲಾದೇಶ ಎ ತಂಡವು ಕುಸಿಯಿತು. ಮಂಗಳವಾರ ಇಲ್ಲಿ ಆರಂಭವಾದ 'ಟೆಸ್ಟ್'ನಲ್ಲಿ ಭಾರತ ಎ ತಂಡವು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಶೇಖ್ ಕಮಾಲ್ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಎ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸೈನಿ (21ಕ್ಕೆ3) ಹಾಗೂ ಸೌರಭ್ (23ಕ್ಕೆ4) ಅವರ ಪರಿಣಾಮಕಾರಿ ದಾಳಿಯಿಂದಾಗಿ ಆತಿಥೇಯ ತಂಡವು 45 ಓವರ್‌ಗಳಲ್ಲಿ 112 ರನ್ ಗಳಿಸಿ ಆಲೌಟ್ ಆಯಿತು.

ನವದೀಪ್ ಸೈನಿ

ಅದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿರುವ ಭಾರತ 'ಎ' ತಂಡವು ದಿನದಾಟದ ಅಂತ್ಯಕ್ಕೆ 36 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 120 ರನ್ ಗಳಿಸಿದೆ. ಆರಂಭಿಕ ಬ್ಯಾಟರ್‌ಗಳಾದ ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 61; 106ಎ, 4X8) ಮತ್ತು ನಾಯಕ ಅಭಿಮನ್ಯು ಈಶ್ವರನ್ (ಬ್ಯಾಟಿಂಗ್ 53; 111ಎ, 4X6) ತಂಡಕ್ಕೆ ಇನಿಂಗ್ಸ್ ಮುನ್ನಡೆಯ ಕಾಣಿಕೆ ನೀಡಿದರು. ತಂಡವು ಎಂಟು ರನ್‌ಗಳ ಮುನ್ನಡೆ ಪಡೆದುಕೊಂಡಿದೆ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 45 ಓವರ್‌ಗಳಲ್ಲಿ 112 (ಮೊಸಾದಿಕ್ ಹುಸೇನ್ 63, ಮುಕೇಶ್ ಕುಮಾರ್ 25ಕ್ಕೆ2, ನವದೀಪ್ ಸೈನಿ 21ಕ್ಕೆ3, ಸೌರಭ್ ಕುಮಾರ್ 23ಕ್ಕೆ4) ಭಾರತ ಎ: 36 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 120 (ಯಶಸ್ವಿ ಜೈಸ್ವಾಲ್ ಔಟಾಗದೆ 61, ಅಭಿಮನ್ಯು ಈಶ್ವರನ್ ಔಟಾಗದೆ 53)

ಸಂಕ್ಷಿಪ್ತ ಸುದ್ದಿ

ವಿಶ್ವ ಚೆಸ್ ಬಾಕ್ಸಿಂಗ್: ಆರ್ಯನ್‌ಗೆ ಚಿನ್ನ

ಬೆಂಗಳೂರು: ನಗರದ ಆರ್ಯನ್ ಸೂರ್ಯ ಅವರು ಟರ್ಕಿಯ ಅಂತಾಲ್ಯದಲ್ಲಿ ಇತ್ತೀಚೆಗೆ ನಡೆದ 4ನೇ ವಿಶ್ವ ಚೆಸ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಕೆಡೆಟ್ ಬಾಲಕರ (60 ಕೆ.ಜಿ.) ವಿಭಾಗದಲ್ಲಿ ಚಿನ್ನ ಗೆದ್ದರು.

ಆರ್ಯನ್

ಜೈನ್ ಹೆರಿಟೇಜ್ ಶಾಲೆಯ 8ನೇ ತರಗತಿ ವಿದ್ಯಾರ್ಥಿಯಾಗಿರುವ ಅವರು ಇದೇ ಚಾಂಪಿಯನ್‌ಷಿಪ್‌ನ 18 ವರ್ಷದೊಳಗಿನವರ ವಿಭಾಗದಲ್ಲಿ ಬೆಳ್ಳಿ ಹಾಗೂ ಮುಕ್ತ ವಿಭಾಗದಲ್ಲಿ ಕಂಚಿನ ಪದಕವನ್ನೂ ಜಯಿಸಿದರು.

ಚೆಸ್ ಆಡಿದ ಬಳಿಕ ಎದುರಾಳಿಯ ವಿರುದ್ಧ ಬಾಕ್ಸಿಂಗ್ ಕೂಡಾ ಮಾಡುವ 'ಚೆಸ್ ಬಾಕ್ಸಿಂಗ್' ಕ್ರೀಡೆ ವಿದೇಶಗಳಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿದ್ದು, ಇತ್ತೀಚಿನ ದಿನಗಳಲ್ಲಿ ಭಾರತದಲ್ಲೂ ಜನಪ್ರಿಯತೆ ಪಡೆಯುತ್ತಿದೆ.

ಬ್ಯಾಡ್ಮಿಂಟನ್: ಉನ್ನತಿಗೆ ಜಯ

ನವದೆಹಲಿ (ಪಿಟಿಐ): ಅಗ್ರಶ್ರೇಯಾಂಕದ ಉನ್ನತಿ ಹೂಡಾ ಸೇರಿದಂತೆ ಭಾರತದ ಏಳು ಮಂದಿ, ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ.

ಥಾಯ್ಲೆಂಡ್‌ನ ನೊಂಥಬುರಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಉನ್ನತಿ 21-11, 21-5ರಿಂದ ಜಪಾನ್‌ನ ಮಿಸಾಟೊ ಸಸಾಕಿ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್‌ನ ಇನ್ನುಳಿದ ಪಂದ್ಯಗಳಲ್ಲಿ ಅನ್ಮೋಲ್ ಖರ್ಬ್, ಸಂಪ್ರೀತಿ ಪಾಲ್, ಪುರುಷರ ವಿಭಾಗದಲ್ಲಿ ಅಭಿನವ್ ಗರ್ಗ್, ಅನೀಶ್ ಟೊಪ್ಪಾನಿ ಮತ್ತು ಮೊಹಮ್ಮದ್ ಅಲಿ ಮಿರ್ ಮೊದಲ ಸುತ್ತಿನ ತಡೆ ದಾಟಿದರು.

ಎಂಟರಘಟ್ಟಕ್ಕೆ ಕರ್ನಾಟಕ

ಬೆಂಗಳೂರು: ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಮಹಿಳೆಯರ ತಂಡವು ಕ್ವಾರ್ಟರ್‌ಫೈನಲ್ ತಲುಪಿದೆ.

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎ ಗುಂಪಿನ ಕೊನೆಯ ಪಂದ್ಯದಲ್ಲಿ ಕರ್ನಾಟಕ 52–109ರಿಂದ ರೈಲ್ವೇಸ್‌ಗೆ ಸೋತರೂ ಮುನ್ನಡೆಯಿತು.